ಅಕ್ಟೋಬರ್ ೮೬

ಕಸ್ತೂರಿ



ಬೆಲೆ ೧.೫

ಕಸ್ತೂರಿ

ಕನ್ನಡ ಡೈಜೆಸ್ಟ್

ಸಂಪಾದಕ :
ಬಿ. ಎಸ್. ಗೋಪಾಲಕೃಷ್ಣ

ಸಹಾಯಕ ಸಂಪಾದಕ :
ಮಾಧವ ನಾ. ಮಹಿಷಿ

ಕಲೆ :
ಕೆ. ಬಿ. ಕುಲಕರ್ಣಿ

ಮುಖಪುಟ :

ಚಿಗುರಂಮ ಮುಂನ್ನ...
ಚಿತ್ರ :
ಎನ್. ಸಿ. ದೇಸಾಯಿ

ಜನವರಿ ೧೯೮೨ ರಿಂದ ಜಾರಿಯಲ್ಲಿ ಬಂದಿರುವ
ಚಂದಾ ದರಗಳು :

ಬಿಡಿ ಸಂಚಿಕೆ	...	೨-೫೦
೧ ವರ್ಷಕ್ಕೆ	ಅಂಚೆ ಸೇರಿ	೨೯-೦೦
೨ ವರ್ಷಕ್ಕೆ	,,	೫೫-೦೦
೩ ವರ್ಷಕ್ಕೆ	,,	೮೨-೦೦

KASTURI October 1982

ಬೆಳಕಿಂಡಿ

ನಿರಂತರವಾಗಿ ಪ್ರಯತ್ನಿಸುತ್ತಿರುವ ಶಕ್ತಿಯೆ ಪ್ರತಿಭೆ. ಯಾವುದೇ ಕೆಲಸ ಅಸಾಧ್ಯವೆಂದು ತೋರಿದಾಗ ಇನ್ನು ಸ್ವಲ್ಪ ಹೆಚ್ಚು ಪ್ರಯತ್ನಿಸಿದರೆ ಅಸಾಧ್ಯವೆಂದು ತೋರಿದ್ದೇ ಅಪ್ರತಿಮ ಯಶಸ್ಸಿನ ಉದಾಹರಣೆಯಾಗಬಹುದು. ಪ್ರಯತ್ನವನ್ನು ಅರ್ಧಕ್ಕೇ ಕೈ ಬಿಡುವದಕ್ಕಿಂತ ಹೆಚ್ಚಿನ ಸೋಲು ಈ ಜಗತ್ತಿನಲ್ಲಿಲ್ಲ.
—ರಿಚಾರ್ಡ್ ಪೋಪ್

*

ಸಂಯಮದ ಬಗೆಗೆ ಮಾತಾಡುವವರೆಲ್ಲ ಸುಮಾರಾಗಿ ಸಂಯಮರಹಿತರಾಗಿಯೆ ಮಾತಾಡುತ್ತಾರೆ.
—ಪೆಲ್ಲಿ ಸ್ಮಿತ್

*

ಸುದೈವವನ್ನು ಕಂಡುಹಿಡಿಯುವುದು ತುಂಬಾ ಕಠಿಣ. ಅದು ಬಂದಾಗಲೆಲ್ಲ ಪ್ರಯತ್ನಪೂರ್ವಕವಾಗಿ ನೀವು ಅದನ್ನು ಗಳಿಸಿದಂತೆಯೇ ಭಾಸವಾಗುತ್ತದೆ.
—ಫ್ರ್ಯಾಂಕ್ ಕ್ಲಾರ್ಕ್

ಚಂದಾದಾರರಿಗೆ ಸೂಚನೆ

'ಕಸ್ತೂರಿ' ತಿಂಗಳ ಒಂದನೇ ದಿನಾಂಕದೊಳಗೇ ಪ್ರಕಟವಾಗುವುದು. ತಿಂಗಳ ೫ ನೇ ದಿನಾಂಕದೊಳಗೆ ತಲಪದೇ ಹೋದರೆ ಚಂದಾದಾರರು ತಮ್ಮ ಟಪಾಲು ಕಟ್ಟೆಯಲ್ಲಿ ಮೊದಲು ವಿಚಾರಿಸಿ ಅನಂತರ ನಮಗೆ ತಿಳಿಸಬೇಕು. ಪತ್ರವ್ಯವಹಾರ ಮಾಡುವಾಗ ಚಂದಾ ನಂಬರು ಹಾಕಿರಬೇಕು.

ಈ ಸಂಚಿಕೆಯಲ್ಲಿ

ಪುಸ್ತಕ ವಿಭಾಗ

ಸಹಚಿಂತನ

ಶಾಲ್ಮಲೆ

ಶ್ರೀ ಜೋಶಿ ಬರೆದ "ಶಾಲ್ಮಲಾ" ನದಿಯ ವರ್ಣನೆ ಕೆಲವು ವರ್ಷಗಳ ಹಿಂದೆ ನಾನು ಮಾಡುತ್ತಿದ್ದ ಆಲೋಚನೆಗಳನ್ನು ಉದ್ದೀಪಿಸಿತು. ಸೂಜ್ಞರ ಪರಾಮರ್ಶೆಗಾಗಿ ಬರೆಯುತ್ತಿದ್ದೇನೆ.

ಶಾಲ್ಮಲೆ ಮುಂದೆ ಗಂಗಾವಳಿಯಾಗುತ್ತಾಳೆ. ದಕ್ಷಿಣ ದೇಶದಲ್ಲಿ ಪಶ್ಚಿಮವಾಹಿನಿ "ಗಂಗೆ" ಯಾರನ್ನು ನೆನಪಿಗೆ ತರುತ್ತಾಳೆ? ಮನುವನ್ನು. ಮನು ಮೂಲತಃ ದಕ್ಷಿಣದೇಶದವನೆಂದು ಯಾವುದೋ ಒಂದು ಪುರಾಣದಲ್ಲಿ [ಮತ್ಸ್ಯ ಪುರಾಣ?] ಓದಿದ ನೆನಪು. ಅವನು ಪಶ್ಚಿಮ ವಾಹಿನಿ "ಗಂಗಾ" ತಟಾಕದಲ್ಲಿ ವಾಸಿಸುತ್ತಿದ್ದನು. ಸಂಧ್ಯಾವಂದನೆ ಕಾಲದಲ್ಲಿ ನೀರಿನಲ್ಲಿ ಬಂದ ಮೀನನ್ನು ಬದುಕಿಸಲೆಂದು ಹಂಡೆಯೊಳಗೆ ಬಿಟ್ಟನು. ಅದು ದೊಡ್ಡದಾದ ಮೇಲೆ ಅದನ್ನು ಒಂದು ಕೆರೆಯಲ್ಲಿ ಬಿಟ್ಟನು. ಇದು ಸತ್ಯವಾದರೆ, ಅದೇ 'ಮನಗುಂಡಿ'ಯಾಗಿರಬೇಕು. ಇದು ಶಾಲ್ಮಲಾ ದಂಡೆಯಲ್ಲಿ ಇದೆ ಎಂದು ಜೋಶಿ ಕೊಟ್ಟ ನಕಾಶೆ ತೋರಿಸುತ್ತದೆ. ಹತ್ತಿರದಲ್ಲೇ ಮನಸೂರು ಇದೆ. ಮನಗುಂಡಿ ಊರ ಎದುರಿಗೆ ಕೆರೆ ಇದೆಯೆಂದು ಕೇಳಿದ್ದೇನೆ. ಕರ್ನಾಟಕದ ತುಂಬೆಲ್ಲ "ಮನ್" ಶಬ್ದದಿಂದ ಹುಟ್ಟಿದ ಊರ ಹೆಸರುಗಳಿವೆ. ಮಂಕಣಿ, ಮಂಚಿಕೇರಿ ಇತ್ಯಾದಿ. ಅಲ್ಲದೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಮಗುವಿಗೆ "ಮಾಣಿ" ಎಂದು ಕರೆಯುತ್ತಾರೆ. ಪುರಾಣ, ಧರ್ಮಶಾಸ್ತ್ರಗಳಲ್ಲಿ "ಪಶ್ಚಿಮಾಭಿಮುಖೀಂ ಗಂಗಾ" ಎಂದು ವಿಶೇಷ ಗೌರವದಿಂದ ಶಾಲ್ಮಲಾ ಗಂಗಾವಳಿಯನ್ನೇ ಉಲ್ಲೇಖಿಸಿದಂತೆ ನನ್ನ ಭಾವನೆ. ಅದೇ ಶ್ಲೋಕದಲ್ಲಿ ಪ್ಲಕ್ಷಪ್ರಾವರಗಂ ಶಬ್ದ ಬರುತ್ತದೆ. ಜೋಶಿ "ಶಾಲ್ಮಲಾ" ಶಬ್ದದ ಆಧಾರದ ಮೇಲೆ ಶಾಲ್ಮಲಾ ನದಿಯ ಸಮೀಪ ಇರುವ ಚೆಡಿ ಹತ್ತಿಯ ಗಿಡಗಳನ್ನು ಉಲ್ಲೇಖಿಸಿದ್ದಾರೆ. ಪ್ಲಕ್ಷ ಶಬ್ದಕ್ಕೆ ಆಪ್ಟೆ ಡಿಕ್ಷನರಿಯಲ್ಲಿ "The Indian fig tree" ಅಂದರೆ ಅತ್ತಿಯ ಗಿಡ ಎಂದು ಕೊಡಲಾಗಿದೆ. ಆದರೆ "ಪ್ಲಕ್ಷಪ್ರಾವರ" ಶಬ್ದಕ್ಕೆ ಅರ್ಥ ಬರಬೇಕಾದರೆ ಹತ್ತಿಯ ಸೆಲ್ಲೆ ಆಗಬೇಕು. ಇದರ ಮೇಲಿಂದ ವೃಕ್ಷಕ್ಕೂ ಚಡಿ ಹತ್ತಿ ಎಂದು ಅರ್ಥವಿರಬಹುದು. ಶಾಲ್ಮಲಾ ನದಿ ತಪ್ಪರಿ [ತುಪ್ಪ+ಹರಿ] ಹಳ್ಳಕ್ಕೆ ಕೂಡುತ್ತದೆ. ಬೆಣ್ಣೆ ಕಾಸಿ ತುಪ್ಪ ಮಾಡುವ ಕಲೆ ಕರ್ನಾಟಕದ ಪ್ರಾಕ್ ಪ್ರಾಚೀನ ಯುಗದಲ್ಲೇ ಗೊತ್ತಾಗಿತ್ತು ಎಂದು ಓದಿದ್ದೇನೆ. ಬೆಣ್ಣೆ ಹಳ್ಳ ತುಪ್ಪರಿ ಹಳ್ಳ ಇದರ ಸಂಕೇತಗಳು. ಯಜ್ಞಕ್ಕೆ ಸುರಿವ ಆಜ್ಯಕ್ಕೂ ಊಟಕ್ಕೆ ಬಡಿಸುವ ಘೃತಕ್ಕೂ ಅಂತರವಿದೆಯೆಂದು ಆಪ್ಟೆ ಹೇಳಿದ್ದಾರೆ. ಪ್ರಳಯ ಕಾಲಕ್ಕೆ ಹಡಗದಿಂದ ಮನು ಮೇರುಪರ್ವತಕ್ಕೆ ಹೋದನೆಂದು ಕತೆ. ಮನು ಆರ್ಯಾವರ್ತ ಆಳಿದನು. ಅವನ ಹೆಸರಿನ ಹರಪ್ಪನ ಸೀಲ್ ನೋಡಿದ್ದೇನೆ. ಅವನು ಮಾಡಿದ ಯಜ್ಞದ ಕತೆಯೂ ಇದೆ. ದಕ್ಷಿಣ ದೇಶದವರು ಆರ್ಯ ಸಂಸ್ಕೃತಿಗೆ ನೀಡಿದ ಕೊಡುಗೆಯೆಂದರೆ ಪೂಜಾ– ಅರ್ಚನಾ ಪದ್ಧತಿ [ಪೂ– ಅರಳು ಶಬ್ದದಿಂದ ಹುಟ್ಟಿದವು] ಆರ್ಯರದು ಯಜ್ಞಪದ್ಧತಿ. ಆಜ್ಯದ ಬದಲು ಘೃತ ಸುರಿಯುವುದು, ಹೂವಿನಿಂದ ಪೂಜೆ ಮಾಡುವದು ಇವು ಮನು ಮಾಡಿದ ಆರ್ಯಯಜ್ಞದ ಸುಧಾರಣೆಯೆಂದು ಹೇಳಬಹುದು. ಹೆಚ್ಚಿನ ಸಂಶೋಧನೆ ಅಗತ್ಯ. ಜಾತಿಪದ್ಧತಿ ದ್ರಾವಿಡ ಮೂಲವೆಂಬ ಇತ್ತೀಚಿನ ವಿದ್ವಾಂಸರ ಅಭಿಪ್ರಾಯಕ್ಕೆ [ಮನು ದಕ್ಷಿಣದವನಾಗಿದ್ದರೆ] ಇದರಿಂದ ಪುಷ್ಟಿದೊರಕುತ್ತದೆ ಸಾವಿರಾರು ಜಾತಿಗಳನ್ನು ನಾಲ್ಕು ಅಸ್ಪಷ್ಟ ವರ್ಗಗಳಾಗಿ ಕಾಲ್ಪನಿಕ [Conceptual]ವಾಗಿ ಸಸಾರ ಗೊಳಿಸಿದ ಶ್ರೇಯಸ್ಸು ಮನುವಿಗೆ ಹೋಗಬೇಕು. ಪ್ಲಕ್ಷಕ್ಕೆ ಬಸುರಿಗಿಡಕ್ಕೆ, ಅಳಲೆ ಗಿಡ ಎಂದೂ ಕರೆಯುವದುಂಟು.

ಮೈಸೂರು — ಶಂಕರ ಮೊಕಾಶಿ ಪುಣೇಕರ

ಅಶಾಂತಿಪರ್ವ

ಕಸ್ತೂರಿಯ ಸೆಪ್ಟೆಂಬರ್ ೮೨ರ 'ಪುಸ್ತಕ ವಿಭಾಗ'ದ 'ಆನಂದಕಂದ' ಬೆಟಗೇರಿ ಕೃಷ್ಣ

ಶರ್ಮರ 'ಅಶಾಂತಿಪರ್ವ'ವನ್ನು ಸಂಗ್ರಹರೂಪದಲ್ಲಿ ನೀಡಿದ ವಿ. ಎ. ಜೋಶಿಯವರಿಗೂ ನಿಮಗೂ ಧನ್ಯವಾದಗಳು. ಇಂಥ ಉತ್ತಮ ಲೇಖಕರ ಕೃತಿಗಳ ಪರಿಚಯ ಹೆಚ್ಚಾಗಲಿ ಹಾಗೂ ಅನಂದಕಂದರಿಗೆ ಪೂರ್ಣಾರೋಗ್ಯವನ್ನು ನೀಡಲೆಂದು ಆ ಭಗವಂತನಲ್ಲಿ ಕೇಳಿ ಕೊಳ್ಳುತ್ತೇನೆ.

ಕೃಷ್ಣಕುಮಾರ ಕಲ್ಲೂರರ ಬಗ್ಗೆನ ವಿಶೇಷ ಲೇಖನ ಚೆನ್ನಾಗಿದೆ. ಕನ್ನಡ ನುಡಿ, ನಾಡಿಗಾಗಿ ಹೋರಾಡಿದ ಈ ಮಹಾನ್ ವ್ಯಕ್ತಿಯ ಪರಿಚಯ ಮಾಡಿಸಿದ್ದಕ್ಕೆ ಧನ್ಯವಾದಗಳು. ಇವರ ಸಾವು ನಿಜಕ್ಕೂ ನಾಡಿಗೆ ತುಂಬಲಾಗದ ನಷ್ಟವೇ ಸರಿ. ಎಲೆಯ ಮರೆಯ ಕಾಯಂತೆ ದುಡಿದು ಹಣ್ಣಾಗಿ ಜೀವ ತೆತ್ತ ಈ ಜೀವಿಗೆ ಅಶ್ರು ತರ್ಪಣವೀಯಬೇಕಾದುದು ನಮ್ಮೆಲ್ಲರ ಕರ್ತವ್ಯ

ಚಾಮರಾಜನಗರ —ಎಸ್. ಲಕ್ಷ್ಮೀ ನರಸಿಂಹ

ಹೆಗ್ಗಾಳಿಗಳು

ಈ ಲೇಖನ ಓದಿ ಮೊದಲಿದ್ದ ನನ್ನ ನಂಬಿಕೆಗಳೆಲ್ಲ ಕುಸಿದು ಬಿದ್ದವು. ಏಕೆಂದರೆ ಮೊದಲು ನಾನು ಅದೊಂದು ಇಲ್ಲವಾದ ಸಂಗತಿ ಎಂದು ನಂಬಿದ್ದೆ. ಆದರೆ ಹೆಗ್ಗಾಳಿಗಳು ಭೂಮಿಯಲ್ಲಿ ಇದ್ದವೆಂಬುದು ಖಚಿತವಾದ ಸಂಗತಿ. ಲೇಖಕರಿಗೆ ಧನ್ಯವಾದಗಳು.

ಅವು ಈಗ ಇರುತ್ತಿದ್ದರೆ ಎಂದು ನನ್ನಲ್ಲಿ ಯಾರೋ ಕೇಳಿದರು. ಅವು ಈಗ ಇರುತ್ತಿದ್ದರೆ ಏನೆಲ್ಲ ಅನಾಹುತಗಳಾಗುತ್ತಿದ್ದುವು ಎಂಬುದು ಊಹಿಸಲಸಾಧ್ಯ. ಆದರೆ ಇಂಥವು ಈಗಲೂ ಇರಬೇಕೆನಿಸುತ್ತದೆ. ಅವುಗಳ ಅಳಿವು ತೀರಾ ಆಶ್ಚರ್ಯಕರ. ಅದರ ಬಗ್ಗೆ ವಿವರಣೆ ಓದಿ ಸಂತೋಷಗೊಂಡೆ. ಇಂತಹ ಇನ್ನೂ ಅನೇಕ ಹಿಂದಿನ ಕಾಲದ ನಂಬಿಕೆಗಳನ್ನು ಬಯಲಿಗೆಳೆಯುವುದರಿಂದ ಜ್ಞಾನ ಹೆಚ್ಚುತ್ತದೆ.

ಪಾಣಜೆ —ರಮೇಶ ಭರಣ್ಯ

ಮುಖಪುಟ

ಸೆಪ್ಟೆಂಬರ್ ಸಂಚಿಕೆ [೧೯೮೨] ಯಲ್ಲಿ ಮುಖಪುಟದಲ್ಲಿ ಕೆಂಪು ಹಳದಿ ಬಣ್ಣದ ಬೆಲೂನ ಹಿಡಿದು ಬಿಳಿ ಅಂಗಿ ತೊಟ್ಟು ಪುಟ್ಟ ಮುಗ್ಧ ಮುದ್ದು ಕಂದ ಮೂಡುವ ರವಿಯಂತೆ ರಾರಾಜಿಸಿದೆ.

ಮುಗ್ಧ ಜನರನ್ನು ತನ್ನ ಆಕರ್ಷಕ ಮಾತಿನ ಜಾಲದಲ್ಲೇ ಸಿಲುಕಿಸಿ ಹಣ ಸೆಳೆಯುವ ಗುಟ್ಟನ್ನು ರಟ್ಟು ಮಾಡಿದ ಹಾವಾಡಿಗ ಕಥೆ ರಂಗಸಜ್ಜಿಕೆಯಿಲ್ಲದೆಯೇ ನಾಟಕ ವಾಡುವ ಹಾವಾಡಿಗರೆಲ್ಲರ ಹಗಲು ದರೋಡೆಯನ್ನು ಹಗರಣವಾಡಿಬಿಟ್ಟಿದೆ. ಅನುವಾದಕರಿಗೆ ಅನಂತ ಅಭಿನಂದನೆ.

ಗುಳಿಗೇನಹಳಿ —ಜೆ. ಕೆ. ನಾಗಲಿಂಗಪ್ಪ

ಸೆಪ್ಟೆಂಬರ್ ತಿಂಗಳ 'ಕಸ್ತೂರಿ'ಯ ಮುಖಪುಟ ನೋಡಿದಾಗ ಹೊಗಳಬೇಕಾದ್ದು ಮಗುವಿಗೋ, ಚಿತ್ರ ತೆಗೆದ ಎಂ. ವಿಶ್ವನಾಥರವರಿಗೂ ಅಥವಾ ಪ್ರಕಟಿಸಿದ ಕಸ್ತೂರಿಗೋ ಎಂಬ ಸಮಸ್ಯೆ ಎದುರಾಯಿತು. ಉತ್ತರ ಇನ್ನೂ ಹೊಳೆದಿಲ್ಲ. ನಿಮಗೆ ತಿಳಿಸಿ ಭಾರ ಕಳೆದುಕೊಂಡಿದ್ದೇನೆ.

ಮೈಸೂರು —ಸಿ. ಎನ್. ನಾರಾಯಣಚಾರ್ಯ

ಸಿದ್ಧಾರ್ಥಿ

೧೯೮೨ ರ ಸೆಪ್ಟೆಂಬರ್ ಕಸ್ತೂರಿ ಸಂಚಿಕೆಯ ಪುಟ ೧೯ ರಲ್ಲಿ ಕವನ ಸಿದ್ಧಾರ್ಥಿಯ ೧೧ನೇ ಸಾಲಿನಲ್ಲಿ "ಇದೀ, ಮುಸಲೋನಿ, ಹಿಟ್ಲರರ ಮುಂದು" ಎಂದಿದೆ. ಆದರೆ ಗತಿಸಿ ಹೋದವರ ಹೆಸರುಗಳಿಗಿಂತಲೂ ಈಗ ಸದ್ಯ ಜೀವಂತ ವಿರುವ "ಖೊಮೇನಿ, ಬೇಗಿನ್ನರ ಮುಂದು" ಎಂದು ಬರೆದಿದ್ದರೆ ಚೆನ್ನಾಗಿರುತ್ತಿತ್ತಲ್ಲವೇ ?

ಕೊಪ್ಪಳ —ಕೆ. ಎಸ್. ಎಚ್. ತೇಗ್ಗಿನಕೇರಿ

ಕಸ್ತೂರಿ

ವರ್ಷ: ೨೭ ಅಕ್ಟೋಬರ್ ೧೯೮೨ ಸಂಚಿಕೆ: ೨

ನಿಜವಾದ ಭಕ್ತ

ಸಾಧು ಟಿ. ಎಲ್. ವಾಸವಾನಿ

ನಿಶಾಪುರದ ಸಂತ ಅಹಮ್ಮದರನ್ನು ಕೆಲ ಶಿಷ್ಯರು ಕೇಳಿದರು—"ಗುರು, ನಮಗೆ ದೇವನ ನಿಜವಾದ ಭಕ್ತನ ಬಗ್ಗೆ ಹೇಳುವಿರಾ?"

ಸಂತ ಅಹಮ್ಮದರು ಶಿಷ್ಯರನ್ನು ವಾತ್ಸಲ್ಯ ಪೂರಿತವಾಗಿ ನೋಡಿ, ಹೇಳತೊಡಗಿದರು. "ಹಾಗಾದರೆ ಕೇಳಿ. ಬಹರಾಮ್ ಎಂಬೊಬ್ಬ ನನ್ನ ಸಹವಾಸಿಯಾಗಿದ್ದ. ಆತನೊಂದಿಗೆ ಮೈತ್ರಿಯೂ ಬೆಳೆದಿತ್ತು. ಆತ ದೊಡ್ಡ ವ್ಯಾಪಾರಿ. ಪ್ರತಿ ವರುಷ ಲಕ್ಷಗಟ್ಟಲೆ ಬೆಲೆಬಾಳುವ ಸಾಮಾನು-ಸರಂಜಾಮುಗಳೊಂದಿಗೆ ಆತನ ಗಾಡಿಗಳು ವಿದೇಶಗಳಿಗೆ ವ್ಯಾಪಾರಕ್ಕೆ ಹೊರಡುತ್ತಿದ್ದುವು. ಒಂದು ದಿನ ರಸ್ತೆಯಲ್ಲಿ ದರೋಡೆಖೋರರು ಆತನ ಗಾಡಿಗಳನ್ನು ಲೂಟಿ ಮಾಡಿದರು. ಬಹರಾಮ್‌ನಿಗೆ ಲಕ್ಷಗಟ್ಟಲೆ ಲುಕ್ಸಾನಾಯಿತು.

"ನಾನವನ ಮನೆಗೆ ಹೋದಾಗ ಸೂರ್ಯ ಕಂತುತ್ತಿದ್ದ. ಆ ದಿನಗಳಲ್ಲಿ ಎಲ್ಲೆಲ್ಲೂ ಬರಗಾಲ. ಕೂಳಿಗಾಗಿ ಕಂಗೆಟ್ಟ ಜನರೇ ಎಲ್ಲೆಡೆಗೂ ತುಂಬಿದ್ದರು. ನಾನು ಊಟ ಕೇಳಲು ಬಂದಿರಬಹುದೆಂದೇ ಬಹರಾಮ್ ತಿಳಿದ. ತನ್ನ ನೌಕರರನ್ನು ಕರೆದು ನನಗಾಗಿ ಊಟ ತರಲು ಹೇಳಿದ. ನಾನು—'ಸೋದರ, ತೊಂದರೆ ತೆಗೆದುಕೊಳ್ಳಬೇಡ. ನಾನು ಊಟದ ಆಶೆಯಿಂದ ಬಂದಿಲ್ಲ. ನಿನಗಾಗಿರುವ ಹಾನಿಗಾಗಿ ಸಹಾನುಭೂತಿ ಸೂಚಿಸಲು ಬಂದಿರುವೆ,' ಎಂದು.

"ಈ ಮಾತು ಕೇಳಿ ಬಹರಾಮ್ ಹೇಳಿದ—'ಹೌದು. ನನಗೆ ಲಕ್ಷಗಟ್ಟಲೆ ಲುಕ್ಸಾನಾಗಿರುವುದೇನೋ ನಿಜ. ಆದರೆ ಇದಕ್ಕಾಗಿ ನಾನು ಆ ದಯಾಘನನಾದ ದೇವನಿಗೆ ಕೃತಜ್ಞನಾಗಿದ್ದೇನೆ. ದರೋಡೆಖೋರರು ನನ್ನ ಮಾಲನ್ನು ಲೂಟಿ ಮಾಡಿದರು; ಆದರೆ ದೇವನ ಕೃಪೆಯಿಂದ ನಾನು ಯಾರನ್ನೂ ಲೂಟಿ ಮಾಡಲಿಲ್ಲ. ದರೋಡೆ-ಖೋರರು ನನ್ನ ನಶ್ವರ ಸಂಪತ್ತಿನಲ್ಲಿ ಪಾಲು ಪಡೆದಿದ್ದಾರೆ. ಆದರೆ ಅವರು ನನ್ನ ಶಾಶ್ವತ ಸಂಪತ್ತಿಗೆ ಕೈ ಕೂಡ ಹಚ್ಚಿಲ್ಲ. ಆ ಶಾಶ್ವತ ಸಂಪತ್ತೆಂದರೆ ದೇವನಲ್ಲಿರುವ ನನ್ನ ಆಸ್ಥೆ-ಶ್ರದ್ಧೆ-ಭಕ್ತಿ. ಅದೇ ತಾನೇ ಜೀವನ ನಿಜವಾದ ಸಂಪತ್ತು...'"

ಇಷ್ಟು ಹೇಳಿ ಸಂತ ಅಹಮ್ಮದರು ಶಿಷ್ಯರನ್ನುದ್ದೇಶಿಸಿ, "ಈ ಬಹರಾಮನೇ ದೇವನ ನಿಜ ಭಕ್ತ," ಎಂದರು. ✡

ಯಜ್ಞಧರ್ಮ

ಪ. ರಾಮಕೃಷ್ಣ ಶಾಸ್ತ್ರಿ

ಒಬ್ಬ ವಿಪ್ರನಿಗೆ ಅಪರೂಪಕ್ಕೊಬ್ಬ ಮಗ ಹುಟ್ಟಿದ. ಅವನು ಆಂಗಿರಸ ಗೋತ್ರದವನಾಗಿದ್ದರಿಂದ ಮಗುವಿಗೆ ನಾಮಕರಣ ಮಾಡಬೇಕೆಂದು ಆಂಗಿರಸ ಮುನಿಗಳನ್ನೇ ಪ್ರಾರ್ಥಿಸಿದ. ಆಂಗಿರಸರು ಅವನ ಮನೆಗೆ ಆಗಮಿಸಿ ಮಗುವನ್ನೊಮ್ಮೆ ದಿಟ್ಟಿಸಿದರು. "ಈ ಶಿಶುವಿನ ಜ್ಞಾನಕ್ಕೆ ಮುಪ್ಪೆಂಬುದೇ ಬರುವುದಿಲ್ಲ. ಮುಂದೆ ಲೋಕ ಪ್ರಸಿದ್ಧನಾಗಲಿರುವ ಇವನಿಗೆ 'ಶಿಶು' ಎಂದೇ ಹೆಸರಿಡುತ್ತೇನೆ" ಎಂದು ಮಗುವನ್ನು ಹರಸಿ ಹೊರಟು ಹೋದರು.

ಹೀಗೆ 'ಶಿಶು' ವೆಂದು ಹೆಸರು ಪಡೆದ ಹುಡುಗ ತಂದೆಯ ಬಳಿಯಲ್ಲಿ ಕುಳಿತು ತಾನೇ ವೇದಾಧ್ಯಯನವನ್ನು ಆರಂಭಿಸಿದ. ಸ್ವತಃ ಋಕ್ಕುಗಳನ್ನು ರಚಿಸುವ ಸಾಮರ್ಥ್ಯವೂ ಅವನಿಗಿತ್ತು. ತನಗಿಂತ ಪ್ರಾಯದಲ್ಲಿ ಹಿರಿಯರಾದವರನ್ನೂ ಆತ "ಎಲೋ ಮಗುವೇ" ಎಂದು ಏಕವಚನದಲ್ಲೇ ಸಂಭೋಧಿಸಲಾರಂಭಿಸಿದ. ಅವನ ಈ ವಿಚಿತ್ರ ಗುಣಕ್ಕೆ ತಂದೆ ಬೇಸರಪಟ್ಟು ಹಾಗೆ ಹೇಳಬಾರದು ಎಂದು ಎಷ್ಟು ತಿಳಿ ಹೇಳಿದರೂ ಶಿಶು ಕಿವಿಗೊಡಲಿಲ್ಲ. ಕೊನೆಗೆ ವಿಪ್ರ ಶಿಶುವನ್ನು ಆಂಗಿರಸರ ಬಳಿಗೆ ಕರೆದೊಯ್ದು "ಇವನು ತೀರ ಗರ್ವಿಷ್ಠನಾಗಿದ್ದಾನೆ, ಹಿರಿಯರನ್ನು ತಾತ್ಸಾರದಿಂದ ಅಸೌಜನ್ಯದಿಂದ ಮಾತನಾಡಿಸುತ್ತಾನೆ" ಎಂದು ಹೇಳಿದ.

ಆಗ ಶಿಶು ಆಂಗಿರಸರೊಂದಿಗೆ "ಎಲೋ ಮಗು, ನೀನೇ ಯೋಚಿಸಿ ನೋಡು. ಸಣ್ಣವನು ದೊಡ್ಡವನೆಂಬ ವ್ಯತ್ಯಾಸ ದಲ್ಲಿ ಹುರುಳಿದೆಯೆ? ನನಗಿಂತ ಹೆಚ್ಚು ತಿಳಿದವನೇ ಹಿರಿಯ; ಅವನಿಗೆ ನಾನೇನೂ ಹೇಳಬೇಕಾದ್ದಿಲ್ಲ. ನನ್ನಷ್ಟು ತಿಳಿಯದೆ ನನ್ನೊಂದಿಗೆ ಕೇಳುವವ ಕಿರಿಯನಾಗುತ್ತಾನಷ್ಟೆ?" ಎಂದು ತನ್ನ ವರ್ತನೆಯ ಕಾರಣವನ್ನು ಸ್ಪಷ್ಟವಾಗಿ ಹೇಳಿದ.

"ಅದು ನಿಜ" ಆಂಗಿರಸರು ಒಪ್ಪಿಕೊಂಡರು. "ಇವನು ಹೇಳಿದ ಈ ಮಾತೇ ಒಂದು ಋಕ್ಕಾಗುತ್ತದೆ. ವೇದಾಧ್ಯಯನ ಸಂಪನ್ನನಾದ ಇವನ ಎದುರಿಗೆ ಎಲ್ಲರೂ ಕಿರಿಯರೇ ಆಗುತ್ತಾರೆ" ಎಂದರು.

ಶಿಶು ನಿರರ್ಥಕವಾಗಿ ಮಾತನಾಡುವವನೇ ಅಲ್ಲ, ಅವನೇನು ಮಾತನ್ನೇ ಆಡಲಿ ಅದು ಮಂತ್ರವೋ ಋಕ್ಕೋ ಸಾಮವೋ ಆಗಿರುತ್ತಿತ್ತು. ಅವನೆಂದರೆ ಎಲ್ಲರಲ್ಲಿಯೂ ಗೌರವಾದರಗಳು ಜನಿಸಿದವು.

ಈ ಸುದ್ದಿ ಮಹರ್ಷಿ ವರುಣನ ಮಗ ಭೃಗುವಿಗೆ ತಿಳಿಯಿತು. ಶಿಶುವಿಗಿಂತ ಪ್ರಾಯದಲ್ಲಿ ಹಿರಿಯನಾದ ತಾನೇನು ಕಡಿಮೆ ಎಂದು ಅವನೂ ಹಿರಿಯರನ್ನು ಏಕವಚನದಲ್ಲಿ ಸಂಬೋಧಿಸಲಾರಂಭಿಸಿದ. ಇದರಿಂದ ಕೆಲವರು ಕುಪಿತರಾದರು. ಆಗ ಭೃಗು "ಮಕ್ಕಳೇ ನೀವು ಹಿರಿಯರೆನಿಸಬೇಕಾದರೆ ನನ್ನೊಂದಿಗೆ ವಾದಕ್ಕೆ ನಿಂತು ನನ್ನನ್ನು ಸೋಲಿಸಿ" ಎಂದು ಸವಾಲೊಡ್ಡಿದ.

"ಪಾಂಡಿತ್ಯದಲ್ಲಿ ಪ್ರೌಢನಾಗಬೇಕಾದರೆ ಅಂಗಿರಸರೊಂದಿಗೆ ವಾದ ಮಾಡಿ ಅವರ ಮೆಚ್ಚುಗೆಯನ್ನು ಪಡೆಯಬೇಕು" ಎಂದು ಕೆಲವರು ಹೇಳಿದಾಗ ಭೃಗು ಅಂಗಿರಸರ ಬಳಿಗೇ ಧಾವಿಸಿ "ಮಗು ಅಂಗಿರಸಾ, ನನ್ನೊಂದಿಗೆ ವಾದಕ್ಕಿಳಿದು ನೀನು ನನಗಿಂತ ಹಿರಿಯನೆಂದು ಸಾಧಿಸಬಲ್ಲೆಯಾ?" ಎಂದು ಕೇಳಿದ. ಆಗ ಅಂಗಿರಸರು ಅವನಿಗೆ "ವಾದ ಆರಂಭಿಸುವ ಮುನ್ನ ನೀನು ನಾಲ್ಕು ದಿಕ್ಕುಗಳಲ್ಲಿಯೂ ಏನೇನಿದೆಯೆಂದು ಕಂಡು ಬಂದಿದ್ದೀಯಾ?" ಎಂದು ಪ್ರಶ್ನೆ ಹಾಕಿದರು.

"ನೀನು ಕಂಡು ಬಂದಿದ್ದೀಯಾ?" ಎಂದು ಭೃಗು ಮರು ಸವಾಲು ಹಾಕಿದ. ಅಂಗಿರಸರು ಶಾಂತಭಾವದಿಂದ, "ಕಂಡು ಬಂದಿದ್ದೇನೆ. ನೀನೂ ಒಮ್ಮೆ ನೋಡಿ ಬಾ, ಆಮೇಲೆ ವಾದ ಆರಂಭಿಸೋಣವಂತೆ" ಎಂದರು.

ಆ ಮಾತಿಗೆ ಒಪ್ಪಿ ಭೃಗು ಮೊದಲು ಪೂರ್ವ ದಿಕ್ಕಿಗೆ ಹೋದ. ಅಲ್ಲಿ ಕೆಲವು ರಾಕ್ಷಸಾಕೃತಿಯ ವ್ಯಕ್ತಿಗಳು ಮನುಷ್ಯರನ್ನು ಕರವಾಲದಿಂದ ಕೊಚ್ಚುತ್ತಾ, ಅದನ್ನು ಹಂಚಿಕೊಳ್ಳಲು ಜಗಳ ಮಾಡುತ್ತಿದ್ದರು. ಈ ಕೃತ್ಯವನ್ನು ಕಂಡ ಭೃಗು ಜಿಗುಪ್ಸೆಯಿಂದ "ಇದೇಕೆ ಈ ಕೆಲಸ ಮಾಡುತ್ತೀರಾ?" ಎಂದು ಕೇಳಿದ.

"ಕಳೆದ ಜನ್ಮದಲ್ಲಿ ಇವರೆಲ್ಲಾ ನಮ್ಮನ್ನು ಹೀಗೆಯೇ ಕಡಿದು ಚೂರು ಮಾಡಿ ಹಂಚಿಕೊಳ್ಳಲಿಲ್ಲವೆ? ಅದಕ್ಕೆ ನಾವು ಸೇಡು ತೀರಿಸಿಕೊಳ್ಳುತ್ತಿದ್ದೇವೆ?" ಎಂದರು ಆ ವ್ಯಕ್ತಿಗಳು. "ಇದಕ್ಕೇನೂ ಪರಿಹಾರೋಪಾಯವಿಲ್ಲವೆ?" ಎಂದು ಭೃಗು ಅವರೊಂದಿಗೆ ಪ್ರಶ್ನಿಸಿದ. "ಅದು ನಿನಗೆ ಗೊತ್ತಿಲ್ಲವೆ? ಹಾಗಾದರೆ ಅಂಗಿರಸರ ಬಳಿ ಕೇಳು. ಅವರು ಹೇಳಬಹುದು" ಎಂದು ಆ ವ್ಯಕ್ತಿಗಳು ತಮ್ಮ ಕಾಯಕ ಮುಂದುವರೆಸಿದರು.

ಅಲ್ಲಿಂದ ಭೃಗು ದಕ್ಷಿಣ ದಿಕ್ಕಿಗೆ ಹೋದಾಗ ಅಲ್ಲಿಯೂ ಮತ್ತೊಂದು ಬಗೆಯ ಘೋರ ದೃಶ್ಯವನ್ನೇ ಕಾಣಬೇಕಾಯಿತು. ಅನಂತರ ಉತ್ತರ ದಿಕ್ಕಿನಲ್ಲೂ ಉತ್ತರದಿಂದ ಪಶ್ಚಿಮ ದಿಕ್ಕಿಗೆ ಹೋದಾಗ ಅಲ್ಲೂ ಅದೇ ವಿಧದ ಭಯಂಕರ ವ್ಯಕ್ತಿಗಳ ಕುಕೃತ್ಯಗಳನ್ನೇ ಆತ ಕಂಡ. ಬಳಿಕ ಈಶಾನ್ಯ ದಿಕ್ಕಿನ ಮೂಲಕ ಹಿಂತಿರುಗಿ ಬರುತ್ತಿದ್ದಾಗ ಒಂದೆಡೆಯಲ್ಲಿ ದೇವತೆಯಂತೆ ಕಾಣುತ್ತಿದ್ದ ಒಬ್ಬ ಸ್ತ್ರೀಯೂ ರಾಕ್ಷಸಿಯಂತಿದ್ದ ಇನ್ನೊಬ್ಬ ಸ್ತ್ರೀಯೂ ನಿಂತಿದ್ದರು. ಅವರ ಮಧ್ಯ ಕೈಯಲ್ಲಿ ಬಡಿಗೆ ಹಿಡಿದು ನಿಂತಿದ್ದ ಉಗ್ರರೂಪಿಯೊಬ್ಬನನ್ನು ಭೃಗು ಕಂಡ. ಆ ಉಗ್ರರೂಪಿಯ ನೇತ್ರಗಳಿಂದ ಹಳದಿ ಬಣ್ಣದ ಜ್ವಾಲೆಗಳು ಸ್ಫುರಿಸುತ್ತಿದ್ದವು.

ಈ ಯಾವ ದೃಶ್ಯಗಳ ತಲೆಬುಡವೂ ಭೃಗುವಿಗೆ ಹೊಳೆಯಲಿಲ್ಲ. ಅವನು ಅಂಗಿರಸರ ಬಳಿಗೆ ಬಂದು ತಾನು ಕಂಡ ದೃಶ್ಯಗಳ ಅರ್ಥವನ್ನು ಅವರಲ್ಲಿ ಕೇಳಲಾರದೆ ಲಜ್ಜೆಯಿಂದ ತಲೆ ತಗ್ಗಿಸಿ ನಿಂತುಬಿಟ್ಟ. ಅವನನ್ನು ಕಂಡು ಅಂಗಿರಸರು "ಮಗು ನೀನು ನಾಲ್ಕು ದಿಕ್ಕುಗಳಲ್ಲಿ ನಾಲ್ಕು ವಿಶೇಷಗಳನ್ನು ಕಂಡು ಬಂದಿರುವೆ. ಅದರ ಅರ್ಥವೇನು, ಅದಕ್ಕೆ ಪರಿಹಾರ ಮಾರ್ಗವೇನು ತಿಳಿಯದೆ ನಿನ್ನ ಚಿತ್ತಕ್ಕೆ ಸಮಾಧಾನ ಸಿಗುವಂತಿಲ್ಲ ಅಲ್ಲವೆ?" ಎಂದು ಕೇಳಿದರು.



"ಮಾರ್ಕಂಡೇಯ, ಇದೀಗ ನಾನು ಕೆಟ್ಟೆ!"

"ಹೌದು, ನನಗೆ ಯಾವ ದೃಶ್ಯದ ಅರ್ಥವೂ ಹೊಳೆಯಲಿಲ್ಲ. ಸಮರ್ಥರಾದ ನಿಮ್ಮೊಂದಿಗೆ ಕೇಳುವಂತೆ ಅವರು ಹೇಳಿದ್ದಾರೆ" ಎಂದ ಭೃಗು.

"ಮಹಾಜ್ಞಾನಿ ಶಿಶುವಿನೊಂದಿಗೆ ಹೋಗಿ ಕೇಳಿದರೆ ಅವನೆಲ್ಲ ತಿಳಿಸಬಹುದು" ಎಂದರು ಅಂಗಿರಸರು.

ನಿರ್ವಾಹವಿಲ್ಲದೆ ಭೃಗು ಶಿಶುವಿನ ಬಳಿಗೆ ಹೋದ. ತಾನು ನಾಲ್ಕು ದಿಕ್ಕುಗಳಲ್ಲೂ ಕಂಡ ದೃಶ್ಯಗಳನ್ನು ವಿವರಿಸಿ ಅವುಗಳ ಅರ್ಥವೇನೆಂದು ಕೇಳಿದಾಗ ಶಿಶು ವಿವರಿಸಿದ.


"ನೀನು ಪೂರ್ವದಿಕ್ಕಿನಲ್ಲಿ ಕಂಡ ರಾಕ್ಷಸಾಕಾರದವರು ಹಿಂದಿನ ಜನ್ಮದಲ್ಲಿ ವೃಕ್ಷಗಳಾಗಿದ್ದವರು. ಮರ ಗಿಡಗಳಿಂದ ಬೇಕಾದಂತೆ ಹೂವು, ಹಣ್ಣು, ಕಾಯಿ, ಸೊಪ್ಪುಗಳನ್ನು ಕಿತ್ತುಕೊಂಡು ಮನುಷ್ಯರು ತರುತ್ತಾರೆ, ಯಜ್ಞ ಮಾಡದೆ ಉಪಭೋಗಿಸುತ್ತಾರೆ. ಮರ ಗಿಡಗಳೇ ರಾಕ್ಷಸಾವತಾರ ತಾಳಿ ಸೇಡು ತೀರಿಸಿಕೊಳ್ಳದಂತಾಗಲೂ ಸಮಿತ್ತುಗಳಿಂದ ಯಜ್ಞ ಮಾಡಬೇಕು.

"ದಕ್ಷಿಣ ದಿಕ್ಕಿನಲ್ಲಿ ಕಂಡ ಕ್ರೂರಿಗಳು ದನ, ಆಡು ಮೊದಲಾದ ಪಶುಗಳಾಗಿದ್ದವರು. ಅವರು ಹೀಗೆ ಸೇಡು ತೀರಿಸದಂತೆ ಮಾಡಬೇಕಾದರೆ ಹಾಲು ತುಪ್ಪ ಇತ್ಯಾದಿಗಳನ್ನು ಆಹುತಿ ನೀಡಿ ಯಜ್ಞ ಮಾಡುವುದಗತ್ಯ.

"ಪಶ್ಚಿಮದಲ್ಲಿ ಕಂಡ ಭಯಂಕರಿಗಳು ಔಷಧಗಳು. ಔಷಧ ಸೇವಿಸಿದರೆ ಬರುವ ದೋಷ ಪರಿಹಾರಕ್ಕಾಗಿ ಯಾಗ ಮಾಡಬೇಕು. ಅಂತೆಯೇ ಉತ್ತರದಲ್ಲಿ ಕಾಣಿಸಿದವರು ವನಸ್ಪತಿಗಳು. ನಾರು ಬೇರುಗಳನ್ನು ಹರಿದ ಪಾಪ ನೀಗಲು ಯಜ್ಞಾಚರಣೆಯೇ ಸಹಾಯಕ.

"ಹಿಂತಿರುಗಿ ಬರುವಾಗ ದಾರಿಯಲ್ಲಿ ನೀನು ಕಂಡ ಸಾತ್ವಿಕ ಸ್ತ್ರೀ ಶ್ರದ್ಧೆ, ರಾಕ್ಷಸಿ ಸ್ತ್ರೀ ಅಶ್ರದ್ಧೆ. ಇವರ ನಡುವೆ ನಿಂತಿದ್ದವ ಕ್ರೋಧಮೂರ್ತಿ. ಯಜ್ಞ ಕರ್ಮಗಳಲ್ಲಿ ಶ್ರದ್ಧೆಯನ್ನಿರಿಸಿದರೆ ಅಶ್ರದ್ಧೆ ದೂರವಾಗಿ ಕ್ರೋಧಮೂರ್ತಿ ಸೋತು ಹೋಗುತ್ತಾನೆ."

ಹೀಗೆ ಭೃಗುವಿನ ಗರ್ವ ಶಿಶುವಿನ ಪಾಂಡಿತ್ಯದೆದುರು ನೀರಾಯಿತು. ಅಂದಿನಿಂದ ಭೃಗು ಎಲ್ಲರಿಗೂ ಗೌರವ ತೋರಿಸಲಾರಂಭಿಸಿದ. ✡



ಅಜ್ಞಾನದಿಂದ ಇಂದ್ರಿಯಗಳನ್ನು ನಿಗ್ರಹಿಸುವ ವಿಚಾರಕ್ಕಿಂತ ಜ್ಞಾನಕ್ಕಾಗಿ ಇಂದ್ರಿಯಗಳನ್ನು ಹದಗೊಳಿಸು. —ಶ್ರೀರಂಗ

ಅಧಿಕಾರದ ಅಮಲು ಹತ್ತಿದ ಯಾರಿಗೂ ತಮ್ಮ ಪೂರ್ವಸ್ಮರಣೆ ಇರುವುದಿಲ್ಲ. —ಹೊಸಕೆರೆ ಚಿದಂಬರಯ್ಯ

ಕೊರತೆಯ ಅರಿವೇ ಇಲ್ಲದಿದ್ದರೆ ಜೀವನದಲ್ಲಿ ಮೇಲ್ಮೆ ಪಡೆವ ಆಶೆಯೇ ಇಲ್ಲ. —ಗೌರೀಶ ಕಾಯ್ಕಿಣಿ

ತಿಳಿವಳಿಕೆ ಇಲ್ಲದ ಜ್ಞಾನವು ಇಮ್ಮಡಿ ಮೂರ್ಖತನ. —ಶಂ. ಬಾ. ಜೋಶಿ

ಗಾಳಿಯಲ್ಲಿ ಗೋಪುರಗಳನ್ನು ಕಟ್ಟಬಾರದು, ಕಟ್ಟಿದರೂ ನಮ್ಮ ಪ್ರಾಣವನ್ನು ಅದರಲ್ಲಿಟ್ಟು ಪೂಜಿಸಬಾರದು. —ರಂ ಶ್ರೀ. ಮುಗಳಿ

ಕೆಲವರು ಹೋದಲ್ಲೆಲ್ಲ ಸಂತೋಷವನ್ನೇ ಉಂಟುಮಾಡುತ್ತಾರೆ. ಇನ್ನು ಕೆಲವರು ಹೋದಾಗೆಲ್ಲ ಸಂತೋಷವನ್ನು ಉಂಟುಮಾಡುತ್ತಾರೆ. —ಆಸ್ಕರ್ ವೈಲ್ಡ್

ಡಾ. ಪಂಚಾನನ ಮಹೇಶ್ವರಿ

ಗೋಪಾಲ ಆಶ್ರಿತ

ಸ್ವದೇಶದಲ್ಲಿಯೇ ಇದ್ದುಕೊಂಡು ತಮ್ಮ ಸಂಶೋಧನೆಗಳಿಂದ ವಿದೇಶೀ ವಿಜ್ಞಾನಿಗಳ ಗಮನ ಸೆಳೆದ ಕೆಲವೇ ಭಾರತೀಯರಲ್ಲಿ ಡಾ. ಪಂಚಾನನ ಮಹೇಶ್ವರಿಯವರು ಒಬ್ಬರು. ಇವರು ರಚಿಸಿದ Introduction to the Embriology of Angiosperms [ಆವೃತ ಬೀಜಕಾರಿಗಳ ಭ್ರೂಣಶಾಸ್ತ್ರದ ಪರಿಚಯ] ಎಂಬ ಗ್ರಂಥವು ಇವರಿಗೆ ವಿಶ್ವಖ್ಯಾತಿ ತಂದುಕೊಟ್ಟಿತು. ಇಂದು ಈ ಪುಸ್ತಕದ ಅನುವಾದ ರಶಿಯನ್ ಭಾಷೆಯಲ್ಲಿಯೂ ಬಂದಿದೆಯೆಂದರೆ ಅದರ ಸತ್ವದ ಅರಿವಾದೀತು.

೯-೧೧-೧೯೦೪ ರಂದು ಜಯಪುರದ ಬಡ ಕುಟುಂಬವೊಂದರಲ್ಲಿ ಜನಿಸಿದ ಪಂಚಾನನ ವಿದ್ಯಾರ್ಥಿ ದೆಸೆಯಲ್ಲಿಯೇ ಪ್ರತಿಭಾವಂತನೆನಿಸಿಕೊಂಡ. ಪ್ರತಿ ತರಗತಿಯಲ್ಲೂ ಪ್ರಥಮ ಸ್ಥಾನ ಗಳಿಸಿದ್ದಲ್ಲದೆ, ಪ್ರತಿ ಸಣ್ಣ ವಿಷಯದಲ್ಲೂ ವಿಶೇಷ ಆಸಕ್ತಿ ತೋರಿಸುವುದು ಪ್ರಾಧ್ಯಾಪಕರ ಮೇಲೆ ವಿಶೇಷ ಪ್ರಭಾವ ಬೀರಿದವು. ಮಗನ ಆಸಕ್ತಿಯನ್ನರಿತ ತಂದೆ ವಿಜಯಲಾಲರು ಬಡತನವನ್ನೆದುರಿಸಿ ಪಂಚಾನನ ಉಚ್ಚ ಶಿಕ್ಷಣ ಪಡೆಯಲು ಅನುಕೂಲ ಮಾಡಿಕೊಟ್ಟರು. ಜಯಪುರದಲ್ಲಿ ಹೈಸ್ಕೂಲ್ ಅಭ್ಯಾಸವನ್ನು ಮುಗಿಸಿ ಅಲಹಾಬಾದಿನ ಐರ್ವಿಂಗ್ ಕ್ರಿಶ್ಚಿಯನ್ ಕಾಲೇಜ್ ಸೇರಿದ ಪಂಚಾನನರಿಗೆ ಭಾರತೀಯ ಸಸ್ಯಶಾಸ್ತ್ರ ಸಂಘಕ್ಕೆ ನಾಂದಿ ಹಾಕಿದ ಡಾ. ವಿನ್‌ಫೀಲ್ಡ್ ಡಜನ್ ಎಂಬ ಅಮೇರಿಕದ ಪಾದ್ರಿ ಗುರುವಾಗಿ ಲಭಿಸಿದರು. ದೃಷ್ಟಿದೋಷದಿಂದಾಗಿ ವೈದ್ಯಕೀಯ ಅಭ್ಯಾಸಕ್ಕೆ ಶರಣು ಹೊಡೆದ ಪಂಚಾನನರು, ಬಿ. ಎಸ್‌ಸಿ. [೧೯೨೫ ರಲ್ಲಿ] ಎಂ. ಎಸ್‌ಸಿ. [೧೯೨೭] ರಲ್ಲಿ ಮತ್ತು ಡಿ. ಎಸ್‌ಸಿ. [೧೯೩೧ ರಲ್ಲಿ] ಪದವಿಗಳನ್ನು ಅಲಹಾಬಾದ ವಿಶ್ವವಿದ್ಯಾಲಯದಿಂದ ಪಡೆದುಕೊಂಡು ತಾವು ಅಭ್ಯಾಸ ಮಾಡಿದ ಐರ್ವಿಂಗ್ ಕಾಲೇಜಿನಲ್ಲಿಯೇ ಅಧ್ಯಾಪಕರಾಗಿ ಸೇರಿದರು. ಅಧ್ಯಾಪನದ ಜೊತೆಗೆ ಸಂಶೋಧನೆಯ ಯೋಜನೆಯನ್ನೂ ಇಟ್ಟುಕೊಂಡ ಪಂಚಾನನರಿಗೆ ಡಾ. ಡಜನ್ನರ ಮಾರ್ಗದರ್ಶನ ಅಭ್ಯಾಸ ಕ್ರಮ ಮತ್ತು ಕಾರ್ಯ ಕೌಶಲ ಸಹಾಯವಾದವು.


೧೯೩೦ ರಿಂದ ಇವರ ಕೆಲಸ ಆಗ್ರಾ ಕಾಲೇಜಿನಲ್ಲಿ ಪ್ರಾರಂಭವಾಯಿತು. ಕೆಲವೇ ವರ್ಷಗಳ ಅವಧಿಯಲ್ಲಿ ಡಾ. ಮಹೇಶ್ವರಿಯವರು ತಮ್ಮ ಸಂಶೋಧನೆಗಳಿಂದ ಇತರರಿಗೂ ಸ್ಫೂರ್ತಿ ನೀಡಿದರು. ಇದರಿಂದಾಗಿ ಅನೇಕ ಪ್ರತಿಭಾವಂತ ಸಂಶೋಧಕರು ಬೆಳಕಿಗೆ ಬಂದು ಸಂಶೋಧನೆಯ ಕಾರ್ಯ ಪ್ರಗತಿ ಪಥದಲ್ಲಿ ಸಾಗಿತು. ೧೯೩೯ ರಲ್ಲಿ ಡಾಕಾ ವಿಶ್ವವಿದ್ಯಾಲಯದವರು ಇವರನ್ನು ಜೀವಶಾಸ್ತ್ರ ವಿಭಾಗದ ಮುಖ್ಯಸ್ಥನ ಹುದ್ದೆಗೆ ಆಹ್ವಾನಿಸಿದರು. ಡಾಕಾದಲ್ಲೂ ಸಸ್ಯಗಳ ಭ್ರೂಣ ವಿಜ್ಞಾನ ಸಂಶೋಧನೆಯ ಕೆಲಸ ಮುಂದುವರಿಸಿ ಆ ವಿಭಾಗವನ್ನು ಬೆಳೆಸಿದರು.

ಇವರ ಪ್ರತಿಭೆಯನ್ನು ಗುರುತಿಸಿದ ದಿಲ್ಲಿ ವಿಶ್ವವಿದ್ಯಾಲಯದ ಆಗಿನ ಉಪಕುಲಪತಿ ಮೋರಿಸ್ ಗ್ವಾಟ್ ಅವರು, ೧೯೪೯ರಲ್ಲಿ ಮಹೇಶ್ವರಿಯವರನ್ನು ತಮ್ಮ ವಿಶ್ವವಿದ್ಯಾಲಯದ ಸಸ್ಯಶಾಸ್ತ್ರ ವಿಭಾಗಕ್ಕೆ ಆಹ್ವಾನಿಸಿದರು. ಇಂದು ಜಗತ್ತಿನ ಕೆಲವೇ ಸಸ್ಯಶಾಸ್ತ್ರ ಸಂಶೋಧನಾ

ಕೇಂದ್ರಗಳಲ್ಲೊಂದು ಎಂಬ ಖ್ಯಾತಿ ದಿಲ್ಲಿ ವಿಶ್ವವಿದ್ಯಾಲಯದ ಈ ವಿಭಾಗಕ್ಕೆ ಬಂದಿದ್ದರೆ ಅದು ಕೇವಲ ಮಾಹೇಶ್ವರಿ ಮತ್ತು ಅವರ ಸಹೋದ್ಯೋಗಿಗಳ ದುಡಿಮೆಯಿಂದಲೇ. ಸಸ್ಯಗಳಲ್ಲಿ ನಡೆಯುವ ಎಲ್ಲ ಸೂಕ್ಷ್ಮ ಕ್ರಿಯೆಗಳನ್ನು ವಿಶ್ಲೇಷಿಸಬೇಕೆಂಬುದೇ ಸಂಶೋಧಕರಿಗೆ ಅವರು ಕೊಡುತ್ತಿದ್ದ ಆದೇಶ.

ಭ್ರೂಣಶಾಸ್ತ್ರದ ಅಧ್ಯಯನಕ್ಕೆ ತಮ್ಮನ್ನು ಮೀಸಲಾಗಿರಿಸಿಕೊಂಡಿದ್ದ ಮಾಹೇಶ್ವರಿಯವರು, ತಮ್ಮ ಸಂಶೋಧಕರೊಡನೆ [೧೯೫೦ರಲ್ಲಿ] ಗಸಗಸೆಯ ಸಸಿಗಳಲ್ಲಿ ನಡೆಯುವ ಪರಾಗಣ ಮತ್ತು ನಿಷೇಚನಗಳನ್ನು ಪ್ರಣಾಳಿಕೆಯಲ್ಲಿ ಯಶಸ್ವಿಯಾಗಿ ನಡೆಸಿದರು. ಹೂ ಬಿಡುವ ಸಸಿಗಳನ್ನು ಪರಾಗದಿಂದ ಪ್ರಾರಂಭಿಸಿ ಭ್ರೂಣಾವಸ್ಥೆಯ ವರೆಗೆ ಪ್ರಣಾಳಿಕೆಯಲ್ಲಿಯೇ ಬೆಳೆಸಿದವರಲ್ಲಿ ಇವರು ಮೊದಲಿಗರು. ಸಸ್ಯಶಾಸ್ತ್ರಕ್ಕೆ ಸಂಬಂಧಿಸಿದ ಇತರ ವಿಷಯಗಳಲ್ಲೂ ಇವರಿಗೆ ಆಸಕ್ತಿಯಿತ್ತು. ಇವರ ಆಸಕ್ತಿಯಿಂದಲೇ ಬೆಳೆದ ಈ ವಿಭಾಗ ವಿದೇಶದ ಸಂಶೋಧಕರನ್ನೂ ಆಕರ್ಷಿಸಹತ್ತಿತು. ಲೊರೆಥೆಸಿ, ಸೆಂಟಲೆಸಿಯಂಥ, ಪರಾನ್ನ ಜೀವಿಗಳನ್ನು ಕುರಿತು ಅಧ್ಯಯನ ಹಾಗೂ ಯಶಸ್ವಿ ಸಂಶೋಧನೆ ನಡೆಸಿದವರಲ್ಲಿ ಮಾಹೇಶ್ವರಿಯವರೇ ಮೊದಲಿಗರು. ಹೂ ಬಿಡುವ ಸಸ್ಯಗಳ ತುಲನಾತ್ಮಕ ಭ್ರೂಣಶಾಸ್ತ್ರವನ್ನು ಬೆಳೆಸುವ ಉದ್ದೇಶದಿಂದ ಸಂಶೋಧನೆ ನಡೆಸಲು ಮಾಹೇಶ್ವರಿಯವರು ಇತರರನ್ನು ಪ್ರೇರೇಪಿಸಿದರು. ಇವರ ಮಾರ್ಗದರ್ಶನದಲ್ಲಿ ಪಳಗಿದ ಅನೇಕರು ಇಂದು ಖ್ಯಾತ ಸಸ್ಯಶಾಸ್ತ್ರಜ್ಞರಾಗಿ ಭ್ರೂಣಶಾಸ್ತ್ರಕ್ಕೆ ಸಂಬಂಧಿಸಿದ ವಿಷಯಗಳನ್ನು ಕುರಿತು ಸಂಶೋಧನೆ ನಡೆಸುವವರಿಗೆ ಮಾರ್ಗದರ್ಶನವನ್ನೀಯುತ್ತಿದ್ದಾರೆ.

ವಿದೇಶಗಳಿಗೆ ಹೋದಾಗಲೆಲ್ಲ ಅಲ್ಲಿಯ ಸಸ್ಯಗಳ ಬಗ್ಗೆ ತಮಗಿದ್ದ ಆಸಕ್ತಿಯನ್ನು ವ್ಯಕ್ತಪಡಿಸಿ ಚರ್ಚೆ ಮತ್ತು ಪ್ರಯೋಗಗಳ ಮೂಲಕ ತಮ್ಮ ಸಂದೇಹಗಳಿಗೆ ಪರಿಹಾರ ಕಂಡುಹಿಡಿಯುತ್ತಿದ್ದರು. ಇಂಥ ಅನೇಕ ಸಸ್ಯಗಳನ್ನು ದಿಲ್ಲಿ ವಿಶ್ವವಿದ್ಯಾಲಯಕ್ಕೆ ತಂದರಲ್ಲದೆ ಅವುಗಳನ್ನು ಕುರಿತು ಸಂಶೋಧನಾ ಕಾರ್ಯ ನಡೆಯಿಸಲು ಬೇಕಾಗುವ ಎಲ್ಲ ಸಾಮಗ್ರಿಗಳನ್ನು ಒದಗಿಸಿದರು. ರಶಿಯ, ಅಮೇರಿಕ ಮತ್ತು ಯುರೋಪಿನ ದೇಶಗಳಿಗೆ ಭೇಟಿ ನೀಡುವ ಸಂದರ್ಭ ಬಂದು ಮಾಹೇಶ್ವರಿಯವರ ಪ್ರತಿಭೆ ವಿದೇಶಿ ಸಸ್ಯಶಾಸ್ತ್ರಜ್ಞರ ಮೇಲೆ ಪ್ರಭಾವ ಬೀರಿತು. ೧೯೩೬–೩೭ರ ಅವಧಿಯಲ್ಲಿ ಜರ್ಮನಿಯ ಪ್ರೊ. ಜಿ. ಟಿಶ್ಲರರ ಪ್ರಯೋಗಶಾಲೆಯಲ್ಲಿ ತಮ್ಮ ಪೋಸ್ಟ್ ಡಾಕ್ಟೊರಲ್ ಸಂಶೋಧನೆ ಮುಗಿಸಿ ವಿಯೆನ್ನಾದಲ್ಲಿಯ ಕೆಲವು ಪ್ರಯೋಗಶಾಲೆಗಳಿಗೆ ಭೇಟಿ ಕೊಟ್ಟರು. ೧೯೪೫–೪೬ರ ಅವಧಿಯಲ್ಲಿ ಅವರು ಹಾರ್ವರ್ಡಿನಲ್ಲಿದ್ದರು. ಮೊದಲು ಹೇಳಿದ Introduction to the Embriology



of Angiosperms ಎಂಬ ಗ್ರಂಥ ರಚಿಸಿದ್ದು ಇಲ್ಲಿಯೇ. ಈ ಗ್ರಂಥ ೧೯೫೦ರಲ್ಲಿ ಪ್ರಕಟವಾದಾಗ ಇವರ ಖ್ಯಾತಿ ಎಲ್ಲೆಡೆ ವ್ಯಾಪಿಸಿತು. ಯುನೆಸ್ಕೊದ ಆಹ್ವಾನದ ಮೇರೆಗೆ ೧೯೫೭ರಲ್ಲಿ ಇಂಡೋನೇಶಿಯಾ ಮತ್ತು ೧೯೫೪ರಲ್ಲಿ ಈಜಿಪ್ತನ್ನು ಸಂಚರಿಸಿ ಬಂದರು. ಅನೇಕ ಅಂತಾರಾಷ್ಟ್ರೀಯ ಸಸ್ಯಶಾಸ್ತ್ರ ಅಧಿವೇಶನಗಳಲ್ಲಿ ಮಹೇಶ್ವರಿಯವರು ವಿಶೇಷ ಆಹ್ವಾನಿತರಾಗಿ ಹಾಜರಿರುತ್ತಿದ್ದರು. ೧೯೫೯ ರಲ್ಲಿ ಅಮೇರಿಕದ ಇಲಿನಾಯಿಸ್ ವಿಶ್ವವಿದ್ಯಾಲಯಕ್ಕೆ ಸಂದರ್ಶಕ ಪ್ರಾಧ್ಯಾಪಕರಾಗಿ ಹೋಗಿದ್ದರು. ೧೯೬೧ ರಲ್ಲಿ ಪಶ್ಚಿಮ ಜರ್ಮನಿಯ ಅನೇಕ ಸಸ್ಯಶಾಸ್ತ್ರ ಸಂಘಗಳನ್ನು ಸಂದರ್ಶಿಸುವ ಅವಕಾಶ ಇವರಿಗೆ ಪ್ರಾಪ್ತವಾಯಿತು. ಅನೇಕ ವಿದೇಶಿ ವಿಜ್ಞಾನ ಸಂಸ್ಥೆಗಳ ಆಹ್ವಾನವಿದ್ದಾಗಲೂ ಅವರು ದಿಲ್ಲಿಯ ತಮ್ಮ ವಿಭಾಗವನ್ನು ಅಲಕ್ಷಿಸಲಿಲ್ಲ. ಅಂದು ಕಡೆಗಣಿಸಲಾಗಿದ್ದ ಭ್ರೂಣಶಾಸ್ತ್ರದ ಬೆಳವಣಿಗೆಯನ್ನೇ ಮೂಲವಾಗಿಟ್ಟುಕೊಂಡು ಮಾದರಿ ಸಂಸ್ಥೆಯೊಂದನ್ನು ಕಟ್ಟುವಲ್ಲಿ ಇವರ ಪಾತ್ರ ಹಿರಿದು.

ಇವರ ಪ್ರತಿಭೆಗೆ ಮನ್ನಣೆಯಿತ್ತು ಗೌರವಿಸಿದ ವಿಶ್ವವಿದ್ಯಾಲಯಗಳು, ವಿಜ್ಞಾನ ಸಂಸ್ಥೆಗಳು ಅನೇಕ. ಎಷ್ಟೋ ವಿಜ್ಞಾನ ಸಂಸ್ಥೆಗಳು ಇವರನ್ನು ತಮ್ಮ ಸಂಸ್ಥೆಯ ಗೌರವ ಸದಸ್ಯರನ್ನಾಗಿ ನೇಮಿಸಿಕೊಂಡವು. ೧೯೩೪ರಲ್ಲಿ ಭಾರತೀಯ ವಿಜ್ಞಾನ ಸಂಘದ ಸದಸ್ಯತ್ವ [೧೯೬೪ ರಲ್ಲಿ ಅವರೇ ಅಧ್ಯಕ್ಷರಾಗಿದ್ದರು], ಅಮೇರಿಕದ ಅಕೆಡೆಮಿ ಆಫ್ ಆರ್ಟ್ಸ್ ಆ್ಯಂಡ್ ಸೈನ್ಸಸ್, ಜರ್ಮನ್ ಅಕೆಡೆಮಿ ಆಫ್ ಸೈನ್ಸಸ್ (೧೯೬೨), ದಿ ರಾಯಲ್ ಸೊಸೈಟಿ ಆಫ್ ಲಂಡನ್ (೧೯೪೫) ಗಳು ಸದಸ್ಯತ್ವ ಕೊಟ್ಟು ಇವರನ್ನು ಗೌರವಿಸಿವೆ. ನಮ್ಮ ದೇಶದಲ್ಲಿಯೇ ಭಾರತೀಯ ಸಸ್ಯಶಾಸ್ತ್ರ ಸಂಘದ ವತಿಯಿಂದ [೧೯೫೯ರಲ್ಲಿ] ನೀಡಲಾದ ಬೀರಬಲ್ ಸಾಹನಿ ಪಾರಿತೋಷಕ, ರಾಷ್ಟ್ರೀಯ ವಿಜ್ಞಾನ ಸಂಸ್ಥೆಯ ಮೋರಾ ಸ್ಮಾರಕ ಪಾರಿತೋಷಕ ನೀಡಿ ಇವರನ್ನು ಗೌರವಿಸಲಾಯಿತು.

ತಮ್ಮ ನಿರಂತರ ಅಧ್ಯಯನ ಮತ್ತು ಸಂಶೋಧನೆಗಳ ಜೊತೆಗೆ Phytomorphology ಎಂಬ ಪತ್ರಿಕೆಯನ್ನು ಅಂತಾರಾಷ್ಟ್ರೀಯ ಸಂಘದ ವತಿಯಿಂದ ಪ್ರಕಟಿಸಿದರು. ಅನೇಕ ಸಂಶೋಧಕರಿಗೆ ತರಬೇತಿ ನೀಡಿದ ಡಾ. ಮಹೇಶ್ವರಿಯವರು ನಿರಾಶೆ ಮತ್ತು ದಣಿವನ್ನು ಎಂದೂ ಅನುಭವಿಸಿರಲಿಲ್ಲ. ಪ್ರಯತ್ನಶೀಲ ವ್ಯಕ್ತಿಯೇ ಜೀವನದಲ್ಲಿ ಏನಾದರೂ ಮಾಡಬಲ್ಲ, ಆ ಭಾವನೆಯೇ ಒಂದು ದಿನ ಅವನನ್ನು ಉನ್ನತ ಶ್ರೇಣಿಗೇರಿಸುವುದು ಎಂದು ಅವರು ತಮ್ಮ ಸಂಶೋಧಕರಿಗೆ ವಿದ್ಯಾರ್ಥಿಗಳಿಗೆ ಮೇಲಿಂದ-ಮೇಲೆ ಹೇಳುತ್ತಿದ್ದರು. ಶಿಸ್ತು ಮತ್ತು ಶ್ರದ್ಧಾಯುಕ್ತ ದುಡಿಮೆಯಲ್ಲಿ ನಂಬಿಕೆಯಿದ್ದ ಈ ವಿಜ್ಞಾನಿ ಭಾರತದಲ್ಲಿ ಸಸ್ಯಶಾಸ್ತ್ರದ ಬೆಳವಣಿಗೆಯಾಗಬೇಕಾದರೆ ಪ್ರೌಢಶಾಲೆಗಳಲ್ಲಿ ಅದಕ್ಕೆ ಮಹತ್ವ ಸಿಗಬೇಕೆಂಬುದನ್ನರಿತು ತಮ್ಮ ಸಹೋದ್ಯೋಗಿ ಮನೋಹರಲಾಲ್ ಜೊತೆಯಲ್ಲಿ ಶಾಲಾ ಮಕ್ಕಳಿಗಾಗಿ ಒಂದು ಪ್ರಾಣಿಶಾಸ್ತ್ರದ ಪಠ್ಯ ಪುಸ್ತಕವನ್ನು ಸಂಪಾದಿಸಿಕೊಟ್ಟರು. ಇಂಗ್ಲಿಷ್ ಬಾರದ - ಭಾರತೀಯರೆಲ್ಲರಲ್ಲಿ ವಿಜ್ಞಾನದ ಪ್ರಸಾರವಾಗಲೆಂಬ ಉದ್ದೇಶದಿಂದ ಹಿಂದಿಯಲ್ಲಿಯೇ ಅನೇಕ ಲೇಖನಗಳನ್ನು ಬರೆದರು. ೧೯೬೬ರಲ್ಲಿ ನಡೆದ ಭಾರತೀಯ ವಿಜ್ಞಾನ ಅಧಿವೇಶನದಲ್ಲಿ, "ನಾವು ಉಪವಾಸ ಬೀಳೋಣವೆ ?" ಎಂಬ ವಿಷಯದ ಮೇಲೆ ಹಿಂದಿಯಲ್ಲಿಯೇ ಭಾಷಣ ಮಾಡಿದರು. ಭಾರತದ ಜನಸಂಖ್ಯೆ ಆಹಾರ ಮುಂತಾದ ಸಮಸ್ಯೆಗಳನ್ನು ಕುರಿತು ಹಿಂದಿಯಲ್ಲಿ ಬರೆದ ಅನೇಕ ಲೇಖನಗಳು ಪ್ರಕಟಗೊಂಡಿವೆ.

ಸಸ್ಯ ವಿಜ್ಞಾನದಲ್ಲಿ ಮಹತ್ವಪೂರ್ಣ ಸಂಶೋಧನೆಗಳನ್ನು ಮಾಡಿದ ಈ ವಿಜ್ಞಾನಿಯ ಹೆಸರು ಆ ಕ್ಷೇತ್ರದಲ್ಲಿ ಚಿರಕಾಲ ಉಳಿದರೆ ಆಶ್ಚರ್ಯವೇನಲ್ಲ. ✲

ಬರ್ಲಿಟ್ಸ್:
ಭಾಷೆಗಳ ಜೀವಂತ ಕಂಪ್ಯೂಟರ್

ಡಾ. ಸಿ.ಎಸ್. ಸುನಂದನ

ವಿಜಯನಗರ ಸಾಮ್ರಾಜ್ಯದ ಪ್ರಖ್ಯಾತ ಸಮ್ರಾಟ ಕೃಷ್ಣದೇವರಾಯನ ಆಸ್ಥಾನಕ್ಕೆ ಒಮ್ಮೆ ಬಹುಭಾಷಾ ಪಂಡಿತನೊಬ್ಬ ಬಂದು ಸಭಿಕರಿಗೆ ಸವಾಲೆಸೆದನಂತೆ, "ನನ್ನ ಮಾತೃಭಾಷೆ ಯಾವುದೆಂದು ಕಂಡುಹಿಡಿಯಿರಿ, ನೋಡೋಣ," ಎಂದು. ಹಲವಾರು ಭಾಷೆಗಳಲ್ಲಿ ಮಾತನಾಡಿದ ಈ ಪಂಡಿತನ ತಾಯ್ನುಡಿ ಯಾವುದೆಂದು ಯಾರಿಗೂ ಗೊತ್ತಾಗಲಿಲ್ಲ. ಆಸ್ಥಾನದ ಸುಪ್ರಸಿದ್ಧ ವಿಕಟಕವಿ ತೆನಾಲಿ ರಾಮಕೃಷ್ಣನು ಕೊನೆಗೆ ಕುಹಕ ತಂತ್ರವೊಂದರಿಂದ ಪಂಡಿತನ ಮಾತೃಭಾಷೆ ತೆಲುಗು ಎಂದು ಕಂಡುಹಿಡಿದನಂತೆ.

ಈ ಕತೆಯಲ್ಲಿ ಸತ್ಯಾಂಶ ಎಷ್ಟೇ ಇರಲಿ, ಒಂದಂತೂ ನಿಜ, ಆಗಿನ ಕಾಲದಲ್ಲೇ ಬಹುಭಾಷಾ ಪಂಡಿತರ, ಮೇಧಾವಿಗಳ ಸಂಖ್ಯೆ ಬಹಳವಿತ್ತು. ಚಾರ್ಲ್ಸ್ ಬರ್ಲಿಟ್ಸ್ ಬಹುಭಾಷಾ ಮೇಧಾವಿ ವಿಜ್ಞಾನಿ. ಭಾಷೆಯನ್ನು ಜೀವನದುದ್ದಕ್ಕೂ ಕಲಿಯುತ್ತಾ, ಕಲಿಸುತ್ತಾ ಬಂದಿರುವ ಈತ ನೂರಕ್ಕೂ ಹೆಚ್ಚು ಭಾಷಾ ಪುಸ್ತಕಗಳ ಲೇಖಕ ಮತ್ತು ಅಮೇರಿಕದ ಭಾಷಾ ಕಾರ್ಯಕ್ರಮಗಳ ನಿರ್ದೇಶಕ.

ಬಾಲ್ಯದಲ್ಲಿ ಆತನನ್ನು ತಾಯಿ ಫ್ರೆಂಚಿನಲ್ಲಿ ಮಾತನಾಡಿಸಿದರೆ, ತಂದೆ ಇಂಗ್ಲಿಷಿನಲ್ಲಿಯೂ ತಾತ ಜರ್ಮನ್ನಿನಲ್ಲಿಯೂ ದಾದಿಯರು ಸ್ಪ್ಯಾನಿಶ್ನಲ್ಲಿಯೂ ಮಾತನಾಡಿಸುತ್ತಿದ್ದರು! ಹೀಗಾಗಿ, ಮೂರು ವರ್ಷದವನಿದ್ದಾಗ ಬರ್ಲಿಟ್ಸ್ ನಾಲ್ಕು ಭಾಷೆಗಳಲ್ಲಿ ಮಾತನಾಡಬಲ್ಲವನಾಗಿದ್ದ ಮತ್ತು ತನ್ನದೇ . ಭಾಷೆಯೊಂದನ್ನು ಸೃಷ್ಟಿಸುತ್ತಿದ್ದ! "ಎಲ್ಲರೂ ವಿಭಿನ್ನ ಭಾಷೆಗಳಲ್ಲಿ ಮಾತನಾಡುತ್ತಿದ್ದಾರೆಂದು ನನಗನ್ನಿಸಲಿಲ್ಲ. ಬದಲಾಗಿ ಎಲ್ಲರೂ ಅವರವರ ವೈಯಕ್ತಿಕ ಶೈಲಿಯಲ್ಲಿ ಮಾತನಾಡುತ್ತಿದ್ದಾರೆಂದು ತೋರಿತು. ನಮ್ಮ ತಾಯಿ ತಾತನ ಜತೆ ಜರ್ಮನ್ನಿನಲ್ಲಿ ಮಾತನಾಡುವಾಗ ಪ್ರತಿಯೊಬ್ಬರು ಮಾತನಾಡುವ ಧಾಟಿಯನ್ನು ಕಲಿತುಕೊಳ್ಳಬೇಕೆಂದುಕೊಂಡೆ. ಹೀಗಾಗಿ ನನಗೆ ನನ್ನದೇ ಆದ ಭಾಷೆಯೊಂದರ ಅಗತ್ಯ ಕಂಡುಬಂದಿತು," ಎನ್ನುತ್ತಾನೆ ಆತ. ತಂದೆ ತಾಯಿಗಳು ಪ್ರೋತ್ಸಾಹಿಸದಿದ್ದರೂ ೫೦ ಭಾಷೆಗಳನ್ನು ಅರಿತಿದ್ದ ಆತನ ತಾತ ಬರ್ಲಿಟ್ಸನಿಗೆ ಎಂಟು ವರ್ಷಗಳಾದ ಮೇಲೆ ವರ್ಷಕ್ಕೊಂದು ಭಾಷೆಯನ್ನು ಕಲಿಯುವಂತೆ ಮಾಡಿದ.

ಇಂದು ೨೪ ವಿವಿಧ ಭಾಷೆಗಳಲ್ಲಿ ಮಾತನಾಡಬಲ್ಲ ಬರ್ಲಿಟ್ಸನಿಗೆ ಭಾಷೆ ಸಂಪರ್ಕಕ್ಕೆಂದು ಬಳಸುವ ವಿಭಿನ್ನ ಪದಗಳಷ್ಟೇ ಅಲ್ಲ, ಅದೊಂದು ಮನೋವೈಜ್ಞಾನಿಕ ಪ್ರವೃತ್ತಿ. ಮತ್ತೊಂದು ಸಂಸ್ಕೃತಿಯವರು ಹೇಗೆ ಚಿಂತಿಸುವರೆಂಬುದನ್ನು ಪ್ರತಿಬಿಂಬಿಸುವ ಕೈಗನ್ನಡಿ. ಉದಾಹರಣೆಗೆ, ರಷ್ಯನ ಭಾಷೆಯ ವಿಶೇಷಣ 'ಕ್ರಾಸವಾಯಾ' ಅಥವಾ 'ಕ್ರಾಸ್ನಾಯಾ' ಹೆಣ್ಣಿನ ಸೌಂದರ್ಯ ಸೂಚಕ ಪದ. ಈ ಎರಡು ಪದಗಳು ಕ್ರಾಸ್ನಿ ಅಥವಾ ಕೆಂಪು ಎಂಬ ಅರ್ಥ

ವುಳ್ಳ ಮೂಲ ಪದದಿಂದಾದುವು. ಆದರೆ ಇದಕ್ಕೂ ರಾಜಕೀಯಕ್ಕೂ ಸಂಬಂಧವಿಲ್ಲ! 'ಕೆಂಪು' ಅನೇಕ ಶತಮಾನಗಳಿಂದ ರಷ್ಯದ ಜನತೆಯ ಬಣ್ಣವಾಗಿದೆ. ಕಾಕತಾಳೀಯವೆಂಬಂತೆ ಚೀನದಲ್ಲೂ ಕೆಂಪು ಜನಪ್ರಿಯವಾಗಿ ಹರ್ಷದ ಹಬ್ಬದ, ಮದುವೆಯ ದ್ಯೋತಕವಾಗಿದೆ (ಬಿಳಿಯ ಬಣ್ಣ ಸಾವು ಹಾಗೂ ದುಃಖಸೂಚಕವಾಗಿದೆ).

ಕೇವಲ ಒಂದೇ ಒಂದು ಭಾಷೆಯನ್ನು ಅರಿವುದು ಅದ್ಭುತ, ಅಗಾಧ ಸೌಧದ ಒಂದೇ ಕೋಣೆಯಲ್ಲಿ ವಾಸಿಸಿದಂತೆ. ಒಂದು ಭಾಷೆಯನ್ನು ಕಲಿಯುವಾಗ ಉಂಟಾಗುವ ಆನಂದ ನಿಜವಾಗಿ ಲೋಕವನ್ನು ಕಾಣುವ ಒಂದು ಸಮಗ್ರ ಹೊಸ ದೃಷ್ಟಿಯನ್ನು ಪಡೆದುಕೊಂಡ ತೃಪ್ತಿ. ಈ ಬಗೆಯ ಚಿಂತನ ದೃಷ್ಟಿಯನ್ನು ಬೆಳೆಸಿಕೊಂಡಾಗ ನಮ್ಮ ವ್ಯಕ್ತಿತ್ವ ಹೊಸದೊಂದು ಆಯಾಮ ಪಡೆಯುತ್ತದೆ.

ಅಮೇರಿಕದ ಸೈನ್ಯದಲ್ಲಿ ೨೬ ವರ್ಷಗಳ ಅವಧಿಯಲ್ಲಿ ಹಲವಾರು ಬಾರಿ ಕೌಂಟರ್ ಇಂಟೆಲಿಜೆನ್ಸ್ ಆಫೀಸರ್ ಆಗಿ ಕೆಲಸ ಮಾಡಿದ ಬರ್ಲಿಟ್ಸನ ಮತ್ತೊಂದು ಚಟವೆಂದರೆ ಸಾಗರ ತಲ ಪುರಾತತ್ತ್ವಶಾಸ್ತ್ರ. ಅಟ್ಲಾಂಟಿಸ್ ದ್ವೀಪ ಮತ್ತು ಬರ್ಮುಡಾ ತ್ರಿಕೋಣಗಳ ರಹಸ್ಯಗಳನ್ನು ಬಯಲು ಮಾಡುವಲ್ಲಿ ಈತನಿಗೆ ತುಂಬಾ ಕುತೂಹಲ. ಈ ವಿಷಯಗಳ ಬಗ್ಗೆ ಬರೆದ ಅತಿ ಹೆಚ್ಚು ಮಾರಾಟವಾದ ಪುಸ್ತಕಕ್ಕೆ ೧೯೭೩ರ ಡಾಗ್ ಹ್ಯಾಮರ್‌ಶೀಲ್ಡ್ ಅಂತರಾಷ್ಟ್ರೀಯ ಪಾರಿತೋಷಕ ದೊರಕಿತು.

ಪ್ರತಿಯೊಂದು ವಿಷಯಕ್ಕೂ ಒಂದು ದಂತಕತೆ ಹೇಳುವ ಬರ್ಲಿಟ್ಸನ ಪ್ರಕಾರ ರಕ್ತಪಿಪಾಸು ಡ್ರಾಕುಲಾ [Dracula] ನ ನೇರ ಸಂಬಂಧಿಯೊಬ್ಬ ಬುಕಾರೆಸ್ಟ್ ನಗರದ ರಕ್ತ ಬ್ಯಾಂಕೊಂದರಲ್ಲಿ ಕೆಲಸ ಮಾಡುತ್ತಿದ್ದಾನಂತೆ! 'ಮಾತೃಭಾಷೆಗಳು' ಎಂಬ ಕುತೂಹಲಕಾರಿ ಪುಸ್ತಕ ಅಸಂಖ್ಯ—ನೈಜ ಸಂಗತಿಗಳ, ದಂತಕತೆಗಳ ಮತ್ತಿತರ ವಿಷಯಗಳ ಉಗ್ರಾಣ. ಅದರಲ್ಲಿನ ವಿಷಯಗಳ ವ್ಯಾಪ್ತಿ ವಿಶಾಲ – ಚರಿತ್ರೆಯನ್ನು ಬದಲಿಸಿದ ಭಾಷಾ ಘಟನೆಗಳು, ಪ್ರಪಂಚದ ಬೈಗಳು ಮತ್ತು ಅಪಾಚ್ಯಗಳು ಇತ್ಯಾದಿ. ಈ ಪುಸ್ತಕದ ಬಗೆಗೆ ಬರೆಯುತ್ತಾ, "ಭಾಷೆ ಜನತೆಯ ಮೇಲೆ ಇತಿಹಾಸದ ಮೂಲಕ ಹೇಗೆ ಪ್ರಭಾವ ಬೀರಿತೆಂಬುದರ ಪಕ್ಷಿನೋಟವನ್ನು ಚಿತ್ರಿಸಲೆತ್ನಿಸಿದ್ದೇನೆ. ತಮ್ಮ ಭಾಷೆಯ ಬಗೆಗೆ ಜನರಿಗೆ ತೀವ್ರವಾದ ಭಾವನೆಗಳಿರುತ್ತವೆ. ಆಕ್ರಮಣಕಾರರು ಒಂದು ಪ್ರದೇಶವನ್ನು ವಶಪಡಿಸಿಕೊಂಡಾಗ ಆ ದೇಶದ ಜನರು ಬಿಟ್ಟುಕೊಡಬಹುದಾದ ಕೊನೆಯ ಮೂರು ವಸ್ತುಗಳೆಂದರೆ ಅವರ ಧರ್ಮ, ಅವರ ಪಾಕವಿಧಾನ ಮತ್ತು ಅವರ ಭಾಷೆ," ಎಂದಿದ್ದಾನೆ. ಬರ್ಲಿಟ್ಸ್.

ಇಂದು ಬಳಕೆಯಲ್ಲಿರುವ ೨೭೯೬ ಭಾಷೆಗಳು ಮತ್ತು ೭೫೦೦ ಉಪಭಾಷೆಗಳು ಮಾನವ

ಮಾಡುವ ೯೦ ಫೊನೆಟಿಕ್ ಶಬ್ದಗಳನ್ನು ಆಧರಿಸಿವೆ. ಒಂದು ಪರಮ ರಹಸ್ಯವೆಂದರೆ ಬೇರೆ ಬೇರೆ ಜನ ಸಮೂಹಗಳು ವಿಭಿನ್ನ ಭಾಷೆಗಳನ್ನೇಕೆ ಆಡುತ್ತಾರೆಂಬುದು. ಪ್ರಾಯಶಃ ಅದು ಒಂದು ಪ್ರದೇಶದ ವಾಯುಗುಣವನ್ನವಲಂಬಿಸಿರಬಹುದು. ಯಾವುದೋ ನಿರ್ದಿಷ್ಟ ಕಾರಣಕ್ಕಾಗಿ ಕಡಲತೀರದ ಉಷ್ಣದೇಶದ ಜನರು ಬೇಗ ಮಾತನಾಡುತ್ತಾರೆ ಮತ್ತು ಪದಗಳನ್ನು "ಕಲಸು"ತ್ತಾರೆ. ಆದರೆ ಗುಡ್ಡಗಾಡಿನ ಜನ ನಿಧಾನವಾಗಿ ತೂಗಿ ಮಾತನಾಡುವರು. ಪ್ರಾಯಶಃ ಅವರಿಗೆ ಉಸಿರಾಡಲು ಹೆಚ್ಚು ಗಾಳಿ ಬೇಕಾಗುವುದರಿಂದಲೋ ಏನೋ.

ಇಂದಿನ ಅಂತಾರಾಷ್ಟ್ರೀಯ ಪ್ರವಾಸಿ ಯಾವುದೇ ದೇಶದಲ್ಲಾದರೂ ಸರಿ, ಕೇವಲ ಎಂಟು ಪದಗಳನ್ನು ಕಲಿತರೆ ಸಾಕು, ಆರಾಮವಾಗಿ ವ್ಯವಹರಿಸಬಹುದು. ಬರ್ಲಿಟ್ಜನ "ವಿಶ್ವದ ಬಹು (೨೫) ಭಾಷೆಗಳ ಅತಿ ಚಿಕ್ಕ ಪುಸ್ತಕ"ದಲ್ಲಿ ಸಂಜ್ಞೆಗಳ ಸಹಾಯದಿಂದ "ಕ್ಷಮಿಸಿ, ದಯವಿಟ್ಟು," ವಂದನೆಗಳು, ಎಲ್ಲಿ, ಎಷ್ಟು, ಹೌದು, ಅಲ್ಲ, ಮತ್ತು ಚೆನ್ನಾಗಿದೆ" ಎಂದ ಪದಗಳನ್ನು ವಿವರಿಸಲಾಗಿದೆ. ಇದರಿಂದ ಸಂಪರ್ಕದ ಗೋಡೆಯನ್ನು ಸುಲಭವಾಗಿ ಭೇದಿಸಬಹುದು.

ಬಹುಭಾಷಾ ಪ್ರವೀಣ ತನ್ನ ಮಾತೃಭಾಷೆಯನ್ನು ಹೇಗೆ ಗುರುತಿಸುತ್ತಾನೆ? ಮೊಳೆ ಹೊಡೆಯುವಾಗ ಸುತ್ತಿಗೆ ಆಕಸ್ಮಾತ್ ಹೆಬ್ಬೆರಳ ಮೇಲೆ ಬಿದ್ದಾಗ ಅವನು ವ್ಯಕ್ತಪಡಿಸುವ "ಭಾವನೆ"ಯೇ ಅವನ ಮಾತೃಭಾಷೆ. ಈ ಸೂತ್ರದ ಪ್ರಕಾರ ಬರ್ಲಿಟ್ಸ್‌ನ ತಾಯ್ನುಡಿ ಫ್ರೆಂಚ್.

ಬರ್ಲಿಟ್ಸ್ ವಿವರಿಸುವ ಕೆಲವು ಭಾಷಾ ವೈಚಿತ್ರ್ಯಗಳು ಕುತೂಹಲಕರವಾಗಿವೆ.

ಪದಗಳ ಉದ್ದ ಕೆಲವು ವೇಳೆ ತಪ್ಪುದಾರಿಗೆಳೆಯಬಹುದು. ಹವಾಯಿ ಭಾಷೆಯಲ್ಲಿ ಒಂದು ಚಿಕ್ಕ ರೀಫ್ ಮೀನಿನ ಹೆಸರು ಹ್ಯೂಮೋ ಹ್ಯೂಮೋ ಕುನೋ ಕುಮಾಪುವಾ. ಆದರೆ ಸಾಗರದ ಒಂದು ದೊಡ್ಡ ಮೀನಿನ ಹೆಸರು ಬರಿಯ ಓಂ

ವೈದ್ಯರು ಔಷಧಗಳ ಹೆಸರು ಬರೆಯುವ ಚೀಟಿಯಲ್ಲಿ ಉಪಯೋಗಿಸುವ ಎಂಬ ಪದ ಈಜಿಪ್ಟಿನ ಶಿಲಾಶಾಸನದಲ್ಲಿ ನಮೂದಿಸಿರುವ ವೈದ್ಯದೇವತೆಯಾದ ಹೋರಸ್ಸನ ಕಣ್ಣುಗಳನ್ನು ಸೂಚಿಸುತ್ತದಂತೆ!

ಚೀನೀ ಭಾಷೆಯಲ್ಲಿ ಒಳ್ಳೆಯದು ಎಂಬ ಪದ "ಹೆಣ್ಣು" ಮತ್ತು "ಮಗು" ಪದಗಳ ವಸ್ತುಸೂಚಿಕಗಳ (ideogram) ಸಂಗಮ. ಇದೇ ರೀತಿ "ಛಾವಣಿ"ಯ ಕೆಳಗೆ "ಹೆಣ್ಣು" ಅಂದರೆ "ಶಾಂತಿ" ಎಂದರ್ಥ. ಇಬ್ಬರು "ಹೆಣ್ಣುಗಳು" ಎಂದರೆ "ಜಗಳ"! "ಬಾಗಿಲು ಪಕ್ಕದ ಹೆಣ್ಣು" ಅಂದರೆ "ಮತ್ಸರ!!"

ಚೀನೀ ಭಾಷೆಯಲ್ಲಿ ಇತರ ಭಾಷೆಗಳ ಅರ್ಥಗಳೂ ವಿಚಿತ್ರವಾಗಿವೆ. "ನಿಕ್ಸನ್" ಎಂದರೆ ರಾಡಿಯಿಂದ ಹೊರಬರುತ್ತಿರುವ ಮಣ್ಣು. ಕಿಸ್ಸಿಂಜರ್ ಅಂದರೆ ಅದೃಷ್ಟದ ಕೆಲಸದ ಮನೆ. "ರೀಗನ್" ಪದಕ್ಕೆ "ಥಂಡರ್ ರೂಟ್" ಎಂಬ ಅರ್ಥವಿದೆ.

ಭಾಷೆಗಳ ನೆಲೆಗಟ್ಟನ್ನು ತಿಳಿದುಕೊಂಡು ಅವುಗಳನ್ನು ಸಂಪರ್ಕ ಸಾಧನಗಳನ್ನಾಗಿ ಬಳಸಿಕೊಳ್ಳಲು ಶ್ರಮಿಸಿ ಭಾಷಾ ವೈಚಿತ್ರ್ಯ ವೈವಿಧ್ಯಗಳನ್ನು ಗುರುತಿಸಿ ಹೊಸ ಆಯಾಮಗಳನ್ನು ಸೃಷ್ಟಿಸುತ್ತಿರುವ ೬೬ ವರ್ಷದ ಚಾರ್ಲ್ಸ್ ಬರ್ಲಿಟ್ಜನನ್ನು ಭಾಷಾ ವಿಜ್ಞಾನದ ಭಾಷಾಶಾಸ್ತ್ರದ ಜೀವಂತ ಕಂಪ್ಯೂಟರ್ ಎನ್ನಲಡ್ಡಿಯಿಲ್ಲ. ✪

ಒಬ್ಬ ಮನೆಯಲ್ಲಿನ ಹಳೆಗಾಲದ ಕಾಗದಪತ್ರಗಳನ್ನು ಕೆದರುತ್ತಿದ್ದಾಗ ಆತನ ಪೂರ್ವಜನೊಬ್ಬ ೮೦ ವರ್ಷಗಳ ಹಿಂದೆ ಆ ಊರಿನ ಗ್ರಂಥಾಲಯದಿಂದ ಎರವಲು ತಂದ ಪುಸ್ತಕವೊಂದು ಸಿಕ್ಕಿತು. ಛೇ! ಛೇ! ಆ ಪುಸ್ತಕವನ್ನು ಹಿಂದಿರುಗಿಸದೆ ಇದ್ದದ್ದು ತುಂಬಾ ಅನ್ಯಾಯ ಎಂದುಕೊಂಡು, ಈ ಪುಸ್ತಕವನ್ನು ಗ್ರಂಥಾಲಯದ ಗ್ರಂಥಪಾಲನಿಗೆ ಕೊಟ್ಟಾಗ ಅವನು ಪುಸ್ತಕವನ್ನು ತಿರುವಿಹಾಕುತ್ತಾ ತುಂಬಾ ನೀರಸವಾದ ಪುಸ್ತಕ ಪುಸ್ತಕವನ್ನು ಎರವಲು ಪಡೆದಾತ ಅದನ್ನೋದಿ ಮುಗಿಸಲು ೮೦ ವರ್ಷಗಳನ್ನು ತೆಗೆದುಕೊಂಡಿದ್ದರೆ ಅದರಲ್ಲೇನೂ ಆಶ್ಚರ್ಯವಿಲ್ಲ ಎಂದನಂತೆ.

—ಎಂ.ಪಿ.

ಹದಿನೈದು ಸಾವಿರ ಹೆಂಡಿರ ಗಂಡ!

ನಾಗೇಶ ಜಿ. ವೈದ್ಯ

ಶ್ರೀಕೃಷ್ಣ ಹದಿನಾರು ಸಾವಿರ ಹೆಂಡಿರನ್ನಾಳಿದುದನ್ನು ನಾವೆಲ್ಲ ಕೇಳಿದ್ದೇವೆ. ಇತಿಹಾಸದಲ್ಲಿ ಮೊಗಲ ದೊರೆಯಾಗಿ ಮೆರೆದ ಗಿಯಾಸುದ್ದೀನ ಶ್ರೀ ಕೃಷ್ಣನಿಗಿಂತ ಕೇವಲ ಒಂದು ಸಾವಿರ ಕಡಿಮೆ ಹೆಂಡಿರನ್ನಾಳಿ ದಾಖಲೆ ಸ್ಥಾಪಿಸಿದ್ದುಂಟು. ತನ್ನ ಆಳ್ವಿಕೆಯಲ್ಲಿ ಹದಿನೈದು ಸಾವಿರ ಹೆಂಡಿರನ್ನು ಮಾಡಿಕೊಂಡ ಈ ರಾಜ ಎಂಬತ್ತು ವರ್ಷ ಬಾಳಿದ.

೧೪೬೯ ರಲ್ಲಿ ಗಿಯಾಸುದ್ದೀನನಿಗೆ ಮಾಂಡವದ ಸುಲ್ತಾನನಾಗುವ ಯೋಗ ಬಂತು. ತನ್ನ ತಂದೆ ಜೀವಿಸಿರುವಾಗಲೇ ಗಿಯಾಸುದ್ದೀನ ದಂಡನಾಯಕನಾಗಿ ಶತ್ರುಭಯಂಕರನೆನ್ನಿಸಿದ. ಆದರೆ ಆತ ರಾಜ್ಯಪಡೆದ ನಂತರ ಒಂದೇ ಒಂದು ಸಾರಿ ಖಡ್ಗವನ್ನೆತ್ತಿದ್ದ. ಆ ಸಲದ ಭೀಕರ ಯುದ್ಧದಲ್ಲಿ ಗಿಯಾಸ ತೋರಿಸಿದ ಪರಾಕ್ರಮವನ್ನು ಇಂದ್ರನೂ ದಾನವರ ಮೇಲೆ ತೋರಿರಲಿಕ್ಕಿಲ್ಲ. ಯುದ್ಧ ಮುಗಿಸಿ ತನ್ನ ಬಿಡಾರಕ್ಕೆ ಬಂದವನೇ ಮಕ್ಕಳನ್ನೂ ಮಂತ್ರಿಗಳನ್ನೂ ಕರೆದು ಸಭೆ ಸೇರಿಸಿದ. ಗಿಯಾಸುದ್ದೀನ ತನ್ನ ಸಮ್ಮುಖದಲ್ಲಿ ಮಂತ್ರಿಗಳ ಮಕ್ಕಳ ಹೇಳಿದ: ಇದು ನನ್ನ ಖಡ್ಗ. ಇದಕ್ಕೆ ಎದುರಾಡಿ ಬದುಕಿದವರು ಈ ಭೂಮಿಯಲ್ಲಿಲ್ಲ. ನನಗಿನ್ನು ಈ ಖಡ್ಗವನ್ನು ಎತ್ತುವ ಮನಸ್ಸಿಲ್ಲ. ಅದಕ್ಕಾಗಿ ಇದನ್ನು ನನ್ನ ಮಕ್ಕಳಿಗೆ ನೀಡುತ್ತೇನೆ. ಇನ್ನೊಮ್ಮೆ ಖಡ್ಗ ಹಿಡಿಯುವ ಪ್ರಸಂಗವನ್ನು ದೇವರುಂತರದಿರಲಿ" ಎನ್ನುತ್ತಾ ಆ ಖಡ್ಗವನ್ನು ತನ್ನ ಮಕ್ಕಳಿಗೆ ಒಪ್ಪಿಸಿದ. ನಂತರ ತಾನು ಅಂತಃಪುರದಲ್ಲೆ ವಿಶ್ರಾಂತನಾಗಿ ಕಾಲಕಳೆಯ ತೊಡಗಿದ. ಆಶ್ಚರ್ಯವೆಂದರೆ ಈತ ಸಾಯುವವರೆಗೂ ಯುದ್ಧಗಳೇ ಜರುಗಲಿಲ್ಲ. ಅಷ್ಟು ಹೀನ ಸ್ಥಿತಿಯಲ್ಲಿ ಶತ್ರುಗಳು ಹೆದರಿಕೊಂಡಿದ್ದರು.

ಗಿಯಾಸುದ್ದೀನ ತನ್ನ ಪ್ರಾಯದ ಕಾಲದಲ್ಲಿ ಕಂಡ ಹೆಣ್ಣುಗಳನ್ನೆಲ್ಲ ತನ್ನ ಅರಮನೆಯ ಆಭರಣವಾಗಿ ಮಾಡಿದ. ಅವನ ಅಂತಃಪುರದಲ್ಲಿ ಹದಿನೈದು ಸಾವಿರ ನಾರಿಯರು ಭೋಗವಸ್ತುಗಳಾಗಿದ್ದರು. ಹಾಗೆಂದು ಅವರೇನೂ ತಲೆ ಕೂದಲು ಬೆಳ್ಳಗಾಗಿ, ನರಿಗೆ ಬಿದ್ದು ಚರ್ಮ ಮಡಿಚಿದ ಮುದುಕಿಯರಾಗಿರಲಿಲ್ಲ. ಎಲ್ಲರೂ ಪ್ರಾಯಮಾಗದ ಉನ್ಮತ್ತ ತಾರುಣ್ಯದ ನೀರೆಯರು. ಇದರಿಂದಾಗಿಯೇ ಆತ ಚಂಪಾಬಾವಡಿ ಮತ್ತು ಮುಂಜ ತಲಾವ್ ಸುತ್ತಲೂ ಒಂದು ದೊಡ್ಡ ನಗರವನ್ನೇ ನಿರ್ಮಿಸಿದ. ಅದು ಸಂಪೂರ್ಣ ನಾರಿರದೇ ಆಗಿತ್ತು. ಆ ರಾಜ್ಯದ ಕಾರ್ಯಭಾರ ನಗರದ ಆಗುಹೋಗುಗಳನ್ನು ಬೇಕಾದ ಬೇಡಿಕೆಗಳು ಇತ್ಯಾದಿಯಾಗಿ ಪ್ರತಿಯೊಂದೂ ಹೆಂಗಳೆಯರಿಂದಲೇ ನಿರ್ವಹಿಸಲ್ಪಡುತ್ತಿದ್ದವು.

ಈ ಹದಿನೈದು ಸಾವಿರ ರಾಣಿಯರಲ್ಲಿ ಅನೇಕರು ನೃತ್ಯ ಕಲಿತವರು. ಇನ್ನು ಕೆಲವರು ಸಾಹಿತ್ಯ ಕಲೆಗಳಲ್ಲಿ ವಿಶಾರದರಾಗಿದ್ದವರು. ಪ್ರತಿದಿನ ೫೦೦ ತುರ್ಕಸ್ಥಾನದ ರಮಣಿಯರು ಗಂಡುವೇಷ ತೊಟ್ಟು ಕೈಯಲ್ಲಿ ಛರ್ಚಿ ಹಿಡಿದು ನಗರ ರಕ್ಷಣೆ ಮಾಡುತ್ತಿದ್ದರು. ಗಿಯಾಸುದ್ದೀನನ ಒಂದು ಬದಿಗೆ ಈ ತುರ್ಕಿ ರಮಣಿಯರಿದ್ದರೆ ಇನ್ನೊಂದು ಕಡೆ ಅಬಿಸೀನಿಯದ ಹರಿಣಾಕ್ಷಿಯರು ವೀರವೇಷದಲ್ಲಿ ನಿಲ್ಲುತ್ತಿದ್ದರು. ಗಿಯಾಸುದ್ದೀನನಿಗೆ ಅವರು ಹಾಡಿ, ನರ್ತಿಸಿದಷ್ಟು ಸಂತೋಷ. ತಾನೂ ಹಾಡಿ, ಕುಡಿದು ಕುಣಿಯುತ್ತಿದ್ದ. ಅವನಿಗೆ ಹೊತ್ತೇ ಸಾಲುತ್ತಿರಲಿಲ್ಲ. ದಿನವೂ ದೇವರಲ್ಲಿ ತನಗೆ ಮೂವತ್ತಾರು

ತಾಸುಗಳ ದಿನವನ್ನು ಕರುಣಿಸೆಂದು ಕೇಳುತ್ತಿದ್ದ.

ಹದಿನೈದು ಸಾವಿರ ರಮಣಿಯರ ಲಂಪಟನಾದ ಈ ದೊರೆಯು ಅವಸಾನ ಕರುಣಾಜನಕವಾಯಿತು. ೮೦ ವರ್ಷವಾದರೂ ಕಡಿಮೆಯಾಗದ ವಿಲಾಸೋನ್ಮತ್ತ ಗಿಯಾಸನ ಜೀವನವನ್ನು ಕಂಡು ಅವನ ಹಿರಿಯ ಮಗ ನಾಸಿರುದ್ದೀನ್ ಮೂರು ಬಾರಿ ವಿಷ ನೀಡಲು ಯತ್ನಿಸಿದ್ದನ್ನು ರಕ್ಷಕರು ವಿಫಲಗೊಳಿಸಿದ್ದರು. ಕೊನೆಯ ಸಲ ಬೇಸಿಗೆಯ ಮಧ್ಯಾಹ್ನ ಗಿಯಾಸ ಬಾಯಾರಿಕೆಯಿಂದ ಬಳಲುತ್ತಿದ್ದ. ಆ ದಿನವೂ ನಾಸಿರುದ್ದೀನ್ ವಿಷವನ್ನೇ ತಂದ. ಗಿಯಾಸ ಅದನ್ನು ವಿಷವೆಂದರಿತು ಹಿಂಜರಿದ. ಆದರೆ ನಾಸಿರುದ್ದೀನ್ ಹೇಳಿದ "ಬಾ, ನನ್ನ ಕೈಯಾರೆ ಕೊಲ್ಲಬಾರದೆಂದು ಈ ಕೊಲ್ಲುವ ಕೆಲಸವನ್ನು ವಿಷಕ್ಕೆ ಒಪ್ಪಿಸಿದ್ದೇನೆ." ಸತ್ಯವನ್ನು ಕೇಳಿ ಗಿಯಾಸನಿಗೆ ತಾನು ಮಕ್ಕಳಿಗೆ ಅಷ್ಟು ಬೇಡವಾದರೆ ಇನ್ನೇಕೆ ಉಳಿಯಲಿ? ಎನ್ನಿಸಿ ಅದನ್ನು ಕುಡಿದ. ಸಾಯುವಾಗ ದೇವರ ಧ್ಯಾನ ಮಾಡಲು ಮರೆಯಲಿಲ್ಲ. "ಹೇ ದಯಾನಿಧಿ, ನನ್ನ ಮಗ ಅಕ್ಷಮ್ಯ ಅಪರಾಧ ಮಾಡಿದನೆಂದು ಅವನನ್ನು ಶಿಕ್ಷಿಸಬೇಡ. ನೀನೇ ಆ ವಿಷಪೂರಿತ ನೀರನ್ನು ಅವನ ಮೂಲಕ ಕಳಿಸಿದ್ದೀ ಎಂದು ಬಗೆದು. ಪ್ರಸಾದವಾಗಿ ಸ್ವೀಕರಿಸಿದ್ದೇನೆ. ಅವನದೇನೂ ತಪ್ಪಿಲ್ಲ" ಎನ್ನುತ್ತಲೇ ಗಿಯಾಸುದ್ದೀನ ಕಣ್ಮುಚ್ಚಿದ. ☆

ಅದ್ಭುತ ಸರ್ವವ್ಯಾಪಿ ಘನಾಕೃತಿ ಸ್ಪರ್ಶವ್ಯಾಧಿ

ಲೇಖನ: ಜಿ. ಟಿ. ನಾರಾಯಣರಾವ್
ಚಿತ್ರಗಳು: ಕೆ. ಮುರಳೀಧರರಾವ್

ನವೀನ ಪರಿಷ್ಕೃತ ಆಯುರ್ವೇದ ವೈದ್ಯ ನಿಘಂಟುವಿನಲ್ಲಿ ಈ ನೂತನ ವ್ಯಾಧಿಯ ಬಗ್ಗೆ ಇರಬಹುದಾದ ವ್ಯಾಖ್ಯಾನ: "ಸಂಸ್ಕೃತ ನಾಮಪದ. ಒಂದು ಬಗೆಯ ತೀವ್ರ ಮಾನಸಿಕ ಸಂಕ್ಷೋಭೆ. ಬೆರಳ ಕೊನೆಗಳಲ್ಲಿ ನವೆ ಉಂಟಾಗುವುದು ಇದರ ಲಕ್ಷಣ. ಚಿಹ್ನೆಗಳು ತಿಂಗಳುಗಟ್ಟಲೆ ಮರುಕಳಿಸುತ್ತಿರುವುವು. ಅತಿ ಸಾಂಕ್ರಾಮಿಕ. ಹಂಗರಿ ಮತ್ತು ಜಪಾನ್ ದೇಶಗಳಲ್ಲಿ ಉಗಮಿಸಿ ಪ್ರಪಂಚಾದ್ಯಂತ ವ್ಯಾಪಿಸಿರುವ ಬಹುವರ್ಣ ಘನಾಕೃತಿಯ ಜೊತೆ ಸುದೀರ್ಘ ಕಾಲ ಸಂಸ್ಪರ್ಶ ಹೊಂದುವುದರಿಂದ ಶಮನ."


ಈ 'ತಿಲಕಾಷ್ಠಮಹಿಷಬಂಧನ'– ವ್ಯಾಖ್ಯಾನ ತಿಳಿಸದಿರುವ ಸಂಗತಿ ಒಂದುಂಟು: ಬಹುವರ್ಣ ಘನಾಕೃತಿಯೊಂದಿಗಿನ ಸಂಸ್ಪರ್ಶ ನವೆಗೆ ಚಿಕಿತ್ಸೆ ಮಾತ್ರವಲ್ಲ, ಕಾರಣವೂ ಹೌದು!


ಕ್ಷಮ್ಯ ಆತ್ಮಪ್ರಶಂಸೆ


ಗಣಿತ ವಿದ್ಯಾರ್ಥಿಯಾದ ನಾನು ರೂಬಿಕ್ ಘನಾಕೃತಿಯ [Rubik cube] ಬಗ್ಗೆ ಮೂರು ವಿಶ್ವಾಸಾರ್ಹ ಲೇಖನ ಓದಿದ್ದೆ. [ಈ ಪ್ರಬಂಧದ ಕೊನೆಯಲ್ಲಿ ಹೆಸರಿಸಿದ್ದೇನೆ] ಆದರೆ ಆಸಕ್ತಿ ಕುದುರಿರಲಿಲ್ಲ. ಏಕೆಂದರೆ ಚಿತ್ರ ಮತ್ತು ನಿರೂಪಣೆ ಎಷ್ಟೇ ಆಕರ್ಷಕ ಮತ್ತು ಸ್ಪಷ್ಟ ಆಗಿದ್ದರೂ ವಸ್ತುವಿನ ಜೊತೆ ಒಡನಾಡಿ ಗಳಿಸುವ ಅನುಭವಕ್ಕೆ ಸರಿಸಾಟಿ ಎನಿಸವು. ಹೆಚ್ಚೆಂದರೆ ಸರಿದಾರಿ ತೋರಿಸುವ ಕೈಮರ ಆಗಬಲ್ಲವು, ಅಷ್ಟೆ. ಆದ್ದರಿಂದ ರೂಬಿಕ್ ಘನಾಕೃತಿಯಾದರೂ ಅಮೇರಿಕದವರ ಎಂದಿನ [illegible]ದೊಂಬರಲಾಗದ ಇನ್ನೂ ಒಂದು ವರಸೆ ಎಂಬ ಮಾಮೂಲಿ "ಭಾರತೀಯ ಶೂನ್ಯವಾದ" ವೃತ್ತಿಯಿಂದ ಆ ಲೇಖನಗಳ ಹೂರಣ ಸವಿಯಲು ನಿರಾಕರಿಸಿದ್ದೆ,


ಈಚೆಗೆ ಅಮೇರಿಕದಿಂದ ಭಾರತಕ್ಕೆ [illegible] ಶಿಷ್ಯನೊಬ್ಬ ತನ್ನ ಹದಿಹರೆಯದ [illegible] ನನ್ನನ್ನು "ಸುಪ್ರಸಿದ್ಧ ಗಣಿತವಿದ್ವಾಂಸ"ನೆಂದು ಪರಿಚಯಿಸಿಕೊಟ್ಟ. ಆ ಪೋರ ಒಡನೆ ನನಗೆ ರೂಬಿಕ್ ಘನಾಕೃತಿಯ ಮೋಡಿ ಹಾಕಿದ, ಸೋಂಕು ತಾಗಿಸಿದ. ಅದೇ ನನ್ನ ಪ್ರಥಮ ದರ್ಶನ! ದಂತಭಗ್ನದ ಕತೆ ಬರಲಿದೆ.

ಅದು ಹೇಗಿದೆ? ರಂಗು ರಂಗಿನ ಗಟ್ಟಿ [illegible]. ಉದ್ದ, ಅಗಲ, ಎತ್ತರ ಎಲ್ಲವೂ ಸಮ. ಎಂದೇ ಅದೊಂದು ವಿಶಿಷ್ಟ ಗಣಿತಾಕೃತಿ: ಗಣಿತದ ಪರಿಭಾಷೆಯಲ್ಲಿ ಘನಾಕೃತಿ. ಅಪಾತ ಮಧುರಾಕಾರ. ಆರು ಮುಖಗಳು. ಒಂದೊಂದು ಮುಖದಲ್ಲಿ ಒಂಭತ್ತು ಬಣ್ಣ ಚೌಕಗಳು. ಬಣ್ಣಗಳಲ್ಲಿ ಏಕತೆ ಇಲ್ಲ. ಕಲಸು ಮೇಲೋಗರ. ಎಡದಿಂದ ಬಲಕ್ಕೆ ಎಣಿಸಿದರೆ ತಲಾ ಒಂಬತ್ತು ಶಿಶುಘನಾಕೃತಿಗಳು [cubelets] ರಚಿಸುವ ಮೂರು ಗೋಡೆಗಳು. ಕೆಳಗಿನಿಂದ ಮೇಲಕ್ಕೆ ಎಣಿಸಿದರೆ ಮತ್ತೆ ತಲಾ ಒಂಬತ್ತು ಶಿಶುಗಳು ರಚಿಸುವ ಮೂರು [illegible]









ಗಳು. ಆದರೆ ಒಟ್ಟು ಶಿಶುಗಳ ಸಂಖ್ಯೆ ೨೭ + ೨೭ = ೫೪ ಅಲ್ಲ, ೨೭ ಮಾತ್ರ. ಪ್ರಾಯಶಃ ಇಪ್ಪತ್ತಾರೇ. ಏಕೆಂದರೆ ತಿರುಳಿನಲ್ಲಿರಬಹುದಾದ ಶಿಶು ಅಗೋಚರ. ಗೋಡೆಗಳನ್ನೂ ಚಪ್ಪಡಿಗಳನ್ನೂ ಪರಸ್ಪರ ಒತ್ತೊತ್ತಾಗಿ ಬಂಧಿಸಿದೆ. ಪ್ರತಿಯೊಂದು ಗೋಡೆ ಅಥವಾ ಚಪ್ಪಡಿ ಅದರ ಕೇಂದ್ರದ ಸುತ್ತ, ಇತರ ಗೋಡೆ ಅಥವಾ ಚಪ್ಪಡಿಗಳ ವಿನ್ಯಾಸಕ್ಕೆ ಭಂಗ ಬಾರದಂತೆ, ಹಿಂದಕ್ಕೂ ಮುಂದಕ್ಕೂ ತಿರುಗಬಲ್ಲದು. ಗೋಡೆ, ಚಪ್ಪಡಿ ಇಲ್ಲವೇ ಶಿಶು ಯಾವುದೂ ಕಳಚಿಕೊಂಡು ಬೀಳುವುದಿಲ್ಲ. ಬಿಡಿ ಶಿಶುಗಳಿಗೆ ಸಾಮೂಹಿಕ ಚಲನೆ ವಿನಾ ಸ್ವತಂತ್ರ ಚಲನೆ ಇಲ್ಲ.

"ಮಾವಾ! ಪ್ರತಿಯೊಂದು ಮುಖದ ಒಂಬತ್ತು ಚೌಕಗಳ ಬಣ್ಣವೂ ಒಂದೇ ಆಗಿರುವಂತೆ ಹೊಂದಿಸಿ ನೋಡೋಣ," ಪೋರ ನಸಗೆಸೆದ ಸವಾಲಿದು.

ಘನಾಕೃತಿಯನ್ನು ನಿರ್ಲಕ್ಷ್ಯ ದೃಷ್ಟಿಯಿಂದ ತೆಗೆದುಕೊಂಡೆ. ತಿರುಗಿಸಿದೆ. ತಿರುತಿರುಗಿಸಿದೆ. ತಿ_ರು–ಗಿ–ಸಿ–ದೆ. ತಿಪ್ಪರಲಾಗ ಹೊಡೆದೆ. ಬಣ್ಣಗಳ ಕಲಸು ಮೊಲಸಾಯಿತು. ಕೈಲಾಸ-ವೆತ್ತಲು ಹೊರಟ ರಾವಣನ ಪಾಡು. ಗಣ್ಯ ಗಣಿತವಿದನಿಗೆ ಕ್ಷುದ್ರ ಗಣಿತಾಕೃತಿಯೊಂದರ ಅಪಮಾನ – ಅದೇನು ಸಾಮಾನ್ಯ[illegible]! [illegible]

ಶಿಷ್ಯನಿಗೆ ತನ್ನ ಸಮರ್ಥ ಗುರುವಿನ ಚಿಂತಾಜನಕ ಸೋಲು ಸಹಿಸಲು ಸಾಧ್ಯವಾಗದ ಮಾನಸಿಕ ವೇದನೆ. ತುಂಟ ಅಣುಗನಿಗೆ ತನ್ನ ಪ್ರಚಂಡ ತಂದೆಯು ಪ್ರಸಿದ್ಧ ಗುರುವನ್ನು ಅಂಗಾತ ಕೆಡಹಿದನೆಂಬ ಸಂತೃಪ್ತ ಭಾವನೆ.

ಅದನ್ನು ಅವನು ತನ್ನ ಕೈಯಿಂದ ಕಸಿದು ಕೊಂಡ. ಕೆಲವು ನಿಮಿಷಗಳ ಕಾಲ ಚಕಚಕಚಕ ಎಂದು ಬೆರಳುಗಳ ಚಳಕ ಪ್ರದರ್ಶಿಸಿದ. ಅಗೋ! ಐವತ್ತನಾಲ್ಕು ಸಿಪಾಯಿಗಳೂ ತಮ್ಮ ಸಹಜ ನೆಲೆಗಳಲ್ಲಿ ಶಿಸ್ತಿನಿಂದ ನಿಂತು ಮಂದಹಾಸ ಸೂಸಿ ನನ್ನನ್ನು ಪಿಡಿಸಿದರು: ಕೆಂಪು ಮುಖ, ನೀಲಿ ಮುಖ, ಹಸಿರು ಮುಖ, ಹಳದಿ ಮುಖ, ಬಿಳುಪು ಮುಖ, ಕಪ್ಪು ಮುಖ. ಅವನದು ಗೆಲುವು ಮುಖ; ನನ್ನದು ಜೋಲು ಮುಖ.

ಈ ಚಿಕಮತ್ತಿನ ಹಿನ್ನೆಲೆಯು ಕರಾಮತ್ತು ಏನು?

ಅವನು ಮತ್ತೆ ಮತ್ತೆ ತನ್ನ ಕೈಚಳಕ ಪ್ರದರ್ಶಿಸಿದ. ಅದರಲ್ಲಿ ಯಾವ ಮೋಡಿ, ಜಾದು, ಮಾಟ ಇರಲಿಲ್ಲ. ಆದರೆ ನನಗೆ ಮಾತ್ರ ಅದು ಕರಗತವಾಗಲಿಲ್ಲ. ಅಜನ್ಮ ಕಲಾವಿದನ ನೈಜ ಪ್ರತಿಭೆ ಅವನದು. ತನ್ನ ನಡೆಗಳನ್ನು ಅವನು ವಿವರಿಸಲಾರದವನಾಗಿದ್ದ. ವಿಮರ್ಶಕನ ಶಾಸ್ತ್ರೀಯ ದೃಷ್ಟಿ ನನ್ನದು. ಅವನ ನಡೆಗಳಲ್ಲಿ ಅಡಗಿದ್ದ ಗಣಿತವನ್ನು ನಾನು ಅರಿಯಬಲ್ಲವನಾಗಿದ್ದೆ–ಅನುಕರಿಸಲಾಗದಿದ್ದರೂ.

ಅಂದಹಾಗೆ, ಸಫಲ ವಿಮರ್ಶಕನು. ವಿಫಲ ಕಲಾವಿದನೇ ?


ರೂಬಿಕ್ ಘನಾಕೃತಿ ಎಂದರೇನು?

ಎರ್ನೋ ರೂಬಿಕ್ ಆತನ ಹೆಸರು. ಹಂಗರಿ ದೇಶದ ಬುಡಾಪೆಸ್ಟ್ ನಗರದಲ್ಲಿಯ ವಾಣಿಜ್ಯ ಕಲಾಶಾಲೆಯಲ್ಲಿ ವಾಸ್ತುಶಿಲ್ಪದ ಅಧ್ಯಾಪಕ. ಉದ್ದ ಅಗಲ ಎತ್ತರ (ಅಥವಾ ದಪ್ಪ ಯಾ ಆಳ) ಎಂಬ ಮೂರು ಆಯಾಮಗಳಲ್ಲಿರುವ ವಸ್ತುವಿನ ಮಾನಸಿಕ ಮಾದರಿ ರೂಪಿಸಿಕೊಂಡು ಹಲಬಗೆಯ ಸರಿತಕ್ಕೆ ಅದನ್ನು ಒಳಪಡಿಸಿದಾಗ ಅದು ಪ್ರಾರಂಭದಲ್ಲಿ ಪ್ರದರ್ಶಿಸುವ ವಿನ್ಯಾಸಕ್ಕೂ ಅಂತ್ಯದಲ್ಲಿ ಪ್ರದರ್ಶಿಸುವ ವಿನ್ಯಾಸಕ್ಕೂ ನಡುವೆ ಇರುವ ಸಂಬಂಧವೇನು? ವಾಸ್ತುಶಿಲ್ಪದ ಈ ಸಮಸ್ಯೆಯನ್ನು ವಿದ್ಯಾರ್ಥಿಗಳಿಗೆ ವಿವರಿಸುತ್ತಿದ್ದ. ಅವರ ಕಲ್ಪನೆಗೆ ಸಾಣೆಹಿಡಿಯಲು ೩×೩×೩ ಘನಾಕೃತಿಯ ಮಾದರಿಯನ್ನು ಮಾನಸಿಕವಾಗಿ ರೂಪಿಸಿದ (೧೯೭೪). ಮುಂದಿನ ವರ್ಷವೇ (೧೯೭೫), ಇದನ್ನು ಯಾಂತ್ರಿಕ ವಾಸ್ತವತೆಯಾಗಿ ವೃದ್ಧಳಿಸಿ ಏಕಸ್ವ (patent) ಪಡೆದ. ಇದೇ ರೂಬಿಕ್ ಘನಾಕೃತಿ – ಹೇಗೆ ನೋಡಿದರೂ ಹೇಗೆ ತಿರುಗಿಸಿದರೂ ಜೊತೆ ಬಿಡದ ವಿನೂತನ ತ್ರಿವಳಿಗಳ ಒಕ್ಕೂಟ, ಇದೊಂದು ಅದ್ಭುತ ಯಾಂತ್ರಿಕ ಸಿದ್ಧಿ.

ಅದೇ ಸುಮಾರಿಗೆ ಜಪಾನಿನ ಟೆರುಟೋಷಿ ಇಷಿಗೇ ಎಂಬ ಎಂಜಿನಿಯರ್ ಕೂಡ, ಸ್ವತಂತ್ರವಾಗಿ, ಈ ಸಿದ್ಧಿಯನ್ನು ಐದಿದ್ದ (೧೯೭೬). ಎಲ್ಲ ನೂತನ ಭಾವನೆಗಳೂ ಸಮಕಾಲೀನ ಹವೆಯಲ್ಲಿ ತೇಲುತ್ತಿರುವವು. ಅದನ್ನು ಆವಾಹಿಸಿ ಪ್ರತಿಷ್ಠಾಪಿಸುವ ಯೋಗ ಕೆಲವೇ ಕೆಲವು ಸಿದ್ಧ ಮತ್ತು ಪರಿಣತ ಮನಸ್ಸುಗಳಿಗೆ ಮಾತ್ರ ಲಭ್ಯ. ರೇಡಿಯೋ ಅಲೆಗಳಿಗೂ ರೇಡಿಯೋ ಉಪಕರಣಗಳಿಗೂ ನಡುವೆ ಇರುವಂಥ ಒಂದು ಬಗೆಯ ಸಂಬಂಧವಿದು.

ಆಟದ ವಸ್ತುವಾಗಿ, ಕಾಲ ಕಳೆವ (ಅಥವಾ ನಾವೇ ಕಳೆದುಹೋಗುವ?) ಆಟವಾಗಿ ಅಥವಾ ಮನಸ್ಸಿನ ಗಣಿತಲಹರಿಗಳ ಪ್ರಕಟಿತರೂಪವಾಗಿ ರೂಬಿಕ್ ಘನಾಕೃತಿ ಮುಂದಿನ ಕೆಲವೇ ವರ್ಷಗಳಲ್ಲಿ ಪ್ರಪಂಚಾದ್ಯಂತ 'ಪಿಡುಗಾಗಿ' ಹಬ್ಬಿತು. ವಿಖ್ಯಾತ ಗಣಿತಜ್ಞರು ಇದರ ಚಲನವಲನಗಳಲ್ಲಿಯೂ ವಿನ್ಯಾಸ ವೈವಿಧ್ಯಗಳಲ್ಲಿಯೂ ನವ ಗಣಿತ ಸಾಧ್ಯತೆಗಳನ್ನು ಗುರುತಿಸಿದರು. ಅಂದ ಮೇಲೆ ರೂಬಿಕ್ ಘನಾಕೃತಿ ಪಂಡಿತ ಪಾಮರರ ಮನೆಗಳಲ್ಲಿ ಸರ್ವತ್ರ ಪ್ರತಿಷ್ಠೆಯ ದ್ಯೋತಕವಾಗಿ ವಿಜೃಂಭಿಸಿದ್ದು ನಿರೀಕ್ಷಿತವೇ.

ಇದೊಂದು ಅದ್ಭುತ ವಿಶ್ವಕರ್ಮ ಸೃಷ್ಟಿ. ಅತ್ಯಂತ ಜಟಿಲವೆನ್ನಿಸುವ ರಚನೆಯೊಳಗೆ ಅತ್ಯಂತ ಸರಳ ಯಂತ್ರ ವಿನ್ಯಾಸ. ಇದನ್ನು ಖುದ್ದು ನೀವೇ ಕಳಚಿ (ಮುರಿದು ಅಲ್ಲ) ಮರುಜೋಡಿ


2
3
4
5
6
8
9
11
12

ಸಿದಾಗ ಈ ಹೇಳಿಕೆಯ ತಪ್ಪು ಮನವರಿಕೆ-ಯಾದೀತು. ಇದರಲ್ಲಿ ಮೂರು ಬಗೆಯ ಶಿಶುಘನಾಕೃತಿಗಳಿವೆ: ಒಂದು ಮುಖಕ್ಕೆ ಬಣ್ಣ ಬಳಿದಿರುವವು ಆರು – ಇವು ಮುಖಕೇಂದ್ರಗಳು (ಚಿತ್ರದಲ್ಲಿ ಕಾಣುವಂತೆ ೮, ೧೧, ೨೩ ಸಂಖ್ಯೆಯ ಚೌಕಗಳು); ಎರಡು ಮುಖಗಳಿಗೆ ಬಣ್ಣ ಬಳಿದಿರುವವು ಹನ್ನೆರಡು – ಇವು ಕೆಳ ಮತ್ತು ಮೇಲು ಚಪ್ಪಡಿಗಳಲ್ಲಿ ಪ್ರತಿಯೊಂದು ಬದಿಯ ನಡುವಿನವು, ಮತ್ತು ನಡು ಚಪ್ಪಡಿಯ ಮೂಲೆಗಳವು (ಚಿತ್ರದಲ್ಲಿ ಕಾಣುವಂತೆ ೨,೫,೧೪, ೧೭, ೨೦, ೨೨; ೭,೯,೧೨); ಮೂರು ಮುಖಗಳಿಗೆ ಬಣ್ಣ ಬಳಿದಿರುವವು ಎಂಟು – ಇವು ಘನಾಕೃತಿಯ ಮೂಲೆಗಳು (ಚಿತ್ರದಲ್ಲಿ ಕಾಣುವಂತೆ ೧,೩,೬,೧೩,೧೫,೧೮,೨೧). ಹೀಗೆ ರೂಬಿಕ್ ಘನಾಕೃತಿಯಲ್ಲಿ ಒಟ್ಟು ೬ + ೧೨ + ೮ = ೨೬ ಶಿಶುಗಳೂ ೬ × ೧ + ೧೨ × ೨ + ೮ × ೩ = ೫೪ ವರ್ಣಶಿಶುಮುಖಗಳೂ (ಬಣ್ಣ ಚೌಕಗಳು) ಇವೆ. ಆರು ಮುಖ ಕೇಂದ್ರಗಳ ಬಣ್ಣ ಆರು ಬಗೆ.

ಘನಾಕೃತಿಯ ಅಚರ ಮಾದರಿಯ (static model) ರಚನೆ ಸುಲಭ. ಇಪ್ಪತ್ತೇಳು ಸರ್ವಸಮ ಶಿಶುಘನಾಕೃತಿಗಳನ್ನು ೩ × ೩ × ೩ ಘನಾಕೃತಿಯಾಗಿ ಅಳವಡಿಸಬೇಕು. ಆರು ಬೇರೆ ಬೇರೆ ಬಣ್ಣಗಳನ್ನು ಒಂದೊಂದು ಮುಖಕ್ಕೆ ಒಂದೊಂದರಂತೆ ಬಳಿಯಬೇಕು. (ಕೇಂದ್ರದಲ್ಲಿರುವ ಶಿಶುವಿನ ಯಾವ ಮುಖಕ್ಕೂ ಬಣ್ಣ ಬೀಳುವುದಿಲ್ಲ– ನಿರ್ವರ್ಣತೆ!) ಘನಾಕೃತಿಯ ಈ ಸ್ಥಿತಿಗೆ – ಅಂದರೆ ಪ್ರತಿಯೊಂದು ಮುಖದ ಒಂಬತ್ತು ಚೌಕಗಳ ಬಣ್ಣಗಳೂ ಒಂದೇ ಆಗಿರುವ ಸ್ಥಿತಿ – ಆರಂಭ ಸ್ಥಿತಿ ಅಥವಾ ವರ್ಣ ಸಮತೋಲ ಸ್ಥಿತಿ ಎಂದು ಹೆಸರು.

ಚರ ಮಾದರಿಯನ್ನು (dynamic model) ತಯಾರಿಸ ಬಯಸುವವರು ಒಳಗಿನ ಯಂತ್ರ ವಿನ್ಯಾಸವನ್ನು ಅಭ್ಯಸಿಸಿ ಮುಂದುವರಿಯಬೇಕು.

ರೂಬಿಕ್ ಘನಾಕೃತಿಯ ಜ್ವಲಂತ ಸಮಸ್ಯೆ

ಆರಂಭಸ್ಥಿತಿಯಲ್ಲಿ ಇಲ್ಲದ – ಅಂದರೆ ವರ್ಣ ಸಮತೋಲನ ಕಳೆದುಕೊಂಡ – ಘನಾಕೃತಿಯನ್ನು ಆ ಸ್ಥಿತಿಗೆ ತರುವುದು ಹೇಗೆ? ಈ ಸಮಸ್ಯೆಯನ್ನು ಲಘುವಾಗಿ ಪರಿಗಣಿಸಿ ಚಪ್ಪಡಿಗಳನ್ನೂ ಗೋಡೆಗಳನ್ನೂ ಸ್ವೇಚ್ಛೆಯಂತೆ ತಿರುಗಿಸುವವರು ವರ್ಣಸಮತೋಲ ಐದು ವುದಕ್ಕಿಂತ ಎಷ್ಟೋ ಮೊದಲೇ ಮಾನಸಿಕ ಸಮತೋಲ ಕಳೆದುಕೊಂಡು ಬಾಯಿಗೆ ಎಟುಕದ ದ್ರಾಕ್ಷಿ ಹುಳಿ ಎಂದು ಹಳಿದ ನರಿಯ ಸಹದುಃಖಿಗಳಾಗುವುದು ದಿಟ.

ಯಾವುದೇ ಘನಾಕೃತಿಯಲ್ಲಿ ಸಾಧ್ಯವಾಗುವ ವಿವಿಧ ವರ್ಣಸಂಯೋಜನೆಗಳ ಸಂಖ್ಯೆ 'ಕೇವಲ' ೪೩,೨೫೨,೦೦೩,೨೭೪,೪೮೯,೮೫೬,೦೦೦ ಅಥವಾ ಸುಮಾರು ೪ × ೧೦^{೧೯}. ಇನ್ನು ಶಿಶುಗಳನ್ನು ಕಳಚಿ ಸ್ಥಾನಾಂತರಿಸಿದರೆ ದೊರೆಯುವ ಸಂಖ್ಯೆ ಇದಕ್ಕಿಂತ 'ತುಸು'ವೇ ದೊಡ್ಡದು: ೫೧೯,೦೨೪,೦೩೯,೨೯೩,೮೭೮,೨೭೨,೦೦೦ ಅಥವಾ ಸುಮಾರು ೫ × ೧೦^{೨೦}.

ಈಗ ನೀವು ರೂಬಿಕ್ ಘನಾಕೃತಿಯನ್ನು ಎಡ ಮುಂಗೈಯಲ್ಲಿ ಧರಿಸಿ ಅದರ ಎಲ್ಲ ೫ × ೧೦^{೨೦} ವರ್ಣಸಂಯೋಜನೆಗಳನ್ನೂ ಹೊಂದಿಸಿಯೇ ಹೊಂದಿಸುತ್ತೇನೆಂಬ ಭೀಷ್ಮ ಪ್ರತಿಜ್ಞೆಯನ್ನು ಬಲಗೈ ಎತ್ತಿ ಘೋಷಿಸಿ ಭಗೀರಥ ಕಾರ್ಯೋದ್ಯುಕ್ತರಾಗುವಿರೆಂದು ಭಾವಿಸೋಣ. ನಿರ್ದಿಷ್ಟ ಯೋಜನಾನುಸಾರ ಸೆಕೆಂಡಿಗೆ ಒಂದು ಸಂಯೋಜನೆಯ ದರದಲ್ಲಿ ಎಡೆಬಿಡದೆ ಮುಂದುವರಿಯುತ್ತೀರಿ. ಸುಮಾರು ೫ × ೧೦^{೨೦} ಸೆಕೆಂಡ್ ಅಥವಾ ೧.೬ × ೧೦^{೧೩} ವರ್ಷ ಗತಿಸುವಾಗ ದೀಕ್ಷಾವಿಮುಕ್ತರಾಗುತ್ತೀರಿ. (ಈ ಮಹಾಯಾನದ ವೇಳೆ ಒಮ್ಮೆ ಆರಂಭಸ್ಥಿತಿ ಕೂಡ ತಲಪಿರುತ್ತೀರಿ.) ವಿಶ್ವದ ವಯಸ್ಸು ಸುಮಾರು ೨ × ೧೦^{೧೦} ವರ್ಷವೆಂಬುದನ್ನು ಗಮನಿಸಿದರೆ ನಿಮ್ಮ ಘೋರ ಶಪಥ ಈಡೇರಲು ನೀವು ವಿಶ್ವದ ವಯಸ್ಸಿನ ಒಂಬೈನೂರು ಪಟ್ಟು ಕಾಲ ಸತತಕಾರ್ಯಮಗ್ನರಾಗಿರಬೇಕಾಗುವುದೆಂದು ಗಣನೆ ತಿಳಿಸುತ್ತದೆ!

ಸಮಸ್ಯಾ ಪರಿಹಾರ ಸುಲಭ ಅಲ್ಲ. ಆದರೆ ಅಸಾಧ್ಯ ಖಂಡಿತ ಅಲ್ಲ. ನನ್ನ ಶಿಷ್ಯನ ಮಗ ಕೇವಲ ನಿಮಿಷಗಳಲ್ಲಿ ಪರಿಹರಿಸಿದ್ದನ್ನು ನೋಡಿದ್ದೇನೆ. ಎಷ್ಟು ಚುರುಕಾಗಿ ಮತ್ತು ಎಷ್ಟು ಕಡಿಮೆ

ತಿರುಗು ಚಲನೆ ಗೈದು ಗುರಿ ತಲುಪುವುದು ಸಾಧ್ಯವೆಂಬುದೊಂದು ಸ್ವಾರಸ್ಯಕರ ಅಧ್ಯಯನ. ಹದಿನಾರರ ಹರೆಯದ ಇಂಗ್ಲೀಷ್ ಹುಡುಗ ನಿಕೋಲಾಸ್ ಹ್ಯಾಮಂಡ್ ತೆಗೆದುಕೊಳ್ಳುವ ಕಾಲ ಸರಾಸರಿಯಲ್ಲಿ ೪೦ ಸೆಕೆಂಡುಗಳು. ಇಪ್ಪತ್ತೈದು ವಯಸ್ಸಿನ ಫ್ರೆಂಚ್ ತರುಣ ಚೆರೋವ್ ಜೀನ್-ಚಾರ್ಲ್ಸ್ ಕೇವಲ ೩೨ ಸೆಕೆಂಡುಗಳಲ್ಲೇ ಮುಗಿಸಿಬಿಡುತ್ತಾನೆ.

ಈ ಪಂದ್ಯದಲ್ಲಿ ಭಾಗವಹಿಸುವವರು ಯಶಸ್ಸುಗಳಿಸಲು ಐದು ಮುಖ್ಯ ಷರತ್ತುಗಳು ಈಡೇರುವುದು ಅಗತ್ಯವೆಂದು ಹಾಫ್‌ಸ್ಟ್ಯಾಡ್ಟರ್ ಬರೆದಿದ್ದಾರೆ.

ಒಂದು, ಪಂದ್ಯಾಳುವಿಗೆ ಘನಾಕೃತಿಯ ಪ್ರಕೃತಿಯ ಬಗ್ಗೆ ಪೂರ್ತಿ ಅರಿವು. ಸಿಪಾಯಿಗೆ ತುಪಾಕಿ ಹೇಗೋ ಪಂದ್ಯಾಳುವಿಗೆ ಘನಾಕೃತಿ ಹಾಗೆ ಬೆರಳುಗಳ ವಿಸ್ತೃತ ಅಂಗವಾಗಿರಬೇಕು.

ಎರಡು, ತಿರುಗು ಚಲನೆಗಳ ವ್ಯತ್ಯಾಸವನ್ನು ಕುರಿತ ಖಚಿತ ಮಾನಸಿಕ ಚಿತ್ರ. ಕಣ್ಣು ಕಟ್ಟಿ ಹಲವು ಬಾರಿ ತಿರುಗಿಸಿ ಬೇರೆ ಬೇರೆ ದಿಶೆಗಳಿಗೆ ನಡೆಸಿ ಎಲ್ಲಿಯೋ ಬಿಟ್ಟಾಗ ಮತ್ತೆ ಅವನ್ನೇ ವಿಪರ್ಯಯವಾಗಿ ಪುನರಾವರ್ತಿಸಿ ಹೊರಟಲ್ಲಿಗೆ ಮರಳುವ ಅಶ್ವಪ್ರಜ್ಞೆಗೆ ಸಮಾನವಾದ ಮಾನಸಿಕ ಸ್ಥಿತಿ ಇದು. ಈ ಚಿತ್ರ ಕಾಣಬಲ್ಲವ ಮಾತ್ರ ತಿರುಗುಚಲನೆಗಳ ಗೋಜಲಿನಲ್ಲಿ ಗುರಿತಲುಪ ಬೇಕಾದುದನ್ನು ಅಂ[illegible] ಕ್ಷಿಪ್ರವಾಗಿ ಧಾವಿಸಬಲ್ಲ.

ಮೂರು, ಪಂದ್ಯಾಳುವಿನ ಸ್ವಭಾವ. ಕನಸಿನ ನನಸು ಎರಡು ಸ್ಥಿತಿಗಳಲ್ಲಿಯೂ ಇವನು ಘನಾಕೃತಿ ಸಮಸ್ಯಾ ಪರಿಹಾರದಲ್ಲಿ ಮಗ್ನನಾಗಿರಬೇಕು. ಅರ್ಜುನನ ಲಕ್ಷ್ಯಕ್ಕೆ ಸಮಾನವಾದ ಮಾನಸಿಕ ಸ್ಥಿತಿ ಇದು.

ನಾಲ್ಕು, ನವಿರು ಮತ್ತು ಚಟುಲ ಕೈಚಳಕ. ಕುಸುಮ ಕೋಮಲ ಸ್ಪರ್ಶ ಮತ್ತು ಘನಾಕೃತಿಯ ಭಾಗಗಳ ತಿರುಗುಚಲನೆಗಳನ್ನು ತತ್‌ಕ್ಷಣ ಸಾಧಿಸಬಲ್ಲಂಥ ಕರಲಾಘವ ಅಗತ್ಯ.

ಐದು, ಗೆಲ್ಲಲು ಉತ್ಸುಕನಾಗಿರುವ ಘನಾಕೃತಿಯ ಅರಿವು. ಕುದುರೆ ಪಂದ್ಯದಲ್ಲಿ ಜಾಕಿಯ ಚಾಕಚಕ್ಯ ಅತಿ ಮುಖ್ಯ ನಿಜ. ಆದರೆ ಕುದುರೆಯ ಯೋಗ್ಯತೆಯೂ ಸಮಾಧಿಕ ಮುಖ್ಯ. ಗೆಲ್ಲುವ 'ಇಚ್ಛೆ' ಇರದ ಕುದುರೆ ಎಂಥ ಜಾಕಿಯ ಹಿರಿತನದಲ್ಲಿಯೂ ಪಟ್ಟು ಹಿಡಿದ ತಟ್ಟು ಆಗುವುದು ಅನುಭವವೇದ್ಯ. ನುಣುಪುಗೊಳಿಸಿದ ಮತ್ತು ಹಗುರ ಹಿಡಿತ ಇರುವ ಆಕರ್ಷಕ ಘನಾಕೃತಿ ಮಾತ್ರ ಪಂದ್ಯಾಳುವಿನ ಇಂಗಿತವರಿತು ವರ್ತಿಸಬಲ್ಲದು.

ಕೆಲವು ಸ್ವಾರಸ್ಯಕರ ಪ್ರಶ್ನೆಗಳು

ಒಂದು ಸ್ಥಿತಿಯಿಂದ ಇನ್ನೊಂದು ಸ್ಥಿತಿಗೆ ಹೋಗಲು ಎಷ್ಟು ಹಾದಿಗಳಿವೆ? ಇವುಗಳ ಪೈಕಿ ನೇರ ದಾರಿ ಯಾವುದೆನ್ನುವ ವೈಸುಂತಕೆ?

ವರ್ತಮಾನಸ್ಥಿತಿ ಆರಂಭ ಸ್ಥಿತಿಯಿಂದ ಎಷ್ಟು ಹಿಂದೆ ಇದೆ?

ಆರಂಭಸ್ಥಿತಿಗೆ ಸಮೀಪತಮ ಸ್ಥಿತಿಗಳು ಅಂತೆಯೇ ದೂರತಮ ಸ್ಥಿತಿಗಳು ಎಷ್ಟು ಇವೆ?

ಒಂದು ಸ್ಥಿತಿಯಿಂದ ತೊಡಗಿ ನಿರ್ದಿಷ್ಟ ಚಲನೆಗಳನ್ನು ಮುಗಿಸಿದ ಬಳಿಕ ತಲುಪುವ ಸ್ಥಿತಿ ಯಾವುದೆಂಬುದನ್ನು ಮುನ್ನುಡಿಯಬಹುದೇ?

ಘನಾಕೃತಿಯ ಮುಖಗಳಲ್ಲಿ ಎಷ್ಟು ಬಗೆಯ ಸಮಾಂಗೀಯ ಪ್ರರೂಪಗಳನ್ನು (symmetrical patterns) ತರಬಹುದು?

ಈಗ ಇರುವ ಘನಾಕೃತಿ ೩ × ೩ × ೩ ದರ್ಜೆಯದು. ಹಾಗಾದರೆ ೨ × ೨ × ೨ ದರ್ಜೆಯದು ಇದೆಯೇ? ಇದೆ. ೪ × ೪ × ೪? ನೆದರ್ಲೆಂಡ್ಸಿನಲ್ಲಿ ತಯಾರಿಸಲಾಗುತ್ತಿದೆಯಂತೆ. ಇನ್ನೂ ಮೇಲಿನ ದರ್ಜೆಯವು? ಎಲ್ಲಿಯ ವರೆಗೆ? ಇದೊಂದು ಎಂಜಿನಿಯರಿಂಗ್ ಸಮಸ್ಯೆ.


ರೂಬಿಕ್ ಒಗಟ್ಟಿನಿಂದ ಸ್ಫೂರ್ತಿ ಪಡೆದ ಇತರ ಸದೃಶ ಒಗಟುಗಳಿವೆಯೇ? ಇವೆ. ಉದಾಹರಣೆಗೆ ಮಾಯಾಗೋಳ, ಮಣಿಗೋಳ ಇತ್ಯಾದಿ.

ಇವುಗಳ ಜೊತೆಗೆ ಆರನೆಯ ಷರತ್ತನ್ನೂ ನಮೂದಿಸಬೇಕು. ವರ್ಣ ಸಮತೋಲ ಸಾಧಿಸಲು ಆಗದ ತೆರದಲ್ಲಿ ಚೌಕಗಳಿಗೆ ಬಣ್ಣ ಬಳಿಯಬಹುದು ಇಲ್ಲವೇ ಅವನ್ನು ಅಳವಡಿಸಬಹುದು. ಉದಾಹರಣೆಗೆ ಒಂದು ಜೊತೆ ಮುಖಕೇಂದ್ರಗಳ ಬಣ್ಣ ಒಂದೇ ಆಗಿದ್ದರೆ ಆ ಘನಾಕೃತಿಯಲ್ಲಿ ವರ್ಣ ಸಮತೋಲ ತರುವುದು ಅಸಾಧ್ಯ. ಇಂಥ ಅಪರಿಹಾರ್ಯ ಘನಾಕೃತಿಗಳನ್ನು ರಚಿಸುವುದು ಸುಲಭ.

ಪರಿಹಾರ ಸಾಧಿಸಿದವರೆಲ್ಲರೂ ತಿಳಿದೊ ತಿಳಿಯದೆಯೊ ಕೆಲವು ಗಣಿತನಿಯಮಗಳನ್ನು ಅನುಸರಿಸುವುದಂತೂ ನಿಜ. ಇವರು ನಡೆದು ಬಂದ ದಾರಿಯನ್ನು ಗಣಿತದ ಪರಿಭಾಷೆಯಲ್ಲಿ ನಿರೂಪಿಸಿದರೆ ಅದೊಂದು ಪುಟ್ಟ ಸಂಶೋಧನ ಪ್ರಬಂಧವಾಗುತ್ತದೆ. ಏಕೆಂದರೆ ತಲೆಗಳು ಎಷ್ಟೋ ಹಾದಿಗಳು ಅಷ್ಟು. ಇಲ್ಲಿ ಅನುಸರಿಸಬೇಕಾದ ಶಿಷ್ಟ ಗಣಿತ ಪರಿಭಾಷೆಯನ್ನು ವಿವರಿಸುವ ಪುಸ್ತಕಗಳಿವೆ.

ಘನಾಕೃತಿ ಸಮಸ್ಯೆಯನ್ನು ವೈಜ್ಞಾನಿಕವಾಗಿ ಅಧ್ಯಯಿಸುವಾತನಿಗೆ ಘನಾಕೃತಿಕಾರ (cubist) ಎಂದೂ ಈ ಅಧ್ಯಯನಕ್ಕೆ ಘನಾಕೃತಿತ್ವ (cubism) ಎಂದೂ ಹೆಸರು. ಇದರ ಬಗ್ಗೆ ಬರ್ನಿ ಗ್ರೀನ್‌ಬರ್ಗ್ ಬರೆದಿರುವ ಮಾತು: "ಭವಿಷ್ಯದ ಒಬ್ಬ ಘನಾಕೃತಿಕಾರ ಅಕ್ಷರಶಃ ಒಂದು ವಿಜ್ಞಾನವನ್ನೇ ಉಪಜ್ಞಿಸಬೇಕಾಗುತ್ತದೆ (invent). ಘನಾಕೃತಿತ್ವ ವಿಧಿಸುವ ನಿರ್ಬಂಧವಿದು. ಆತ ತನಗೆ ತಾನೇ ಸಂಶೋಧನವಲಯವನ್ನು ನಿರ್ಧರಿಸಿ, ಪ್ರಯೋಗಗಳನ್ನು ರೂಪಿಸಿ, ತತ್ವಗಳನ್ನು ಶೋಧಿಸಿ, ಸಿದ್ಧಾಂತಗಳನ್ನು ಕಟ್ಟಿ ಇವು ಫಲಪ್ರದವಾಗದಾಗ ಎಲ್ಲವನ್ನೂ ನಿರಾಕರಿಸಿ ಮತ್ತೆ ಮೊದಲಿನಿಂದ ತೊಡಗಿ ಮುನ್ನಡೆಯಬೇಕಾಗುತ್ತದೆ. ಹೀಗೆ ಪರಿಹಾರಕಾರನಿಂದ ಆತನ ಅನ್ವೇಷಣೆಯ ಮಾರ್ಗದಲ್ಲಿ ಇಡಿ ವಿಜ್ಞಾನವೊಂದರ ನಿರ್ಮಾಣವನ್ನೇ ಬಯಸುವ ಏಕೈಕ ಒಗಟು ಎಂದರೆ ಘನಾಕೃತಿಯ ಸಮಸ್ಯೆ."

ಒಂದು ಮುಖದಲ್ಲಿ ಅಂದರೆ ಒಂದೇ ಸಮತಲದಲ್ಲಿರುವ ಒಂಬತ್ತು ಬಣ್ಣ ಚೌಕಗಳಲ್ಲಿ



ವರ್ಣಸಮತೋಲ ತರುವುದು ಕಷ್ಟವಲ್ಲ. ಆ ಮುಖದ ಕೇಂದ್ರಚೌಕದ ಬಣ್ಣವೇ ಉಳಿದ ಚೌಕಗಳ ಬಣ್ಣವೂ ಆಗಬೇಕು. ಏಕೆಂದರೆ ಗೋಡೆಯನ್ನಾಗಲಿ ಚಪ್ಪಡಿಯನ್ನಾಗಲಿ ತಿರುಗಿಸುವಾಗ ಅವರ ಕೇಂದ್ರಚೌಕ ಸ್ವಸ್ಥಾನದಲ್ಲಿ ತಿರುಗುವುದೇ ಹೊರತು ಸ್ಥಾನಾಂತರಗೊಳ್ಳುವುದಿಲ್ಲ. ಹೆಚ್ಚಿನವರು ನಾಲ್ಕು ಮುಖಗಳ ವರೆಗೂ ವರ್ಣಸಮತೋಲನ ಸಾಧಿಸುವುದರಲ್ಲಿ ಯಶಸ್ವಿಗಳಾಗುತ್ತಾರೆ. ಐದನೆಯದರಲ್ಲಿ ಸಮತೋಲ ಬಂದುದಾದರೆ ಆರನೆಯದರಲ್ಲಿ ತಂತಾನೇ ಬರುವುದೆಂಬುದು ಸ್ವಯಂವೇದ್ಯ. ಪರ್ವತಾರೋಹಣದಲ್ಲಿಯಂತೆ ಇಲ್ಲಿಯೂ ಈ ಕೊನೆಯ ಘಟ್ಟವೇ ಘನಾಕೃತಿಕಾರನ ಧೃತಿಗೆ ಎದುರಾಗುವ ನಿಜ ಸವಾಲು.

ಎಳೆಯರು ದೊಡ್ಡವರಿಗಿಂತ ಸಲೀಸಾಗಿ ಕೈಚಳಕ ಪ್ರದರ್ಶಿಸುವುದನ್ನು ಕಂಡಿದ್ದೇವೆ. ಅವರು ಗಣಿತಕ್ಕೆ ಪ್ರವೇಶ ಪಡೆಯದೆಯೂ ಅಂತರ್ಬೋಧೆಯಿಂದಲೇ ಗಣಿತ ವಿಧಾನ ಅನುಸರಿಸುವುದನ್ನು ಕಂಡು ಬೆರಗಾಗಿದ್ದೇನೆ. ಗಣಿತ ಬಲ್ಲ ಹಿರಿಯರು ಎಳೆಯರ ಕೈಚಳಕವನ್ನು ಗಣಿತ ಪರಿಭಾಷೆಗೆ ತರ್ಜುಮಿಸಿದರೆ ಈ ವಿವರರೂಪ ಇವರ ಮಾನಸಿಕ ಸಂರಚನೆಗೆ ಹಿಡಿದ ಕನ್ನಡಿ ಆದೀತು.

“ನಾನು ಸಂಗೀತದ ರಾಗಗಳನ್ನಾಗಲಿ ತಾಳದ ತಕದಿಮಿಯನ್ನಾಗಲಿ ಕಲಿಯಲಿಲ್ಲ. ನೇರವಾಗಿ ಕೊಳಲು ಹಿಡಿದೆ. ನುಡಿಸಿದೆ. ಬಲ್ಲವರು ಇದರಲ್ಲಿ ಹೊಸತನ ಕಂಡರು. ಆಗ ನನಗೆ ಐದು ವರ್ಷ. ಅಂದಿನಿಂದ ಸತತವಾಗಿ ನಡೆಯುತ್ತಿದ್ದೇನೆ.” ವೇಣು ಮಾಂತ್ರಿಕ ಟಿ. ಆರ್. ಮಹಾಲಿಂಗಮ್ ಹೇಳಿದ ಈ ಮಾತು ಎಲ್ಲ ಬಾಲಪ್ರಭೆಗಳ ವಿಚಾರದಲ್ಲಿಯೂ ನಿಜ. ಅವರು ನಡೆಯುತ್ತಾರೆ – ಆನೆ ನಡೆದಂತೆ. ಉಳಿದವರು ಅದಕ್ಕೆ ಶಾಸ್ತ್ರದ ವ್ಯಾಖ್ಯಾನ ನೀಡುತ್ತಾರೆ – ಪಾಣಿನಿ ಬರೆದಂತೆ. ನಿಸರ್ಗ ನಮಗೆ ಇನ್ನೂ ತಿಳಿದಿರದ ಯಾವುದೋ ನಿಗೂಢ ವಿಧಾನದಿಂದ ಈ ಪ್ರತಿಭಾವಂತ ಮಿದುಳಿನೊಳಗೆ ಗಣಿತ ವಿಧಾನವನ್ನು ನೆಟ್ಟಿರುವಂತೆ ತೋರುತ್ತದೆ.

ನೀವು ಯಾವ ವಯಸ್ಸಿನವರೇ ಆಗಿರಬಹುದು, ನಿಮ್ಮ ವೃತ್ತಿ ಏನೇ ಇರಬಹುದು, ಗಣಿತ ನಿಮ್ಮ ಪ್ರಿಯ ವಿಷಯವಾಗಿರಬಹುದು; ವೈರಿ ವಿಷಯವೇ ಆಗಿರಬಹುದು – ನೀವು ಮಾತ್ರ ವೈಶಂಪಾಯನ ಸರೋವರ ಹೊಕ್ಕರೂ ರೂಬಿಕ್ ಸಾಂಕ್ರಾಮಿಕತೆಯಿಂದ ಪಾರಾಗಲಾರಿರಿ. ಗಾಳಿಯಿಂದ, ನೀರಿನಿಂದ ಇಲ್ಲವೇ ಬೆಳಕಿನಿಂದ ಹೇಗೆ ತಾನೇ ತಪ್ಪಿಸಿಕೊಂಡು ಇರಬಲ್ಲಿರಿ? ನಿಮ್ಮ ಅರಿವಿಗೆ ಬಾರದಂತೆ ನಿಮ್ಮ ಗಣಿತಪ್ರತಿಭೆಯನ್ನು ಪ್ರಕಟಿಸಬಲ್ಲ ಈ ಮಾಂತ್ರಿಕ ಘನಾಕೃತಿಯ ಸ್ಪರ್ಶದಿಂದ ನಿಮಗೆ ಇಹದಲ್ಲಿ ಸುಖ ಉಂಟು. ಶಾಂತಿ ಉಂಟೋ ಇಲ್ಲವೋ ತಿಳಿಯದು, ಪರದಲ್ಲಿ ಶಾಂತಿ, ಸದ್ಗತಿ ಎರಡೂ ಉಂಟು. ಏಕೆಂದರೆ ಸಾಕ್ಷಾತ್ ಪರಮಾತ್ಮನ ಅಧುನಾತಮ ವಿನ್ಯಾಸ (latest hobby) ರೂಬಿಕ್ ಘನಾಕೃತಿಯು ಅಸಂಖ್ಯ ಸಾಧ್ಯತೆಗಳನ್ನು ಅನಾವರಣಗೊಳಿಸುವುದು ಎಂಬುದಾಗಿ ಗಣಿತ ಚಿತ್ರಗುಪ್ತರ ಅನ್ವೇಷಣೆಗಳಿಂದ ಈಚೆಗೆ ತಿಳಿದುಬಂದಿದೆ. ✡

ಆಕರ ಲೇಖನಗಳು

Metamagical Themas by Douglas R. Hofstadter, Scientific American March 1981

Rubik's Cube: Madness for Millions by Fred Warshopsky, Reader's Digest November 1981

The Rubik Cube is Here by Dayanand Verma, Science Today February 1982.

ಈ ದರೋಡೆಯಲ್ಲಿ ಎಷ್ಟು ಸಿಕ್ಕಿದೆಯೆಂಬುದನ್ನು ಎಣಿಸಿ ನೋಡೋಣವೆ?”
“ಬೇಡ ಬಿಡು ನಾಳಿನ ಪೇಪರಿನಲ್ಲಿ ಅದು ಹೇಗೂ ಬಂದೇಬರುತ್ತೆ.”

- ಲಂಡನ್ ಪ್ರೆಸ್ಸಿನಿಂದ

ಟೈಟಾನಿಕ್ ದುರಂತ

ಸುದರ್ಶನ

ಜಗತ್ತಿನಲ್ಲೇ ಅತಿ ದೊಡ್ಡದಾಗಿತ್ತು ಆ ಹಡಗ. ಹಡಗೆಂದರೆ ಅದು ಹೇಗೂ ಮುಳುಗಲಾರದೆಂಬ ನಂಬಿಕೆ ಬಹಳಷ್ಟು ಮಂದಿಗಿತ್ತು. ೧೯೧೨ ರಲ್ಲಿ ಅತಿ ದೊಡ್ಡ ಹಡಗೆಂದರೆ ಅದು "ಟಿಟಾನಿಕ್." ಅದುವರೆಗೂ, ಇತಿಹಾಸದಲ್ಲಿ ಅಂಥದೊಂದು ದೊಡ್ಡ ಮತ್ತು ಸುಭದ್ರವೆನಿಸಿಕೊಂಡ ಹಡಗು ಇರಲೇ ಇಲ್ಲ. "ಟಿಟಾನಿಕ್ಕಿ"ನ ವೈಶಿಷ್ಟ್ಯವೆಂದರೆ, ಆನಕ್ಕೆ ತಳದಲ್ಲಿ ಎರಡು ಪದರಗಳಿದ್ದುದು. ಹದಿನಾರು ನೀರಿಳಿಯದ ಕೋಣೆಗಳಲ್ಲಿ, ಎರಡು ಸಾವಿರಕ್ಕಿಂತ ಹೆಚ್ಚು ಮಂದಿಯನ್ನು ಹೊರುವ ಹೆಮ್ಮೆ ಅದರದಾಗಿತ್ತು.

೧೯೧೨ ರಲ್ಲಿ ಬ್ರಿಟನ್ ಗುರುತು ಮಾಡಿಕೊಂಡ ದಿನಗಳ ಪೈಕಿ ಇದೂ ಒಂದು. ಏಪ್ರಿಲ್ ಹನ್ನೆರಡರಂದು "ಟಿಟಾನಿಕ್" ತನ್ನ ಚೊಚ್ಚಲ ಪ್ರಯಾಣವಾಗಿ ಸೌತ್‌ಹ್ಯಾಂಪ್ಟನ್‌ನಿಂದ ನ್ಯೂಯಾರ್ಕ್ ಕಡೆಗೆ ಹೊರಟಿತು. ನೂರಾರು ಮಂದಿ ಮಹಿಳೆಯರೂ ಮಕ್ಕಳೂ ಕೂಡಿ ಎರಡು ಸಾವಿರದ ನೂರಕ್ಕೂ ಮಿಕ್ಕು ಜನರನ್ನು ಹೊತ್ತು ತಣ್ಣನೆ ಗಾಳಿಯಲ್ಲಿ ಹೊಗೆ ಹಾರಿಸಿ ಮುನ್ನುಗ್ಗಿದಾಗ ಕರ್ನಲ್ ಆಸ್ಟರ್, ಮೇಜರ್ ಬಟ್‌ರಂಥ ಪ್ರಸಿದ್ಧ ವ್ಯಕ್ತಿಗಳು ಹಡಗಿನ ಕೋಣೆಗಳಲ್ಲಿ ಸ್ನೂಕರ್ ಆಡುತ್ತಿದ್ದರು. ಒಂದೆರಡು ದಿನ ಶಾಂತವಾಗಿ ಯಾನ ನಡೆದ ನಂತರ ಮೂರನೆಯ ದಿನ ಬೆಳಗಿನ ಒಂಭತ್ತು ಗಂಟೆಯ ವೇಳೆಗೆ ಹಡಗಿನ ಕ್ಯಾಪ್ಟನ್ನನಿಗೆ ಸಂದೇಶವೊಂದು ಬಂದಿತು.

"ಕ್ಯಾಪ್ಟನ್, ಟಿಟಾನಿಕ್, ಪಶ್ಚಿಮದ ಹಾದಿ ಹಿಡಿದ ಹಡಗುಗಳು ೪೯–೫೧ ಪ. ಮತ್ತು ೪೨ ಉ. ದಲ್ಲಿ ಹಿಮಗಡ್ಡೆಗಳ ಚಲನೆಯ ಬಗ್ಗೆ ಸುದ್ದಿ ನೀಡಿವೆ. ೧೨ ಏಪ್ರಿಲ್."

"ಟಿಟಾನಿಕ್ಕಿ"ನ ಸುತ್ತಲ ವಾತಾವರಣ ಪ್ರಶಾಂತವಾಗಿದ್ದು, ಕ್ಯಾಪ್ಟನ್ನನಿಗೆ ತಿಳಿಯಾದ ನೀಲಿ ನೀರಿನಲ್ಲಿ ಸೂರ್ಯನ ಬಿಂಬ ಕಂಡಿತು. ಟಿಟಾನಿಕ್ ಯಾವ ಯೋಚನೆಯೂ ಇಲ್ಲದೆ ದಿಟ್ಟನಾಗಿ ಮುಂದೆ ಸಾಗಿತು. ಅಪರಾಹ್ನ ೧.೪೨ ರ ವೇಳೆಗೆ ಬಾಲ್ಟಿಕ್‌ನಿಂದ ಬಂದ ಮತ್ತೊಂದು ಸಂದೇಶ, ಟಿಟಾನಿಕ್ಕಿನ ಹಾದಿಗೇ ಬರುತ್ತಿರುವ ಭಾರೀ ಹಿಮಗಡ್ಡೆಯೊಂದರ ವಿಷಯವನ್ನು ನೆನಪಿಸಿತು. ಈ ಬಾರಿ ಸುದ್ದಿಯನ್ನು ಆವ ರೇಡಿಯೋ ತುರ್ತಾಗಿ ಕ್ಯಾಪ್ಟನ್ನನಿಗೆ ಕಳುಹಿಸಿದ. ಆತ, ಹಡಗಿನಲ್ಲೇ ಪ್ರಯಾಣಿಸುತ್ತಿದ್ದ "ಟಿಟಾನಿಕ್ಕಿ"ನ ಶ್ರೀಮಂತ ಮಾಲೀಕನಿಗೆ ಕಳುಹಿಸಿದ. ಆದರೆ ಸುದ್ದಿಯನ್ನೋದಿದ ಮಾಲೀಕ ಚೀಟಿಯನ್ನು ಕಿಸೆಯೊಳಕ್ಕೆ ತುರುಕಿ, ಸುತ್ತಲ ಒಂದೆರಡು ಮಂದಿ ಥಳುಕಿನ ಮಹಿಳೆಯರಿಗೆ ನಗುನಗುತ್ತಾ ಹೇಳಿ ಮದ್ಯದ ಲೋಟ ಹಿಡಿದು ತನ್ನ ಮೋಜನ್ನು ಮುಂದುವರಿಸಿದ. ಸಂಜೆ ೭–೧೫ ರ ವೇಳೆಗೆ ಕ್ಯಾಪ್ಟನ್ ಮಾಲೀಕನ ಅನುಮತಿ ಪಡೆದು ಆ ಸುದ್ದಿಯನ್ನು ಚಾಲಕ ವರ್ಗದವರಿಗೆಲ್ಲರಿಗೆ ಬಿಡುಗಡೆ ಮಾಡಿದ. ನಂತರ ಭಾರಿ ಗಾತ್ರದ "ಟಿಟಾನಿಕ್" ಯಾವ ಅಡೆತಡೆಯೂ ಇಲ್ಲದೆ ಪೂರ್ಣವೇಗದಲ್ಲಿ ತಾನು ಸಾಗು

ತ್ತಿದ್ದ ದಿಕ್ಕಿಗೇ ಸಾಗಿತು.

ನಡುರಾತ್ರಿ ೧೧-೪೦ ರಲ್ಲಿ ಡೆಕ್ಕಿನ ಮೇಲಿದ್ದ ಸಿಬ್ಬಂದಿಯೊಬ್ಬ ಎಡಬದಿಗೆ ದಿಟ್ಟಿಸಿ ವಿವರ್ಣನಾದ. ಕ್ಷಣಾರ್ಧದಲ್ಲೇ ಆತನಿಗೆ ಪರ್ವತ ಗಾತ್ರದ ಹಿಮಗಡ್ಡೆಯೊಂದು "ಟೈಟಾನಿಕ್"ಗೆ ಎದುರಾಗಿ ಸದ್ದಿಲ್ಲದೆ ಬರುತ್ತಿರುವುದರ ಅರಿವಾಯಿತು. ತತ್‌ಕ್ಷಣ ಆತ ಓಡಿ ಹೋಗಿ ಟೆಲಿಫೋನೆತ್ತಿ "ಹಿಮಗಡ್ಡೆ ಎದುರಿನಲ್ಲೇ" ಎಂದು ಅರಚಿದಾಗ ಕ್ಯಾಪ್ಟನ್ನನಿಗೆ ದಿಕ್ಕೇ ತೋಚದಂತಾಯಿತು. ದಿಕ್ಕು ಬದಲಿಸಿ ಹಡಗನ್ನು ಹಿಮಗಡ್ಡೆಯ ದಿಕ್ಕಿನಿಂದ ಆಚೆಗೆ ಶಕ್ತಿಮೀರಿ ಚಲಿಸಲೆತ್ನಿಸಿದರೂ ದುರಂತವನ್ನೇನೂ ತಪ್ಪಿಸಲಾಗಲಿಲ್ಲ. ಊಹಿಸಲರಿಯದಷ್ಟು ಗಾತ್ರದ ಆ ನೀರ್ಗಲ್ಲು ಹಡಗಿನ ಮುಂಭಾಗಕ್ಕೆ ಬಡಿದು ಮೇಲಿದ್ದ ಮಂಜಿಯು ಪಕ್ಕಕ್ಕೆ ಉಜ್ಜಿ ಮುನ್ನೂರು ಅಡಿ ಉದ್ದದ ಕಮರಿ ಬಗೆದು ಆತ್ತ ಸಾಗಿತು. ಶಾಂತವಾಗಿದ್ದ ಕಡಲಿನ ನೀರು, ಅತಿ ರಭಸದಿಂದ ನುಗ್ಗಿ ಹರಿದು ಹೋಗಿದ್ದ ಪಕ್ಕವನ್ನು ಮತ್ತೂ ಬಿನ್ನಿಸಿದೊಡನೆಯೇ ಅಗ್ರಪಂಕ್ತಿಯ ಆ ಹಡಗು ನಿಧಾನವಾಗಿ ಆಳದೊಳಕ್ಕೆ ತಲೆಯಿಕ್ಕಿತು.

ನಿದ್ರೆಹೋಗಿದ್ದ ಪ್ರಯಾಣಿಕರಲ್ಲನೇಕರು ಬೆಚ್ಚಿಬಿದ್ದು, ಉಳಿಯುವಾಸೆಯಿಂದ ಡೆಕ್ಕಿನ ಕಡೆಗೆ ಧಾವಿಸುವಷ್ಟರಲ್ಲಿ ಹಡಗಿನ ಬ್ಯಾಂಡ್ ವಾದಿಸುವವರಿಗೆ ಕರೆ ಕಳುಹಿಸಿ ಚರಮಗೀತೆ ನುಡಿಸಲು ಆಜ್ಞೆ ನೀಡಲಾಯಿತು. ಅಂದೆಂಥ ವಿಪರ್ಯಾಸವೆಂದರೆ ಹಡಗಿನ ಕೊನೆಯ ಭಾಗ ನೀರಿನಲ್ಲಿ ಹುಗಿದು ಹೋಗುವವರೆಗೂ ಅವರು ಕ್ಯಾಪ್ಟನ್ನನ ಇಚ್ಛೆಯಂತೆ, ಸಂಪ್ರದಾಯಕ್ಕೆ ಕಟ್ಟು ಬಿದ್ದು ಗೀತೆ ನುಡಿಸುತ್ತಲೇ ಇದ್ದರು. ಆ ಹೊತ್ತಿಗೆ ಡೆಕ್ ಏರಿ ಬಂದ ಪ್ರಯಾಣಿಕರನೇಕರು ಲೈಫ್ ಬೋಟುಗಳನ್ನು ನೀರಿಗಿಳಿಸಿ ಇನ್ನೂ ಹತ್ತಾರು ಮಂದಿಗೆ ಸ್ಥಳವಿದ್ದರೂ ಆತುರದಿಂದ ಹಾಗೆಯೇ ದೋಣಿ ನಡೆಸಿದಾಗ, ಮಿಕ್ಕವರಿಗೆ "ಟೈಟಾನಿಕ್" ನೊಡನೆ ಸಾಗರಗರ್ಭ ಸೇರದೆ ಬೇರೆ ದಾರಿಯೇ ಇರಲಿಲ್ಲ. ರಾತ್ರಿ ೨-೨೦ರ ವೇಳೆಗೆ ಹಡಗಿನ ಮುಂಭಾಗ ಕುಸಿದು "ಟೈಟಾನಿಕ್" ನೀರಿನಲ್ಲಿ ಹಾಕಿದ ಕಲ್ಲಿನಂತೆ ಸಟಕ್ಕನೆ ಮುಳುಗಿ ಹೋಯಿತು. ಅಟ್ಲಾಂಟಿಕ್ ದಾಟುವ ಮಹದಾಸೆ ಹೊಂದಿದ್ದ ಸಾವಿರದ ಆರ್ನೂರು ಮಂದಿ ನ್ಯೂಫೌಂಡ್ ಲ್ಯಾಂಡ್‌ಗೆ ಸುಮಾರು ನಾನ್ನೂರು ಮೈಲು ದೂರದಲ್ಲಿ ಜಲಸಮಾಧಿಯಾದರು. "ಟೈಟಾನಿಕ್" ಮುಳುಗುವಾಗ ಉಂಟಾದ ಭಯಂಕರ ಸುಳಿಯಲ್ಲಿ ಒಂದೆರಡು ಲೈಫ್ ಬೋಟುಗಳೂ ಮುಳುಗಿದವು.

ಬೆಳಗಾಗುವಾಗ ಅಳಿದುಳಿದ ಮಂದಿ, ನೀರಿನಲ್ಲಿ ಅಡ್ಡವಾಗಿ ನಿಂತ ಮಂಜಿನ ಗುಡ್ಡವನ್ನು ನೋಡಿ ಚಕಿತಗೊಂಡರು. ಲ್ಯಾಬ್ರಡಾರ್ ಶೀತ ಜಲ ಪ್ರವಾಹದೊಂದಿಗೆ ತೇಲಿ ಬಂದಿದ್ದ ಅದರ ತಳಭಾಗದಲ್ಲಿ ಸ್ವಲ್ಪ ಜಜ್ಜಿದ ಗುರುತು ಬಿಟ್ಟರೆ ಮತ್ತೇನೂ ಆದಂತೆ ಕಾಣಲಿಲ್ಲ. ಬದಲಾಗಿ ಆ ನೀರ್ಗಲ್ಲು ಎಂದಿನಷ್ಟೇ ಶಾಂತವಾಗಿ, ಸುಂದರವಾಗಿ, ನಿಶ್ಯಬ್ದವಾಗಿ ಪ್ರಯಾಣ ನಡೆಸಿತ್ತು. ಸಾಧ್ಯಾಸಾಧ್ಯತೆಗಳ ಬಗ್ಗೆ ಸ್ವಲ್ಪ ಯೋಚಿಸಿದ್ದರೆ, ಸಾವಿರಾರು ಮಂದಿಯನ್ನು ಬಲಿಕೊಂಡ ಈ ಮಹಾದುರಂತವನ್ನು ತಪ್ಪಿಸಬಹುದಿತ್ತೇನೋ. ☆

ಕುರೂಪ ಒಂದು ದೃಷ್ಟಿಕೋನವಷ್ಟೆ: ಒಂದು ಹುಣ್ಣು ವೈದ್ಯನಿಗೆ ಅದ್ಭುತವಾಗಿ ಪರಿಣಮಿಸುತ್ತದೆ.


—ಆಸ್ಟಿನ್ ಓ' ಮ್ಯಾಲೀ

●

ನಾವು ನಮ್ಮ ಪರಿಸರವನ್ನು ಎಷ್ಟರ ಮಟ್ಟಿಗೆ ಮಾರ್ಪಡಿಸಿದ್ದೇವೆಂದರೆ ಈಗ ಹೊಸ ಪರಿಸರದಲ್ಲಿ ಉಳಿಯಲು ನಮ್ಮನ್ನೇ ಮಾರ್ಪಡಿಸಕೊಳ್ಳಬೇಕು.

—ನಾರ್ಬರ್ಟ್ ವೈನರ್

ಸಂಗ್ರಹ: ಪಿ. ಎಸ್. ಸುನಂದಾ


ವೈಭವಪೂರ್ಣ
ನಯವಾದ ನೆಯ್ಗೆಯುಳ್ಳ
ಪ್ರಿಯಾ ಟೆರೀನ್ ಸೀರೆಗಳು
ಸುಂದರವಾಗಿವೆ, ನಿಮ್ಮ ಅಭಿರುಚಿಗೆ
ತಕ್ಕಂತೆ ಚಮತ್ಕಾರಪೂರ್ಣವಾದ ಹಾಗೂ
ಜನಮೋಹಕವಾದ ವಿಭಿನ್ನ
ವಿನ್ಯಾಸಗಳಲ್ಲಿ ದೊರೆಯುತ್ತವೆ.
ಬೆಡಗಿನ ಬಟ್ಟೆಗಳು
TAIDCMIC/AIKAN


ಹಿಗ್ಗು ಕುಗ್ಗುಗಳಿಗೆ
ಬಲಿಯಾಗದ ಸ್ಥಿತಪ್ರಜ್ಞ

ಜೋಳದರಾಶಿ ದೊಡ್ಡನಗೌಡರು

ಡಾ. ಬಸವರಾಜ ಮಲಶೆಟ್ಟಿ

ಒಮ್ಮೆ ಬಳ್ಳಾರಿಯಲ್ಲಿ 'ಜಲಂಧರ' ನಾಟಕ ಪ್ರದರ್ಶನಕ್ಕೆ ಸಿದ್ಧತೆ ನಡೆದಿತ್ತು. ಮುಂಚಿತವಾಗಿ ರಿಹರ್ಸಲ್ ಮಾಡಲು ತಮ್ಮ ಬಂಗ್ಲೆಗೆ ಬರುವಂತೆ ನಾಟಕ ಮಂಡಳಿಗೆ ರಾಘವಾಚಾರ್ಯರು ಆಮಂತ್ರಣ ನೀಡಿದ್ದರು. ಸರಿ, ರಿಹರ್ಸಲ್ ನಡೆಯಿತು. ನಾರದನ ಪಾತ್ರಧಾರಿ ರಾಘವಾಚಾರ್ಯರ ಕೀರ್ತಿ ಕೇಳಿದ್ದನೇ ಹೊರತು ಅವರನ್ನು ಪ್ರತ್ಯಕ್ಷವಾಗಿ ಕಂಡಿರಲಿಲ್ಲ. ಅಂಥವರ ಮುಂದೆ ಹಾಡಿ ಅಭಿನಯಿಸಲು ನಡುಕ. ಧೈರ್ಯ ತಂದುಕೊಂಡು ಪ್ರಾರಂಭಿಸಿದ. ರಾಘವಾಚಾರ್ಯರು ತಲೆದೂಗಿದರು. ಮುಂದೆ ಉತ್ಸಾಹದಿಂದ ಮೈಮರೆತು ಅಭಿನಯಿಸಿದ. ರಿಹರ್ಸಲ್ ಮುಗಿದ ಮೇಲೆ ಟೀ ಕುಡಿದು ರಾಘವರ ಮೆಚ್ಚುಗೆಯ ಪ್ರಶಸ್ತಿ ಪಡೆದ ಹುರುಪಿನಲ್ಲಿ ಎಲ್ಲರೂ ಹೊಸ್ತಿಲು ದಾಟುತ್ತಿದ್ದರು. ಬಾಗಿಲು ಪಕ್ಕದ ಕತ್ತಲಲ್ಲಿ ಕುಳಿತಿದ್ದ ಕೈಲಾಸಂ ನಾರದಪಾತ್ರಧಾರಿಯ ಕೈಹಿಡಿದು ನಿಲ್ಲಿಸಿ. "ನೀವು ದೊಡ್ಡ ಯಾಕ್ಟ್ರು ಗೌಡರೆ," ಅಂದರು. ಗೌಡರಿಗೆ ಗಾಬರಿ, ಸಂಕೋಚ. ಪೆಚ್ಚಾಗಿ, "ಸಾರ್, ನನಗೇನು ಗೊತ್ತು? ನಾನೊಬ್ಬ ಹಳ್ಳಿಯ ಮುಕ್ಕ," ಎಂದು ರಾಗ ಎಳೆದರು. "ಅದಕ್ಕೇ ನಿಮ್ಮ ಯೋಗ್ಯತೆ ನಿಮಗೆ ಗೊತ್ತಿಲ್ಲ. ನಿಜವಾಗಿಯೂ ನೀವು ದೊಡ್ಡ ಯಾಕ್ಟ್ರು," ಎಂದು ಕೈಲಾಸಂ ಭಾಷ್ಯ ನುಡಿದರು.

ಇನ್ನೊಂದು ಸನ್ನಿವೇಶ. ಬಳ್ಳಾರಿಯ ಮೃತ್ಯುಂಜಯ ಕುಟೀರದಲ್ಲಿ ಮೃತ್ಯುಂಜಯ ಅಪ್ಪಗಳವರ ಸನ್ನಿಧಿಯಲ್ಲಿ ಗೌಡರಿಂದ ಶೂನ್ಯಸಂಪಾದನೆಯ ಗಮಕ ಪ್ರವಚನ. ಪ್ರಭುವಿನ ಕಲ್ಯಾಣ ಸಂದರ್ಶನದ ಸಂದರ್ಭ. ಪ್ರಭು ಬಸವಣ್ಣನ ಮಹಾ ಮನೆಯ ಬಾಗಿಲಿಗೆ ಬಂದಾಗ ಲಿಂಗಪೂಜಾ ನಿರತನಾಗಿದ್ದ ಬಸವಣ್ಣ ಆದರಿಸಲು ನಿಧಾನಿಸಿದ. ಚೆನ್ನಬಸವಣ್ಣನ ಮೂಲಕ ಬಂದವನು ಪ್ರಭು ಎಂದು ತಿಳಿದು ಬಸವಣ್ಣ ಪ್ರಭುವನ್ನು ಸತ್ಕರಿಸಲು ಅವಸರಿಸಿ ಬರುತ್ತಾನೆ. ಆಗ ಪ್ರಭುವಿನ ಮುನಿಸಿಗೆ ಗುರಿಯಾದ ಬಸವಣ್ಣ ಪಶ್ಚಾತ್ತಾಪದಿಂದ ಆತ್ಮನಿಂದನೆ ಮಾಡಿಕೊಳ್ಳುತ್ತಾ, "ನಾನು ಭಕ್ತನಲ್ಲಯ್ಯಾ, ನಾನು ಯುಕ್ತನಲ್ಲಯ್ಯಾ, ನಾನು ಮುಕ್ತನಲ್ಲಯ್ಯಾ ಕಪಟವೇಷದ ಡಂಬಕ ನಾನು," ಎಂದು ಹಂಬಲಿಸುತ್ತಾನೆ. ಈ ವಚನವನ್ನು ಗಮಕಿ [illegible]



ಕಂಠದಿಂದ ವಿವರಿಸುತ್ತಿದ್ದಾಗ ಮೃತ್ಯುಂಜಯರ ಅಪ್ಪಗಳು ಕಣ್ಣೀರಿಡುತ್ತಿದ್ದರು. ಭಾವಾವೇಶದಿಂದ ಗಂಟಲು ಕಟ್ಟಿದ್ದರಿಂದ ಗವಾಯಿ ಪ್ರವಚನ ಅಲ್ಲಿಗೆ ನಿಲ್ಲಿಸಿದ. ಹೀಗೆ ಅಪ್ಪಗಳನ್ನು ಮಕ್ಕಳಂತೆ ಅಳಿಸಿ ತಾನೂ ಅತ್ತ ಸಂದರ್ಭಗಳಿಗೆ ಲೆಕ್ಕವಿಲ್ಲ.

ನಾಟಕ ಮತ್ತು ಗಮಕಗಳೆರಡರಲ್ಲಿಯೂ ದೊಡ್ಡ ಹೆಸರು ಮಾಡಿರುವ ಜೋಳದರಾಶಿ ದೊಡ್ಡನಗೌಡರ ವ್ಯಕ್ತಿತ್ವದ ಸ್ಥೂಲ ಪರಿಚಯಕ್ಕೆ ಈ ಉದಾಹರಣೆಗಳೆರಡು ಸಾಕು. ನಮ್ಮ ನಾಡಿನ ಸುಪ್ರಸಿದ್ಧ ಕಲಾವಿದ ದೊಡ್ಡನಗೌಡರ ಊರು ಬಳ್ಳಾರಿ ಸಮೀಪದ ಒಂದು ಸಣ್ಣ ಹಳ್ಳಿ ಜೋಳದರಾಶಿ. ಹುಟ್ಟಿ ಬೆಳೆದದ್ದು ಶ್ರೀಮಂತ ಗೌಡರ ಕುಟುಂಬದಲ್ಲಿ (ಜನನ ೨೭-೭-೧೯೧೦). ಓದಿದ್ದು ಅಯ್ಯಗಳ ಶಾಲೆಯಲ್ಲಿ, ನಾಲ್ಕನೆಯ ತರಗತಿಯವರೆಗೆ. ಆರು ವರ್ಷಕ್ಕೇ ನಾಟಕಕ್ಕೆ ಪ್ರವೇಶ. ಊರವರು 'ಕನಕತಾರಾ' ಎಂಬ ನಾಟಕ ಅಭ್ಯಸಿಸುತ್ತಿದ್ದರು. ಅದರಲ್ಲಿ ಬರುವ ಋಷಿಯೊಬ್ಬನ ಶಿಷ್ಯ ಬಳಗದಲ್ಲಿ ಗೌಡರೂ ಒಬ್ಬರು. ಈ ಬಾಲಶಿಷ್ಯನಿಗೆ "ಪಾಲಿಸೈ ಮಾವ ನಾಂಗ ಪರಮ ಗುರುವರ" ಎಂಬ ಹಾಡು ಬೇರೆ ಇತ್ತು. 'ರ'ಕಾರ ಉಚ್ಚರಿಸಲಾರದ ಹುಡುಗ 'ಪಲಮ ಗುಲುವಲ' ಎಂದು ಹಾಡುತ್ತಿದ್ದುದರಿಂದ ಗೆಳೆಯರಿಂದ 'ಏ, ಗುಲುವಲಾ, ಬಾರೋ,' ಎಂದು ಕರೆಸಿಕೊಂಡದ್ದುಂಟು. ಊರಿಗೆ ಪ್ಲೇಗು ಬಂದದ್ದರಿಂದ 'ಕನಕತಾರಾ' ಪ್ರಯೋಗಗೊಳ್ಳಲಿಲ್ಲ. ಪ್ಲೇಗು ನಾಟಕದ ಹಲವರನ್ನು ಬಲಿ ತೆಗೆದುಕೊಂಡರೂ ಈ 'ಗುಲುವಲ' ಬದುಕಿ ಉಳಿದದ್ದು ಪುಣ್ಯ. ಮುಂದೆ ಹನ್ನೆರಡನೆಯ ವರ್ಷಕ್ಕೆ 'ಲವಕುಶ' ಆಟದಲ್ಲಿ ಒಂದು ಹೆಣ್ಣು ವೇಷದ ಕುಣಿತ ಮತ್ತು ಲವನ ಪಾತ್ರ. ಹಿಂದುಸ್ತಾನಿ ಸಂಗೀತದ ರುಚಿ ವ್ಯಾಪಿಸುತ್ತಿದ್ದ ಕಾಲವದು. ನಟಿ ಹಿಂದೀ ಹಾಡು ಹಾಡುತ್ತ ರಂಗದ ತುಂಬ ಓಡಾಡಿ ಕುಣಿಯಬೇಕಾಗಿತ್ತು. ಇದರ ಅಭ್ಯಾಸ ಹುಡುಗನಿಗೆ ಸ್ವಲ್ಪ ಕಷ್ಟದ್ದಾಗಿ ಕಂಡಿತು. ಹೆಜ್ಜೆಗಳು ತಾಳಕ್ಕೆ ಸರಿಯಾಗಿ ಬೀಳದಿದ್ದಾಗ ಆಟದ ಮಾಸ್ತರರ ಪೆಟ್ಟುಗಳು ಮಾತ್ರ ತಾಳಕ್ಕೆ ಸರಿಯಾಗಿಯೇ ಬೀಳುತ್ತಿದ್ದವು. ಈ ನೃತ್ಯ ಪ್ರಕರಣ ಮುಗಿಸಿ ಲವನ ವೇಷಕ್ಕಾಗಿ ಹುಡುಗ ಆಸಕ್ತಿಯಿಂದ ಕಾಯುತ್ತಿದ್ದ. ಲವನ ಪಾತ್ರದ ಉತ್ಸಾಹಭರಿತ ಅಭಿನಯ ಮತ್ತು ಮಧುರ ಕಂಠದ ಹಾಡುಗಳ ಮೂಲಕ ಊರವರಲ್ಲಿ ಮುಂದೆ ತಾನೊಬ್ಬ ಶ್ರೇಷ್ಠ ನಟನಾಗುವ ಭರವಸೆ ಉಂಟು ಮಾಡಿದ.

ತರುಣ ದೊಡ್ಡನಗೌಡರು ನಾಟಕದ ಗೀಳನ್ನು ಒಳಹೊರಗೆ ತುಂಬಿಕೊಂಡು ಬೆಳೆದರು. ಲವಕುಶದ ಯಶಸ್ಸಿನಿಂದ ಹುರುಪುಗೊಂಡು ಕೈಗೆ ಸಿಕ್ಕ ನಾಟಕಗಳನ್ನೆಲ್ಲ ಓದಿದರು. ಗೆಳೆಯರನ್ನು ಕಟ್ಟಿಕೊಂಡು ತಮ್ಮ ನಿರ್ದೇಶನದಲ್ಲಿ 'ಗರುಡ ಗರ್ವಭಂಗ' ಎಂಬ ನಾಟಕ ಅಭ್ಯಾಸ ಪ್ರಾರಂಭಿಸಿದರು. ಬಯಲಾಟಕ್ಕೆ ಒಗ್ಗಿ ಹೋದ ಹಳ್ಳಿಯವರನ್ನು ನಾಟಕಕ್ಕೆ ಪರಿವರ್ತಿಸುವುದು ಸುಲಭದ ಮಾತಾಗಿರಲಿಲ್ಲ. ನಿರಾಶರಾಗದೆ ಪ್ರಾಕ್ಟೀಸು ನಡೆಸಿದರು. ದೊಡ್ಡನಗೌಡರಿಗೆ ಈ ನಾಟಕ ಪ್ರಾಕ್ಟೀಸು ಎಷ್ಟು ಹುಚ್ಚು ಹಿಡಿಸಿತ್ತೆಂದರೆ ಆದೇ ಮದುವೆಯಾದ ಹೊಸ ಹೆಂಡತಿ ಮತ್ತು ರೋಗಗ್ರಸ್ತ ಪ್ರೀತಿಯ ಮುದಿ ತಾತ ಮನೆಯಲ್ಲಿದ್ದುದನ್ನು ಮರೆತು ನಾಟಕದ ಅಭ್ಯಾಸದಲ್ಲಿ ಮುಳುಗಿರುತ್ತಿದ್ದರು. ಹಸಿವಾದುದು ಅನುಭವಕ್ಕೆ ಬರುತ್ತಿರಲಿಲ್ಲ. ತಾಯಿ ಬಂದು ಒತ್ತಾಯಿಸಿ ಕರೆದುಕೊಂಡು ಹೋಗಿ ಉಣಿಸಿದಾಗಲೇ ಊಟ. ರೈತರ ವಂಶದಲ್ಲಿ ಹುಟ್ಟಿ ಬೆಳೆದ ದೊಡ್ಡನಗೌಡರಿಗೆ ಇಂಥ ವಿಪರೀತ ನಾಟಕದ ಹುಚ್ಚು ಅಂಟಿಕೊಂಡದ್ದು ಸೋಜಿಗದ ಸಂಗತಿ. ಅಜ್ಜನ ಕಾಯಿಲೆ ಉಲ್ಬಣಿಸಿದ್ದರಿಂದ ನಾಟಕ ಅಷ್ಟಕ್ಕೇ ನಿಂತಿತು. ಕಾಯಿಲೆ ಅಜ್ಜನನ್ನು ಆಹುತಿ ತೆಗೆದುಕೊಂಡಿತು. ಪ್ರೀತಿಯ ಅಜ್ಜನನ್ನು ಕಳೆದುಕೊಂಡದ್ದರಿಂದ ಆಘಾತ ಪ್ರಜ್ಞೆ ಚುಚ್ಚತೊಡಗಿತು. ಆ ದುಃಖ ಮರೆಯಲು ಅರ್ಧಕ್ಕೆ ನಿಲ್ಲಿಸಿದ್ದ 'ಗರುಡ ಗರ್ವಭಂಗ'ವನ್ನು ಎತ್ತಿಕೊಂಡರು. ತುಸು ಅಭ್ಯಾಸ ನಡೆಯುವಷ್ಟರಲ್ಲಿ ತಂಗಿ ನೀಲಮ್ಮ ಅಸ್ವಸ್ಥಳಾಗಿ ಹಾಸಿಗೆ ಹಿಡಿದಳು. ನಾಟಕಕ್ಕೆ ಪುನಃ ಬ್ರೇಕ್ ಬಿತ್ತು. ತಂಗಿಗೆ ಗುಣವಾದ ಮೇಲೆ ನಾಟಕ ಪ್ರಾರಂಭಿಸಬೇಕೆನ್ನುವಷ್ಟರಲ್ಲಿ [illegible]

ನಾಟಕ' [ಅಜ್ಜನ ಸಾವು, ತಂಗಿಯ ಕಾಯಿಲೆ] ಎಂದು ಊರವರು ತೀರ್ಮಾನಿಸಿದರು. ಪಾತ್ರಧಾರಿಗಳು ಹೆದರಿದರು. ದೊಡ್ಡನಗೌಡರು ಮಾತ್ರ ತಮ್ಮ ಛಲ ಬಿಡಲಿಲ್ಲ. ಆ ನಾಟಕವನ್ನು ಯಶಸ್ವಿಯಾಗಿ ಪ್ರದರ್ಶಿಸಿ ಸೈ ಅನಿಸಿಕೊಂಡರು. ಹಿಡಿದದ್ದನ್ನು ಸಾಧಿಸಿಯೇ ತೀರಬೇಕೆಂಬ ಈ ಜಿಗುಟುತನ ಒಂದೇ ಅವರಲ್ಲಿರುವ ಗೌಸತನದ ಅಂಶ. ಉಳಿದದ್ದೆಲ್ಲ ಕಲಾವಿದ ಶರಣನ ಸ್ವರೂಪ. ಆಮೇಲೆ ಊರವರೊಂದಿಗೆ ಆಡಿದ 'ಜಲಂಧರ' ಕೂಡ ಜನಪ್ರಿಯವಾಯಿತು. ಬೇರೆ ಬೇರೆ ಊರುಗಳಿಗೆ ಹೋಗಿ ಟಿಕೆಟ್ಟು ಇಟ್ಟು ಈ ನಾಟಕಗಳನ್ನು ಆಡಿ ಮೆಚ್ಚುಗೆ ಗಳಿಸಿದರು. ಜೋಳದರಾಶಿಯಂಥ ಒಂದು ಸಣ್ಣ ಹಳ್ಳಿಯವರು ಪರಿಣತ ಕಂಪನಿ ನಾಟಕಗಳಂತೆ ನಾಟಕಗಳನ್ನಾಡಿ ಹೆಸರು ಪಡೆದುದಕ್ಕೆ ದೊಡ್ಡನಗೌಡರೇ ಕಾರಣರು.

ಹಳ್ಳಿಯ ಹವ್ಯಾಸಿಗಳ ಗುಂಪು ಕಂಪನಿಯಾಗಿ ಬೆಳೆದು 'ಗರುಡ ಗರ್ವಭಂಗ' ಮತ್ತು 'ಜಲಂಧರ' ನಾಟಕಗಳ ಹಲವಾರು ಪ್ರಯೋಗಗಳನ್ನು ಸುತ್ತಮುತ್ತಿನ ಆಂಧ್ರ ಮತ್ತು ಕರ್ನಾಟಕದ ಊರುಗಳಲ್ಲಿ ಜಯಪ್ರದವಾಗಿ ಆಡಿ ಹೆಸರು ಮಾಡುವ ಹೊತ್ತಿಗೆ ಸಾಮಾನ್ಯವಾಗಿ ಎಲ್ಲ ನಾಟಕ ಕಂಪನಿಗಳಿಗೆ ಒದಗುವ ದುರವಸ್ಥೆ ಅದಕ್ಕೂ ಒದಗಿತು. ಹಣದ ಮುಗ್ಗಟ್ಟು, ಭಿನ್ನಾಭಿಪ್ರಾಯ, ಅಹಂಕಾರ, ಮನಸ್ತಾಪಗಳಿಂದಾಗಿ ಕಂಪನಿ ಒಡೆದು ಹೋದದ್ದರಿಂದ ದೊಡ್ಡನಗೌಡರು ಅನಿವಾರ್ಯವಾಗಿ ಮನೆ ಹಿಡಿಯಬೇಕಾಯಿತು. ತಮ್ಮ ವೃತ್ತಿ ಪರಂಪರೆಗೆ ಹಿಡಿಸದ ಈ ನಾಟಕದ ವ್ಯಸನಕ್ಕೆ ಗುರಿಯಾದ ಮಗ ಅಂತೂ ಸಂಭಾವಿತನಾಗಿ ಮನೆ ಸೇರಿದನಲ್ಲಾ ಎಂದು ತಂದೆ ಪಂಪನಗೌಡರು ಸಮಾಧಾನ ತಾಳಿದರು. ಆದರೆ ನಾಟಕದ ಚಟ ದೊಡ್ಡನಗೌಡರನ್ನು ಸುಮ್ಮನಿರಗೊಟ್ಟೀತೇ? ಬಳ್ಳಾರಿಗೆ ಹೋಗಿ ರಾಘವಾಚಾರ್ಯರನ್ನು ಕಂಡರು. ಆ ಕಲಾತಪಸ್ವಿ ಇಂಥ ಪ್ರತಿಭಾನ್ವಿತ ನಟನನ್ನು ಬಿಟ್ಟಾರೆಯೆ? 'ಮಾರ್ಕಂಡೇಯ'ದಲ್ಲಿ ನಾರದ ಪಾತ್ರಕ್ಕೆ ಆಹ್ವಾನಿಸಿದರು. ಗೌಡರಿಗೆ ತಂದೆಯ ಭಯ. ಕೇಳಿನೋಡ ಬೇಕೆಂದರು. ರಾಘವರು ಸ್ವತಃ ಜೋಳದ ರಾಶಿಗೆ ಬಂದು ಪಂಪನಗೌಡರನ್ನು ಕೇಳಿದಾಗ ನಡೆದುದೇ ಬೇರೆ. ಮಗನ ನಾಟಕದ ಹುಚ್ಚಿಗಾಗಿ ಒಳಗೊಳಗೇ ಅಸಮಾಧಾನ ಇದ್ದರೂ ರಾಘವರಂಥ ದೊಡ್ಡ ವ್ಯಕ್ತಿಗಳು ಬಂದು ಕೇಳಿದಾಗ 'ಇಲ್ಲ' ಅನ್ನಲು ಮನಸ್ಸು ಬರಲಿಲ್ಲ. ಸಂತೋಷದಿಂದ ಒಪ್ಪಿದರು. ಇಲ್ಲಿಂದ ದೊಡ್ಡನಗೌಡರ ನಾಟಕ ಜೀವನದ ಮಹತ್ವದ ಘಟ್ಟ ಆರಂಭವಾಯಿತು.

ರಾಘವರ ಒಡನಾಟದಲ್ಲಿ ಬಹಳಷ್ಟು ಕಲಿತುಕೊಂಡರು. ಅವರ ಶಿಸ್ತಿನ ತರಬೇತಿ ಗೌಡರನ್ನು ತಿದ್ದಿ ಬೆಳೆಸಿತು. ಗ್ರಾಮೀಣ ಸಹಜ ಒರಟುತನಕ್ಕೆ ಸಾಣೆ ಹಿಡಿದಂತಾಗಿ ದೊಡ್ಡನಗೌಡರ ನಟನಾಶೈಲಿಗೆ ಹೊಸ ಕಳೆ ಬಂದಿತು. ರಾಘವರೊಂದಿಗೆ ಎಷ್ಟೋ ಕನ್ನಡ, ತೆಲುಗು ನಾಟಕಗಳಲ್ಲಿ ಪಾತ್ರವಹಿಸಿ ಸುಪ್ರಸಿದ್ಧ ನಟರಾದರು. ದೊಡ್ಡನಗೌಡರನ್ನು ಸದಾಕಾಲ ಸ್ನೇಹಿತರಂತೆ ನಡೆಸಿಕೊಂಡದ್ದು ರಾಘವರ ದೊಡ್ಡತನ. ಆದರೆ ಗೌಡರು ಅವರನ್ನು ತಮ್ಮ ಕಲಾಗುರು ಎಂದು ಭಕ್ತಿಯಿಂದ ಸ್ಮರಿಸಿಕೊಳ್ಳುತ್ತಾರೆ. ಗೌಡರ ಪ್ರತಿಭೆಯ ಬಗ್ಗೆ ರಾಘವರಿಗೆ ಅಪಾರ ವಿಶ್ವಾಸ, ಹೆಮ್ಮೆ. ಒಮ್ಮೆ ರಾಯಚೂರಿನಲ್ಲಿ 'ಮಾರ್ಕಂಡೇಯ' ನಡೆದಿತ್ತು. ಸದ್ಯಕ್ಕೆ ತಮ್ಮ ನಾರದ ಪಾತ್ರದ ಸನ್ನಿವೇಶ ಇಲ್ಲದ್ದರಿಂದ ಗೌಡರು ನಿರಾತಂಕವಾಗಿ ಕುಳಿತಿದ್ದರು. ರಾಘವರು ಒಮ್ಮೆಲೇ, "ಗೌಡರೇ, ನಡೆದಿರುವ ಸನ್ನಿವೇಶ ಮುಗಿದ ಕೂಡಲೇ ನಮ್ಮ ಪ್ರವೇಶ," ಅಂದರು. ಗೌಡರಿಗೆ ಆಶ್ಚರ್ಯ. "ಈಗೆಲ್ಲಿದೆ ಸಾರ್ ಪ್ರವೇಶ?" ಎಂದು ಗೊಣಗಿದರು. "ನಾಟಕದಲ್ಲಿಲ್ಲ ನಿಜ. ಆದರೆ ನಾಟಕದಲ್ಲಿದ್ದಷ್ಟೇ ಆಡಬೇಕೇ? ಈಗ ನೀವು ಆ ಕಡೆಯಿಂದ ಬರ್ರಿ; ನಾನು ಈ ಕಡೆಯಿಂದ ಬರುತ್ತೇನೆ. ನಾವಿಬ್ಬರೂ ರಂಗದ ಮೇಲೆ ಐದು ನಿಮಿಷ ಕಳೆಯೋಣ," ಎಂದು ಉಸುರಿ ಮಾತಾಡಲು ಅವಕಾಶ ಕೊಡದೆ ಎದುರುಬದಿಗೆ ಸರಿದರು. ನಡೆದಿದ್ದ ಸನ್ನಿವೇಶ ಮುಗಿದ ಕೂಡಲೆ ರಾಘವರು ಕೈಬೀಸಿ ರಂಗ ಪ್ರವೇಶಿಸಲು ಗೌಡರನ್ನು ಒತ್ತಾಯಿಸ

ತೊಡಗಿದರು. ಇವರಿಗೆ ನಡುಕ. ರಂಗದ ಮೇಲೆ ಹೋಗಿ ಏನು ಮಾಡುವುದು? ಗುರುವಿನ ಆಗ್ರಹ. ಅಂತೂ ಪ್ರೇಕ್ಷಕರಿಂದ ಮಂಗಳಾರತಿ ಆಗುವುದು ಖಂಡಿತ ಎಂದು ನಿರ್ಧರಿಸಿಕೊಂಡು ತಕ್ಷಣಕ್ಕಾಗಿ ನೆನಪಿಗೆ ಬಂದ ಯಾವುದೋ ದೇವರ ನಾಮ ಹಾಡುತ್ತ ರಂಗಮಂಟಪಕ್ಕೆ ಬಂದರು. ಸನ್ನಿವೇಶಕ್ಕೆ ಯಾವ ಹಾಡೂ ಇಲ್ಲದ್ದರಿಂದ ಆರಾಮವಾಗಿ ಕುಳಿತಿದ್ದ ಹಾರ್ಮೋನಿಯಂ ಮಾಸ್ತರ ಕುಮಾರ ಸ್ವಾಮಿ ಗಡಿಬಿಡಿಗೊಂಡು ಹೊಂದಿಕೊಂಡು ಬಾರಿಸಿದರು. ಹಾಡು ಮುಗಿಯಿತು. ಮಾಯಾ ಬ್ರಾಹ್ಮಣ ರಾಘವರು ಆ ಕಡೆಯಿಂದ ಬಂದು, "ಏನು ನಾರದರೆ, ಎತ್ತ ಕಡೆ ಹೊರಟಿರುವಿರಿ?" ಎಂದು ಪ್ರಶ್ನಿಸಿದರು. ಗೌಡರು ಎಳ್ಳಷ್ಟೂ ಅಳುಕದೆ, "ಮಾಯಾ ವೇಷದಿಂದ ಮಾರ್ಕಂಡೇಯನನ್ನು ವಂಚಿಸಲು ಹೊರಟ ಆ ತಿಮ್ಮನನ್ನು ಹುಡುಕುತ್ತಾ ಈ ಕಡೆ ಬಂದೆ," ಎಂದು ಸರಾಗವಾಗಿ ಉತ್ತರಿಸಿದರು. ಸರಿ, ಮುಂದೆ ಐದಾರು ನಿಮಿಷ ಈ ಆಶು ಸಂಭಾಷಣೆ ನಿರರ್ಗಳವಾಗಿ ಸಾಗಿತು. ಒಳಗೆ ಹೋದ ಕೂಡಲೇ ರಾಘವರು ಗೌಡರನ್ನು ತಬ್ಬಿಕೊಂಡು ಅವರ ಸಮಯಪ್ರಜ್ಞೆಯನ್ನು ಕೊಂಡಾಡಿದರು. ಇಂಥ ಹಲವಾರು ರಸಪ್ರಸಂಗಗಳು ದೊಡ್ಡನಗೌಡರು ಶ್ರೇಷ್ಠ ನಟರೆಂಬುದನ್ನು ಸಾಬೀತುಗೊಳಿಸಿವೆ.

ತೆಲುಗು ನಾಟಕಗಳಲ್ಲಿ ಸಮರ್ಥ ಅಭಿನಯ ನೀಡಿರುವ ಗೌಡರ ಹೆಸರು ಆಂಧ್ರದ ನಾಟಕ ಪ್ರೇಮಿಗಳಿಗೆ ಸುಪರಿಚಿತವಾದುದು ಆಶ್ಚರ್ಯವಲ್ಲ. ಅವರ 'ರಾಮದಾಸ' ನಾಟಕದ ಕಬೀರ ಪಾತ್ರವನ್ನು ನೆನಪಿಸಿಕೊಂಡು ಸಂತೋಷ ಪಡುವವರು ಇಂದಿಗೂ ತೆಲುಗು ನಾಡಿನಲ್ಲಿದ್ದಾರೆ. ರಾಘವರಂಥ ಪಂಡಿತ ಕಲಾವಿದರ ಸಹವಾಸ ನಾಟಕಾಭಿನಯದ ಅಪಾರ ಅನುಭವ ಮತ್ತು ಪ್ರತಿಭೆ ಇವೆಲ್ಲವುಗಳ ಫಲವಾಗಿ ಗೌಡರು ಕೆಲವು ನಾಟಕಗಳನ್ನು ರಚಿಸಿದರು. ಅವರ 'ಕನಕದಾಸ ಮತ್ತು 'ಕ್ರಾಂತಿ ಪುರುಷ ಬಸವಣ್ಣ' ನಾಟಕಗಳು ತುಂಬಾ ಯಶಸ್ವಿಯಾದವು. ಗೌಡರ ಕನಕದಾಸ ಮತ್ತು ಬಸವಣ್ಣನ ಪಾತ್ರಗಳು ಅವಿಸ್ಮರಣೀಯ. ತಮ್ಮ ಸ್ವಭಾವಕ್ಕೆ ತಕ್ಕ ಈ ಭಕ್ತಿಯ ಪಾತ್ರಗಳನ್ನು ವೈಖರಿಯಿಂದ ಅಭಿನಯಿಸಿ ಧನ್ಯರಾಗಿದ್ದಾರೆ. ಅವರಿಗೆ ನಾಟಕ ಒಂದು ಚಟವಾಗಿ ಉಳಿಯಲಿಲ್ಲ. ಬರಬರುತ್ತ ಅದೊಂದು ಆರಾಧನೆಯಾಯಿತು. ಬಸವಣ್ಣನ ಪಾತ್ರವಂತೂ ಅವರ ವ್ಯಕ್ತಿತ್ವಕ್ಕೆ ಹೊಸ ಮುಖ ಮೂಡಿಸಿತು. ರಂಗಭೂಮಿ ಗೌಡರನ್ನು ಎಷ್ಟು ಆವರಿಸಿಕೊಂಡಿದೆಯೆಂದರೆ ಅವರಿಗೆ ಅದೇ ಸರ್ವಸ್ವ. "ನನಗೊಂದು ಆಸೆ, ಪಾತ್ರಾಭಿನಯದೊಂದಿಗೆ ತನ್ಮಯತೆಯಿಂದ ಅಸುನೀಗಬೇಕೆಂಬ ಹಂಬಲ." ಎಂದು ಬರೆದುಕೊಂಡಿರುವ ದೊಡ್ಡನಗೌಡರು ನಿಜವಾಗಿಯೂ ಕಲಾಪುತ್ರರು.

ದೊಡ್ಡನಗೌಡರು ನಾಟಕ ರಂಗಕ್ಕೆ ಪ್ರವೇಶಿಸಿದ ಅಂದಿನ ಕಾಲದಲ್ಲಿ ಧ್ವನಿವರ್ಧಕಗಳೇ ಇರಲಿಲ್ಲ. ಸಾವಿರಾರು ಪ್ರೇಕ್ಷಕರಿಗೆ ಕೇಳಿಸುವಂತೆ ಗಟ್ಟಿಯಾಗಿ ಹಾಡುವ ಮಾತಾಡುವ ನಟನು ಮಾತ್ರ ಅಂದು ಯಶಸ್ವಿಯಾಗುತ್ತಿದ್ದ. ಗೌಡರ ಕಂಠ ಓಜಸ್ಸು, ನಾದಶಕ್ತಿಗಳನ್ನು ತುಂಬಿಕೊಂಡಿರುವಂಥದು. ೩-೪ ಸಾವಿರ ಜನಜಂಗುಳಿಯನ್ನು ಮೈಕ್ ಸಹಾಯವಿಲ್ಲದೆ ತಮ್ಮ ಹಾಡಿನಿಂದ ಮಂತ್ರ ಮುಗ್ಧರನ್ನಾಗಿಸಿದ ಸಂದರ್ಭಗಳು ಹಲವಾರು. ೧೯೩೬ರಲ್ಲಿ ಹಂಪೆಯಲ್ಲಿ ನಡೆದ ವಿಜಯನಗರ ಸ್ಮಾರಕೋತ್ಸವದಲ್ಲಿ ಒಂದು ದಿನ ಶ್ರೀರಂಗರ ನಾಟಕವೊಂದು ಏರ್ಪಾಡಾಗಿತ್ತು. ಮಿತಿ ಮೀರಿದ ಜನ ಸಂದಣಿ. ಅಂಥದರಲ್ಲಿ ನಾಟಕ ನೋಡುವುದೂ ಕೇಳುವುದೂ ಅಸಾಧ್ಯವಾಗಿತ್ತು. ಅಷ್ಟು ಗದ್ದಲ. ಸಂಚಾಲಕರಿಗೆ ಪೀಕಲಾಟ. ಮಿತ್ರ ಭೀಮಸೇನಾಚಾರ್ಯರು ಎದುರಿಗೆ ಕುಳಿತಿದ್ದ ಗೌಡರನ್ನು ಕರೆದು ಒಂದು ಹಾಡು ಹೇಳಲು ಒತ್ತಾಯಿಸಿದರು. ಬೆಳಗಿನಿಂದ ಊಟ, ತಿಂಡಿ ಏನೂ ಇಲ್ಲದೆ ಹೊಟ್ಟೆ ತಾಳ ಹಾಕುತ್ತಿದ್ದರೂ ದೊಡ್ಡನಗೌಡರು ಪಂಪಾಪತಿಯನ್ನು ನಂಬಿ ಪರದೆಯ ಮುಂದೆ ನಿಂತು ಉಚ್ಚ ಸ್ವರದಲ್ಲಿ 'ಶಂಭೋ ಮಹಾದೇವ' ಪ್ರಾರ್ಥನೆ ಆರಂಭಿಸಿದರು. ಮೂರು ನಾಲ್ಕು ಬಾರಿ ಹಾಡುವಷ್ಟರಲ್ಲಿ ಗದ್ದಲ ಹಿಡಿತಕ್ಕೆ ಬಂದಿತು. ಮುಂದಿನದನ್ನು ವೈಖರಿಯಿಂದ ಹಾಡಿ ಜನರನ್ನು ಮೆಚ್ಚಿಸಿದರು. ಅನಂತರ ನಾಟಕ ಸುಗಮವಾಗಿ ಸಾಗಿತು. ಈ


ಅಡಿಗೆ ಮನೆಯಲ್ಲಿ ಶಕ್ತಿಯನ್ನು ಉಳಿಸಲು
4 ಭಾರೀ ಉಪಾಯಗಳು.
ಬಜಾಜ್‌ರವರಿಂದ. ಬೇರೆ ಯಾರಿಂದ?
ಇಂದೇ ಕೊಳ್ಳಿರಿ
ಬಜಾಜ್‌ನ್ನೇ ಕೊಳ್ಳಿರಿ
ನೀವು ಶಕ್ತಿಯನ್ನು ಹೆಚ್ಚಾಗಿ ಪೋಲು ಮಾಡಬಹುದಾದ ಸ್ಥಳದಲ್ಲಿಯೇ ಅದನ್ನು ಉಳಿಸಲು ಬಜಾಜ್ ನಿಮಗೆ ಸಹಾಯ ಮಾಡುವರು— ಬಜಾಜ್‌ರವರ, ಶ್ರಮವನ್ನು ತಪ್ಪಿಸುವ ಉಪಕರಣಗಳಾದ ಕಾಯ್ಲ್ ಸ್ಟೋವ್, ಟೋಸ್ಟರ್, ಮಿಕ್ಸರ್, ಕುಕ್ಕರ್ ಇತ್ಯಾದಿಗಳನ್ನು ಉಪಯೋಗಿಸಿರಿ. ಇವೆಲ್ಲವಕ್ಕೂ ಐ.ಎಸ್.ಐ ಗುಣಮುದ್ರೆ ಇದೆ. ಇಷ್ಟೇ ಅಲ್ಲ, ಇವೆಲ್ಲವಕ್ಕೆ ಎಲ್ಲಾ ಕಡೆಗಳಲ್ಲಿ ಹರಡಿರುವ 3500 ಮಂದಿ ವ್ಯಾಪಾರಿಗಳ ಅತಿ ದೊಡ್ಡ ಸಮೂಹದ ಬೆಂಬಲವಿದೆ. ಅವರು ವಿಳಂಬವಿಲ್ಲದೆ ಮಾರಾಟಾನಂತರದ ಸೇವೆ ನೀಡುತ್ತಾರೆ—ಆದರಿಂದ ನಿಮಗೆ ಅದು ಬೇಕಾಗುವ ಸಂಭವ ಇಲ್ಲವೆಂದೇ ಹೇಳಬಹುದು
bajaj
ಪ್ರೆಶರ್ ಕುಕ್ಕರ್ಸ್, ಮಿಕ್ಸರ್ಸ್, ಅವೆನ್ಸ್, ಇಸ್ತ್ರಿಪೆಟ್ಟಿಗೆಗಳು, ಫ್ಯಾನ್ಸ್, ವಾಟರ್ ಫಿಲ್ಟರ್ಸ್, ಗ್ಯಾಸ್ ಸ್ಟೋವ್ಸ್, ಟೋಸ್ಟರ್ಸ್, ವಾಟರ್ ಹೀಟರ್ಸ್
Heros' BE-682 KAN

ಸಂದರ್ಭದ ನೆನಪಿನಿಂದ ಶ್ರೀರಂಗರು ದೊಡ್ಡನ ಗೌಡರನ್ನು 'ನೋಟ್ ಫಾರ್ ಗೌಡ್ರು' ಎಂದು ಕರೆಯುತ್ತಾರೆ. ಮೈಕ್ ಇಲ್ಲದ ಅಂಥ ಕಾಲದಲ್ಲಿ ಸಾವಿರಾರು ಜನ ಪ್ರೇಕ್ಷಕರನ್ನು ತಣಿಸಿದ ಗೌಡರಿಗೆ ಇಂದು ಹತ್ತಿಪ್ಪತ್ತು ಜನ ಸೇರಿದಲ್ಲಿಯೂ ಮೈಕ್ ಉಪಯೋಗಿಸುವುದು ಮೋಜು ಅನಿಸುತ್ತದೆ. "ಇದೇ ಸ್ಥಿತಿ ಮುಂದುವರಿದರೆ ಬಹುಶಃ ಗಂಡ ಹೆಂಡತಿಯರು ಮೈಕಿನಲ್ಲಿಯೇ ಸರಸ ಸಂಭಾಷಣೆ ನಡೆಸ ಬೇಕಾದ ಕಾಲ ಬಂದೀತು," ಎಂಬುದು, ಗೌಡರ ಸಂಶಯ.

ದೊಡ್ಡನಗೌಡರು ನಾಟಕಕ್ಕಿಂತ ಗಮಕಿಯಾಗಿ ನಾಡನ್ನು ಸುತ್ತಿದ್ದೇ ಹೆಚ್ಚು. ಗಮಕ ಅವರ ಕಲಾ ಜೀವನದ ಉಸಿರು. ವ್ಯಕ್ತಿತ್ವಕ್ಕೆ ಸಾತ್ವಿಕ ತೇಜಸ್ಸನ್ನು ನೀಡಿರುವ ಗಮಕ ಕಲೆ ಅವರಿಗೆ ಸಿದ್ಧೋಪಾಸನೆಯ ಮಾಧ್ಯಮವಾಗಿದೆ. ನಾಟಕದಂತೆ ಗಮಕ ಕೂಡ ಗೌಡರಿಗೆ ಬಾಲ್ಯದಿಂದಲೇ ಸಹಜವಾಗಿ ಒಲಿದದ್ದು. ಮಠದ ಶಾಲೆಯಲ್ಲಿ ಮಂತಪತಿ ರುದ್ರಯ್ಯನವರು ಮತ್ತು ಹಾವಳಗಿ ಷಡಕ್ಷರಯ್ಯ ಎಂಬ ಗುರುಗಳಿಬ್ಬರೂ ಕಾವ್ಯಗಳನ್ನು ಹಾಡಿ ಗಮಕದಲ್ಲಿ ಹೇಳುತ್ತಿದ್ದರು. ಈ ತರದ ಕಾವ್ಯ ಬೋಧನೆ ಅಭ್ಯಾಸ ಅಂದಿನ ಪಾಠ ಕ್ರಮವಾಗಿತ್ತು. ದಿನದ ಓದಿನ ತಾಸೆರಡು ತಾಸು ಕಾವ್ಯ ವಾಚನಕ್ಕೆ ಮೀಸಲು. ಈ ಅವಧಿ ಬಾಲಕ ದೊಡ್ಡನ ಗೌಡರಿಗೆ ಬ್ರಹ್ಮಾನಂದ ಸಮಾನವಾಗಿತ್ತು. ಬಾಲ್ಯದಲ್ಲಿ ಕೆರಳಿದ ಆಸಕ್ತಿಯನ್ನು ಮುಂದೆ ಸ್ವಂತ ಪರಿಶ್ರಮದಿಂದ ಬೆಳೆಸಿಕೊಂಡು ಬಂದರು. ನಾಟಕದ ಕಾರಣದಿಂದ ತಕ್ಕ ಮಟ್ಟಿಗೆ ಸಂಗೀತದ ಅಭ್ಯಾಸವಾದದ್ದು ಗಮಕಕ್ಕೆ ಹೆಚ್ಚು ಅನುಕೂಲವಾಯಿತು. ಹುಟ್ಟಾ ಕಾವ್ಯ ರುಚಿಯನ್ನು ಪಡೆದಿದ್ದ ಗೌಡರು ಆತ್ಮಾನಂದಕ್ಕಾಗಿ ಕಾವ್ಯಗಳನ್ನು ಹಾಡಿಕೊಳ್ಳುವ ಹವ್ಯಾಸ ರೂಢಿಸಿಕೊಂಡರು. ಜೈಮಿನಿ ಭಾರತ, ಹರಿಶ್ಚಂದ್ರ ಕಾವ್ಯ, ಸಿದ್ಧರಾಮ ಚರಿತ್ರೆ, ಬಸವ - ಪುರಾಣ, ಕುಮಾರವ್ಯಾಸ ಭಾರತ, ಹರಿಹರನ ರಗಳೆ–ಶತಕಗಳು ಮುಂತಾದವುಗಳನ್ನು ಗಮಕದ ಮೂಲಕ ನಿಷ್ಠೆಯಿಂದ ಅಭ್ಯಸಿಸಿದರು. ಮೊದ ಮೊದಲು ಸ್ವಸಂತೋಷಕ್ಕಾಗಿ ರೂಢಿಯಾಗಿದ್ದ ಅವರ ಗಮಕ ಬಂಧು–ಮಿತ್ರರ ಮೆಚ್ಚುಗೆ ಪಡೆದು ಬಹಿರಂಗವಾಗಿ ಪ್ರಚಾರಕ್ಕೆ ಬಂದಿತು. ಗಮಕಕ್ಕೆ ಇರಬೇಕಾದ ತುಂಬು ಕಂಠ, ಸ್ಪಷ್ಟ ಉಚ್ಚಾರ, ಅರ್ಥಸ್ಪಷ್ಟತೆ, ಸನ್ನಿವೇಶಕ್ಕೆ ತಕ್ಕಂತೆ ರಾಗ ಜೋಡಿಸುವ ಜಾಣ್ಮೆ, ಸಂಗೀತವನ್ನು ಅತಿಯಾಗಿಸದ ನಿಯಂತ್ರಣ ಇವೆಲ್ಲ ದೊಡ್ಡನಗೌಡರಲ್ಲಿ ಸಹಜವಾಗಿ ನೆಲೆಗೊಂಡಿರುವುದರಿಂದ ಅವರು ಸಮರ್ಥ ಗಮಕಿಯಾಗಿ ಹೆಸರು ಪಡೆಯುವುದು ತಡವಾಗಲಿಲ್ಲ. ಮುಖ್ಯವಾಗಿ ಸಂದರ್ಭ, ಪಾತ್ರ, ಭಾವಗಳನ್ನು ತಾನು ಅನುಭವಿಸಿ ಕೇಳುಗರ ಹೃದಯಕ್ಕೆ ಮುಟ್ಟುವಂತೆ ನಿರೂಪಿಸುವ ಅವರ ಗುಣ ವೈಶಿಷ್ಟ್ಯ ಎಲ್ಲ ಗಮಕಿಗಳಿಗೆ ಎಟುಕದು.

ಕಾವ್ಯ ನಾಟಕದಲ್ಲಿ ತೃಪ್ತಿ ಕಂಡುಕೊಂಡಿದ್ದ ದೊಡ್ಡನಗೌಡರಿಗೆ [illegible] ಪಂಡಿತ ಕವಿಗಳಾದ ವೈ. ನಾಗೇಶ ಶಾಸ್ತ್ರಿಗಳವರ ಪರಿಚಯ–ಸ್ನೇಹ ಒಂದು ಹೊಸ ದಿಕ್ಕನ್ನು ಸೂಚಿಸಿತು.



"ಹ್ಹೆ! ಹ್ಹೆ! ಮಂಗ್ಯಾ! ಬೀಡೀಗೂ ಸಿಗರೇಟಿಗೂ ಏನು ವ್ಯತ್ಯಾಸ ಅಂತ ಕೇಳ್ದಿಯಾ? ನಿನಗೂ ನನಗೂ ಇರೋ ವ್ಯತ್ಯಾಸ..."

ನಾಗೇಶ ಶಾಸ್ತ್ರಿಗಳು ವೀರಶೈವ ತತ್ತ್ವ ಶಾಸ್ತ್ರದಲ್ಲಿ ಎತ್ತಿದ ಕೈ ಶೂನ್ಯ. ಸಂಪಾದನೆಯ ಮೂಲಕ ಗೌಡರ ಮನಸ್ಸನ್ನು ಶರಣ ಸಾಹಿತ್ಯದತ್ತ ತಿರುಗಿಸಿದರು. ಶೂನ್ಯ ಸಂಪಾದನೆಯ ನಾಟಕೀಯ ಶೈಲಿ ವರನಟರಾದ ದೊಡ್ಡನ ಗೌಡರನ್ನು ಬಹುವಾಗಿ ಆಕರ್ಷಿಸಿತು. ತಿಳಿಯದ ತಾತ್ವಿಕ ವಿಚಾರಗಳನ್ನು ತಿಳಿಸಿ ಹೇಳಲು ನಾಗೇಶ ಶಾಸ್ತ್ರಿಗಳಂತೂ ಇದ್ದೇ ಇದ್ದರು. ನಿರಂತರವಾಗಿ ಸಾಗಿದ ಶೂನ್ಯ ಸಂಪಾದನೆಯ ಅಭ್ಯಾಸ ಗೌಡರ ವ್ಯಕ್ತಿತ್ವದಲ್ಲಿ ಮಹತ್ವದ ಬದಲಾವಣೆಮಾಡಿತು. ಈ ಮಧ್ಯೆ ಧಾರವಾಡದ ಮೃತ್ಯುಂಜಯ ಅಪ್ಪಗಳ ಸಂಪರ್ಕ ಪ್ರಭಾವವುಂಟಾಯಿತು. ಅವರು ಶಿವಾನುಭವಗೋಷ್ಠಿ ನಡೆಸಿದಲ್ಲೆಲ್ಲ ಗೌಡರ ಶೂನ್ಯ ಸಂಪಾದನೆಯ ಪ್ರವಚನ ಸಾಗಿತು. ಈ ಪ್ರವಚನ ಮೃತ್ಯುಂಜಯ ಅಪ್ಪಗಳನ್ನು ಎಷ್ಟೊಂದು ಸೆರೆ ಹಿಡಿದಿತ್ತೆಂದರೆ ಪ್ರತಿ ವರ್ಷದ ಮುರುಘಾಮಠದ ಕಾರ್ಯಕ್ರಮಗಳಲ್ಲಿ ಅದು ಕಡ್ಡಾಯವಾಗಿ ಸೇರಿತು.

ದೊಡ್ಡನಗೌಡರ ಶೂನ್ಯ ಸಂಪಾದನೆಯ ಪ್ರವಚನ ಪಂಡಿತ ಪಾಮರ ಎಂಬ ಭೇದವಿಲ್ಲದೆ ಎಲ್ಲರಿಗೂ ರಸಾನಂದವನ್ನು ನೀಡುವ ಶಕ್ತಿ ಪೊಂದಿದೆ. ಒಮ್ಮೆ ಬೆಳಗಾವಿ ಲಿಂಗರಾಜ ಕಾಲೇಜದ ವರ ಮಠದಲ್ಲಿ ಅಕ್ಕಮಹಾದೇವಿಯ ಸಂಪಾದನೆ ನಡೆದಿತ್ತು. ಅಕ್ಕ ಕಲ್ಯಾಣ ಬಿಟ್ಟು ಶ್ರೀ ಶೈಲಕ್ಕೆ ಹೊರಟಾಗ ಹೇಳುವ, "ಹುಟ್ಟಿದೆ ಶ್ರೀ ಗುರುವಿನ ಹಸ್ತದಲ್ಲಿ. ಬೆಳೆದೆನು ಅಸಂಖ್ಯಾತರ ಕರುಣದೊಳಗೆ ಬಸವಣ್ಣ ಮೊಲೆಗೊಟ್ಟು ತನವ ಮಾಡುವೆ. ಚೆನ್ನಮಲ್ಲಿಕಾರ್ಜುನನ ಕೈ ವಿಡಿದು..." ಎಂಬ ವಚನವನ್ನು ಗೌಡರು ಭಾವ ಪರವಶರಾಗಿ ವಿವರಿಸುತ್ತ ಎದುರುಗಡೆ ದೃಷ್ಟಿ ಹಾಯಿಸಿದರು. ಹಳ್ಳಿಯ ಮುಗ್ಧ ಹೆಣ್ಣು ಮಗಳೊಬ್ಬಳು ಕೈ ಜೋಡಿಸಿ ಭಕ್ತಿಯ ಗೂಡಾಗಿ ಕುಳಿತು ಒಂದೇ ಸಮನೆ ಕಣ್ಣೀರಿಡುತ್ತಿದ್ದುದು ಕಂಡುಬಂದಿತು. ಇವರಿಗೂ ತಡೆಯುವದಾಗಲಿಲ್ಲ. ಅಬ್ಬರಿಸಿ ಅತ್ತು ಬಿಟ್ಟರು. ಇನ್ನೊಮ್ಮೆ ಬೆಂಗಳೂರಿನ ಮಹಾರಾಣಿ ಕಾಲೇಜಿನಲ್ಲಿ ದೊಡ್ಡನ ಗೌಡರ ಗಮಕ ಕಾರ್ಯಕ್ರಮ. ಅನಾನುಕೂಲದಿಂದಾಗಿ ಅಂದು ಶ್ರುತಿಗೆ ತಂಬೂರಿ ಹಾರ್ಮೋನಿಯಂ ಯಾವುದೂ ದೊರೆತಿರಲಿಲ್ಲ. ಎದುರಿಗೆ ಕುಳಿತವರು ಆಧುನಿಕ ನಾಗರಿಕತೆಯ ನವ ತರುಣಿಯರು. ಹೇಳಬೇಕೆಂದಿರುವುದು ಶೂನ್ಯ ಸಂಪಾದನೆ. ಗೌಡರಿಗೆ ಏನೋ ಹೇಗೋ ಎಂಬ ಅಳುಕು. ಆದ್ದರಿಂದ ಮಾರಯ್ಯಗಳ ಸಂಪಾದನೆ ಎತ್ತಿಕೊಂಡು ಮಾರಯ್ಯ-ಲಕ್ಕಮ್ಮಗಳ ದಾಂಪತ್ಯದ ಚಿತ್ರವನ್ನು ರಸವತ್ತಾಗಿ ವಿವರಿಸಿ ಕಾಲೇಜು ಹುಡುಗಿಯರನ್ನು ರಂಜಿಸಿದರು.

ಪ್ರಾಚೀನ ಕಾವ್ಯಗಳಂತೆ ಆಧುನಿಕ ಮಹಾಕಾವ್ಯ ರಾಮಾಯಣ ದರ್ಶನವನ್ನು ಗಮಕಕ್ಕೆ ಅಳವಡಿಸಿಕೊಂಡಿರುವ ಗೌಡರ ಗಮಕ ಪ್ರತಿಭೆ ಅಗಾಧವಾದುದು. 'ಶಬರಿಗಾದನು ಅತಿಥಿ ದಾಶರಥಿ' ಎಂಬ ಭಾಗವನ್ನು ಗೌಡರಿಂದ ಕುವೆಂಪು ಕೇಳಿ ಆನಂದಪಟ್ಟು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಪದ್ಯಗಳು ಏಕಪ್ರಕಾರವಾಗಿದ್ದರೆ ಗಮಕ ಸುಲಭ. ಪದ್ಯದಲ್ಲಿ ಸಂಭಾಷಣೆ ಹೆಣೆದುಕೊಂಡಿದ್ದರೆ ಏರಿಳಿವುಗಳ ಮೂಲಕ ಅದನ್ನು ವ್ಯಕ್ತ ಪಡಿಸುವುದು ಕಷ್ಟ. ಹರಿಶ್ಚಂದ್ರ ಕಾವ್ಯ, ರಾಮಾಯಣ ದರ್ಶನದಲ್ಲಿರುವ ಇಂಥ ಕ್ಲಿಷ್ಟಕರವಾದ ಸನ್ನಿವೇಶಗಳನ್ನು ಗೌಡರು ಸಮರ್ಥವಾಗಿ ನಿರೂಪಿಸುತ್ತಾರೆ. ಗಮಕದ ಬಗ್ಗೆ ಇಷ್ಟೆಲ್ಲ ಪರಿಣತಿ, ಕಾಳಜಿ ಹೊಂದಿರುವ ಅವರಿಗೆ ಇಂದಿನ ದಿನಮಾನಗಳಲ್ಲಿ ಅದಕ್ಕೊದಗುತ್ತಿರುವ ದುಃಸ್ಥಿತಿ ವ್ಯಥೆಯನ್ನುಂಟು ಮಾಡಿದೆ. ಕಾವ್ಯಗಳನ್ನು ರಾಗಬದ್ಧವಾಗಿ ಹಾಡಿದಾಗಲೇ ಅವುಗಳ ಯಥಾರ್ಥ ರಸಾನುಭವ ಸಾಧ್ಯ. ಇಂದು ಶಾಲೆ-ಕಾಲೇಜುಗಳಲ್ಲಿ ಕಾವ್ಯಗಳನ್ನು ಬೋಧಿಸುವ ರೀತಿ ಗೌಡರಿಗೆ ಎಳ್ಳಷ್ಟು ಹಿಡಿಸದು. ಒಂದು ಪರಂಪರೆ ಕಣ್ಮರೆಯಾಗುತ್ತಿರುವುದನ್ನು ತಮ್ಮ ಕಣ್ಣೆದುರಿಗೇ ಕಾಣುತ್ತಿರುವ ಅವರು ಬಹಳ ನೊಂದುಕೊಂಡಿದ್ದಾರೆ.

ದೊಡ್ಡನಗೌಡರ ಸಾಹಿತ್ಯ ಕೃಷಿ ವಿಪುಲವಾಗಿದೆ. ಮೂಲತ ಅವರದು ಕವಿ ಹೃದಯ. ಮಠದ ಶಾಲೆಯ ಕಾವ್ಯಾಭ್ಯಾಸ ಚಿಗುರೊಡೆದು ಕವಿತಾರಚನೆಗೆ ಪ್ರೇರಣೆ ನೀಡಿತು. ಆಧುನಿಕ ಕನ್ನಡ ಕಾವ್ಯದ ಯಾವ ಮಾರ್ಗ ಪರಂಪರೆಯನ್ನೂ ಗಟ್ಟಿಯಾಗಿ ಹಿಡಿದುಕೊಳ್ಳದ ಗೌಡರ

ಕಾವ್ಯ ನಿರಾಡಂಬರವಾದುದು. ತಮ್ಮ ಭಾವ ತೀವ್ರತೆಯನ್ನು ಸರಳ ರಚನೆಗಳಲ್ಲಿ ಹಿಡಿದಿಟ್ಟಿದ್ದಾರೆ. ಈ ಕವಿತೆಗಳ ಮೇಲೆ ಶರಣರ ವಚನ ಮತ್ತು ಪದಗಳ ಪ್ರಭಾವ ದಟ್ಟವಾಗಿದೆ. ರಸಾವರ್ಣ. ಬೇಸಾಯ ಪದ್ಯಗಳು. ರಮಣೀಯ ಪಟ್ಟಿಗಳು—ಮುಂತಾದವುಗಳಲ್ಲಿ ಇವನ್ನು ಕಾಣಬಹುದು. ನನ್ನ ಮನೆ, ಚೆನ್ನಬಸವ ಶ್ರಾವಣೆಗಳು, ದೀರ್ಘ ಕವನಗಳು. ಬಹುಕಾಲದ ವರೆಗೆ ಸಂಗಾತಿಯಾಗಿ ಬಾಳಿದ ತಮ್ಮ ಪತ್ನಿಯು ಮಡದಿ ಪಾರ್ವತಕ್ಕ ಗೌಡತಿಯ ಸಾವು ಗೌಡರ ಮೇಲೆ ವಿಲಕ್ಷಣ ಪರಿಣಾಮವನ್ನುಂಟು ಮಾಡಿದೆ. 'ಗೌಡತಿ ಬರಲಿಲ್ಲ' ಎಂಬ ದೀರ್ಘ ಶೋಕ ಗೀತೆಯಲ್ಲಿ ಅವರ ಅಳಲು ಹೊರ ಹೊಮ್ಮಿದೆ. ತಮ್ಮ ಪತ್ನಿಯನ್ನು ನೆನೆಸಿಕೊಂಡು,

ನಾನತ್ತ ಕಣ್ಣೀರು ನೀನತ್ತ ಕಣ್ಣೀರು.
ಭಕ್ತಿ ಮುಕ್ತಿಯು ಜೀವರಸಧಾರೆ ಸಂಸಾರ
ಸಾರಲಿಂಗಾರ್ಚನೆಯಭಿಷೇಕ.
ನಾಯಕಿ ಇಲ್ಲದ ನಾಯಕನ ವೇಷಕ್ಕೆ
ನಲಿವಿಲ್ಲ, ಬಲವಿಲ್ಲ, ನೋಟಗಳಿಲ್ಲ—ನಾಟಕ
ನೋಟ ವಿಷಾದವು ಕೊನೆಗಿಲ್ಲ

ಎಂದು ಹೇಳಿಕೊಂಡಿರುವ ಸಾಲುಗಳಲ್ಲಿ ಅಕೃತ್ರಿಮವಾದ ಭಾವ ಸಂಪತ್ತನ್ನು ಕಾಣಬಹುದು. ಅವರಿಗೆ ಸಂತಾನ ಭಾಗ್ಯವಿಲ್ಲ. ಅವರೆ ಅನ್ನುವಂತೆ ತಮಗೆ ಕರುಳಸಂತಾನವಿಲ್ಲದ್ದಕ್ಕಾಗಿ ಅವರು ಬಹಳ ಮರುಗಿ—

ಎಲ್ಲರಂತಿಲ್ಲ ನಾ ಬಂದ ಸಂತಾನಿಯಂತೆ.
ಇಲ್ಲಿಂದ ಹೋಗುವಾ ಜೀವ ಟೀಕೆಗೆಯಿಲ್ಲ.
ಕಳಿಯು ಸಂತಾನ ಸಿರಿ ಕೊಳ್ಳುವವರಿಲ್ಲ.

ಎಂದು ವ್ಯಥೆಪಟ್ಟಿದ್ದಾರೆ.

ಗೌಡರ ಕವಿತೆಗಳ ಒಂದು ವೈಶಿಷ್ಟ್ಯವೆಂದರೆ ಅವು ನೂರಕ್ಕೆ ನೂರು ಗೌಡರ ಕವಿತೆಗಳೇ. ಅಂದರೆ ಮೇಲು ನೋಟಕ್ಕೆ ಸಾಧಾರಣ ರಚನೆಗಳಂತೆ ತೋರುವ ಅವರ ಕವಿತೆಗಳನ್ನು ಅವರ ಬಾಯಿಂದಲೇ ಹಾಡಿಸಿ ಕೇಳಬೇಕು. ಅಂದಾಗ ಅವುಗಳ ಸೌಂದರ್ಯ ವ್ಯಕ್ತವಾಗುತ್ತದೆ. ಮಹಿಮಾ ಪ್ರಭಾವ, ತುಕಾರಾಂ, ಕನಕದಾಸ, ಕ್ರಾಂತಿ ಪುರುಷ ಬಸವಣ್ಣ ಮುಂತಾದ ನಾಟಕಗಳನ್ನು ರಚಿಸಿದ್ದಾರೆ. 'ಬಯಲಗಳಿಕೆ' ಸಂಪಾದನೆ, ರಾಘವರ ಜೀವನ ಚರಿತ್ರೆ ಬರೆದಿದ್ದಾರೆ. 'ಗೀತ ಗುಂಜಾರವಮು' ತೆಲುಗು ಕವಿತೆಗಳ ಸ್ವಂತ ಸಂಗ್ರಹ 'ವಚನಾಮೃತಮು' ಶರಣರ ವಚನಗಳ ತೆಲುಗು ಅನುವಾದ. ೧೯೪೭ರಲ್ಲಿ ಗೋಕಾಕದಲ್ಲಿ ನಡೆದ ರೈತ ಸಮ್ಮೇಳನದ ಜಾನಪದ ಗೀತ ಗೋಷ್ಠಿಗೆ ಮೊತ್ತನಗೌಡರು ಅಧ್ಯಕ್ಷರು. ತಮ್ಮ ಅಧ್ಯಕ್ಷ ಭಾಷಣವನ್ನು ಕಾವ್ಯ ರೂಪದಲ್ಲಿ ನಿರ್ವಹಿಸಿ ಹಾಡಿದರು. ಬಹುಶಃ ಕವಿತಾರೂಪದ ಅಧ್ಯಕ್ಷ ಭಾಷಣ ಇದೊಂದೇ. ರಂಗಭೂಮಿಗೆ ಸಂಬಂಧಿಸಿದಂತೆ ಹಲವಾರು ಪಂಡಿತರ ಲೇಖನಗಳ ಸಂಗ್ರಹ ಕಲಾ ಸಂಪುಟಗಳನ್ನು ಪ್ರಕಟಿಸಿದ್ದಾರೆ. ಇತ್ತೀ



"ಭಾವ ಬಲು ಷುಕ್ಕಲು ಕಣೆ! ಪಟಾಕೀಗೆ ಹೆದ್ರಿ ಕೋಣೇಲಿ ಕೂತಿದಾರೆ ಅಕ್ಕನ್ನ ತಬ್ಕೊಂಡು.."

ಜೆಗೆ ಬಂದ 'ನಂದೇ ನಾನೋದಿದೆ' ಆತ್ಮಕಥೆ ಕನ್ನಡ ಸಾರಸ್ವತ ಪ್ರಪಂಚಕ್ಕೆ ಅಪೂರ್ವ ಕೊಡುಗೆಯಾಗಿದೆ.

ಸ್ವಭಾವತಃ ದೊಡ್ಡನಗೌಡರು ಭಾವುಕರು. ಅವರ ಜೀವನದಲ್ಲಿ ನಡೆದು ಹೋದ ಕೆಲವು ಪವಾಡ ಸದೃಶ ಘಟನೆಗಳು ಅವರ ಈ ಸ್ವಭಾವವನ್ನು ಪೋಷಿಸಿಕೊಂಡು ಬಂದಿವೆ. ಪ್ರಾಚೀನ ಶರಣ ಜೀವನ ಮಾರ್ಗವನ್ನು ಆದರ್ಶವಾಗಿಟ್ಟುಕೊಂಡಿರುವ ಗೌಡರು ಬಹಳಷ್ಟು ಬದಲಾವಣೆ ಹೊಂದಿರುವ ಇಂದಿನ ಸಂದರ್ಭದಲ್ಲಿ ಹಳೆಯ ಮೌಲ್ಯಗಳ ಧೀಮಂತ ಪ್ರತಿನಿಧಿಯಾಗಿದ್ದಾರೆ. ಹಾಗಂತ ಅವರು ಇಂದಿನ ಬದುಕಿಗೆ ಬೆನ್ನು ತಿರುಗಿಸಿದವರೂ ಅಲ್ಲ. ಸಮಕಾಲೀನ ಸಮಸ್ಯೆಗಳನ್ನು ತರ್ಕಬದ್ಧವಾಗಿ ವಿಶ್ಲೇಷಿಸಿ ಗಂಟೆಗಟ್ಟಲೆ ಮಾತಾಡಬಲ್ಲರು. ತಮ್ಮ ಜೀವನಾನುಭವಗಳ ಬಂಡವಾಳದ ಮೇಲೆ ನಿರರ್ಗಳವಾಗಿ ಹರಟೆ ಹೊಡೆಯುವ ಗೌಡರು ಎದುರು ಕುಳಿತವರಿಗೆ ಮೋಡಿಮಾಡುತ್ತಾರೆ. ಸ್ವಾಮಿಗಳು, ಮಠಗಳು, ಪುರಾಣಗಳು, ಅವರಿಗೆ ಅತ್ಯಂತ ಪ್ರೀತಿ. ಹೊಸ ಜನಾಂಗದ ದೃಷ್ಟಿಯಲ್ಲಿ ಇವೆಲ್ಲ ಅರ್ಥ ಕಳೆದುಕೊಂಡ ಜಡ ಪರಂಪರೆಗಳು. ಆದರೆ ಗೌಡರ ಸಂಪರ್ಕ ಎಂಥ ನಾಸ್ತಿಕ ವಿಚಾರವಾದಿಯನ್ನೂ ಕೆಲ ಹೊತ್ತು ದಿಙ್ಮೂಢನನ್ನಾಗಿಸಿ ಆಲೋಚನೆಗೆ ತೊಡಗಿಸುತ್ತದೆ. ತಮ್ಮ ಗತ ಜೀವನದ ಪದ್ಯದ ಮೂಲಕ ಹಳೆಯ ಮೌಲ್ಯಗಳನ್ನು ಸಮರ್ಥವಾಗಿ ಬೋಧಿಸುವ ಗೌಡರ ಗತ್ತು, ಬರೀ ಸ್ಟಂಟ್ ಅಲ್ಲ; ಪ್ರಾಮಾಣಿಕ ಅಭಿವ್ಯಕ್ತಿ. ದೊಡ್ಡನಗೌಡರು ಸ್ನೇಹಪರರು, ಸರಸ ಮಾತುಗಾರರು. ಅವರ ಸ್ನೇಹಿತರ ಬಳಗ ನಾಡಿನ ತುಂಬೆಲ್ಲ ಪಸರಿಸಿದೆ. ಎಪ್ಪತ್ತುಮೂರು ವರ್ಷದ ಬೆಳ್ಳಿಗೂದಲಿನ ಈ ಮುದುಕ ಹಾವಭಾವಗಳೊಂದಿಗೆ ಮಾತಿಗೆ ತೊಡಗಿದರೆ ಹದಿಹರೆಯದ ಹಿಪ್ಪಿ ಕಟ್ ಉಂಡಾಡಿ ಹುಡುಗ ಕೂಡ ಮೈಮರೆತು ಕೂಡಬೇಕು.

ದೊಡ್ಡನಗೌಡರ ಕುಟುಂಬ ದೊಡ್ಡದು. ತಂದೆ ತಾತಂದಿರ ಕಾಲದಲ್ಲಿ ನಿರಾಂತಕವಾಗಿ ಕಲಾ ಜೀವನಕ್ಕೆ ಒಗ್ಗಿ ಹೋಗಿದ್ದ ಗೌಡರು ತಂದೆಯ ನಂತರ ಅನಿವಾರ್ಯವಾಗಿ ದೊಡ್ಡ ಸಂಸಾರದ ಭಾರ ಹೊರಲೇಬೇಕಾಯಿತು. ಇದೊಂದು ಅನಿಷ್ಟ ಅಂತ ಭಾವಿಸದೆ ಈ ಭಾರೀ ಸಂಸಾರದ ಹಡಗನ್ನು ಚಾಕಚಕ್ಯತೆಯಿಂದ ನಡೆಸಿಕೊಂಡು ಬಂದಿದ್ದಾರೆ. ತತ್ತರಿಸಿ ಹೋಗಬಹುದಾದಂಥ ಎಷ್ಟೋ ಪ್ರಸಂಗಗಳನ್ನು ಧೈರ್ಯದಿಂದ ಎದುರಿಸಿದ್ದಾರೆ. ಸುಮಾರು ಅರವತ್ತು ಜನರ ಇಂಥ ದೊಡ್ಡಮನೆಯ ಹೊಣೆಗಾರಿಕೆಯ ಮಧ್ಯದಲ್ಲಿಯೂ ತಮ್ಮ ಕಲೋಪಾಸನೆಯನ್ನು ನಿಷ್ಠೆಯಿಂದ ವ್ರತವೆಂಬಂತೆ ನಡೆಸಿಕೊಂಡು ಬಂದುದು ಅವರ ಧೀಮಂತ ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿದೆ. ಇವರು ಜೋಳದ ರಾಶಿಯಂಥ ಸಣ್ಣ ಹಳ್ಳಿಯಲ್ಲಿ ನಾಟಕ ಪರಿಷತ್ತನ್ನು ನಡೆಸಿದ ಸಂಘಟನಾ ಚತುರರು. ಸೊಲ್ಲಾಪುರ ಕನ್ನಡ ಸಾಹಿತ್ಯ ಸಮ್ಮೇಲನದ ಗಮಕ ಗೋಷ್ಠಿ, ಅಖಿಲ ಕರ್ನಾಟಕ ಗಮಕ ಸಮ್ಮೇಳನ, ಕಲಬುರ್ಗಿ ಜಾನಪದ ಸಮ್ಮೇಳನ ಮುಂತಾದವುಗಳ ಅಧ್ಯಕ್ಷಸ್ಥಾನಗಳನ್ನೂ ಅಲಂಕರಿಸಿದ್ದಾರೆ. ಸಂಗೀತ ನಾಟಕ ಅಕಾಡೆಮಿ, ಹಲವಾರು ಕಲಾ ಸಂಸ್ಥೆಗಳು, ಮಠಗಳು ಬಿರುದು, ಸನ್ಮಾನ ನೀಡಿ ಗೌಡರನ್ನು ಗೌರವಿಸಿವೆ. ಹಿಗ್ಗು ಕುಗ್ಗುಗಳಿಗೆ ಬಲಿಯಾಗದೆ ತಮ್ಮತನವನ್ನು ಕಾಪಾಡಿಕೊಂಡು ಬಂದಿರುವ ದೊಡ್ಡನಗೌಡರು ಸ್ಥಿತಪ್ರಜ್ಞರು. ತಮ್ಮ ಬದುಕಿನ ಸಿದ್ಧಿ ಸಾಧನೆಗಳ ಬಗ್ಗೆ ಹೆಮ್ಮೆ, ಸಂತೃಪ್ತಿ ಇದ್ದವರು. ✡

ಆತ್ಮಚರಿತ್ರೆ: ಬೇರೆಯವರ ಬಗ್ಗೆ ಕಠೋರ ಸತ್ಯವನ್ನು ನುಡಿಯುವ ನಿಶ್ಚಿತ ಸಾಧನೆ.

—ಫಿಲಿಪ್ ಗುಡೆಲ್ಲಾ

ಅನಾವೃತ

ಬನವಾಸಿ ವೆಂಕಟೇಶ್ ದೀಕ್ಷಿತ್

ಮೌನ ಕವಿದುಕೊಂಡ ದೊಡ್ಡ ರೂಮಿನಲ್ಲಿ ಏಕಾಕಿಯಾಗಿ ಕುಳಿತಿದ್ದೆ. ಈ ಏಕಾಂತ ನನಗೆ ನೀಡುವ ಅಪೂರ್ವ ಅನುಭವವನ್ನು ನಾನು ಮತ್ಯಾವ ಸಂದರ್ಭದಲ್ಲೂ ಕಾಣಲು ಶಕ್ತನಾಗಿಲ್ಲ. ಎಲ್ಲೆಲ್ಲೂ ಮೌನ ಪಸರಿಸಿರಬೇಕು, ಏಕಾಂತವಾಗಿ ಕುಳಿತಿರಬೇಕು. ಸುತ್ತಲ ಶೂನ್ಯವನ್ನು ತುಂಬಲು ಮನಸದಲ್ಲಡಗಿದ, ಮಿದುಳಿನಲ್ಲಿ ಹುದುಗಿದ ಭಾವನೆಗಳು ಹೊರಬೀಳುತ್ತವೆ. ತಲೆಯು ಸುತ್ತ, ಕಣ್ಣ ಮುಂದೆ ಕವಿಯುತ್ತವೆ. ಅದನ್ನನುಭವಿಸುತ್ತ ವ್ಯಕ್ತಿ ತನ್ನನ್ನು ತಾನೇ ಮರೆಯಬೇಕು. ಆ ಘಟನೆಗಳ ನೆನಪಿನಲ್ಲಿ ತಡಕಾಡುತ್ತ ಪರಿಶೀಲಿಸುವ ಸಂದರ್ಭದಲ್ಲಿ ತಟ್ಟನೆ ಮನುಷ್ಯ ತನ್ನ ನಿಜರೂಪವನ್ನು ಹುಡುಕಿಕೊಳ್ಳುವ, ತನ್ನ ಪ್ರತಿಬಿಂಬವನ್ನು ಕಾಣುವ ಅಪೂರ್ವ ಸಂದರ್ಭ ಸಿಗುವುದುಂಟು. ಇದನ್ನು ಅಮಲು ಎನ್ನುವುದಾದರೆ ಹಾಗೇ ತಿಳಿದುಕೊಳ್ಳಿ. ಕುಡುಕ ಹೆಂಡ ಕುಡಿದು, ಋಷಿಗಳು ಅದನ್ನೇ ಸೋಮರಸ ಎಂದು ಪಾನಮಾಡಿ, ಸಮಾಧಿ ಸ್ಥಿತಿಗೇರಿ ತಲುಪಿದ ಸ್ಥಿತಿಯನ್ನು ನಾನು ಈ ಏಕಾಂತದಲ್ಲಿ ಕಂಡುಕೊಳ್ಳುತ್ತೇನೆ. ನನ್ನನ್ನು ನಾನು ಮರೆಯುವ ಪ್ರಯತ್ನ ಮಾಡುತ್ತೇನೆ.

I kicked her out
I necked her out
I emptied the space at last
But, Alas it was the fate
She was still in my heart

ಈಗಷ್ಟೇ ಓದಿದ ಕವಿಯ ಕವನದ ಸಾಲು ತಲೆಯಲ್ಲಿ ಗುಂಯ್ ಎಂದು ಗುಂಜಾರವ ಮಾಡುತ್ತಿತ್ತು. ಆ ಕವಿ ಈ ಕವನ ಬರೆದ ಎಂಟು ದಿನಗಳ ಒಳಗಾಗಿ ಆತ್ಮಹತ್ಯೆ ಮಾಡಿಕೊಂಡಿದ್ದ. ಅವನು ಆತ್ಮಹತ್ಯೆ ಮಾಡಿಕೊಳ್ಳುವ ಮನಃಸ್ಥಿತಿಯಲ್ಲಿಯೇ ಇದನ್ನು ಬರೆದನೇ? ಹಾಗಾದರೆ ಅವನ ಮಿದುಳಿನಿಂದ ಈ ಶಬ್ದಗಳು ಹೊರ ಬೀಳುವಾಗ ಎಂತಹ ಭಾವನೆಗಳಿದ್ದಿರಬಹುದು? ಯಾವ ಕಥೆ ಅವನ ಈ ಭಾವೋದ್ವೇಗಕ್ಕೆ ಪೂರಕವಾಗಿರಬಹುದು? ಎಂಬ ಯೋಚನೆಗಳು ಹೃದಯವನ್ನು ಒಂದು ರೀತಿ ಭಾರಕ್ಕೆ ಒಳಪಡಿಸುತ್ತಿದ್ದವು. ಏಕಾಂತವನ್ನು ಇನ್ನೂ ಗಾಢವಾಗಿ ಸುರಿಯುತ್ತಿದ್ದವು.

ಬಾಗಿಲು ತಟ್ಟಿದ ಶಬ್ದ ನವಿರಾಗಿ ತೇಲಿ ಬಂತು. ಏಕಾಂತವನ್ನು ಸವಿಯಾಗಿ ಸವಿಯುತ್ತಿದ್ದೆ. ಹೃದಯದ ಹೆಚ್ಚುತ್ತಿರುವ ಭಾರ ಒಂದು ರೀತಿ ಹಿತವಾಗಿಯೇ ಇತ್ತು. ದುಃಖ ಸ್ವಂತ ಕಾರಣಕ್ಕಾಗಿಯೇ ಇದ್ದಾಗ ಅಸಹನೀಯವಾಗುತ್ತೆ. ಇನ್ನೊಬ್ಬರಿಗಾಗಿ ದುಃಖಿಸುವಾಗ ಒಮ್ಮೊಮ್ಮೆ ಆ ನೋವು ಹಿತವಾಗಿಯೇ ಇರುತ್ತೆ. ಯಾಕೆ ಗೊತ್ತೆ? ಅವರಿಗಾಗಿ ದುಃಖಿಸುವ ದೊಡ್ಡತನ ನಮ್ಮಲ್ಲಿದೆಯಲ್ಲ ಎಂದು ಹೃದಯ ಒಳಗಿಂದೊಳಗೇ ಉಬ್ಬುತ್ತಿರುತ್ತೆ.... ಅದಕ್ಕೇ ಅಂದು ಸತ್ತು ಹೋದ ಪ್ರಿನ್ಸಿಪಾಲರಿಗಾಗಿ ಕಣ್ಣೀರಿಡುತ್ತಿದ್ದ ಒಬ್ಬ ಸಹೋದ್ಯೋಗಿಯನ್ನು ಕಂಡು, 'ರ್‍ಯಾಸ್ಕಲ್...' ಎಂದು ಬಯ್ದಿದ್ದೆ ಅವಿನಾಶನನ್ನು ನಾನು. ಏಳಲು ಮನಸ್ಸಿಲ್ಲ. ಬಾಗಿಲನ್ನು ಯಾರೂ ತಟ್ಟಿಲ್ಲ ಎಂದು ಅಂದುಕೊಂಡು ಅದನ್ನು ನಂಬುವ ಪ್ರಯತ್ನ ಮಾಡುತ್ತಿದ್ದೆ. ಮತ್ತೆ ಬಂತು ಅದೇ ಶಬ್ದ; ಕೊಂಚ ಜೋರಾಗಿ. ಅಸಮಾಧಾನದ ಎಳೆಯೊಂದಿಗೆ ಎದ್ದು ಬಾಗಿಲು ತೆರೆದೆ. ಮೊದಲು ಒಂದು ಬಾಗಿಲು, ಆಮೇಲೆ ಎರಡೂ ಬಾಗಿಲನ್ನು ವಿಶಾಲವಾಗಿ ತೆರೆದಿಟ್ಟೆ. ಬಾಗಿಲಿನುದ್ದಕ್ಕೂ ಅವಳು ನಿಂತಿದ್ದಳು. ಕಾಲಿನಲ್ಲಿ ಕೆಂಪು ಚಪ್ಪಲಿ. ಪಾದವನ್ನು ಸವರುವ ಕೆಂಪು ಪತ್ತಲದ [illegible]



ನಿರಿಗೆಗಳು. ನನಗಿಂತ ಆರು ಇಂಚು ಕಡಿಮೆ ಎತ್ತರ ಇರಬಹುದಾದ ಹುಡುಗಿ. ಸುಂದರ ಮುಖದಲ್ಲಿ ಹೊಳಪು ಕಣ್ಣುಗಳು. "ನಮಸ್ಕಾರ" ಎಂದಳು. "ನಮಸ್ಕಾರ ಬನ್ನಿ," ಎಂದು ಒಳಗೆ ಕೈ ತೋರಿಸುತ್ತ ಬದಿಗೆ ಸರಿದು ನಿಂತೆ. ಬಂದಳು. ಖುರ್ಚಿಯ ಮೇಲೆ ಕುಳಿತಳು. ನಾನೂ ಕುಳಿತೆ. ಒಂದು ಕ್ಷಣ ನಮ್ಮಿಬ್ಬರಲ್ಲಿ ಯಾರೋ ಒಬ್ಬರು ಮೊದಲು ಶುರು ಮಾಡಬಹುದು ಎಂಬ ನಿರೀಕ್ಷೆಯಲ್ಲಿ ಇಬ್ಬರೂ ಕುಳಿತಿದ್ದೆವು. "ಕ್ಷಮಿಸಿ...... ನಿಮ್ಮ ಪರಿಚಯ ಹತ್ತಲಿಲ್ಲ," ಎನ್ನಬೇಕೆಂದಿದ್ದೆ. ಅದನ್ನು ನನ್ನ ಮುಖದ ಮೇಲ ಗುರುತಿಸಿದಳು ಎಂಬಂತೆ ಅವಳೇ ಶುರು ಮಾಡಿದಳು: "ನಿಮಗೆ ನನ್ನ ಪರಿಚಯ ಹತ್ತಲಿಲ್ಲ ಅಲ್ಲವೇ? ಸಹಜವೇ. ನೀವು ಹಿಂದೆಂದೂ ಬಹುಶಃ ನನ್ನನ್ನು ನೋಡಿಲ್ಲ. ನಾನು ಈ ಊರಿನಲ್ಲಿದ್ದುದೇ ಕಡಿಮೆ. ಶಾಲೆಯಿಂದ ಹಿಡಿದು ಕಾಲೇಜಿನ ವರೆಗೂ ಓದಿದ್ದು, ಓದುತ್ತಿರೋದು ಎಲ್ಲ ಭಟ್ಕಳದಲ್ಲಿ. ನಿಮ್ಮನ್ನ ಹಲವು ಬಾರಿ ನಾನು ನೋಡಿದ್ದೇನೆ. ನಿಮ್ಮ ಕಥೆ, ಕಾದಂಬರಿಗಾಗಿ ನಿಮ್ಮ ಪರಿಚಯಾನೂ ಇದೆ." ಅವಳಿಷ್ಟು ವಿವರ ನೀಡಿದ್ದರೂ ಅವ್ಯಾವುದೂ ಅವಳು ಯಾರು ಎಂಬುದನ್ನು ಒಂದಿಷ್ಟೂ ಬಿಟ್ಟು ಕೊಟ್ಟಿರಲಿಲ್ಲ. ಅಪೂರ್ಣವಾಗಿಯೇ ಉಳಿಯಿತು ನಮ್ಮ ಪರಿಚಯ. "ಅಂದರೆ ನೀವು ಇದೇ ಊರೋರಾ?" ಎಂದೆ.

"ಇದೇ ಊರು ಅನ್ನಿ, ಒಂದೇ ಒಂದು ಮೈಲಿನ ಅಂತರ ಬಿಟ್ಟರೆ ಈ ಊರಿಗೂ, ಆ ಊರಿಗೂ ಬೇರೆ ಬೇರೆ ಎಂದು ಹೆಸರಿಸಲು ಯಾವ ಕಾರಣವೂ ಇಲ್ಲ. ಅಲ್ಲವೆ? ನಾನು ಹುಟ್ಟಿದ್ದು ಅಲ್ಲೇ. ನಮ್ಮವರಿರೋದೂ ಅಲ್ಲೇ. ಸರಸ್ವತಿ ನಿಮಗೆ ಗೊತ್ತಲ್ಲ... ಅವಳ ತಂಗಿ ನಾನು."

"ಅವ್... ಸರಸ್ವತಿ, ಸರಸ್ವತಿ ಎಂದರೆ ಲೇಖಿಕಿ ಸರಸ್ವತಿ...?"

"ಹೌದು, ಅವಳ ತಂಗಿ ನಾನು, ಕವಿತ." ಎಂದಳು.

ನಾಲ್ಕು ಕಾದಂಬರಿ, ಕಥಾ ಸಂಕಲನಗಳು ಹಲವಾರು ಸಣ್ಣ ಕಥೆ, ಲೇಖನಗಳನ್ನು ಸೃಷ್ಟಿಸಿದ ಲೇಖಿಕಿ ಸರಸ್ವತಿ ಈಗ ಮೂರು ತಿಂಗಳ ಹಿಂದೆ ಸತ್ತು ಹೋಗಿದ್ದಳು. ತಲೆಯ ಮೇಲೆ ಸೀಮೆ ಎಣ್ಣೆ ಸುರಿದು ಬೆಂಕಿ ಹಚ್ಚಿಕೊಂಡ ಅವಳ ಶರೀರ ಸುಟ್ಟು, ಬೆಂದು ವಿಕಾರವಾಗಿ ಹೋಗಿತ್ತು. ಚರ್ಮ ಸುಟ್ಟ ದುರ್ನಾತದಿಂದ ಎಚ್ಚೆತ್ತ ಅವಳ ಅಪ್ಪ, ಬಾಗಿಲೊಡೆದು ಒಳ ನುಗ್ಗುವಾಗ ಸರಸ್ವತಿಯ ತಲೆ ತೆಂಗಿನ ಚಿಪ್ಪಿನಂತೆ ಬಿರುಕು ಬಿಡತೊಡಗಿತ್ತು. ಸುದ್ದಿ ಕೇಳಿ ನೋಡಲೆಂದು ಓಡಿಹೋದ ನಮಗೆಲ್ಲ ಅವಳ ಬೆಂದ ದೇಹ ಕಾಣಸಿಕ್ಕಿತ್ತು. ಮೈ, ಎದೆ, ಹೊಟ್ಟೆಯ ಮೇಲೆಲ್ಲ ಉಬ್ಬಿ ಒಡೆದ ಗುಳ್ಳೆಗಳಿಂದ ಒಸರುವ ರಸ, ಕೂದಲು ಸುಟ್ಟು ಕರಕಾಗಿ ಒಡೆದ ಬೋಳು ತಲೆ. ಇಂದಿಗೂ ಆ ನೆನಪು ಮಿದುಳಿನಲ್ಲಿ ಮೂಡಿದರೆ ಎದೆಯಲ್ಲಿ ಕತ್ತಿಯಿಂದ ಕೊಚ್ಚಿದಂತಾಗುತ್ತದೆ. ಊಟ ಸೇರುವುದಿಲ್ಲ. ಆ ಲೇಖಕಿಯ ಸಾವಿನ ಕಾರಣ ನಿಗೂಢವಾಗಿಯೇ ಉಳಿದು ಸತ್ತಿದ್ದು ಮಾತ್ರ ಸತ್ಯವಾದ ಸರಸ್ವತಿಯ ತಂಗಿ ಈಕೆ.

ಅವಳ ಪರಿಚಿತ ಮುಖ ಹೋಲಿಕೆಗಾಗಿ ಕವಿತಳ ಮುಖದಲ್ಲಿ ಹುಡುಕಾಡಿದೆ. ಅದು ಅಲ್ಲಿತ್ತು. "ನನಗೂ ಸರಸ್ವತಿಗೂ ಗಾಢ ಪರಿಚಯವಿತ್ತು. ಪರಿಪಕ್ವ ಲೇಖಿಕಿ ಆಕೆ. ಅವರ ಮರಣದಿಂದ ನನಗೆ ತಡೆಯಲಾರದ ದುಃಖವಾಗಿದೆ. ಇದು ನಮ್ಮ ಸಮಾಜಕ್ಕೆ ತುಂಬಿಬಾರದ ನಷ್ಟ..." ಎಂದೆ. ನೆಲವನ್ನು ನಿಟ್ಟಿಸಿದಳು ಕವಿತ. ಕೈಯಲ್ಲಿದ್ದ ಕಡತವೊಂದನ್ನು ಮೃದುವಾಗಿ ಸವರುತ್ತ ನಿಟ್ಟುಸಿರು ಬಿಟ್ಟಳು.

"ನನ್ನ ಅಕ್ಕ ಬರಹಗಾರ್ತಿ ಎಂಬುದು ನನಗೆ ಅತೀವ ಹೆಮ್ಮೆಯ ಸಂಗತಿಯಾಗಿತ್ತು. ಇವಳಲ್ಲವೆ ಲೇಖಿಕಿ ಸರಸ್ವತಿಯ ತಂಗಿ ಕವಿತ-ಎಂದೇ ಗೆಳತಿಯರು ಸಹಪಾಠಿಗಳು, ಜನರು ಎಲ್ಲ ನನ್ನನ್ನು ಪರಿಚಯಿಸುವುದು. ಲೇಖಕಿ ಅಕ್ಕನ ತಂಗಿಯಾಗುವುದು ನನಗೆ ಒಂದು ನಿಧಿ ಸಿಕ್ಕಂತಿತ್ತು. ಅವಳ ಹೆಸರು ನನಗೊಂದು ಆಸ್ತಿಯಾಗಿತ್ತು." ಅವಳ ಧ್ವನಿ ಬರಬರುತ್ತಾ ಭಾರವಾಗುತ್ತ ಹೋದಂತೆನಿಸಿತು. ಅವಳ ಮಾತುಗಳನ್ನೇ ಕೇಳುತ್ತ ಅವಳ ಮುಖದಲ್ಲೇ ದೃಷ್ಟಿಯಿಟ್ಟು ಸುಮ್ಮನಿದ್ದೆ. ಅವಳು ನಿಲ್ಲಿಸಿದ ರೀತಿಯಲ್ಲಿ ಮುಂದುವರಿಸುವ ಧಾಟಿ

ಯಿತ್ತು. ಅದನ್ನು ನಿರೀಕ್ಷಿಸುತ್ತ ಹಾಗೇ ಕುಳಿತೆ. "ಅವಳು ತೀರಿಕೊಂಡಳು. ನಾನು ದಿವಂಗತಳ ತಂಗಿಯಾದೆ," ಎಂದು ನಿಟ್ಟುಸಿರು ಬಿಟ್ಟು ಸ್ವಲ್ಪ ಹೊತ್ತು ಸುಮ್ಮನೇ ಕುಳಿತಿದ್ದಳು, ಆ ಮೇಲೆ, "ಅದಿರಲಿ... ಒಂದು ಕೆಲಸಕ್ಕಾಗಿ ನಿಮ್ಮ ಹತ್ತಿರ ನಾನೀಗ ಬಂದಿದ್ದು; ಅದನ್ನು ನಡೆಸಿಕೊಡ್ತೀರಾ ಎಂಬ ಭರವಸೆಯಿದೆ........." ಎಂದಳು.

ಮಾತು ಗತಕಾಲದಿಂದ ವರ್ತಮಾನ ಕಾಲಕ್ಕೆ ತಿರುಗಿತ್ತು. ಅಂತೆಯೇ ಮನಸ್ಸು ಭಾವಪರಧಿಯ ಆಳದಿಂದ ಕೊಂಚ ಮೇಲ್ಪದರಕ್ಕೆ ಬಂತು. ನನ್ನ ರೂಮಿಗೆ ಮೊದಲ ಬಾರಿ ಬಂದಿದ್ದಾಳೆ ಇವಳು. ಮೇಲಾಗಿ ಸರಸ್ವತಿಯ ತಂಗಿ. ಮಾತು ನೇರವಾಗಿ ಪಟ್ಟಿಗೇರಿ ಹೋಯಿತು. ಶಿಷ್ಟಾಚಾರವನ್ನು ಮರೆತೇಬಿಟ್ಟೆ ನಾನು ಎನ್ನಿಸಿತು... "ಕೊಂಚ ಇರಿ" ಎಂದು ಎದ್ದೆ. ನಾನು ಬೆಳಿಗ್ಗೆ ರೂಮಿನಲ್ಲೇ ಕಾಫಿ ತಯಾರಿಸಿಕೊಳ್ಳುತ್ತಿದ್ದೆ. ಹೀಗಾಗಿ ಪರಿಕರಗಳಿಗೆ ಕೊರತೆಯಿರಲಿಲ್ಲ. ಅದನ್ನು ಗಮನಿಸಿದಳು ಎಂದು ಕಾಣುತ್ತದೆ.

"ಛೇ...ನೀವು ಅಂಥ ಯಾವುದೇ ತೊಂದರೇನೂ ತೆಗೆದುಕೊಳ್ಳಬೇಡಿ?" ಎಂದಳು.

"ತೊಂದರೆಯೇನು? ಬಂತು ಇದರಲ್ಲಿ ಹೇಗೂ ನನಗೂ ಬೇಕಲ್ಲ," ಎಂದೆನ್ನುತ್ತ ಸ್ಟವ್ ಹೊತ್ತಿಸಿದೆ. ಭರ್ರ್... ಎನ್ನುತ್ತ ಸ್ಟವ್ ನಿಶ್ಶಬ್ದದಲ್ಲಿ ಒಂದು ನಿರಂತರ ದನಿಯನ್ನು ಉತ್ಪತ್ತಿ ಮಾಡತೊಡಗಿತು. ಮತ್ತೆ ಬಂದು ಖುರ್ಚಿಯ ಮೇಲೆ ಕುಳಿತೆ.


"ನೋಡಿ, ನಮ್ಮ ಅಕ್ಕ ಲೇಖಕಿಯಾಗಿದ್ದಳು. ಎಂಬುದು ನಿಮಗೂ ಗೊತ್ತಲ್ಲ. ಅವಳೇ ಹೇಳಿದ್ದಳು ಒಮ್ಮೆ. 'ಕವಿತ ಕಥೆ, ಕಾದಂಬರಿ ಬರೆಯುವಾಗ ಬರೆಯಬೇಕು. ಬರೆದು ಮುಗಿಸಬೇಕು ಎಂಬ ಒಂದೇ ಉದ್ದೇಶ ಹೊಂದಿದ್ದು ಬರಹಗಾರ ಬರೆಹದಿಂದ ಬೇರೆ ವ್ಯಕ್ತಿಯಾಗಿಯೇ ಉಳಿದಾಗ ಆ ಬರಹವಿದೆ ನೋಡು, ಅದು ಅವನ ಶವವಾಗಿರುತ್ತೆ. ಅದರಲ್ಲಿ ಎಂತಹ ಜೀವವೂ ಇರೋದಿಲ್ಲ. ಬರೆಯುವಾಗ ಆತನಿಗೆ ಬೇರೆ ವ್ಯಕ್ತಿತ್ವವೇ ಇರಬಾರದು. ಅದರಲ್ಲಿಯ ಪಾತ್ರವೇ ಅವನಾಗಿ ಬಿಡಬೇಕು. ಅದನ್ನನುಭವಿಸುತ್ತ ತನ್ನ ಸುತ್ತ ಕಥೆ ನೇಯ್ದುಕೊಳ್ಳಬೇಕು. ಕಥೆ ಅವನದೇ ಕಥೆಯಾಗಿ ಬಿಡಬೇಕು. ಅದು ನೋಡು, ಜೀವ ತಳೆದ ಬರಹ—' ಎಂದು. ಅಂಥ ಒಬ್ಬ ಲೇಖಕಿಯ ಬರಹ ಅರ್ಧವಾದಾಗ ಅದರಲ್ಲಿಯ ಪಾತ್ರಗಳೂ ಅರ್ಧವಾಗಿ ಆ ಪಾತ್ರಗಳಲ್ಲಿ ಅನುಭವಿಸಿದ ಲೇಖಕಿಯ ಜೀವನವೂ ಅರ್ಧವೇ ಅಲ್ಲವೆ? ಅರ್ಧ ಆಯುಷ್ಯದಲ್ಲೇ ಲೇಖಕಿಯಂತೂ ಸತ್ತಳು. ಆದ ಅವಳು ಸೃಷ್ಟಿಸಿದ ಪಾತ್ರದ ರೂಪದಲ್ಲಿ ಜೀವವಿನ್ನೂ ಗುಟುಕು ಹಾಕುತ್ತಿದೆ ಅನ್ನೋಣ. ಆಗ ಅದನ್ನು ಆಯುಷ್ಯ ತುಂಬಿ ಪೂರ್ತಿ ಮಾಡಲಾಗುವುದಿಲ್ಲ ಎನ್ನುತ್ತೀರಾ...?" ಎಂದಳು. ಅವಳ ದನಿಯಲ್ಲಿ ತುಡಿತವಿತ್ತು, ಅಪಾರ ಶ್ರದ್ಧೆಯಿತ್ತು. ನನಗೂ ಅನ್ನಿಸುತ್ತಿತ್ತು, ಅದೇ ಅನುಭವವೂ ಆಗುತ್ತಿತ್ತು. ಕಥೆಯಲ್ಲಿಯ ಪಾತ್ರಗಳು ಕೊಂಚ ಕೊಂಚ ರಕ್ತ-ಮಾಂಸವನ್ನು ನನ್ನಿಂದಲೇ ಪಡೆಯುತ್ತ ಹೋಗುತ್ತಿದ್ದ, ನನ್ನ ದೇಹದಿಂದಲೇ ಹೊರಬಿದ್ದು ಕಾಗದ ಸೇರುತ್ತಿದ್ದ ಅನುಭವವಾಗುತ್ತಿತ್ತು ಬರೆಯುವಾಗ. "ಖಂಡಿತ...ಕವಿತ. ಅದು ಒಂದು ಮಗುವನ್ನು ಸೃಷ್ಟಿಸಿ ಹೆತ್ತದ್ದಕ್ಕಿಂತ ಕಡಿಮೆಯದಲ್ಲ. ಅರ್ಧದಲ್ಲಿ ಕೈ ಬಿಟ್ಟದ್ದೂ ನಾಲ್ಕು ತಿಂಗಳಲ್ಲೇ ಪಿಂಡವನ್ನು ಹೊರಗೆಡವಿದ್ದೂ ಒಂದೇ. ಎರಡೂ ಅಂಥ ಕಾರಣಗಳೇ. ಅಪಾರ ನೋವಿನ ಮೂಲಗಳೇ..." ಎಂದೆ. ಅವಳ ಕಣ್ಣೋಟ ನನ್ನ ಮುಖದ ಮೇಲೇ ನೆಟ್ಟಿತ್ತು. ಮೇಜಿನ ಮೇಲೆ ಕೈಯೂರಿ ಅಪಾರ ನಿಷ್ಠೆಯಿಂದ ನನ್ನನ್ನು ಆಲಿಸುತ್ತಿದ್ದಳು. ಕಣ್ಣುಗಳಲ್ಲಿ ತನ್ಮಯತೆಯಿತ್ತು. "ಅದೇ...ಅದೇ ನನ್ನ ಉದ್ದೇಶ ಕೂಡ. ಅವಳೊಂದು ಕಾದಂಬರಿ ಬರೀತಾ ಇದ್ದಳು. ಆದರೆ ಅರ್ಧದಲ್ಲೇ ಮೃತಳಾದಳು. ಅವಳ ಸೃಷ್ಟಿಯಲ್ಲಿ ಪಾತ್ರ ಇನ್ನೂ ಗುಟುಕು ಪ್ರಾಣವಿದೆ. ಅದನ್ನು ಬದುಕಿಸಬಹುದು. ಆ ರೂಪದಲ್ಲಿ ಅಕ್ಕನನ್ನು ಜೀವಂತವಾಗಿಡಬಹುದು. ಅದಕ್ಕಾಗಿಯೇ ನಿಮ್ಮ ಹತ್ತಿರ ಬಂದೆ. ಅದು ಅವಳ ಕೊನೆಯಾಸೆಯೂ ಆಗಿತ್ತು..."

ತಟ್ಟನೆ ಒಂದೂ ಅರ್ಥವಾಗಲಿಲ್ಲ. ಕ್ರಮೇಣ ಅರ್ಥವಾಗುತ್ತ ಹೋದಂತೆ ಅಧೈರ್ಯ ಆವರಿಸ ತೊಡಗಿತು. ಇದು ಸಾಧ್ಯವಾದೀತೇ...?

"ಆದರೆ ಕವಿತ, ಇದರಲ್ಲಿ ತೊಡಕುಗಳಿವೆ. ಜೀವ

ನವನ್ನು ನೋಡೋ ನನ್ನ ಮತ್ತು ಸರಸ್ವತಿಯ ಕೋನಗಳಲ್ಲಿ ವ್ಯತ್ಯಾಸವಿರಬಹುದು. ಅದೇ ಹೇಳಿದೆನಲ್ಲ– ಒಂದು ಪುಸ್ತಕವೇ ಬರಹವೆಂದರೆ ಒಂದು ಮಗುವನ್ನು ಸೃಷ್ಟಿಸಿದಷ್ಟೇ ದೊಡ್ಡದು ಎಂದು. ಮಗುವಿನ ಸೃಷ್ಟಿ ಒಂದೇ ತಂದೆಯಿಂದಾಗುತ್ತೆ. ಇಬ್ಬರು ಪುರುಷರು ಒಂದೇ ಮಗುವನ್ನು ಸೃಷ್ಟಿಸಲಾರರು…"

"ನೀವು ಹಾಗೇಕೆ ಅಂದುಕೊಳ್ಳಬೇಕು ? ಮಗು ಒಂದು ವ್ಯಕ್ತಿಯ ಪಾಲು ಮುಗಿದಿದೆ; ಈಗ ನಿಮ್ಮದು ಎಂದುಕೊಳ್ಳಿ. ನೀವು ತಂದೆಯ ಕರ್ತವ್ಯ ಮಾಡಿ…" ಎಂದು ನಿಲ್ಲಿಸಿದ ಅವಳ ಮುಖವನ್ನೇ ನಿರುಕಿಸಿದೆ. ಅವಳ ಮೂಗಿನ ಅತ್ತ ಇತ್ತ ಗುಲಾಬಿ ರಂಗಿದ್ದಂತೆ ನನ್ನ ಕಣ್ಣಿಗೆ ಕಾಣಿಸಿತು. ಅದರ ಮೇಲೆ ಸೂಕ್ಷ್ಮ ಸ್ವೇದ ಬಿಂದುಗಳಿದ್ದವು. ನೇರದೃಷ್ಟಿಯಿಂದ ಮುಖವನ್ನು ಕದಲಿಸಿ ಕೈಯಲ್ಲಿದ್ದ ಕಡತವನ್ನು ಬಿಚ್ಚಿದಳು. ನಾನೂ ಕುರ್ಚಿಗೊರಗಿ ಕಣ್ಣು ಮುಚ್ಚಿದೆ. ಉಸಿರು ಬಿಟ್ಟೆ. ಬಿಗಿದ ನರಗಳೆಲ್ಲ ಸಡಿಲಾಗಿ ಮೈ ಹಗುರಾಗುತ್ತಿರುವಂತೆನ್ನಿಸಿ ಹಾಯೆನ್ನಿಸಿತು.



"ಇದೇ ನೋಡಿ… ಹಸ್ತಪ್ರತಿ," ಎಂದಾಗ ಥಟ್ಟನೇ ಕಣ್ಣುಬಿಟ್ಟೆ. ಅವಳನ್ನು ಹಾಗೇ ಕೂಡಿಸಿ ನಾನು ಕಣ್ಣು ಮುಚ್ಚಿ ಮೌನಿಯಾದುದಕ್ಕೆ ನಾಚಿಕೆಯಾಯ್ತು. "ಕ್ಷಮಿಸಿ, ಯಾವುದೋ ಆಲೋಚನೆಯಲ್ಲಿ ಸುಮ್ಮನೇ ಕುಳಿತುಬಿಟ್ಟೆ…" ಎಂದೆ. ಬಿಳಿಯ ಹಾಳೆಗಳ ಒಂದು ಕಟ್ಟನ್ನು ನನ್ನೆಡೆಗೆ ಚಾಚಿದಳು ಕವಿತ. ಇಸಿದುಕೊಂಡೆ. ಸುಮಾರು ನೂರು ಪುಟಗಳಷ್ಟು ಬರವಣಿಗೆಯಾಗಿತ್ತು. ತಿದ್ದುಪಡಿ ವಿರಳವಾಗಿ ಅಲ್ಲಲ್ಲಿದ್ದರೂ ಅವ್ಯಾಹತವಾಗಿ ಬರೆದದ್ದು ಸ್ಪಷ್ಟವಿದ್ದು ಬರೆದವರ ಆತ್ಮವಿಶ್ವಾಸವನ್ನು ಪ್ರತಿನಿಧಿಸುತ್ತಿತ್ತು. ಅದರ ಪೇಜುಗಳನ್ನು ತಿರುವುತ್ತ ಹಾಗೇ ಪರಿಶೀಲಿಸುವಾಗ ಇಷ್ಟು ಹೊತ್ತಿಲ್ಲದ ಯಾವುದೋ ಮಾಧುರ್ಯವೊಂದು ವಾತಾವರಣದಲ್ಲಿ ತುಂಬಿಕೊಂಡಂತೆ ಭಾಸವಾಗತೊಡಗಿ ಅಚ್ಚರಿಯೆನಿಸಿತು. ಥಟ್ಟನೇ ನನ್ನ ಮನಸ್ಸಿಗೇನಾಯಿತು? ಆ ಮಾಧುರ್ಯವನ್ನು ಎಲ್ಲಿಂದ ಎರವಲು ಪಡೆಯಿತು ? ಇದು ಕವಿತಳ ಉಪಸ್ಥಿತಿಯಿಂದಾಗಿ ಇರಬಹುದೇ? ಉಪ್ಪಿನ ಕಾಯಲ್ಲದ್ದಿದ ಬೆರಳು ಸೀಪುತ್ತ ಬೆರಳೇ ಎಷ್ಟು ರುಚಿ ಎಂದುಕೊಂಡಂತೆ ಪೇಪರುಗಳಲ್ಲಿ ಅದು ಆರೋಪಿತವಾಗಿರಬಹುದೇ…? ಆ ದೌರ್ಬಲ್ಯ ನನ್ನಲ್ಲಿಲ್ಲ ವೆಂದು ನನ್ನ ನಂಬಿಕೆ. ಅಲ್ಲದೇ ಅವಳು ಒಳಗೆ ಬಂದು ಇಷ್ಟು ಹೊತ್ತಾಯ್ತು. ಈಗ ಹೊಸದಾಗಿ ಎಲ್ಲಿಂದ ಸುರುವಾಯ್ತು? ಅಥವಾ ಸರಸ್ವತಿಯ ಬರಹವೇ ಹಾಗಿದೆಯೋ…? ಆದರೆ ಅದನ್ನಿನ್ನೂ ಓದೇ ಇಲ್ಲವಲ್ಲ. ಓದಿದರೂ ಅನ್ವೇಷಕ ದೃಷ್ಟಿಯಿಂದ ಓದಬೇಕು ತಾನೇ? ತರ್ಕಿಸುವ ಯತ್ನ ಮಾಡಿದೆ. ಆ ಲಹರಿಯೆದುರು ಗಂಭೀರವಾಗಿ ಅದನ್ನು ಪರಿಗಣಿಸಲಾಗಲಿಲ್ಲ, ಸುಮ್ಮನಾದೆ.

"ನಾನಿನ್ನು ಬರಲಾ?" ಎಂದಳು.

"ಆಂ… ಹುಂ. ಅಂದಹಾಗೆ ನೋಡಿ… ನಾನೇನೋ ಒಪ್ಪಿಕೊಂಡು ಇದನ್ನ ತೆಗೆದುಕೊಂಡೆ. ಆದರೆ ಸರಸ್ವತಿಯ ಮನಃಸ್ಥಿತಿಗೆ ನನ್ನನ್ನ ನಾನೀಗ ತಳ್ಳಿಕೊಂಡ ಹೊರತು ಇದು ಪೂರ್ಣವಾಗೋ ಹಾಗಿಲ್ಲ; ಅದೂ ಅಷ್ಟು ಫಲಕಾರಿಯಾಗೋ ಹಾಗೆ ಕಾಣೆ. ಇದಕ್ಕೆ

ಸಹಕಾರ ಬೇಕು. ನಿಮ್ಮೊಡನೆ ಚರ್ಚಿಸಬೇಕು. ಆದಷ್ಟೂ ಸರಸ್ವತಿಯ ದೃಷ್ಟಿ ಪಡೆಯಲು ಯತ್ನಿಸಬೇಕು. ಕಥೆ ಅವಳ ದೃಷ್ಟಿಕೋನದಲ್ಲೇ ಓಡಲಿ ಎನಿಸುತ್ತೆ ನನಗೆ," ಎಂದೆ.

"ಓ... ಅದಕ್ಕೇನಂತೆ? ನೀವು ಯಾವಾಗ ಹೇಳಿದರೆ ನಾನು ಸಿದ್ಧ," ಎಂದಳು. ಅವಳ ಮಾತಿನಲ್ಲಿ ಆಸಕ್ತಿಯಿತ್ತು, ಆತ್ಮವಿಶ್ವಾಸವಿತ್ತು. ರೂಮಿನಿಂದ ಹೊರಟು ಹೋದಳು ಕವಿತ.

*

ಅವಳೀಗೀಗ ಸಂಜೆ ಬೇಗ ಬರತೊಡಗಿದ್ದಳು. ಇಂದು ಆರಕ್ಕೆಲ್ಲ ನನ್ನ ರೂಮಿನಲ್ಲಿದ್ದಳು. ಬೇಗ ಹಾಗೆ ಹೊರಬಿದ್ದೆವು. ನಾನು, ನನ್ನ ಪಕ್ಕದಲ್ಲಿ ಅವಳು ಸಮಾಜಗುಷ್ಟದತ್ತ ನಡೆಯುತ್ತೊಡಗಿದೆವು.

"ಕವಿತ, (ಈಗ ನಾನವಳನ್ನು ಏಕವಚನದಲ್ಲೇ ಕರೆಯಲಾರಂಭಿಸಿದ್ದೆ.) ಕಾದಂಬರಿಯ ಕೆಲ ಸಂದರ್ಭಗಳನ್ನು ಪರಿಶೀಲಿಸುವಾಗ ನನಗನಿಸುತ್ತೆ— ಸರಸ್ವತಿ ಅದನ್ನು ಬರೆಯೋದಕ್ಕೆ ಮುಂಚೆ ತೀವ್ರ ಭಾವೋದ್ರೇಕಕ್ಕೊಳಗಾಗಿದ್ದಳು ಅಂತ. ನೋಡು, ಮೇಘ ಮಾಲೆ ಪಶ್ಚಿಮಘಟ್ಟದ ಹಸಿರು ಹುಲ್ಲಿನ ಮಧ್ಯೆ ಬೆಳೆದ ಹೆಣ್ಣು. ಸುತ್ತಲಿನ ಪರಿಸರವನ್ನು ಅರಿಯಬಲ್ಲಷ್ಟು, ಅರಿತು ಸ್ಪಂದಿಸಬಲ್ಲಷ್ಟು ವಿದ್ಯೆ ಅವಳಲ್ಲಿದೆ. ಹೃದಯವಂತಿಕೆ ಅವಳಿಗೆ ಸಾಧಿಸಿದೆ. ರತ್ನಗರ್ಭನ ಗುಣಕ್ಕೆ ಅವಳು ಮಾರು ಹೋಗುತ್ತಾಳೇನೋ ಸರಿ. ಆದರ್ಶವನ್ನು ಒಂದು ಉದ್ದೇಶವನ್ನು ಹೊಂದಿ ಅವಳು ಅವನ ಸನಿಹಕ್ಕೆ ಸರಿಯುತ್ತಾಳೆ. ಅದೂ ಸರಿ. ಮುಂದೆಯೂ ನಾನು ಹೇಳೋ ಪ್ರಸಂಗ ಇರೋದು, ಮೇಘಮಾಲೆ ತಿರುತಿರುಗಿ ಸುತ್ತ ಬಳಸಿ ಮಾತನಾಡುತ್ತಲೇ ಇರುತ್ತಾಳೆ. ಆದರೆ ತಾನು ಅವನನ್ನು ಪ್ರೇಮಿಸುತ್ತೇನೆ ಎಂದು ಒಮ್ಮೆಯೂ ಎಲ್ಲಿಯೂ ತೋರಿಸೋದಿಲ್ಲ. ಎಲ್ಲೂ ಕೊನೆಗೆ ಸೂಚ್ಯವಾಗಿ ಕೂಡ ಅದು ಪ್ರತಿಫಲಿಸುವುದಿಲ್ಲ. ಅದು ಇಲ್ಲಿಯ ವರೆಗೆ ಅವಳನ್ನು ರೂಪಿಸಿದ ರೀತಿಗೆ ಆಭಾಸ ಎನಿಸುವಂತಿದೆ."

"ಹಾಂ... ಹೀಗಂತೀರ? ಅದಕ್ಕೆ ಈ ಕಾರಣ ಇದ್ದೀತು. ಅವನ ಗುಣ ನಡತೆಗಳ ಬಗ್ಗೆ ಮೊದಲೇ ಕೇಳಿದ್ದ ಅವಳು ಅವನ ಭೆಟ್ಟಿಯಾದಾಗ ಮೊದಲ ನೋಟದಲ್ಲೇ ಪ್ರೇಮಿಸಿರಬಹುದು. ಅಪೂರ್ವ ಸಾಹಸದಿಂದ, ಅತೀವ ಬುದ್ಧಿ ಚಾತುರ್ಯದಿಂದ ಅವಳು ರತ್ನಗರ್ಭನನ್ನು ಸಮೀಪಿಸಿದ್ದಾಳೆ..."

"ಸಮೀಪಿಸಿದರಾಗಿ ಹೋಯ್ತೇ... ಮುಂದಿನದೇ ಮುಖ್ಯ ತಾನೆ? ಕವಿತ ಸಹಜ ಸ್ಥಿತಿಯಲ್ಲಿ ಜೀವನದಲ್ಲಿ ಹೀಗಿರುವುದಿಲ್ಲ. ಪದೇ ಪದೇ ಭೆಟ್ಟಿಯಾದರೂ ಅವರು ವ್ಯವಹಾರದ ಮಾತೇ ಆಡುತ್ತಿದ್ದರೆ ಅದು ವ್ಯವಹಾರ ಮಾತ್ರ ಆಗಿರುತ್ತದೆ ಹೊರತು ಇನ್ನೇನಿಲ್ಲ. ಒಂದು ವೇಳೆ ಇಬ್ಬರಲ್ಲೂ ಪ್ರೇಮವೇ ಇದ್ದರೆ ಕೊನೆಗೆ ಒಂದು ವ್ಯಕ್ತಿಯಲ್ಲೇ ಆದರೂ ವ್ಯವಹಾರಕ್ಕೆ ಮೀರಿದ ಹೃದಯದ ಮೈತ್ರಿಯೇ ಇತ್ತು ಎಂದರೆ ಅದು ಪ್ರಕಟವಾಗದೇ ಇಷ್ಟು ಸುಪ್ತವಾಗಿರೋದು ದುಸ್ತರ, ಅಧು ಅಸಂಗತ ಎನಿಸುತ್ತೆ...." ಕವಿತಳಿಂದ ಈ ಸಾರಿ ಯಾವ ಪ್ರತಿಕ್ರಿಯೆಯೂ ಬರಲಿಲ್ಲ. ಅವಳದನ್ನು ಆಳವಾಗಿ ತೆಗೆದುಕೊಂಡಂತಿತ್ತು. ನಾನೇ ಮತ್ತೆ ಹೇಳಿದೆ, "ಅಲ್ಲದೇ ಇಲ್ಲಿ ಇನ್ನೊಂದು ಸ್ಪಷ್ಟವಾಗಿಲ್ಲ— ರತ್ನಗರ್ಭ ಅವಳಲ್ಲಿ ಆಸಕ್ತಿ ಹೊಂದಿದ್ದಾನೋ ಇಲ್ಲವೋ ಎಂಬುದು. ಅಲ್ಲಿ ಮುಂದೆ ಅದನ್ನು ಬೆಳೆಸುವಾಗ ಹೊಂದಿಸಿಕೊಳ್ಳಬಹುದು ಬಿಡು. ಅವನನ್ನ ವಿಮುಖನನ್ನಾಗಿಯೂ ಮಾಡಬಹುದು." ತಟ್ಟನೆ ಬಂತು ಅವಳಿಂದ ಪ್ರತಿಕ್ರಿಯೆ— "ಛೇ, ಅದು ಅಕ್ಕನ ಉದ್ದೇಶವಾಗಿರಲಾರದು. ರತ್ನಗರ್ಭ ಮೇಘಮಾಲೆಯಲ್ಲಿ ಆಸಕ್ತನಾಗಿಯೇ ಇದ್ದಾನೆ. ಅದು ಹಾಗೇ ಇರಬೇಕು." ಅವಳಿಗೆ ಸಿಟ್ಟು ಬಂದಂತಿತ್ತು. ಅಚ್ಚರಿಯಾಯಿತು. ಅವಳಿಗೂ ಅದು ಗೊತ್ತಾಯ್ತೆಂದು ಕಾಣುತ್ತದೆ; ತಟ್ಟನೇ ಗಂಟು ಸಡಲಿ ಮುಖ ಪ್ರಸನ್ನವಾಯಿತು. ಮುಗುಳ್ನಕ್ಕಳು. ದೂರದ ಜನತಾ ಬಜಾರದ ಬಿಲ್ಡಿಂಗಿನತ್ತ ನೋಡುತ್ತ, ಮುಂದುವರಿಸಿದೆ— "ಸರಿ... ಕವಿತ, ಈ ವರೆಗಿನ ಬರೆಹ ಓದಿದಾಗ ಯಾವುದೋ ಅಸಹಜತೆಯ ಎಳೆ ಸಿಕ್ಕುತ್ತೆ ಅಂದೆ ನೋಡು ಅದರಿಂದ ನನಗನಿಸುತ್ತೆ— ಅಕ್ಕ ಇದನ್ನ ಒಂದು ಕಾದಂಬರಿ ಬರೆಯೋ ಮನಃಸ್ಥಿತಿಯಲ್ಲಿ ಬರೆದಿಲ್ಲ. ಅದಕ್ಕೂ ಮಿಗಿಲಾದ

ಯಾವುದೋ ಮಾನಸಿಕ ತುಮುಲ ಅಲ್ಲಿದ್ದಿರಬೇಕು ಅನಿಸುತ್ತೆ. ಅಂದಹಾಗೆ ಅವರಿಗೆ ಯಾರಲ್ಲಾದರೂ ಪ್ರೇಮವಿತ್ತೆ...?"

"ಯಾಕೆ ಕೇಳಿದಿರಿ..." ಅಂದಳು ಬಾಯಲ್ಲಿ ಕಚ್ಚುತ್ತಿದ್ದ ಕರಡದ ಕಡ್ಡಿಯನ್ನು ಎಸೆದು.

"ಹಾಗೆನ್ನಿಸಿತು ಅಷ್ಟೇ. ಪ್ರೇಮವಿದ್ದು ಆ ವ್ಯಕ್ತಿಗೆ ಅದು ಗೊತ್ತಿರದೇ ಹೇಳಲಾರದೇ,ಹೇಳದೇ ಇರಲೂ ಆರದೇ ಆ ವ್ಯಕ್ತಿ ತನ್ನನ್ನು ಪ್ರೀತಿಸುತ್ತಾನೋ ಅಥವಾ ಇಲ್ಲವೋ ಎಂದು ತಿಳಿಯಲೂ ಆಗದ ಮಾನಸಿಕ ತುಮುಲ ಒದ್ದಾಟ ಭಾವೋದ್ರೇಕಕ್ಕೆ ಮೂಲವಾಗಿ ಮರಣಕ್ಕೆ ಕಾರಣವಾಯ್ತೋ ಅಂತ ಯೋಚಿಸಿದೆ ಅಷ್ಟೇ. ಅಂಥ ಮಾನಸಿಕ ತುಮುಲ ಭಯಂಕರವಾಗಿರುತ್ತೆ. ಮಾರಣಾಂತಿಕರುತ್ತೆ. ಒಮ್ಮೊಮ್ಮೆ ಎಂಥ ದೃಢ ಮನಸ್ಸಿನ ವ್ಯಕ್ತಿಯೂ ಸಾಧಾರಣ ಮನುಷ್ಯನಂತೆ ಅಲುಗಾಡಿ ಹೋಗುವುದುಂಟು."

"ಅಂಥದ್ದೇನೂ ಇಲ್ಲ ಎನ್ನಿಸುತ್ತೆ. ಖಂಡಿತ ಇಲ್ಲ ಬಿಡಿ..." ಎಂದು ಸುಮ್ಮನಾದಳು.

ಮತ್ತೆ ಅವಳೇ ಸುರು ಮಾಡಿದಳು: "ನಾನು ಯಾಕೆ ಹಾಗಂದೆ ಗೊತ್ತೆ...? ಅಕ್ಕ ಸಣ್ಣವಳಿರುವಾಗ ನನ್ನಂತೆ ಅಜ್ಜನ ಮನೆ–ಅದೇ ಭಟ್ಕಳ ಅಂದೆನಲ್ಲ– ಅಲ್ಲೇ ಇದ್ದಳು. ಅನಂತರ ದೊಡ್ಡವಳಾದ ಮೇಲೂ ಆಗಾಗ ಹೋಗಿ ಬಂದು ಮಾಡುತ್ತಾ ಇದ್ದಳು. ನಿಮಗೆ ಗೊತ್ತಿದ್ದ ಹಾಗೆ ಅವಳು ಅಂತಹ ಸುಂದರಿಯಾಗಿರಲಿಲ್ಲ. ಒಂದು ಲೆಕ್ಕದಲ್ಲಿ ಬಿಜ್ಜೋಲೆ ಗೌರಮ್ಮನಂತೇ ಅನ್ನಿ. ಲಕ್ಷ್ಮೀ – ಸರಸ್ವತಿ ಹೇಗೆ ಒಂದೇ ಕಡೆ ಇರುವುದಿಲ್ಲವೋ ಹಾಗೆ ಸೌಂದರ್ಯ, ಸರಸ್ವತಿ ಹೆಣ್ಣಿನಲ್ಲಿ ಒಂದೇ ಕಡೆ ಇರುವುದೂ ವಿರಳ. ಅವಳ ಹೆಚ್ಚಿನ ಗಮನ ಪುಸ್ತಕದ ಕಡೆಯೇ ಇರುತ್ತಿತ್ತು. ಭಟ್ಕಳದ ಅಜ್ಜನ ಮನೆಯ ಏಕಾಂತ, ಅಲ್ಲಿಯ ಕಡಲದಂಡೆ, ಊರ ಸುತ್ತಮುತ್ತಲ ಬೆತ್ತದ ಬಳ್ಳಿಯ ದಟ್ಟ ಕಾಡು ಸ್ಫೂರ್ತಿ ನೀಡಿತೇನೋ ಕಾಣುತ್ತೆ– ಆಗಲೇ ಅವಳು ಬರೆಯಲು ಸುರು ಮಾಡಿಯಾಗಿತ್ತು. ಅವಳ ಬರೆಹದಿಂದ, ಬರೆಹದಲ್ಲಿ ಅವಳು ಸೃಷ್ಟಿಸುತ್ತಿದ್ದ ಸುಂದರ ವ್ಯಕ್ತಿತ್ವಗಳಿಂದ ಆಕರ್ಷಿತನಾದ ಅಭಿಮಾನಿಗಳ ಗುಂಪೊಂದು ಅವಳಿಗಿತ್ತು. ಅಂಥ ಒಬ್ಬ ಅಭಿಮಾನಿ ನಿಯಮಿತವಾಗಿ ಪತ್ರವ್ಯವಹಾರ ಮಾಡುತ್ತಿದ್ದ. ಗಂಡು ಹೆಣ್ಣಿನ ಪರಿಚಯ ನೀವೇ ಹೇಳಿದಿರಲ್ಲ, ಹಾಗೆ ದೀರ್ಘಕಾಲ ಬರೀ ಪರಿಚಯವಾಗೀರೋದು ಕಠಿಣ. ಮೈತ್ರಿಯಾಯ್ತು. ಆಮೇಲೆ ಕ್ರಮೇಣ ಪತ್ರದ ಸಾಲುಗಳ ಹಿಂದೆ ಅನುರಾಗದ ಎಳೆಗಳು ಸೃಜಿತಗೊಂಡು ಆತ ನೇರವಾಗಿ ಅಕ್ಕನಿಗೆ ಬರೆಯತೊಡಗಿದ. ಅಕ್ಕನೂ ಅದರಲ್ಲಿ ಮುಳುಗಿದಳು. ಇನ್ನೇನು ನಿಶ್ಚಯವಾಗಬೇಕು, ಆತನಿಗೆ ಅಕ್ಕನನ್ನ ನೋಡೋ ಆಸೆಯಾಯ್ತು. ಬರೆದ. ಅದೇ ರೀತಿ ಭಟ್ಕಳಕ್ಕೆ ಬಂದ. ಬಸ್‌ಸ್ಟ್ಯಾಂಡಿನಲ್ಲೇ ಅಕ್ಕನನ್ನು ಕಂಡವನಿಗೆ ನಿರಾಸೆಯಾಗಿತ್ತು. ಆತ ಯಾವ ಅಪ್ಸರೆಯನ್ನು ಹುಡುಕಿ ಬಂದಿದ್ದನೋ ? ಅಕ್ಕನ ತಲೆಯಲ್ಲಿ ಅಡಗಿದ ಸೌಂದರ್ಯ ಅವನಿಗೆ ಕಾಣಿಸಲಿಲ್ಲ. ಹಾಗೇ ತಿರುಗಿ ಹೋದ. ಅಕ್ಕನಿಗೆ ಆಘಾತವಾಯ್ತು. ಅನಂತರ ಅವಳೆಂದೂ ತನ್ನ ಪ್ರೇಮದ ಬಗ್ಗೆ ಅಂತಹ ಮಹತ್ತರ - ಆಸೆಯಿಟ್ಟುಕೊಳ್ಳಲಿಲ್ಲ. ಮದುವೆಯ ಬಗ್ಗೂ ಅವಳಲ್ಲಿ ಅಂಥ ಆಸಕ್ತಿಯುಳಿಯಲಿಲ್ಲ. ವೈವಾಹಿಕ ಜೀವನ ಅದರ ರಸ ರುಚಿಯನ್ನು ಅವಳು ಬರೆಹದಲ್ಲೇ ಕಾಣುತ್ತಿದ್ದಳು..." ಹೇಳುತ್ತ ಹೇಳುತ್ತ ಕವಿತ ಯಾವುದೋ ಭಾವ ಸಮಾಧಿಯೊಳಗೆ, ನೆನಪಿನಾಳದೊಳಗೆ ಹುದುಗಿ ಹೋಗಿದ್ದಳು. ಆಗಲೇ ಕತ್ತಲಾಗತೊಡಗಿತ್ತು. ನವಾಜ ಗುಡ್ಡ ನಿರ್ಜನವಾಗತೊಡಗಿತ್ತು. 'ತೋಟಗಾರ್ಸ್ ಸೊಸೈಟಿ'ಯ ನಿಯೋನ್ ದೀಪ ಪಳಕ್‌ಪಳಕ್ ಎಂದು ಹೊತ್ತಿಕೊಂಡಿತು. "ಕತ್ತಲಾಯ್ತು, ಹೋಗೋಣವೇ?" ಎಂದೆ.

■

ಎರಡು ತಿಂಗಳಲ್ಲಿ ಇಪ್ಪತ್ತು ಹೊಸ ಪೇಜುಗಳನ್ನು ಸೇರಿಸಿದೆ. ನಿನ್ನೆ ರಾತ್ರಿ ಕುಳಿತು ಮತ್ತೆ ನಾಲ್ಕು ಪೇಜುಗಳನ್ನು ಬರೆದಿದ್ದೆ. ಹಿಂದಿನ ದಿನ ಎಳೆ ಹಿಡಿದು ಲೇಖನಿ ಓಡಿಸುವಾಗ ತಟ್ಟನೆ ತಡೆಯೊದಗಿ ಬರುತ್ತಿತ್ತು. ಬರಹ ಸರಳವಾಗಿ ಓಡುತ್ತಿರಲೇ ಇಲ್ಲ. ಸರಸ್ವತಿ ಯಾವುದೋ ಒಂದು ಗೌಪ್ಯವನ್ನು ಸಾಲಿಸುದ್ದಕ್ಕೂ ಮುಚ್ಚಿ

ಟ್ಟಂತೆ ಎನಿಸುತ್ತಿತ್ತು. ಅದರ ಎಳೆ ಹಿಡಿದು ಓಡಿಸಲು ಪ್ರಯಾಸವಾಗುತ್ತಿತ್ತು.

ಕವಿತ ಬಂದವಳು ಹೊಸ ಪೇಜುಗಳನ್ನೆತ್ತಿಕೊಂಡು ಓದುವುದರಲ್ಲಿ ತಲ್ಲೀನಳಾದಳು. "ಕವಿತ, ಒಂದು ಮಾತು ಕೇಳಲಾಗಿ, ನಾನೂ ನೋಡುತ್ತಿದ್ದೇನೆ–ನೀನು ಓದುವಾಗ ಪದೇ ಪದೇ ನಿಟ್ಟುಸಿರು ಬಿಡುತ್ತಿರುತ್ತೀಯ, ಮುಖ ಗಂಟು ಹಾಕುವುದು, ಸಡಲಿಸುವುದು ಮಾಡುತ್ತಿರುತ್ತೀಯ. ಯಾಕೆ...?"

ಅವಳು, "ಹೂಂ?" ಎಂದು ನನ್ನ ಮುಖವನ್ನೇ ದಿಟ್ಟಿಸಿದಳು. ಅನಂತರ ನಕ್ಕು ಏನಿಲ್ಲವೆಂಬಂತೆ ತಲೆಯಾಡಿಸಿ ಮತ್ತೆ ಓದುವುದರಲ್ಲಿ ಮಗ್ನಳಾಗಿ ಹೋದಳು. ಖುರ್ಚಿಗೊರಗಿ ಕಣ್ಣು ಮುಚ್ಚಿದೆ. ಅಲ್ಲಿ ಅಪೂರ್ವ ಶಾಂತಿ ನೆಲೆಸಿತ್ತು. ಕವಿತಳ ಉಸಿರಾಟದ ಶಬ್ದ ಪುಟಗಳನ್ನು ತಿರುವುವ ಸದ್ದು ಮಾತ್ರ ಕೇಳಿ ಬರುತ್ತಿತ್ತು.

"ಇನ್ನೂ ರತ್ನಗರ್ಭ ಮೇಘಮಾಲೆಗೆ ಪ್ರೇಮ ಪ್ರಕಟಣೆ ಮಾಡೋದೇ ಇಲ್ಲವಲ್ಲ...? ಇನ್ನೂ ಯಾವಾಗ? ಅದು ಅವಳನ್ನು ಕೊಂದ ಮೇಲೋ?" ಅಸಹನೆಯಿತ್ತು ಅವಳ ಮಾತಿನಲ್ಲಿ. ಮುಂಗುಳ್ನಕ್ಕೆ.

"ಕವಿತ, ಕಥೆಯಲ್ಲಿ ಪ್ರೇಮ ಪ್ರಕಟವಾದುದು ಮೊದಲು ಮೇಘಮಾಲೆಯಲ್ಲಿ. ನ್ಯಾಯವಾಗಿ ಅವಳೇ ತನ್ನಲ್ಲಿ ಪ್ರೇಮವಿದೆಯೆಂದು ರತ್ನಗರ್ಭನನ್ನು ಯಾವುದೋ ಒಂದು ರೀತಿಯಲ್ಲಿ ಎಚ್ಚರಿಸಬೇಕು. ಅವನಲ್ಲೂ ಅದನ್ನು ಉದ್ದೀಪನಗೊಳಿಸಬೇಕು."

"ಎಂಥ ಕ್ರೌರ್ಯ! ಹೆಣ್ಣು ಅದ್ಹೇಗೆ ಮೊದಲು ಪ್ರೇಮ ಪ್ರಕಟಣೆ ಮಾಡುತ್ತಾಳೆ ಹೇಳಿನೋಡುವ? ಅದು ಗಂಡಿನ ಕೆಲಸ..." ಅವಳ ಮಾತಿನಲ್ಲಿ ಆಳವಾದ ನಂಬುಗೆಯಿತ್ತು. ನೀವೂ ನಂಬಿ ಎಂಬ ಭಾವವಿತ್ತು, ಒತ್ತಾಯವಿತ್ತು. ನಾನು ಕಂಡಂತೆ ಸರಸ್ವತಿ ಭಾವುಕವಾದ ಪಾತ್ರಗಳನ್ನು ಸೃಷ್ಟಿಸಿದರೂ ಹೊರಗೆಂದೂ ಅತಿ ಭಾವುಕಳಲ್ಲ. ವಿಷಯವನ್ನು, ಘಟನೆಗಳನ್ನು ವಿವಿಧ ಕೋನಗಳಿಂದ ನೋಡಿ ವಿಮರ್ಶೆ ಮಾಡಿ ಪ್ರಾಮಾಣಿಕ ಅಭಿಪ್ರಾಯ ಕೊಡುವ ಗಟ್ಟಿ ಮನಸ್ಸು ಅವಳಿಗಿತ್ತು. ಆದರೆ ಈ ಕವಿತ ತುಂಬ ಭಾವುಕಳು. ಈ ಹಲವಾರು ದಿನಗಳಿಂದ ನಾನೇ ನೋಡಿದ್ದೆ. ಕೆಲವೊಮ್ಮೆ ಮಾತಿನ ಒಂದೊಂದು ಶಬ್ದವನ್ನೂ ಬಾಣವಾಡಿ ಅರ್ಥ ಕಲ್ಪಿಸಿ ಮನಸ್ಸಿಗೆ ತಾಗಿಸಿಕೊಳ್ಳುವ ಅವಳ ರೀತಿ ನನಗೆ ವಿಸ್ಮಯ ತರಿಸಿತ್ತು. ಹೀಗಾಗಿ ಅವಳೊಡನೆ ಯಾವುದನ್ನೂ ನಾನು ಕಟುವಾಗಿ ವಿಮರ್ಶೆ ಮಾಡುತ್ತಿರಲಿಲ್ಲ.

"ಕವಿತ, ಅದು ಸತ್ಯವೇ ಇದ್ದರೂ ಈ ಕಥೆಯಲ್ಲಿ ಅದು ಅಸಂಗತವಾಗುತ್ತೆ. ತಿಳಿಯಿತ...?" ಮಾತಿನ ಮಧ್ಯೆ ಅವಳ ಭುಜದ ಮೇಲಿಟ್ಟ ಕೈಯನ್ನು ತೆಗೆದುಕೊಂಡು, "ಕ್ಷಮಿಸು..." ಎಂದೆ. ಅವಳೇನೂ ಹೇಳಲಿಲ್ಲ. ಒಂದು ಕ್ಷಣದ ನಂತರ, "ರಜನೀಶ್, ಮೇಘಮಾಲೆಗೆ ಹೆದರಿಕೆಯಿದೆ. ಯಾಕೆ ಅಂತೀರಾ? ನಿಸರ್ಗವೇ ಗಂಡು ಹೆಣ್ಣಿನ ಪ್ರೇಮದಲ್ಲಿ ವೈವಿಧ್ಯವನ್ನಿಟ್ಟಿದೆ. ಹೆಣ್ಣು ಪ್ರೇಮಿಸಿದಾಗ ಅದನ್ನ ಸರ್ವಸ್ವ ಎಂದು ಸ್ವೀಕರಿಸುತ್ತಾಳೆ. ಗಂಡಿಗೆ ಹಾಗಲ್ಲ. ಅದು ಅವರಿಗೂ ಅಷ್ಟೇ ಮಹತ್ವದ್ದಾದರೂ ಜೀವನದ ಒಂದು ಭಾಗವಾಗಿರುತ್ತದೆ, ಜೀವನವೇ ಆಗಿರುವುದಿಲ್ಲ. ಜೀವನದ ಉಳಿದೆಲ್ಲ ವಿಷಯಗಳ ಮಧ್ಯೆ ಅವನಿಗೆ ಪ್ರೇಮ ಬೇಕು; ಹೆಣ್ಣಿಗೆ ಹಾಗಲ್ಲ. ಅದೇ ಜೀವನವಾಗಿರುತ್ತೆ. ಅದು ಮುರಿದಾಗ ಅವಳ ಅಸ್ತಿತ್ವವೇ ಮುರಿದು ಬಿದ್ದಂತೆ ಭಾವಿಸುತ್ತಾಳೆ. ಅದು ಅವಳಿಗೆ ಅಸಹನೀಯವಾಗುತ್ತೆ. ಇಲ್ಲಿ ಮೇಘಮಾಲೆಯೂ ಹಾಗೆಯೇ. ತಾನು ರತ್ನಗರ್ಭನಿಗೆ ಪ್ರೇಮವನ್ನರುಹಿ ಅದನ್ನಾತ ತಿರಸ್ಕರಿಸಿಬಿಟ್ಟರೆ ಅನಂತರ ಶೂನ್ಯವೇ ಎಂಬ ಭೀತಿ ಅವಳನ್ನು ಕಾಡುತ್ತಾ ಇದೆ. ಹೀಗಾಗಿ ಅವಳು ಆ ಪ್ರಸಂಗವನ್ನು ಮುಂದೆ ಹಾಕುತ್ತಾ ಹಾಕುತ್ತಾ ಹೋಗುತ್ತಾಳೆ. ಮನಸ್ಸಿನಲ್ಲಿ ಮಾತ್ರ ರತ್ನಗರ್ಭನನ್ನೇ ನೆನಸುತ್ತಾ ಕೊರಗುತ್ತಾಳೆ." ಕಥೆಯಲ್ಲೆಲ್ಲೂ ಪ್ರಕಟವಾಗದ ಅಂಶಗಳನ್ನು ಭಾವಗಳನ್ನು ಸೃಷ್ಟಿಸುತ್ತಾ ಹೋಗುತ್ತಿದ್ದ ಅವಳನ್ನು ಕೆಣಕಬೇಕೆನಿಸಿತು.

"ವಾದವೇನೋ ಚೆನ್ನಾಗಿದೆ. ಹಾಗಿದ್ದರೆ ನನ್ನ ವಾದವನ್ನು ಕೇಳು.– ರತ್ನಗರ್ಭ ಅವಳ ಆಸಕ್ತಿಯನ್ನು ತಪ್ಪಾಗಿ ತಿಳಿದು ಅವಳನ್ನು ಅನಾಮತ್ತಾಗಿ ಅಪ್ಪಿಕೊಂಡ, ಚುಂಬಿಸಿದ, ಬಲವಂತ ಮಾಡಿದ ಅನ್ನು ಆಗ...?" ಅವಳಿಂದ ಉತ್ತರ ಬರಲಿಲ್ಲ. ತಿರುಗಿ ನೋಡಿದೆ. ಅವಳ ದೃಷ್ಟಿ ನೆಲದ ಮೇಲೇನೋ ಹುಡುಕುತ್ತಿತ್ತು. ಅವಳ ಮುಖವೆಲ್ಲ ಕೆಂಪು ಕೆಂಪಾಗಿತ್ತು. ಅಚ್ಚರಿಯಾಯ್ತು. ನಿರೀಕ್ಷೆಯಿಲ್ಲದೆ ತಟಸ್ಥಳಾಗಿ ಬಿಡುವ ಇವಳು ಕೆಂಪು ಕಪ್ಪಾಗಿನ

ಅನಿರೀಕ್ಷಿತವಾಗಿ ಸ್ಪಂದಿಸುತ್ತಿದ್ದಳು.

ರಸ್ತೆಯ ಮೇಲೆ ಯಾರೋ ಖಾಲಿ ಪೀಪಾಯಿಯನ್ನು ಗಡಗಡ ಎಂದು ಉರುಳಿಸಿಕೊಂಡು ಹೋಗುತ್ತಿದ್ದರು. ಬದಿ ಮನೆಯ ಬಚ್ಚಲಿನಲ್ಲಿ ಚೊರ್ರ್ ಎಂದು ನೀರು ಟಬ್ಬಿನಲ್ಲಿ ಬೀಳುವ ಶಬ್ದ ಐದು ನಿಮಿಷ ಬರುತ್ತಿದ್ದು, ಬಂದಾಯ್ತು.

"ಕವಿತ, ಸರಸ್ವತಿ ಈ ಕಾದಂಬರಿ ಬರೆದದ್ದು ಯಾವಾಗ ?" ಎಂದು ಕೇಳಿದೆ.

"ಸಾಯಲು ಕೆಲ ದಿನಗಳ ಹಿಂದೆ," ವಂದಳು. ಇನ್ನೂ ಯಾವುದೋ ಯೋಚನೆಯಲ್ಲಿದ್ದಂತಿತ್ತು. ಮಾತು ಬೆಳೆಸುವ ಇಚ್ಛೆಯಿದ್ದಂತಿರಲಿಲ್ಲ. ಐದು ನಿಮಿಷ ತಡೆದು,"ನಾನಿನ್ನು ಬರುತ್ತೇನೆ"ಎನ್ನುತ್ತಾ ಎದ್ದಳು. "ನಾಳೆ ಬರುತ್ತೀಯ...?"ಎಂದೆ. ತಿರುಗಿ ನಿಂತು, "ಬರಬೇಕಾ...?" ಎಂದಳು ಪ್ರತಿಯಾಗಿ. ಅವಳಿನ್ನೂ ಅದೇ ಮೂಡಿನಲ್ಲಿದ್ದಂತಿತ್ತು. ನನ್ನಿಂದ ಉತ್ತರ ಬಾರದಾಗ ಮನೆಯತ್ತ ನಡೆಯ ತೊಡಗಿದಳು.

*

ರಾತ್ರಿ ಸರಸ್ವತಿ ಬರೆದ ಇನ್ನೊಂದು ಕಾದಂಬರಿ ತಿರುವಿ ಹಾಕಿದೆ. ಈ ಅರ್ಧ ಕಾದಂಬರಿಯನ್ನು ಆಮೂಲಾಗ್ರವಾಗಿ ಲಕ್ಷ್ಯವಿಟ್ಟು ಪರಿಶೀಲಿಸಿದೆ. ಮತ್ತೊಮ್ಮೆ ಓದಿದೆ. ತಟ್ಟನೆ ಹಾದಿ ಗೋಚರಿಸಿದಂತೆ ಭಾಸವಾಗತೊಡಗಿತು. ಅರಣ್ಯದ ಮಧ್ಯೆ ಎಲ್ಲೋ ಕಾಲುದಾರಿಯಂತೆ ಆ ಮೇಲೆ ಸ್ಫುಟವಾಗಿ ನಂತರ ಎದ್ದು ಕಾಣುವ ರಾಜಮಾರ್ಗದ ರೀತಿಯಲ್ಲಿ. ನಿರ್ಧಾರದ ಹಿಂದೇ ತೆರೆದು ಬಿತ್ತು ಎಲ್ಲ. ಕಥೆ ತಟ್ಟನೆ ಬೆಳೆಯತೊಡಗಿತು. ಅಚ್ಚರಿ ಹುಟ್ಟಿಸುವಂತೆ ತನ್ನಿಂದ ತಾನೇ ಬೆಳೆಸಿಕೊಳ್ಳುತ್ತ ಹೋಯ್ತು. ಅದೇ ರಾತ್ರಿ ನನಗರಿವಿಲ್ಲದಂತೆ ಮುನ್ನೂರು ಪುಟಗಳ ಕಾದಂಬರಿ ಪೂರ್ಣಗೊಂಡಿತು.

ಬೆಳಿಗ್ಗೆ ಕವಿತ ಬಂದಾಗ ಕಾದಂಬರಿ ಮೇಜಿನ ಮೇಲೇ ಇತ್ತು. ಅವಳು ಅದನ್ನೆತ್ತಿಕೊಂಡು ಲಗುಬಗೆಯಿಂದ ಓದತೊಡಗಿದಳು. ನಾನು ಕಣ್ಣು ಮುಚ್ಚಿ ಖುರ್ಚಿಗೊರಗಿ ಮೌನಿಯಾದೆ. ಅವಳ ರೋಷದ ಸ್ವರದಿಂದ ತಟ್ಟನೆ ಕಣ್ಣು ಬಿಟ್ಟೆ. "ಇಲ್ಲ ರಜನೀಶ್, ಇದು ಹೀಗಾಗಲಿಕ್ಕಿಲ್ಲ. ಇದು ಅನ್ಯಾಯ, ಕೊಲೆ, ಮೇಘಮಾಲೆಯನ್ನು ರತ್ನಗರ್ಭ ತಿರಸ್ಕರಿಸಲಾರ. ಅಂಥ ಹೃದಯವಂತೆಯನ್ನು ತಿರಸ್ಕರಿಸಲು ಕಾರಣವಾದರೂ ಬೇಡವೇ ರಜನೀಶ್..." ಬರಬರುತ್ತ ದನಿಯಲ್ಲಿ ರೋಷ ಕೊಚ್ಚಿ ಹೋಗಿ ನಿಷಾದನ ಶರಾಘಾತಕ್ಕೆ ಸಿಕ್ಕ ಕ್ರೌಂಚ ಪಕ್ಷಿಯ ಆಕಂದ್ರನದಂತಿತ್ತು. ಆಕ್ರಂದನದಲ್ಲೂ ಬೇಡಿಕೆಯಿದ್ದಂತಿತ್ತು. "ಕವಿತ, ನೀನೇ ಹೇಳಿದ್ದೆಯಲ್ಲ ಅಕ್ಕ ಹೇಳುತ್ತಿದ್ದಳು ಎಂದು– ಬರೆಯುವಾಗ ಲೇಖಕ ಅದರಲ್ಲಿ ಏಕೀಭವಿಸಬೇಕು. ಅದು ಅವನದೇ ಕಥೆಯಾಗಬೇಕು; ಇಲ್ಲವಾದರೆ ಅದು ಅವನ ಶವದಂತಿರುತ್ತೆ ಎಂದು. ನಿನ್ನೆ ನಾನು ಅದನ್ನು ಕಂಡುಕೊಂಡೆ. ಎರಡು ತಿಂಗಳಲ್ಲಿ ತೊಳಲಾಡಿದರೂ ಕೇವಲ ಇಪ್ಪತ್ತು ಪುಟ ಬರೆದೆ. ಅದೂ ನನಗೆ ಅತೃಪ್ತಿಕರವಾಗೇ ಇತ್ತು. ಕಾರಣ ಆ ಕಥೆಯಲ್ಲಿ ನಾನು ಏಕೀಭವಿಸುತ್ತಿರಲೇ ಇಲ್ಲ. ನಿನ್ನೆ ಎಲ್ಲ ಸ್ಫುಟವಾಯ್ತು. ಏಕೀಭವಿಸಿದೆ. ನನ್ನದೇ ಕಥೆಯಾಯ್ತು. ಅಂದ ಮೇಲೆ ಇದು ಸ್ಪಷ್ಟ. ಈ ತುದಿ ಅನಿವಾರ್ಯವಾಗಿತ್ತು."

"ಅಂದರೆ... " ಎಲ್ಲಿಂದಲೋ ಬಂದಂತಿತ್ತು ದನಿ. ಅಪ್ರಯತ್ನವಾಗಿ ಗಂಟಲು ಹಿಡಿಯಿತು.

"ಅದೇ... ಕವಿತ, ಮೇಘಮಾಲೆಯ ಪ್ರೇಮ ಅವರಿಗೆ ಅರಿವಾದಾಗ ತಡವಾಗಿಬಿಟ್ಟಿತ್ತು. ರತ್ನಗರ್ಭನಿಗೆ ಆಗಲೇ ಬೇರೆಡೆಗೆ ನಿಶ್ಚಯವಾಗಿ ಬಿಟ್ಟಿತ್ತು. ಪ್ರಕಟಿಸದಿದ್ದರೂ ರತ್ನಗರ್ಭ ಮೇಘಮಾಲೆಯನ್ನು ತುಂಬಾ ಪ್ರೀತಿಸುತ್ತಿದ್ದ. ಆದರೆ... ಕಾಲ ಮಿಂಚಿತ್ತು."

"ಹಾಗಿದ್ದರೆ..." ಎನ್ನುತ್ತ ನನ್ನ ಮುಖವನ್ನೇ ನಿರುಕಿಸಿದಳು ಅವಳು. ತಲೆಯಲುಗಿಸಿದೆ ನಾನು. ಅವಳು ಹಸ್ತ ಪ್ರತಿಯನ್ನು ಒರಗಿಸಿಕೊಳ್ಳುವಾಗ ಟಪ್ಪೆಂದು ಹನಿ ಬಿದ್ದು ಮೇಜಿನ ಮೇಲೆ ಸದ್ದು ಮಾಡಿತು. ಬಾಗಿಲ ಹತ್ತಿರ ಒತ್ತಿ ಹಿಡಿದದ್ದು ಸಶಬ್ದವಾಗಿ ಹೊರಬಿತ್ತು. ಅವಳು ಮರೆಯಾಗಿ ಹೋದಳು. ಕಟ್ಟಿದ ಗಂಟಲು ಹಾಗೇ ಇದ್ದಂತೆ ಪಾದದ ಮೇಲೆ ಉದುರುವ ಹನಿಗಳು ಬಿಸಿ ಮುಟ್ಟಿಸುತ್ತ ತಣ್ಣಗಾಗತೊಡಗಿದುವು......... ಆವಿಯಾಗತೊಡಗಿದುವು. ✡

ರೈತರ ಮನೆ ಬಾಗಿಲಿಗೇ ಬಂದ

"ನೇಗಿಲು ಭಾಗ್ಯ"

ರೈತರ ಕಲ್ಯಾಣಕ್ಕಾಗಿ ಕಂಕಣಬದ್ಧವಾಗಿರುವ ಕರ್ನಾಟಕ ಸರ್ಕಾರದಿಂದ ಇನ್ನೊಂದು ಕೊಡುಗೆ


- ಬೇಸಾಯವು ನಮ್ಮ ಅರ್ಥ ವ್ಯವಸ್ಥೆಯ ಬೆನ್ನೆಲುಬು. ಕೃಷಿ ಅಭಿವೃದ್ಧಿಯೇ ದೇಶದ ಪ್ರಗತಿಗೆ ಸಾಧನ. ಭೂ ಒಡೆತನದ ಹಕ್ಕನ್ನು ಪಡೆದಿರುವ ಮಾಜಿ ಗೇಣಿದಾರರಿಗೆ ಆರ್ಥಿಕ ಸಹಾಯ ನೀಡುವುದು ಹಾಗೂ ಭೂ ಸುಧಾರಣೆ ಕಾಯಿದೆಯನ್ವಯ ಹೆಚ್ಚುವರಿ ಭೂಮಿಯನ್ನು ಪಡೆದವರಿಗೆ ಕೃಷಿ ಅಭಿವೃದ್ಧಿಗೊಳಿಸಲು ನೆರವಾಗುವುದೇ ಈ ಯೋಜನೆಯ ಉದ್ದೇಶ.
- 'ನೇಗಿಲು ಭಾಗ್ಯ' ಯೋಜನೆಯನ್ವಯ ಸರ್ಕಾರದಿಂದ ಭೂಮಿಯನ್ನು ಪಡೆದಿರುವ ಪ್ರತಿ ಕುಟುಂಬಕ್ಕೂ ಒಂದು ಜೊತೆ ಎತ್ತುಗಳ ಬೆಲೆಯ ಶೇಕಡಾ ೫೦ ರಷ್ಟು ಹಣವನ್ನು ಸಹಾಯ ಧನವಾಗಿ ನೀಡಲಾಗುವುದು. ಸಹಾಯ ಧನದ ಗರಿಷ್ಠ ಮಿತಿ ೧೫೦೦ ರೂ. ಆದರೆ ಬೇರೆ ಮೂಲಗಳಿಂದ ಇದೇ ಉದ್ದೇಶಕ್ಕಾಗಿ ಸಹಾಯಧನ ಪಡೆದಿರಬಾರದು.
- ಸಣ್ಣ ಮತ್ತು ಅತಿ ಸಣ್ಣ ರೈತರು ಎತ್ತುಗಳನ್ನು ಕೊಳ್ಳಲು ಇಚ್ಛಿಸಿದಲ್ಲಿ ಅಂತಹ ಮಾಜಿ ಗೇಣಿದಾರರಿಗೆ ಎತ್ತುಗಳ ಬೆಲೆಯ ಮೂರನೆಯ ಒಂದು ಭಾಗದಷ್ಟು ಹಣವನ್ನು ಸಹಾಯಧನವಾಗಿ ನೀಡಲಾಗುವುದು. ಇದರ ಗರಿಷ್ಠ ಮಿತಿ ೧೦೦೦ ರೂ. ಗಳು.
- ಗೇಣಿದಾರರಾಗಿದ್ದು, ಈಗ ಹೊಲದ ಮಾಲಿಕರಾಗಿರುವ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಕೃಷಿ ಉಪಕರಣಗಳನ್ನು ಕೊಳ್ಳಲು ೫೦೦ ರೂ. ಗಳ ವರೆಗೆ ಆರ್ಥಿಕ ನೆರವು ನೀಡಲಾಗುವುದು.
- ಈ ಯೋಜನೆಗಾಗಿ ಈ ವರ್ಷ ಒಂದು ಕೋಟಿ ರೂ. ಗಳನ್ನು ಒದಗಿಸಲಾಗಿದೆ.

ರೈತನ ನೆಮ್ಮದಿ — ನಾಡಿಗೆ ಸಮೃದ್ಧಿ

ಪ್ರಕಟಣೆ: **"ಕರ್ನಾಟಕ ಸರ್ಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆ"**

DIP 555/82-83

ನೂರು ವರ್ಷ ಕಂಡ ಅಂಚೆ ಉಳಿತಾಯ




ಎಂ. ಎಂ. ಇನಾಮದಾರ

ಅಂಚೆ ಉಳಿತಾಯ ಬ್ಯಾಂಕು ಪ್ರಾರಂಭವಾಗಿ ಈ ವರ್ಷ ಎಪ್ರಿಲ್ ೧ ರಂದು ನೂರು ವರ್ಷಗಳಾಯಿತು. ೧-೪-೧೮೮೨ ರಂದು ಚಿಕ್ಕ ಪ್ರಮಾಣದಲ್ಲಿ ಪ್ರಾರಂಭವಾದ ಈ ಉಳಿತಾಯ ಯೋಜನೆಯು ಈಗ ದೇಶದಲ್ಲಿಯೇ ಅತಿ ದೊಡ್ಡ ಉಳಿತಾಯ ಬ್ಯಾಂಕ್ ಆಗಿ ಬೆಳೆದುಬಂದಿದೆ. ೧೮೮೨-೮೩ ರಲ್ಲಿ ಕೇವಲ ೪,೦೦೦ ಶಾಖೆಗಳಿದ್ದು ೪೦,೦೦೦ ಠೇವಣಿದಾರರಿದ್ದರು. ಆಗ ಠೇವಣಿಯು ಮೊತ್ತವು ಸುಮಾರು ೨೮ ಲಕ್ಷ ರೂಪಾಯಿಗಳಷ್ಟಿತ್ತು. ೧೯೪೭ರಲ್ಲಿ ೪೯ ಲಕ್ಷ ಠೇವಣಿದಾರರಿದ್ದು ಮೊತ್ತವು ೧೮೨ ಕೋಟಿಗೆ ಏರಿತು. ೧೯೭೪ ರಲ್ಲಿ ಠೇವಣಿಯು ಮೊತ್ತವು ೭,೦೦೦ ಕೋಟಿ ರೂಪಾಯಿಗಳನ್ನು ತಲುಪಿತು. ಈಗ ೧೯೮೨ ರಲ್ಲಿ ೫ ಕೋಟಿ ಉಳಿತಾಯ ಖಾತೆಗಳಿದ್ದು ಠೇವಣಿಯ ಒಟ್ಟು ಮೊಬಲಗು ೯,೦೦೦ ಕೋಟಿಯಾಗಿದೆ. ಅಂಚೆ ಉಳಿತಾಯ ಬ್ಯಾಂಕಿನಲ್ಲಿಯ ಠೇವಣಿಯ ರಕಮು ೧೯೮೦ ರಲ್ಲಿ ಎಲ್ಲ ವಾಣಿಜ್ಯ ಬ್ಯಾಂಕುಗಳ ಠೇವಣಿಯ ಶೇಕಡಾ ೨೦ ರಷ್ಟು ಇದ್ದು ೧೯೮೨ ರಲ್ಲಿ ಅದು ಶೇಕಡಾ ೨೩ ಆಗಿದೆ.

ಅಂಚೆ ಉಳಿತಾಯ ಯೋಜನೆಯು ಪೂರ್ವದಲ್ಲಿ ಈಸ್ಟ್ ಇಂಡಿಯಾ ಕಂಪನಿಯು ೧೮೩೪-೩೫ ರಲ್ಲಿ

ಸರಕಾರಿ ಉಳಿತಾಯ ಬ್ಯಾಂಕ್ ಪದ್ಧತಿಯನ್ನು ಪ್ರಾರಂಭಿಸಿತ್ತು. ೪-೮-೧೮೩೪ ರ ಮದ್ರಾಸ ಗ್ಯಾಜೆಟ್ಟಿನ ಪ್ರಕಾರ ಮದ್ರಾಸಿನಲ್ಲಿ ಸರಕಾರಿ ಉಳಿತಾಯ ಬ್ಯಾಂಕು ಆಗಷ್ಟೆ ಪ್ರಾರಂಭಿಸಲ್ಪಟ್ಟಿತು. ಅದು ಮಂಗಳವಾರ ಮತ್ತು ಶುಕ್ರವಾರ ಮಾತ್ರ ಕೆಲಸ ಮಾಡುತಿತ್ತು. ಅದು ಆಗ ಕೊಡುತ್ತಿದ್ದ ಬಡ್ಡಿ ಶೇಕಡಾ ೪ ರಷ್ಟು. ೨-೪-೧೮೩೫ ರ ಮುಂಬಯಿ ಗ್ಯಾಜೆಟ್ಟಿನ ಪ್ರಕಾರ ಅಲ್ಲಿ ೧-೫-೧೮೩೫ ರಂದು ಸರಕಾರೀ ಉಳಿತಾಯ ಬ್ಯಾಂಕು ಪ್ರಾರಂಭವಾಯಿತೆಂದು ಸರಕಾರದ ಕಾರ್ಯದರ್ಶಿಗಳಾಗಿದ್ದ ಎಲ್. ಆರ್. ರೀಡ್ ಪ್ರಕಟಿಸಿದ್ದಾರ. ಅಲ್ಲಿಯೂ ಶೇಕಡಾ ೪ ರಷ್ಟು ಬಡ್ಡಿಯನ್ನು ಕೊಡಲಾಗುತ್ತಿತ್ತು. ಆಗಿನ ಕಾಲದ ಹಣದ ಅಧಿಕ ಮೌಲ್ಯವನ್ನು ಗಮನಿಸಿದರೆ ಇದು ಒಳ್ಳೆ ಉತ್ತೇಜನಕಾರೀ ಬಡ್ಡಿಯ ದರವಾಗಿತ್ತು. ಯಾಕೆಂದರೆ ನೂರು ವರ್ಷಗಳ ನಂತರ ಈಗ ೫.೫% ಮಾತ್ರ ಬಡ್ಡಿ ದೊರೆಯುತ್ತದೆ. ಈ ಉಳಿತಾಯ ಬ್ಯಾಂಕುಗಳಿಗೆ ಪ್ರೆಸಿಡೆನ್ಸಿ ಉಳಿತಾಯ ಖಾತೆ ತೆರೆಯುತ್ತಿದ್ದ. ಅವು ೧೮೮೬ ರಲ್ಲಿ ಅಂಚೆ ಉಳಿತಾಯ ಬ್ಯಾಂಕಿನಲ್ಲಿ ವಿಲೀನವಾದವು.



"ಇನ್ನೊಂದು ತಿಂಗಳಲ್ಲಿ ನಿಮಗೆ ಒಳ್ಳೆ ಕಾಲ ಬರುತ್ತೆ ಅಂತ್ಹೇಳಿ ಒಂದೊಸಾರ್ಯಲ್ಲ ಸ್ವಾಮಿ..."

೧೮೭೦ ರಲ್ಲಿ ಖಜಾನೆಗಳಲ್ಲಿ ಜಿಲ್ಲಾ ಉಳಿತಾಯ ಬ್ಯಾಂಕುಗಳನ್ನು ಪ್ರಾರಂಭಿಸಲಾಯಿತು. ಅದರಲ್ಲಿ ಕನಿಷ್ಠ ಠೇವಣಿ ನಾಲ್ಕಾಣೆಯಾಗಿದ್ದು ಗರಿಷ್ಠ ಮಿತಿಯು ರೂ. ೩,೦೦೦ ಆಗಿತ್ತು. ಬಡ್ಡೀದರ ೪ ೩/೪ %. ಇದು ೧೮೮೬ ರಲ್ಲಿ ಅಂಚೆ ಉಳಿತಾಯ ಬ್ಯಾಂಕಿನಲ್ಲಿ ವಿಲೀನವಾಯಿತು. ೧-೪-೧೮೮೯ ರಿಂದ ಠೇವಣಿಯ ವಾರ್ಷಿಕ ಮಿತಿಯನ್ನು ರೂ. ೫೦೦ ರಿಂದ ರೂ. ೨೦೦ಕ್ಕೆ ಇಳಿಸಲಾಯಿತು. ಮತ್ತು ಗರಿಷ್ಠ ಮಿತಿ ರೂ. ೩,೦೦೦ ರಿಂದ ರೂ. ೨,೦೦೦ ಕ್ಕೆ ಇಳಿಯಿತು. ೧೮೯೪ ರಲ್ಲಿ ಬಡ್ಡಿಯ ದರವನ್ನು ಶೇಕಡಾ ೩ ೧/೪ ರಿಂದ ೩ ೧/೮ ಕ್ಕೆ ಇಳಿಸಲಾಯಿತು.

ಅಂಚೆ ಉಳಿತಾಯ ಬ್ಯಾಂಕುಗಳಲ್ಲಿ ಒಟ್ಟು ಮೊಬಲಗು ಕೆಲವು ಅವಧಿಯಲ್ಲಿ ಅನೇಕ ಕಾರಣದಿಂದ ಉಳಿತಾಯವನ್ನು ಕಂಡಿದೆ. ೧೯೧೪-೧೮ ರಲ್ಲಿ ಠೇವಿನ ಮೊತ್ತ ಕಡಿಮೆ ಆಯಿತು. ಮುಂದೆ ೧೯೦೮ ರಲ್ಲಿ ಉಳಿತಾಯ ಖಾತೆಗಳ ಸಂಖ್ಯೆ ಏರಿತು. ಆಗ ಒಬ್ಬ ವ್ಯಕ್ತಿಯು ತನ್ನ ಮತ್ತು ಅಲ್ಪವಯಿಯ ಹೆಸರಿನಲ್ಲಿ ಅನೇಕ ಖಾತೆ ತೆರೆಯಬಹುದಾಗಿತ್ತು. ಧಾರವಾಡದ ಒಬ್ಬ ವ್ಯಕ್ತಿಯು ೮೩ ಖಾತೆಗಳನ್ನು ತೆರೆದಿದ್ದನು. ಸುರತದ ವ್ಯಕ್ತಿಯೊಬ್ಬನ ಹೆಸರಿನಲ್ಲಿ ೩೦ ಖಾತೆಗಳಿದ್ದವು. ಮೊದಲನೆಯ ಮಹಾಯುದ್ಧದ ಬಿಸಿ ಅಂಚೆ ಉಳಿತಾಯ ಬ್ಯಾಂಕಿಗೆ ತಾಗದೇ ಇರಲಿಲ್ಲ. ಆಗ ಠೇವಣಿಯ ಮೊತ್ತ ೨೩ ಕೋಟಿಗಳಿಂದ ೧೫ ಕೋಟಿ ರೂಪಾಯಿಗೆ ಇಳಿಯಿತು. ಯುದ್ಧ ಮುಗಿದ ಮೇಲೆ ಠೇವಣಿಯು ಚೇತರಿಸಿಕೊಂಡಿತು.

ಅಂಚೆ ಉಳಿತಾಯ ಬ್ಯಾಂಕು ವಾಣಿಜ್ಯ ಬ್ಯಾಂಕುಗಳು ವಿರಳವಾಗಿದ್ದ ಕಾಲದಲ್ಲಿ ವೈಯಕ್ತಿಕ ಉಳಿತಾಯಕ್ಕೆ ಭದ್ರತೆಯನ್ನು ಒದಗಿಸಿತು. ಅದರ ಜೊತೆ ಉಳಿತಾಯ ಪ್ರವೃತ್ತಿಯನ್ನು ಉತ್ತೇಜಿಸುವುದರಿಂದ ಇದು ದೇಶದ ಅಭಿವೃದ್ಧಿ ಯೋಜನೆಗಳಿಗಾಗಿ ಸಂಪನ್ಮೂಲ

ಒದಗಿಸುವ ಸಾಧನಗಳಲ್ಲೊಂದಾಗಿದೆ. ಇದು ಗ್ರಾಮೀಣ ಭಾಗದಲ್ಲಿ ವ್ಯಾಪಕವಾಗಿ ವಿಸ್ತಾರಗೊಂಡಿದ್ದು ಪ್ರೀಸಾವರ್ನ್ಸ ಬ್ಯಾಂಕು ಆಗಿ ಬೆಳೆದಿವೆ. ಅಂಚೆ ಖಾತೆಯ ಸರಾಸರಿ ಠೇವಣಿಯು ಮೊದಲಿಗೆ ೧೯೮೦ ರಲ್ಲಿ ರೂ. ೫೬೦ ಇತ್ತು. ಅದೇ ಕಾಲದಲ್ಲಿ ವಾಣಿಜ್ಯ ಬ್ಯಾಂಕುಗಳಲ್ಲಿ ಸರಾಸರಿ ರೂ. ೯೪೦ ಇತ್ತು. ಇದರಲ್ಲಿ ೨೦% ಗ್ರಾಮೀಣ ಠೇವಣಿ ಇದ್ದರೆ ವಾಣಿಜ್ಯ ಬ್ಯಾಂಕುಗಳಲ್ಲಿ ಅದು ೧೦% ಇರುತ್ತದೆ. ಇದರಿಂದಾಗಿ ೧೯೭೪ ರಲ್ಲಿ ೩,೨೫೦ ಕೋಟಿ ಇದ್ದ ಠೇವಣಿ ಮೊತ್ತ ೧೯೮೭ ರಲ್ಲಿ ೯,೦೦೦ ಕೋಟಿಗಳಿಗೇರಿದ್ದು ಇದರ ವರ್ಧಿಸುತ್ತಿರುವ ಜನಪ್ರಿಯತೆಯು ದ್ಯೋತಕವಾಗಿದೆ.

ಇತ್ತೀಚೆಗೆ ಹೆಚ್ಚಿನ ಸೌಲಭ್ಯ ಒದಗಿಸಲು ಅನೇಕ ಸುಧಾರಣೆಗಳನ್ನು ಮಾಡಲಾಗಿದೆ. ಹಣ ತೆಗೆಯುವುದಕ್ಕೆ ಚೆಕ್ ಸೌಲಭ್ಯ ಒದಗಿಸಲಾಗಿದೆ. ಕನಿಷ್ಠ ರೂ. ೨೦೦ ಶಿಲ್ಕು ಇರುವ ಖಾತೆಗಳಿಗಾಗಿ ಬಹುಮಾನ ರೂಪದ ಲಾಟರಿ ಯೋಜನೆ ಮಾಡಲಾಗಿದ್ದು ಆರು ತಿಂಗಳಿಗೊಮ್ಮೆ ೨೫ ಲಕ್ಷ ರೂಪಾಯಿಗಳನ್ನು ಬಹುಮಾನ ರೂಪದಲ್ಲಿ ಹಂಚಲಾಗುತ್ತಿದೆ. ಇವಲ್ಲದೇ ಅಂಚೆ ಉಳಿತಾಯ ಸರ್ಟಿಫಿಕೇಟು ಮೊದಲಾದ ಅನೇಕ ತರಹದ ಹಣ ಹೂಡುವಿಕೆಯ ಸೌಲಭ್ಯ ಒದಗಿಸಲಾಗಿದೆ. ಇನ್ನೊಂದು ಮಹತ್ವದ ಸುಧಾರಣೆಯೆಂದರೆ ಗ್ರಾಮೀಣ ಜನರಿಗೆ ಹಣ ತೆಗೆಯಲು ಅನುಕೂಲವಾಗಲೆಂದು ಅವರ ಫೋಟೋ ಇರುವ ಗುರುತಿನ ಕಾರ್ಡುಗಳನ್ನು ಕೊಡಲಾಗುತ್ತಿದೆ.

ಇಂದು ಅಂಚೆ ಉಳಿತಾಯ ಬ್ಯಾಂಕು ದೇಶಾದ್ಯಂತ ಶಾಖೆಗಳ ಕೇವಲ ಬೃಹತ್ ಬ್ಯಾಂಕಿಂಗ್ ಸಂಸ್ಥೆಯಾಗಿ ಬೆಳೆದಿದ್ದು ೧ ಲಕ್ಷ ೪೦ ಸಾವಿರ ಶಾಖೆಗಳು ಕೆಲಸ ಮಾಡುತ್ತಿವೆ. ಅವುಗಳಲ್ಲಿ ೧ ಲಕ್ಷ ೨೫ ಸಾವಿರ ಗ್ರಾಮೀಣ ಭಾಗದಲ್ಲಿಯೇ ಇರುತ್ತವೆ. ಇದು ಗ್ರಾಮೀಣ ಪ್ರೀಸಾವರ್ನ್ಸ ಬ್ಯಾಂಕು ಎಂಬುದಕ್ಕೆ ಸಜೀವ ಸಾಕ್ಷಿಯಾಗಿದೆ. ✡

ಬಾನಿಲ್ಲಿದ್ದ ಭಗವಂತ ಭೂಮಿಗೆ ಬಂದು ಮನುಷನನ್ನು ಕಂಡು "ಭೂಮಿ ಹೇಗಿದೆ?" ಎಂದು ಕೇಳಿದ.

"ಭೂಮಿ ಅಧ್ಯಾತ್ಮದಲ್ಲಿ ಮೈಮರೆತಿದೆ," ಎಂದ ಮನುಷ್ಯ. ನಂತರ ಭೂಮಿಯಿಂದ ಬಾನಿಗೆ ಹೋಗಿ ಮನುಷ್ಯ ಭಗವಂತನನ್ನು ಕಂಡು, "ಬಾನು ಹೇಗಿದೆ?" ಎಂದು ಕೇಳಿದ.

"ವಿಜ್ಞಾನ ನನ್ನನ್ನು ಸಮೀಪಿಸುತ್ತಿದೆ!" ಎಂದ ಭಗವಂತ.

* * *

ವೇದಾಂತ ದೊಡ್ಡದೋ? ವಿಜ್ಞಾನ ದೊಡ್ಡದೋ? ಎಂದು ಇಬ್ಬರೊಳಗೆ ಚರ್ಚೆ ಎದ್ದಿತು. "ವೇದಾಂತವೇ ದೊಡ್ಡದು!" ಎಂದರು ದೇಸಿಕರು.

"ವಿಜ್ಞಾನವೇ ದೊಡ್ಡದು!" ಎಂದರು ಒಬ್ಬ ವಿಜ್ಞಾನಿ.

ಎರಡು ವಿದ್ಯುತ್ ತಂತಿಗಳನ್ನು ಜೋಡಿಸಿ ಒಂದು ಬಲ್ಬನ್ನು ಉರಿಯಹಚ್ಚಿ ತೋರಿಸಿದರು ವಿಜ್ಞಾನಿ.

"ಶಕ್ತಿಯೂ, ಶಿವನೂ ಸರಸವಾಡುತ್ತಿದ್ದಾರೆ!" ಎಂದ ವೇದಾಂತಿ. ಬಲ್ಬನ್ನು ಆರಿಸಿ ತೋರಿಸಿದರು ವಿಜ್ಞಾನಿ.

"ಅವರೀಗ ನಿದ್ರಿಸುತ್ತಿದ್ದಾರೆ! ಗದ್ದಲ ಮಾಡದೆ ಮನೆಗೆ ಹೋಗೋಣ ಬನ್ನಿ", ಎಂದು ಕರೆದರು ವೇದಾಂತಿ!!

— ಬಿ. ಜಿ. ರಾಮಚಂದ್ರ

ಶ್ವೇತ ನೌಕೆ

ಗೌರೀಶ ಕಾಯ್ಕಿಣಿ

ಮೂವತ್ತು ವರ್ಷಗಳ ಹಿಂದಿನ ಒಂದು ಘಟನೆ. ಅಂದು ನಾನು ನಮ್ಮ ಹಾಯ್‌ಸ್ಕೂಲಿನ ನನ್ನ ವರ್ಗಕ್ಕೆ ಕನ್ನಡ ಕಲಿಸುತ್ತಿದ್ದೆ. ಪೂಜ್ಯ ಮಾಸ್ತಿಯವರ "ಹೇಮಕೂಟದಿಂದ ತಿರುಗಿ ಬಂದ ಮೇಲೆ" [ಈ ಕತೆಯೂ ಅವರ "ಗೌತಮಿ ಹೇಳಿದ ಕತೆ"ಯೂ ಕಾಲಿದಾಸನ "ಶಾಕುಂತಲ"ದ ಕಥೆಗೆ ಎರಡು ಹೊಸ ರಸಪರ್ವಗಳನ್ನು ಸೇರಿಸಿದಂತಿವೆ. ಇವುಗಳಲ್ಲಿ ಮಾಸ್ತಿಯವರ ಪ್ರತಿಭೆ ಆ ಕವಿಕುಲ ಗುರುವಿನ ಪ್ರಜ್ಞಾಪಾತಳಿಯ ಎತ್ತರದಲ್ಲಿ ಕೆಲಸ ಮಾಡಿದೆ !]

ವರ್ಗದಲ್ಲಿ ಕತೆಯನ್ನು ಓದುತ್ತಿದ್ದಂತೆ ಒಂದು ಸಂದೇಶ ಬಂತು. ಹೇಮಕೂಟದಿಂದ ಮರಳಿ ಕಣ್ವಾಶ್ರಮಕ್ಕೆ ಬಂದ ಶಕುಂತಲೆ ಮಗು ಭರತ ನೊಂದಿಗೆ ಯಜ್ಞಶಾಲೆಯಲ್ಲಿ ಕಣ್ವ ಋಷಿಗಳ ದರ್ಶನ ಪಡೆಯುತ್ತಾಳೆ. ಭರತನನ್ನು ಕಂಡ ಕಣ್ವ ಮಹರ್ಷಿ ವಾತ್ಸಲ್ಯದಿಂದ ನಗುತ್ತಾರೆ. ಆಗ ಮಾಸ್ತಿಯವರು ಒಂದು ಮಾತು ಬರೆದಿದ್ದಾರೆ. ದುಷ್ಯಂತನು ಶಕುಂತಲೆಯನ್ನು ಪರಿಗ್ರಹಿಸದೆ ಬಿಟ್ಟನೆಂಬ ವಾರ್ತೆ ಅವಳ ಜತೆಗೆ ಹೋದ ಶಿಷ್ಯರಿಂದ ಕೇಳಿದಂದಿನಿಂದ ಮಹರ್ಷಿಗಳು ನಕ್ಕದ್ದೇ ಇಲ್ಲ!

ಅದನ್ನು ಓದಿದೊಡನೆ ನನ್ನ ತಲೆಯಲ್ಲಿ ಎಲ್ಲೋ ದೂರದ ಗಂಟೆ ಬಾರಿಸಿತು. ಇಂಗ್ಲಂಡಿನ ಇತಿಹಾಸದಲ್ಲಿ ಎಲ್ಲೋ ಓದಿದ ಒಂದು ಪ್ರಸಂಗ ನೆನಪಿಗೆ ಬಂತು. ಅದನ್ನು ವಿದ್ಯಾರ್ಥಿಗಳಿಗೆ ಹೇಳಿದೆ. ಅದನ್ನು ಜಗತ್ಪ್ರಸಿದ್ಧ ಆಂಗ್ಲ ಕಾದಂಬರಿಕಾರ ಚಾರ್ಲಸ್ ಡಿಕನ್ಸ್ ಮಕ್ಕಳಿಗಾಗಿ ಬರೆದ ಇಂಗ್ಲಂಡಿನ ಇತಿಹಾಸದಲ್ಲಿ ಕಥಿಸಿದ್ದಾನೆ.

೧೧ ನೆಯ ಶತಮಾನದಿಂದ ಕೇವಲ ತಲೆಮಾರು ಫ್ರಾನ್ಸಿನ ನಾರ್ಮಂಡಿಯ ನಾರ್ಮನ್ ರಾಜವಂಶ ಬ್ರಿಟನ್ ದೇಶವನ್ನು ಗೆದ್ದು ಆಳಿತು. ದಿಗ್ವಿಜೇತ ವಿಲಿಯಂ ಎಂಬ ನಾರ್ಮಂಡಿಯ ರಾಜ ದಾಳಿ ಮಾಡಿ ಇಂಗ್ಲಂಡು ಗೆದ್ದಿದ್ದ.

ಅವನ ಮಗ ಮೊದಲನೆಯ ಹೆನ್ರಿ ಇಂಗ್ಲಂಡಿನೊಡನೆ ಫ್ರಾನ್ಸಿನಲ್ಲಿಯ ನಾರ್ಮಂಡಿ ರಾಜ್ಯಕ್ಕೂ ಆಳರಸು. ದೊರೆ ಹೆನ್ರಿಯ ಮಗ ವಿಲಿಯಂ ಪ್ರಾಯಕ್ಕೆ ಬಂದ. ಆಗ ಅವನನ್ನು ಕರೆದುಕೊಂಡು ಹೆನ್ರಿ ನಾರ್ಮಂಡಿಗೆ ರಾಜಪರಿವಾರದೊಂದಿಗೆ ಹೋದನು. ಈ ಭೆಟ್ಟಿಯ ಉದ್ದೇಶ ಎರಡು. ಒಂದು ನಾರ್ಮಂಡಿಯ ಆಸ್ಥಾನದಲ್ಲಿ ಮನ್ನೆಯರ ಮಂಡಳವು ರಾಜಪುತ್ರ ವಿಲಿಯಂನನ್ನು ಪಟ್ಟಕ್ಕೆ ಉತ್ತರಾಧಿಕಾರಿಯೆಂದು ಒಪ್ಪುವುದು; ಇನ್ನೊಂದು ಅಲ್ಲಿಯ ಹತ್ತಿರದ ಅಂಜೂ ರಾಜ್ಯದ ರಾಜಪುತ್ರಿಯೊಡನೆ ರಾಜಪುತ್ರ ವಿಲಿಯಂನ ಮದುವೆ ನೆರವೇರಿಸುವದು. ಇವೆರಡೂ ಮಹತ್ಕಾರ್ಯಗಳು ಯೋಗ್ಯ ಸಂಭ್ರಮ ಸಡಗರಗಳಿಂದ ಪೂರ್ತಿಯಾದವು.

ಇನ್ನು ದೊರೆ ಹೆನ್ರಿ ಸ್ವಪರಿವಾರದೊಂದಿಗೆ ಇಂಗ್ಲಂಡಿಗೆ ಮರಳಬೇಕು. ಬಾರಫ್ಲೂರ್ ಬಂದರ

ಗಿಂದ ಈ ಮಾರು ಪಯಣಕ್ಕೆ ಹಡಗುಗಳ ಸಿದ್ಧತೆ ಆಯಿತು.

ದೊರೆಯು ಈ ಕಡಲ ಪಯಣಕ್ಕಾಗಿ ಹೊರಟು ನಿಂತ ದಿನ ಈ ಬಂದರಲ್ಲಿ ಒಬ್ಬ ಕಡಲ ಕಪ್ತಾನನು ದೊರೆ ಹೆನ್ರಿಯನ್ನು ಭೆಟ್ಟಿಯಾದನು. ಕಪ್ತಾನನ ಹೆಸರು ಫೀಟ್ಝ್ ಸ್ಟೀಫನ್.

"ಪ್ರಭುಗಳೇ ತಮ್ಮ ತಂದೆಯವರು ಇಂಗ್ಲಂಡಿನ ಮೇಲೆ ದಂಡಯಾತ್ರೆ ಮಾಡಿದಾಗ ನನ್ನ ತಂದೆಯೇ ಆ ಮಹಾಪ್ರಭುಗಳ ಹಡಗಕ್ಕೆ ಕಪ್ತಾನನಾಗಿದ್ದನು; ತಮ್ಮ ಹಿರಿಯರ ಹಡಗದ ಚುಕ್ಕಾಣಿ ಹಿಡಿದು ನಿಂತಿದ್ದನು—ಮುಂಚೂಣಿಯ ಹೊನ್ನಗೊಂಬೆಯ ಬಳಿಗೆ!" "ಸರಿ" ದೊರೆ ಕೇಳಿದ, "ಮುಂದೆ?"

"ಸ್ವಾಮೀ, ನಾನೂ ಅದೇ ಗೌರವವನ್ನು ಬೇಡುತ್ತೇನೆ. ದೊರೆಗಳು ನನಗೂ ಅದೇ ಕೆಲಸ ದಯಪಾಲಿಸಬೇಕು. ಇಲ್ಲಿಯೇ ಬಂದರದಲ್ಲಿ ನನ್ನ ಹಡಗವಿದೆ. ಉತ್ತಮ ಹಡಗ. ಹೆಸರು 'ಶ್ವೇತನಾವೆ.' ಅದಕ್ಕೆ ೫೦ ಮಂದಿ ಖಲಾಸಿಗಳು, ಒಳ್ಳೆ ನುರಿತ ಹೆಸರಾಂತ ನಾವಾಡಿಗಳು ಇದ್ದಾರೆ. ಆದ್ದರಿಂದ ಮಹಾರಾಜರೆ, ತಮ್ಮಡಿಯಲ್ಲಿ ನನ್ನದೊಂದೇ ಅರಿಕೆ. ತಮ್ಮ ಸಕಲ ಪರಿವಾರವನ್ನೂ ನನ್ನ 'ಶ್ವೇತನಾವೆ'ಯಲ್ಲಿಯೇ ಇಂಗ್ಲಂಡಿಗೆ ಸುರಕ್ಷಿತವಾಗಿ ಒಯ್ಯುವ ಸೇವೆಯನ್ನು ಈ ತಮ್ಮ ಅಡಿಯಾಳಿನಿಂದ ಸ್ವೀಕರಿಸಿ ಅನುಗ್ರಹಿಸಬೇಕು!"

"ಮಿತ್ರನೆ ಕ್ಷಮಿಸು," ದೊರೆ ಮರುಕದಿಂದ ಅಂದ. ನಮ್ಮ ಹಡಗು ಈಗಾಗಲೆ ಗೊತ್ತುಪಡಿಸಿದ್ದಾಗಿದೆ. ಆದ್ದರಿಂದ ನಮ್ಮ ತಂದೆಯವರಿಗೆ ಸೇವೆ ಸಲ್ಲಿಸಿದವನ ಮಗನ ಜತೆ ನಾನು ಹೋಗಲಾರೆ. ಆದರೆ, ನಿರಾಶೆ ಪಡಬೇಡ. ರಾಜಪುತ್ರ ಮತ್ತು ಅವನ ಇಷ್ಟಮಿತ್ರ,



ಪರಿವಾರವೆಲ್ಲ ನಿನ್ನ ಹಡಗದಲ್ಲಿಯೇ ಸಾಗಲಿ !

ಒಂದೆರಡು ತಾಸುಗಳಲ್ಲಿ ದೊರೆ ಹೆನ್ರಿ ತನ್ನ ಪರಿವಾರದೊಂದಿಗೆ ಮೊದಲೇ ಗೊತ್ತುಮಾಡಿದ ನಾವೆಯಲ್ಲಿ ಹೊರಟನು. ಅವನ ಸಂಗಾತಕ್ಕೆ ಇನ್ನು ಕೆಲವು ಬೆಂಗಾವಲಿನ ಹಡಗಗಳು ಇದ್ದವು. ರಾತ್ರಿ ಇಡೀ ಕಡಲಲ್ಲಿ ಪಯಣ ಬೆಳೆಸಿ ಅನುಕೂಲ ಹವಾಮಾನ ಮತ್ತು ಕಿರುಗಾಳಿಯ ನೆರವಿನಿಂದ ಮಾರುದಿನ ನಸುಕಿಗೆ ಇಂಗ್ಲಂಡಿನ ದಂಡೆಯನ್ನು ಸಮೀಪಿಸಿದರು. ದಂಡೆಯಿಂದ ತುಸುವೇ ದೂರ ಇದ್ದಾಗ ಅಪರಾತ್ರಿಯಲ್ಲಿಯೇ ಬೆಂಗಾವಲಿನ ಹಡಗದಲ್ಲಿದ್ದವರಿಗೆ ದೂರದಲ್ಲಿ ಯಾರೋ ಕಂಗೆಟ್ಟು ಕೂಗಿದ ಬೊಬ್ಬೆ ಕಡಲ ಗಾಳಿಗಳ ಮೊರೆತದ ನಡುವೆ ಕೇಳಿಸಿದಂತೆ ಅನಿಸಿತು. ತುಸು ಹೊತ್ತಿನಲ್ಲಿ ರಾಜಪರಿವಾರವೆಲ್ಲ ಸುಕ್ಷೇಮವಾಗಿ ಇಂಗ್ಲಂಡಿನ ದಂಡೆಗೆ ಬಂದಿಳಿದರು.

ರಾಜಪುತ್ರ ವಿಲಿಯಂ ಅಂದು ೧೮ ವರ್ಷದ ಪ್ರುಂಡಪ್ಪೋರ ತುಂಬ ಸ್ವೈರಾಚಾರಿ, ಪ್ರಾಯಕ್ಕೂ ಮೀರಿದ ದುಶ್ಚಟಗಳಿಗೆ ಬಲಿಯಾದವ. ಅಲ್ಲದೆ ಇಂಗ್ಲಂಡಿನ ಬಗೆಗೆ ಅವನಿಗೆ ಎಳ್ಳಷ್ಟೂ ಪ್ರೀತಿ ಇದ್ದಿಲ್ಲ. ಪಟ್ಟಕ್ಕೆ ಒಮ್ಮೆ ಬರುವೆ, ಆ ಮೇಲೆ ಈ ಇಂಗ್ಲಿಷ್ ಜನರನ್ನು ನೊಗಕ್ಕೆ ಕಟ್ಟಿ ನೇಗಿಲು ಹೊಡಿಸುವೆ ಎಂದು ಹೇಳುತ್ತಿದ್ದನು. ಶ್ವೇತನಾವೆಯಲ್ಲಿ ಅವನೊಂದಿಗೆ ಇರುವವರು ಅವನಂಥವರೇ ೧೪೦ ತರುಣ ಸರದಾರ ಮಕ್ಕಳು. ಮತ್ತು ಹೊಸ ಪರಿಯದ ಹದಿನೆಂಟು ಹುಡುಗಿಯರು. ಈ ವಿಟ ವಿಲಾಸಿಗಳೊಂದಿಗೆ ೫೦ ಖಲಾಸಿಗಳೂ ಕೂಡಿ ಹಡಗದಲ್ಲಿ ೨೦೦ ಮಂದಿ ತುಂಬಿದ್ದರು.

"ಓಯ್ ಕಪ್ತಾನ" ರಾಜಪುತ್ರ ಅಪ್ಪಣೆ ಕೊಟ್ಟ. "ಮೂರು ಪೀಪಾಯಿ ಭಟ್ಟಿ ಸರಾಯಿ ತಾ. ಮತ್ತೆ ಈ ನಿನ್ನ ಖಲಾಸಿಗಳಿಗೆ ಕಂಠಮಟ ಕುಡಿಸು. ಹಾಂ ಕುಡಿಯಿರಿ ನಾವಾಡಿಗಳೆ; ಕಪ್ತಾನ ನಮ್ಮ ತಂದೆ ಈಗಾಗಲೆ ಬಂದರದಿಂದ ಬಲು ದೂರ ಹೋಗಿದ್ದಾರೆ. ನಮಗೆ ಇಲ್ಲಿಯೂ ಸ್ವಲ್ಪ ಮಜಾ ಹೊಡೆದು ಅವರ ಹಡಗುಗಳನ್ನು ಹಿಮ್ಮೆಟ್ಟಿಸಲಿಕ್ಕೆ ಅವರಿಗಿಂತ ಮುಂದೆ ಇಂಗ್ಲಂಡ್ ಮುಟ್ಟಲಿಕ್ಕೆ ಎಷ್ಟು ಹೊತ್ತು ಬೇಕು?"

ಫಿಟ್ಜ್ ಸ್ಟೀಫನನಿಗೆ ತನ್ನ ಶ್ವೇತನಾವೆಯ ಮೇಲೆ ಅಪಾರ ಅಭಿಮಾನ. ಚಿಕ್ಕ ದೊರೆಗಳೇ ನಮ್ಮ ಖಲಾಸಿಗಳು ತಮ್ಮ ದೊಡ್ಡ ದೊರೆಗಳ ಅತಿವೇಗದ ಹಡಗವನ್ನು ಮುಂಜಾವಿನೊಳಗೆ ಹಿಂದೆ ಹಾಕಬಹುದು. ನಡುರಾತ್ರಿಗೆ ನಾವು "ಇಲ್ಲಿಂದ ಹೊರಟರೂ ಸಾಕು. "ಸರಿ ಹಾಗಾದರೆ ಹಾಗೆಯೇ ಆಗಲಿ" ರಾಜಪುತ್ರ ಕೂಗಿ ಚಪ್ಪಾಳೆ ತಟ್ಟಿದ. "ಮಜಾ ಹೊಡೆಯೋಕೆ ನಾವಿಕರೆ ಕುಡಿಯಿರಿ ಚೈನಿ ಮಾಡಿರಿ."

ಎಲ್ಲ ಹಾಗೆಯೇ ನಡೆಯಿತು. ಪೀಪಾಯಿ ಬರಿದಾಗಿ ಉರುಳಿದವು. ಖಲಾಸಿಗಳು ಕಂಠಪೂರ್ತಿ ಕುಡಿದು ಉರುಳಿದರು. ರಾಜಪುತ್ರ, ಅವನ ವಿಲಾಸಿ ತರುಣ ತರುಣಿಯರ ತಂಡ ಆ ಬೆಳದಿಂಗಳ ರಾತ್ರಿಯಲ್ಲಿ ನಾವೆಯ ಡೆಕ್ಕಿನ ಮೇಲೆ ಕುಡಿದು ಯಥೇಷ್ಟ ಕುಣಿದರು, ಜಿಗ್ಗಾಡಿದರು, ಅಮಲೇರಿ ಮೈಮರೆತರು ಬಿದ್ದರು.

ಮಧ್ಯರಾತ್ರಿಗೆ ಶ್ವೇತನಾವೆ ಬಂದರದಿಂದ ಹೆಗ್ಗಡಲಿಗೆ ನುಗ್ಗಿತು. ಖಲಾಸಿಗಳು ಶುದ್ಧಿಯ ಮೇಲೆ ಇದ್ದಿಲ್ಲ. ಆದರೂ ಅವರ ಪಳಗಿದ ತೋಳುಗಳು ರಭಸದಿಂದ ಹುಟ್ಟು ಹಾಕುತ್ತಿದ್ದವು. ನಾವೆಯ ಹಾಯಿಗಳೆಲ್ಲ ಬಿಚ್ಚಿ ಗಾಳಿ ತುಂಬಿ ನಾವೆಯನ್ನು ತೇಲಿಸಿ ಒಯ್ಯುತ್ತಿದ್ದವು. ಫಿಟ್ಜ್ ಸ್ಟೀಫನ್ ಚುಕ್ಕಾಣಿ ಹಿಡಿದು ನಿಂತಿದ್ದ. ಗಾಳಿ ಜೋರಾಯಿತು. ತೆರೆಗಳು ಹಿಂದಾದವು. ನಾವೆ ಹೊಯ್ದಾಡುತ್ತಿತ್ತು. "ಹೂಂ, ಹುಟ್ಟು ಹಾಕಿರಿ. ಇನ್ನೂ ಜೋರು ಇನ್ನು ಜೋರು ಪೂರ್ತಿ ಅಮಲೇರಿದ ರಾಜಪುತ್ರ ಅದೇ ಅವಸ್ಥೆಯಲ್ಲಿದ್ದ ಖಲಾಸಿಗಳಿಗೆ ಹುರುಪು ತುಂಬುತ್ತಿದ್ದ. ರಾಜರ ಹಡಗನ್ನೂ ಹಿಂದೆ ಹಾಕಬೇಕು ಶ್ವೇತನಾವೆಯ ಮರ್ಯಾದೆ ಕಾಯಬೇಕು! ಹೂಂ ಜೋರು ಇನ್ನು ಇನ್ನೂ ಜೋರು." ಅಷ್ಟರಲ್ಲಿ ಢಡ್ ಢಡಲ್ ಎಂದು ಭಾರಿ ಸಪ್ಪಳವಾಯಿತು. ತರುಣರ ನಗೆ ತರುಣಿಯರ ಹಾಡು ಹರಟೆ ಎಲ್ಲ ಒಮ್ಮೆಲೆ ಸ್ತಬ್ಧ.

ಹಡಗು ದೊಡ್ಡ ಬಂಡೆಗೆ ಅಪ್ಪಳಿಸಿ ಒಡೆದಿತ್ತು. ನೀರು ಒಳ ನುಗ್ಗುತ್ತಿತ್ತು. ಮರುಕ್ಷಣವೇ ನೂರಾರು ಕಂಠಗಳಿಂದ ಹಾಹಾಕಾರದ ಕೂಗು ಕಣ್ಣೀರು. "ಅಯ್ಯಯ್ಯೊ ದೇವರೇ ಕಾಯಿರಿ

ಕಾಯಿರಿ ಅಯ್ಯೋ." ದೂರದಲ್ಲಿ ಕಡಲ ಮೊರೆತದ ನಡುವೆ ದೊರೆ ಮೆಲ್ಲನೆ ಹಡಗಿನವರು ಕೇಳಿದ್ದು ಇದೇ ಕಿರುಚಾಟವಾಗಿತ್ತು.

ಫಿಟ್ಸ್ ಸ್ಟೀಫನ್ ವಕ್ತ. ಮೊದಲು ರಾಜಪುತ್ರ ನನ್ನನ್ನು ಕೆಲವರು ತರುಣ ಸಂಗಾತಿಗಳನ್ನೂ ಒಂದು ದೋಣಿಯಲ್ಲಿ ತುಂಬಿ ಮುಂದೆ ದೂರ ನೂಕಿದ. ಪ್ರಾಣ ಉಳಿಸಿಕೊಂಡು ಇಂಗ್ಲಂಡಿನ ದಡ ಸೇರಲಿಂದು. ದಡ ಬಹಳ ದೂರವಿಲ್ಲ. ಹುಟ್ಟು ಹಾಕಿ ನಡೆಯಿರಿ. ಎಂದು ಆ ದೋಣಿಯನ್ನು ತಳ್ಳಿದ. ನಡೆಯಿರಿ ಕಡಲು ಸಣ್ಣಗಿದೆ. ನಾವೆಲ್ಲ ಇಲ್ಲಿ ಸಾಯಲೇಬೇಕು ಸ್ವಾಮಿ, ತಾವು ಬದುಕ ಬೇಕು ಅಂದ.

ಆದರೆ ಆ ಗುಂಪು ತ್ವರೆಯಿಂದ ಮುಂದೆ ಸಾಗುವಾಗ ರಾಜಪುತ್ರ ವಿಲಿಯಂನಿಗೆ ತನ್ನ ತಂಗಿ ಮೇರಿಯ ನೆನಪಾಯಿತು. ಅವಳ ಆರ್ತ ಸ್ವರ ಕೇಳಿಸಿತು. ತಡೆಯಿರಿ ತಿರುಗಿ ಹೋಗೋಣ ತಂಗಿ ಕೂಗುತ್ತಿದ್ದಾಳೆ. ಅವಳನ್ನು ಬಿಟ್ಟು ಹೋಗಲಾರೆ ಎಂದು ವಿಲಿಯಂ ಹಟ ಹಿಡಿದ. ಎಂಥ ತಾಮಸಿಯಲ್ಲಿಯೂ ಒಂದು ಸಾತ್ವಿಕತೆಯ ಕಿಡಿ ಮಿಂಚುತ್ತದೆ. ರಾಜಪುತ್ರನ ಜಿದ್ದಿಗೆ ಈ ಡೋಣಿ ಮುಳುಗುತ್ತಿರುವ ನಾವೆಯ ಬದಿಗೆ ಬಂತು. ರಾಜಪುತ್ರಿ ಮೇರಿ ದೋಣಿಗೆ ಜಿಗಿಯಲು ಕೈಚಾಚಿದಳು. ರಾಜಪುತ್ರ ಅವಳನ್ನು ಎತ್ತಿಕೊಳ್ಳಲು ಕೈಚಾಚಿದ. ಆದರೆ ಅದೇ ವೇಳೆಗೆ ಜೀವದಾಸೆಗೆ ನೂರಾರು ಮಂದಿ ಈ ಚಿಕ್ಕ ದೋಣಿಗೆ ಧುಮುಕಿದರು. ದೋಣಿ ಬುಡಮೇಲಾಯಿತು. ಎಲ್ಲರೂ ಕಡಲು ಪಾಲಾದರು. ಅತ್ತ ಶ್ವೇತನಾವೆ ನಿಧಾನವಾಗಿ ಉಳಿದ ಕಂಗೆಟ್ಟು ಕೂಗಾಡುವ ಹೋರಾಡುವ ಸ್ತ್ರೀಪುರುಷರೊಂದಿಗೆ ಮುಳುಗಿತು.

ಆದರೆ ಕತೆ ಇಲ್ಲಿಗೆ ಮುಗಿಯಲಿಲ್ಲ. ಕಡಲ ತರೆಗಳಲ್ಲಿ ಇಬ್ಬರು ತೇಲಾಡುತ್ತಿದ್ದರು. ನಾವೆಯ ಹಾಯಿಗಂಬದಿಂದ ಕಿತ್ತು ಬಿದ್ದ ಅಡ್ಡ ಕಂಬವೊಂದು ಅವರ ಕಡೆಗೆ ಬಂತು. ಅವರು ಇಬ್ಬರೂ ಅದನ್ನು ಅವಚಿಕೊಂಡು ತೇಲತೊಡಗಿದರು. ಕಣ್ಣು ಕಿವಿ ಮೂಗು ಬಾಯಿ ಎಲ್ಲ ಉಪ್ಪುನೀರು ತುಂಬಿದರೂ ಅವರು ಮಾತು

ಕತೆ ನಡೆಸಿದರು. ಈ ಸಾಗರ ಹೆಗ್ಗಡಲಿನ ನಡುವೆ "ನೀ ಯಾರು?" ಒಬ್ಬ ಕೇಳಿದ. "ನಾನು ಸರದಾರ ಪುತ್ರ ನನ್ನ ಹೆಸರು ಗಾಡ್‌ಫ್ರೆ ಮತ್ತೆ ನೀನು?" ಗಾಡ್‌ಫ್ರೆ ಕೇಳಿದ. "ನಾನು ಬಡ ಕಟುಕರವ. ನನ್ನ ಊರು ರೋವನ್ ನನ್ನ ಹೆಸರು ಬೆಥೊಲ್ಡ್ ಥೂ" ಉಪ್ಪುನೀರು ಉಗುಳುತ್ತ ಆ ಬಡ ಕಟುಕರವನು ಅಂದ. ಇಬ್ಬರೂ ಆ ಅಡ್ಡ ಕಂಬ ಹಿಡಿದುಕೊಂಡು ಈಜುತ್ತಿದ್ದರು. ಅಷ್ಟರಲ್ಲಿ ಯಾರೋ ವೇಗದಿಂದ ಅವರತ್ತ ಈಜುತ್ತ ಬರುತ್ತಿದ್ದ. ಅವರು ಗುರುತಿಸಿದರು. ಆತ ಕಪ್ತಾನ. "ರಾಜಪುತ್ರ, ರಾಜಪುತ್ರ ಎಲ್ಲಿ?" ಫಿಟ್ಸ್ ಸ್ಟೀಫನ್ ಕೂಗಿದ ರಾಜಪುತ್ರ ಪುತ್ರಿಯರೂ ಅವರ ಪರಿವಾರದವರೆಲ್ಲರೂ ಮುಳುಗಿದ ಸುದ್ದಿ ಇವರಿಬ್ಬರೂ ಅವನಿಗೆ ತುಂಡು ತುಂಡಾಗಿ ಏದುತ್ತಾ ಅರುಹಿದರು. ಕೇಳುತ್ತಿದ್ದಂತೆ ಫಿಟ್ಸ್ ಸ್ಟೀಫನ್ನನ ಮೋರೆ ಕಪ್ಪಿಟ್ಟಿತು. ಪ್ರೇತಕಳೆ ತಾಳಿತು. "ಅಯ್ಯೋ ದೇವರೇ" ಎಂದದ್ದೇ ಆ ನಿಷ್ಠಾವಂತ ಕಪ್ತಾನ ಕಡಲ ತಳ ಮುಟ್ಟಿದ.

ಗಾಡ್‌ಫ್ರೆ, ಬೆಥೊಲ್ಡ್—ಸರದಾರ ಪುತ್ರ ಮತ್ತು ಕಟುಕರವ ಆ ಅಡ್ಡ ಕಂಬಿಗೆ ತೆಕ್ಕಬಿದ್ದು ಒಬ್ಬರಿಗೊಬ್ಬರು ಧೈರ್ಯ ಕೊಡುತ್ತ ಕೆಲಹೊತ್ತು ತೇಲುತ್ತ ತೊಳಲಿದರು. ಆದರೆ ಗಾಡ್‌ಫ್ರೆ ನಿತ್ರಾಣನಾದ. "ನಾನು ಸೋತೆ ಇನ್ನು ಈಜಲಾರೆ. ದೇವರು ನಿನ್ನನ್ನು ಕಾಪಾಡಲಿ" ಎಂದು ಬೆಥೋಲ್ಡ್‌ನಿಗೆ ಹೇಳಿ ಕೈಕಾಲು ಬಿಟ್ಟ.

ಶ್ವೇತನಾವೆಯಲ್ಲಿಯ ಆ ಮೆರೆದಾಡುವ ಮಹನೀಯರು ಮಂದಿಯಲ್ಲಿ ಕೊನೆಗೂ ಬದುಕಿ ಉಳಿದವನು ಈ ರೋಯನ ಊರಿನ ಈ ಬಡ ಮಾಂಸ ಮಾರುವವನು. ನಸುಕು ಹರಿಯುವಾಗ ಇಂಗ್ಲೆಂಡಿನ ದಂಡೆಯ ಇದಿರು ಕೆಲವು ಬೆಸ್ತರು ಅವನನ್ನು ತಮ್ಮ ದೋಣಿಗೆ ಎತ್ತಿ ಹಾಕಿಕೊಂಡರು—ಒದ್ದೆ ಮುದ್ದೆ ಆದ ಕುರಿದೊಗಲಿನ ಅಂಗಿಯೊಳಗೆ ಜೋಂಪಾಗಿ ತೇಲುತ್ತಿದ್ದ ಬೆಥೋಲ್ಡ್‌ನನ್ನು.

ಅವನೊಬ್ಬನೆ ಈ ಘೋರ ದುರಂತದ ಕಥೆಯನ್ನು ಹೇಳಲು ಉಳಿದ ಹತಭಾಗ್ಯ. ಆದರೆ ಈ ಸಮಾಚಾರ ದೊರೆ ಹೆನ್ರಿಗೆ ಯಾರು ಹೇಗೆ ತಿಳಿಸಬೇಕು. ೧೧೨೦ ರ ನವೆಂಬರ್ ೨೫ ರ ನಡುರಾತ್ರಿಯ ಈ ದುರ್ಘಟನೆಯ ಬಗೆಗೆ ಮರುದಿನ ಯಾರೂ ದೊರೆಗೆ ಅರುಹಲು ಮುಂದಾಗಲಿಲ್ಲ. ಕಾಲ್ಕನೆಯ ದಿನ ಒಬ್ಬ ಹುಡುಗನನ್ನು ರಾಜನ ಊರಿಗೆ ಕಳುಹಿಸಿದರು. ಆ ಬಡಪಾಯಿ ಹೆನ್ರಿಯ ಕಾಲಿಗೆ ಬಿದ್ದು ಮಂಡಿಯೂರಿ ಬಿಕ್ಕಿ ಬಿಕ್ಕಿ ಅಳುತ್ತ ಶ್ವೇತ ನಾವೆ ಮುಳುಗಿದ ವಾರ್ತೆಯನ್ನು ತಿಳಿಸಿದ.

ಅದನ್ನು ಕೇಳಿದೊಡನೆ ದೊರೆ ಹೆನ್ರಿ ಸತ್ತಂತೆ ನೆಲಕ್ಕೆ ಕುಸಿದ. ಅನಂತರ ಅವನು ನಕ್ಕದ್ದನ್ನು ಎಂದೂ ಕಾಣಲಿಲ್ಲ. ✡

ಇಂದು ಜನಪ್ರಿಯವಾಗಿರುವ ಗಾಂಧಿ ಟೋಪಿಯನ್ನು ಮಹಾತ್ಮಾ ಗಾಂಧಿಯವರು ಧರಿಸುತ್ತಿದ್ದ ಸಮಯ. ಗಾಂಧೀಜಿ ಒಂದು ಸಮಾರಂಭದಲ್ಲಿ ತಮ್ಮ ತಲೆಗೆ ಈ ಟೋಪಿಯನ್ನು ಹಾಕಿಕೊಂಡು ಕುಳಿತುಕೊಂಡಿದ್ದರಂತೆ. ಚಪ್ಪರದೊಳಗೆ ಯಾವನೋ ಒಬ್ಬ ಬಂದುದನ್ನು ಕಂಡ ತಕ್ಷಣ ತಮ್ಮ ತಲೆಯ ಮೇಲಿದ್ದ ಟೋಪಿಯನ್ನು ತೆಗೆದು ಕೆಳಗೆ ಇಟ್ಟುಬಿಟ್ಟಾಗ ಪಕ್ಕದಲ್ಲಿದ್ದ ಅಧ್ಯಕ್ಷರು, "ಗಾಂಧೀಜಿಯವರೆ ಎಂದೂ ನೀವು ಟೋಪಿಯನ್ನು ತೆಗೆದವರಲ್ಲಾ ಇಂದೇಕೆ ಅದನ್ನು ತೆಗೆದಿರಿ?" ಎಂದು ಕೇಳಿದಾಗ ಗಾಂಧೀಜಿ "ಈಗ ತಾನೇ ಒಬ್ಬ ಭ್ರಷ್ಟ ರಾಜಕಾರಣಿಯೊಬ್ಬ ಅದನ್ನು ಮೇಲೆ ಧರಿಸಿದ್ದನ್ನು ನೋಡಿದೆ. ಹೀಗಾಗಿ ಇಂದಿನಿಂದ ಆ ಟೋಪಿಗೆ ನನ್ನ ತಲೆಯ ಮೇಲೆ ಸ್ಥಾನವಿಲ್ಲ" ಎಂದು ಹೇಳಿದರಂತೆ.

— ಶ್ರೀಧರ

ಶ್ರೀರಂಗಳ ವೀಣೆ

ಬಾ. ರಾ. ಗೋಪಾಲ

ಹತ್ತು ವರ್ಷಗಳ ಹಿಂದಿನ ಅನುಭವವಿದು. ಆ ಅನುಭವದ ಸಂದರ್ಭದಲ್ಲಿ ಉಂಟಾದುದು ಕೋಪದ ಪ್ರತಿಕ್ರಿಯೆ. ಕಾಲ ಕಳೆದಂತೆ ಅದನ್ನು ನೆನಸಿದಾಗೆಲ್ಲ ಅದೊಂದು ಅಪರೂಪವಾದ ಹಾಸ್ಯಮಯ ಘಟನೆ ಎನಿಸುತ್ತದೆ. ಸಹೃದಯರಲ್ಲಿ, ಈ ಹಾಸ್ಯ ಸನ್ನಿವೇಶವನ್ನು ನಿವೇದಿಸಿ ನಗೋಣವೆನಿಸುತ್ತದೆ. ಅಂತಲೇ ಇದನ್ನು ಕುರಿತು ಬರೆಯುತ್ತಿದ್ದೇನೆ. ಈ ಘಟನೆ ನನಗೆ ಹಲವಾರು ಬಾರಿ ಡಾ. ಗೊರೂರರ ಗರುಡಗಂಬದ ಕತೆಯನ್ನೂ ನೆನಪಿಸುತ್ತದೆ.

ಹತ್ತು ವರ್ಷಗಳ ಹಿಂದೆ ಎಂದೆ. ಆ ವರ್ಷ ನಾನು ಚಂಡೀಘಡದಲ್ಲಿ ನಡೆಯಲಿದ್ದ ಅಖಿಲ ಭಾರತ ಇತಿಹಾಸ ಸಮ್ಮೇಳನಕ್ಕೆ ಹೋಗಲು ನಿಶ್ಚಯಿಸಿದ್ದೆ. ನನ್ನ ಗುರುಗಳೂ ಮಾರ್ಗದರ್ಶಕರೂ ಆಗಿದ್ದ ದಿವಂಗತ ಡಾ. ಪಾಂ. ಭೀ. ದೇಸಾಯರು ಆ ವರ್ಷದ ಸಮ್ಮೇಳನದಲ್ಲಿ ಶಾಸನ ಶಾಸ್ತ್ರ ವಿಭಾಗದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. ಅಂತಲೇ ಹಲವಾರು ತಾಂತ್ರಿಕ, ಇನ್ನಿತರ ಅಡಚಣೆಗಳುಂಟಾದರೂ ಪ್ರಯಾಣ ಹೊರಟಿದ್ದೆ. ಸಪತ್ನೀಕನಾಗಿ. ಇಲ್ಲಿ ಪತ್ನಿಯನ್ನು ಕುರಿತು ಒಂದೆರಡು ಮಾತುಗಳನ್ನಾಡಬೇಕು. ನನ್ನ ಬೌದ್ಧಿಕ ಚಟುವಟಿಕೆಗಳಲ್ಲಿ ಈಕೆ ನಿಜವಾದ ಕಾರ್ಯದರ್ಶಿ. ಈಕೆಯ ಜ್ಞಾಪಕ ಶಕ್ತಿ ಅಪಾರ. ಒಮ್ಮೆ ಯಾರನ್ನಾದರೂ ಪರಿಚಯ ಮಾಡಿಕೊಂಡರೆ ಪುನಃ ಮರೆಯಲಾರಳು– ನನ್ನ ಕೆಲಸಗಳಲ್ಲಿ ಹೆಚ್ಚು ಕ್ರಿಯಾತ್ಮಕವಾಗಿ ನೆರವಾಗಲೆಂದು ಇತಿಹಾಸವನ್ನು ವಿಶೇಷ ಅಧ್ಯಯನ ವಿಷಯವಾಗಿ ಆಯ್ದುಕೊಂಡು, ವಿಜ್ಞಾನ ಪದವೀಧರೆಯಾದ ಈಕೆ, ಬಿ. ಎ. ಪದವಿಯನ್ನು ಪಡೆದುಕೊಂಡಳು. ನಂತರ ನನಗೆ ಅರಸರ ಅವರ ರಾಣಿಯರ, ಮಕ್ಕಳ, ಅಧಿಕಾರಿಗಳ ಹೆಸರುಗಳು, ಘಟನೆಗಳು ನಡೆದ ಕಾಲ ಮುಂತಾದ ವಿವರಗಳನ್ನು ಖಚಿತವಾಗಿ ಪುಸ್ತಕದ ನೆರವಿಲ್ಲದೆ ಒದಗಿಸುವಂತಹ ಶಕ್ತಿ ಪಡೆದಳು. ಆದ್ದರಿಂದ ನಾನು ಹೋದಲ್ಲೆಲ್ಲ ನನ್ನೊಡನೆ ಬಂದಿದ್ದಾಳೆ. ನನ್ನ ಅಷ್ಟೇನೂ ಉತ್ತಮವಲ್ಲದ ಆರೋಗ್ಯವೂ ಈ ಸಹ ಪ್ರಯಾಣಗಳಿಗೊಂದು ಕಾರಣ. ಆದ್ದರಿಂದ ಈಕೆ ಇಂತಹ ಸಂಘ–ಸಂಸ್ಥೆಗಳ ಸದಸ್ಯಳೂ ಆಗಿದ್ದಾಳೆ. ನಮ್ಮ ದೇಶದ ಹಲವಾರು ಭಾಗಗಳನ್ನೂ ನನ್ನೊಡನೆ ಸಂದರ್ಶಿಸಿದ್ದಾಳೆ. ಎಂದಿನಂತೆ ಆ ವರ್ಷವೂ ಇಬ್ಬರೂ ಪಂಜಾಬಿನ ಯಾತ್ರೆಗೆ ಅಣಿಯಾಗಿದ್ದೆವು ಎಂಬುದು ಇಷ್ಟೆಲ್ಲದರ ಸಾರಾಂಶ.

ಆದರೆ ಆ ವರ್ಷ ನಮ್ಮೊಂದಿಗೆ ಒಂದು ವೀಣೆ ಸಹ ಸೇರಿಕೊಂಡಿತೆಂಬುದೊಂದು ವಿಶೇಷ. ಅದು ಆಕಸ್ಮಿಕ ಸೇರ್ಪಡೆ. ನನ್ನ ಭಾವಮೈದುನ ಆಗ ಆಂಧ್ರಪ್ರದೇಶದ ಓಂಗೋಲಿನಲ್ಲಿ ಇಂಜಿನಿಯರ್ ಆಗಿದ್ದ. ಮದರಾಸಿನಿಂದ ದೆಹಲಿಗೆ ಹೋಗುವಾಗ ಸಿಗುವ ಒಂದು ಜಿಲ್ಲಾ ಕೇಂದ್ರ ಅದು. ಇತ್ತೀಚೆಗೆ ಹಲವಾರು ರೈಲುಗಳು ಆ

ನಿಲ್ದಾಣದಲ್ಲಿ ನಿಲ್ಲದಿದ್ದರೂ ಜಿ.ಟಿ. ಎಕ್ಸ್‌ಪ್ರೆಸ್‌ನಂತಹ ರೈಲು ೨-೩ ನಿಮಿಷಗಳಾದರೂ ನಿಲ್ಲುತ್ತದೆ. ಇಲ್ಲಿದ್ದ ಭಾಷಾವೈದ್ಯನನ ಪತ್ನಿ– ಕವಿ ಡಾ. ಪುತಿನರವರ ಮಗಳು– ಶ್ರೀರಂಗ. ಈಕೆಗೆ ಸಂಗೀತದಲ್ಲಿ ವೀಣೆ ನುಡಿಸುವುದರಲ್ಲಿ ಆಸಕ್ತಿ. ಆದರೆ ನೆಲ್ಲೂರಿನಲ್ಲಿದ್ದಾಗ ಆಕೆಯ ಬಳಿ ವೀಣೆ ಇರಲಿಲ್ಲ. ಆಕೆಯ ಹಿರಿಯ ಸೋದರಿ ಆ ವಾದ್ಯವನ್ನು ಬೆಂಗಳೂರಿನಿಂದ ಕಳುಹುವುದಾಗಿ ಹೇಳಿದ್ದಳಂತೆ. ಅದರ ಒಡೆತನ ಯಾರದಾಗಿತ್ತು ಎಂಬುದು ನನಗೆ ನೆನಪಿಲ್ಲ. ಅದು ಈಗಲೂ ಶ್ರೀರಂಗಳ ಬಳಿ ಇದೆ.

ಡಾ. ಪುತಿನವರಿಗೆ ನಮ್ಮ ಪ್ರಯಾಣದ ವಿಷಯ ತಿಳಿಯಿತು. ಆ ವೀಣೆಯನ್ನು ಅವರ ಮಗಳಿಗೆ ತಲಪಿಸಬಾರದೇಕೆ ಎಂಬ ಸಲಹೆ ಬಂತು. ಅದೇನೂ ಹೊರೆಯಾಗದು. ಬೆಂಗಳೂರಿನಲ್ಲಿ ರೈಲೇರಿಸಿದರೆ ಮದರಾಸಿನಲ್ಲೂ ಅದನ್ನು ಇಳಿಸಬೇಕಿಲ್ಲ. ಬೆಂಗಳೂರಿನಲ್ಲಿ ನಾವು ಹತ್ತುವ ಬಂಡಿಯನ್ನು ಮದರಾಸಿನಲ್ಲಿ ಜಿ. ಟಿ. ಎಕ್ಸ್‌ಪ್ರೆಸ್‌ಗೆ ಹೇಗೂ ಲಗತ್ತಿಸುತ್ತಾರೆ. ಆದ್ದರಿಂದ ಅದನ್ನು ಓಂಗೋಲಿನಲ್ಲಿ ಇಳಿಸಿದರಾಯಿತು ಎಂಬ ವೀಣೆಯ ಪ್ರಯಾಣಕ್ಕೆ ಅನುಕೂಲವಾದ ವಾದವೂ ಬಂತು. ಇನ್ನು ನಿರಾಕರಣೆಯ ಮಾತೆಲ್ಲಿ? ತಥಾಸ್ತು ಎಂದೆ. ಸರಿ, ಪತ್ರ ವಿನಿಮಯಗಳಾದವು. ನೆಲ್ಲೂರಿನಲ್ಲಿ ವೀಣೆಯನ್ನು ಬರಮಾಡಿಕೊಳ್ಳುವುದಾಗಿ ಶ್ರೀರಂಗಳೂ ಬೆಂಗಳೂರಿನಲ್ಲಿ ಅದನ್ನು ನಮ್ಮೊಡನೆ ರೈಲೇರಿಸುವುದಾಗಿ ಶ್ರೀಮತಿ ಮಣಿಯೂ ತಿಳಿಸಿದರು. ಶೇಷಮ್ಮನವರು (ಪುತಿನರವರ ಪತ್ನಿ) ಉಪ್ಪಿನಕಾಯಿ, ಚಟ್ನಿಪುಡಿ ಮುಂತಾದ ಹಲವಾರು ಶೀಷೆಗಳನ್ನೊಳಗೊಂಡ ಕೈಚೀಲವೊಂದನ್ನು ಸಹ ಮಗಳಿಗೆ ಕಳುಹಿಸುವುದಾಗಿಯೂ ತಿಳಿಸಿದರು. ವೀಣೆಯ ಜೊತೆಗೆ ನಂಜಿಕೊಳ್ಳುವ ಪರಿಕರಗಳು!

ಆಯಿತು. ಮೈಸೂರಿನಿಂದ ಹೊರಟೆವು. ಬೆಂಗಳೂರಿನಲ್ಲಿ ಶ್ರೀಮತಿ (!) ವೀಣಾದೇವಿಯವರೂ ನಮ್ಮನ್ನೂ ಸೇರಿಕೊಂಡರು. ನನ್ನ ಹೆಂಡತಿಯ ಅಭಿಮಾನ ಉಕ್ಕಿ ಹರಿಯುತ್ತಿತ್ತು. ನನ್ನ ತಮ್ಮನ ಹೆಂಡತಿ ವೀಣಾಪಾರಂಗತೆ, ಅವಳಿಗಾಗಿ ಒಯ್ಯುತ್ತಿದ್ದೇವೆ ಎಂದು ಹೇಳಿಕೊಂಡಳು. ಮದರಾಸು ಸೇರಿದೆವು. ಅಲ್ಲಿಂದ ರಾತ್ರಿ ಹೊರಟಿತು ನಮ್ಮ ಗಾಡಿ. ಅದು ನೆಲ್ಲೂರನ್ನು ತಲಪುವುದು ಎಂದೂ ಅವೇಳೆಯಲ್ಲಿಯೇ. ಅರ್ಧರಾತ್ರಿ ಕಳೆದು, ಒಳ್ಳೆಯ ನಿದ್ದೆಯ ಜೋಂಪು ಹತ್ತುವ ಸಮಯದಲ್ಲಿ! ಬೆಂಗಳೂರಿನಲ್ಲಿ ನಾವು ವೀಣಾದೇವಿಗೆ ಸ್ಥಾನ ಕೊಟ್ಟಾಗಲೇ ಆ ಮೂರು ಸ್ತರಗಳ ಮಲಗುವ ಬಂಡಿಯಲ್ಲಿ ಬೇರಾವ ಸಾಮಾನನ್ನೂ ಇಡಲಿಕ್ಕಾಗದಷ್ಟು ಸ್ಥಳವನ್ನಾಕ್ರಮಿಸಿತ್ತು. ಸಹ ಪ್ರಯಾಣಿಕರಿಗಂತಿರಲಿ, ನಮಗೇ ಕೈಕಾಲುಗಳನ್ನೂ ಸ್ವೇಚ್ಛೆಯಾಗಿ ಆಡಿಸಲಾಗದಷ್ಟು ಮುಜುಗರ. ಅದನ್ನು ಆಸನದ ಕೆಳಗಂತೂ ತಳ್ಳಲಾಗದು.

ಮದರಾಸಿನಿಂದ ಗಾಡಿ ಹೊರಟಾಗ ನಾವು ಒಂದು ಏರ್ಪಾಡು ಮಾಡಿಕೊಂಡಿದ್ದೆವು. ಓಂಗೋಲು ನಮಗರಿಯದಂತೆ ಹಿಂದಕ್ಕೆ ಸರಿಯಬಾರದಲ್ಲ, ಅದಕ್ಕಾಗಿ ಒಬ್ಬರು ಎಚ್ಚೆತ್ತೇ ಇರಬೇಕು. ಆ ನಿಲ್ದಾಣ ಬಂದಾಗ ಒಬ್ಬರು ಬಾಗಿಲ ಬಳಿ ವೀಣಾದೇವಿಯೊಡನೆ ಸಿದ್ಧರಾಗಿರಬೇಕು. ಇನ್ನೊಬ್ಬರು ಶೇಷಮ್ಮನವರಿತ್ತ ಚೀಲವನ್ನು ಕೆಳಗಿಳಿಸಲು ಸಿದ್ಧರಾಗಿರಬೇಕು. ಆ ಎಕ್ಸಪ್ರೆಸ್ ಓಂಗೋಲಿನಲ್ಲಿ ನಿಲ್ಲುವುದು ಕೇವಲ ಎರಡು–ಮೂರು ನಿಮಿಷಗಳು. ಬೆಂಗಳೂರಿನಿಂದ ಹೊರಟ ನಮ್ಮ ಗಾಡಿಯನ್ನು ಮದರಾಸಿನಲ್ಲಿ ಆ ಎಕ್ಸ್‌ಪ್ರೆಸ್ಸಿನ ಬಾಲಂಗೋಚಿಯಾಗಿ ಕೊನೆಯಲ್ಲಿ ಸೇರಿದ್ದರು. ಅದೋ ಸುಮಾರು ೨೦ ಬೋಗಿಗಳನ್ನೊಳಗೊಂಡ ಉದ್ದನೆಯ ರೈಲು – ಒಂದು ಕೊನೆಯಿಂದ ಇನ್ನೊಂದು ಕೊನೆಗೆ ಎರಡು ನಿಮಿಷಗಳಲ್ಲಿ ಓಡುವುದೂ ಅಸಾಧ್ಯ. ಆದ್ದರಿಂದಲೇ ಇಂತಹ ಗಾಡಿಗಳ ಯಾವ ಬೋಗಿ ಎಲ್ಲಿ ನಿಲ್ಲುತ್ತದೆ ಎಂಬುದನ್ನು ನಿಲ್ದಾಣದಲ್ಲಿ ಮೊದಲೇ ಸೂಚಿಸುತ್ತಾರೆ. ಹತ್ತುವ ಪ್ರಯಾಣಿಕರು ಅಲ್ಲಿ ಸಿದ್ಧವಾಗಿ ನಿಂತು ತಮ್ಮ ಕಾಯ್ದಿರಿಸಿದ ಸ್ಥಳಗಳಲ್ಲಿ ಹತ್ತುತ್ತಾರೆ. ನಾವು ಪತ್ರ ಬರೆದು ಈ ವಿವರಗಳನ್ನೆಲ್ಲಾ ನೀಡಿ ನೆಲ್ಲೂರಿಗೆ ಬಂದು ನಮ್ಮಾಕೆಯನ್ನು ಇಳಿಸಿಕೊಳ್ಳಿ ಎಂದು ಸ್ಪಷ್ಟವಾಗಿ ತಿಳಿಸಿದ್ದೆವು.

ಓಂಗೋಲು ಬರುವುದಕ್ಕೆ ಸುಮಾರು ಒಂದು ಗಂಟೆಯಷ್ಟು ಮೊದಲೇ, ಎಲ್ಲಿ ನಿಲ್ದಾಣ ಹಾದು-ಹೋಗುವುದೋ ಎಂಬ ಭಯದಿಂದ, ವೀಣಾದೇವಿಯನ್ನು ಬಾಗಿಲ ಬಳಿ ನಿಲ್ಲಿಸಿ, ಅಲ್ಲಿ ಮಲಗಿಸಿ, ಕಿಟಕಿಯಿಂದ ಕತ್ತಲಲ್ಲಿ ಹೊರಗಿಣಿಕುತ್ತಾ, ನಿಂತು, ತೂಗಡಿಸುತ್ತಾ, ಒಂದೋ ಗಾಡಿಯಲ್ಲಿದ್ದ ಕಂಡಕ್ಟರ್ ಸೂಚನೆ ಕೊಡುತ್ತೇವೆ, ಗಾಬರಿಯಾಗಬೇಡಿ ಎಂದರೂ ಕೇಳದೆ. ಸರಿ, ಅಂತೂ ಓಂಗೋಲು ಬಂತು. ಸರ್ರೆಂದು ಗಾಡಿಯಿಂದ ಇಳಿದು ದೇವಿಯನ್ನು ಇಳಿಸಿಕೊಂಡು 'ಕೋದಂಡ, ಕೋದಂಡ' ಎಂದು ಬೊಬ್ಬೆ ಹಾಕಿದೆ. ಕೋದಂಡ ಎಂಬುದು ನನ್ನ ಭಾವ ಮೈದುನನ ಹೆಸರು. ಪ್ರಯೋಜನವಿಲ್ಲ. ಕಿಟಕಿಯ ಬಳಿ ಚೀಲದೊಡನೆ ಅಣಿಯಾಗಿದ್ದ ಪದ್ಮಳೂ ಬಾಗಿಲ ಬಳಿ ಬಂದಳು. ಒಂದು ನಿಮಿಷ ಎರಡು ನಿಮಿಷ– ಊಹೂಂ, ಯಾರ ಸುಳಿವೂ ಇಲ್ಲ. ಇಂಜಿನ್ ಕೂಗಿತು. ದಡಬಡಿಸಿ ವೀಣಾದೇವಿಯನ್ನು ಮತ್ತೆ ಒಳಗೆ



ತಳ್ಳಿ ನಾನೂ ಏರಿದೆ. ಈ ಬಾರಿ ಚೀಲ ನನ್ನ ಕೈಗೆ ಬಂತು. ನಿಲ್ದಾಣದ ಒಂದು ತುದಿಯಿಂದ, ಕ್ರಮೇಣ ರೈಲು ಮುಂದಕ್ಕೆ ಚಲಿಸಿತು. ಮೂರು ನಿಮಿಷ ಅದು ಪ್ಲಾಟ್‌ಫಾರಮಿನ ಮಧ್ಯಕ್ಕೆ, ಪ್ರಯಾಣಿಕರು ನಿಲ್ದಾಣದೊಳಗೆ ಬರುವ ಬಾಗಿಲ ಬಳಿ ಬಂದಾಗ, ಅದೋ, ಅಲ್ಲಿ ಕೊದಂಡ, ಶ್ರೀರಂಗ ಕಣ್ಣುಗಳನ್ನು ಪಿಳಿಪಿಳಿ ಬಿಟ್ಟು ನೋಡುತ್ತಿದ್ದಾರೆ. ಮತ್ತೆ ಕೂಗಿದೆ 'ಕೋದಂಡ' ಎಂತ. ಕೇಳಿಸಿತು, ಓಡಿ ಬಂದ. ಆದರೆ ವೀಣೆಯನ್ನು ಹೊರಗೆ ಹಾಕುವುದು ಹೇಗೆ? ಚೀಲ ಮಾತ್ರ ಸಾಧ್ಯ– ಅದನ್ನೇ ಆಡಿಸಿ ಆತನಿಗೆ ತೋರಿಸಿದೆ. ಹತ್ತಿರ ಬಂದಂತಾಯಿತು. ಚೀಲ ಕೈ ಬಿಟ್ಟೆ. ಗಾಡಿ ವೇಗ ಹೆಚ್ಚಿಸಿತು. ಚೀಲ ಧಡ್ ಎಂದು

ಕೆಳಗೆ ಬಿತ್ತು. ಒಂದು ಶೀಷೆ ಒಡೆಯಿತು ಎಂಬುದಂತೂ ಖಚಿತವಾಯಿತು. ಒಂದೇ ಆದರೆ ಪರವಾಯಿಲ್ಲ. ಇದ್ದ ಎರಡು ಮೂರೂ ಒಡೆದುವೇನೋ. ತಿಳಿಯಲಿಲ್ಲ. ಬಹಳ ಪೇಚಾಟವಾಯಿತು. ಆ ಉಪ್ಪಿನ ಕಾಯಿ ಬಾಟಲ್ ನಮ್ಮೊಡನೆ ಬಂದಿದ್ದಲ್ಲಿ ಬಹುಶಃ ಮುಂದೆ ಪದ್ಮಳು ಮಾಡಬೇಕಾಗಿದ್ದ ಸಪ್ಪೆ ಊಟದ ಸಂಕಟವನ್ನು ನಿವಾರಿಸ ಬಹುದಿತ್ತು. ಆದರೆ ಕರ್ಮ ಎಂಬುದೊಂದಿದೆಯಲ್ಲ!

ನಮ್ಮ ಆ ಕರ್ಮ ಆರಂಭವಾದದ್ದು ಆಗಲಿಂದ. ಓಂಗೋಲಿನಲ್ಲಿ ವೀಣೆ ಇಳಿಸಿ ಪ್ರಯಾಣಿಕರಿಗೆ ಸ್ಥಳ ಮಾಡಿಕೊಡುತ್ತೇವೆಂದಿದ್ದ ನಮ್ಮ ಆಶ್ವಾಸನೆ ಈಗ ಹುರುಡಾಯಿತು. ನಾಗಪುರದಲ್ಲಿ ಮೂವರು ಇಳಿದರು. ಆದರೆ ಬೇರೆ ಮೂವರು ಹತ್ತಿದರು. ಡಿಸೆಂಬರಿನ ಅಂತಿಮ ದಿನಗಳು. ಚಳಿ ಏರುತ್ತಿತ್ತು. ನಮ್ಮದೂ ದೊಡ್ಡ ಮೂಟೆಯಂತಹ ಹಾಸಿಗೆಗಳು, ಅದನ್ನು ಹಲಗೆಯ ಮೇಲೆ ಹಾಸಿ ಪೆಟ್ಟಿಗೆಗಳನ್ನು ಕೆಳಗಿನ ಜಾಗದಲ್ಲಿ ತುರುಕಿದ್ದೆವು. ಹೊಸದಾಗಿ ಗಾಡಿ ಏರಿದವರು ತೋಳು ಮೇಲೇರಿಸಿ ಜಗಳಕ್ಕೇ ಬಂದರು ನಮ್ಮ ಪೆಟ್ಟಿಗೆಗಳಿಗೂ ಜಾಗ ಕೊಡಿ ಎಂದು. ವೀಣೆಯನ್ನು ನೋಡಿದರು. ಅದನ್ನು ಸರಿಸಿ ಎಂದರು. ಹೇಗೆ? 'ಬೀನ್ ಬಜಾನೇವಾಲೇ?' ಎಂದು ಕೊನೆಗೊಮ್ಮೆ ಕೇಳಿದರು. ಆ ಪ್ರಶ್ನೆ ಮುಳುಗುತ್ತಿರುವವನಿಗೆ ದೊರಕಿದ ದರ್ಭೆಯಂತಾಯಿತು. ಗೋಗರೆಯುವ ಧ್ವನಿಯಲ್ಲಿ 'ಹಾಂ ಬೀನ್ ಬಜಾನೇವಾಲೇ' ಎಂದೆ. ಅಯ್ಯೋ, ಪಾಪ ಎನಿಸಿರಬೇಕು. ನಮ್ಮನ್ನು ಕಂಡು, ನನ್ನ ಉಡುಗೆಗಳಲ್ಲಿ ಹೆಚ್ಚಿನ ವಿಶೇಷವೇನೂ ಇರಲಿಲ್ಲ. ಎಂದಿನಂತೆ, ಪೈಜಾಮ, ಜುಬ್ಬ, ಬೋಳು ತಲೆ, ನಾನೊಬ್ಬ ಅಧ್ಯಾಪಕನಂತೆ ಕಾಣಿಸುವ ಸಾಧ್ಯತೆಯೇ ಇರಲಿಲ್ಲ—ಬಡ ಸಂಗೀತಗಾರನಂತೆ ಕಂಡಿದ್ದರೆ ಆಶ್ಚರ್ಯವೇನೂ ಇಲ್ಲ. ನಾಗಪುರ ದಾಟದ ಮೇಲೆ ಚಳಿಯು ಹೆಚ್ಚಿತು. ಕ್ರಮೇಣ ಸ್ವೆಟರ್, ಮಫ್ಲರ್, ಕೋಟು ಟೋಪಿಗಳೆಲ್ಲ ಒಂದೊಂದಾಗಿ ಹೊರ ಬಂದವು. ನಂತರ ರಗ್ಗುಗಳನ್ನೂ ತೆಗೆಯಬೇಕಾಯಿತು.

ದೆಹಲಿ ಬಂತು. ಅಲ್ಲಿನ ಪ್ಲಾಟ್‌ಫಾರ್ಮಿನಲ್ಲಿ ಕೆಲವು ಗಂಟೆಗಳನ್ನು ಕಳೆಯಬೇಕಾದ ಭಾಗ್ಯ ಒದಗಿತು. ಚಂಡಿಘಡದ ರೈಲಿಗೆ ಕಾಯುತ್ತಾ. ನಮ್ಮ ಸಾಮಾನುಗಳನ್ನು 'ಕ್ಲೋಕ್ ರೂಂ' ನಲ್ಲಿಟ್ಟು ನಗರದೊಳಗೆ ಹೋಗಿ ಬರಬಹುದಿತ್ತು. ನನ್ನ ಸೋದರಳಿಯನ ಮನೆಗೆ ಹೋಗಿ ಬಿಸಿ ಬಿಸಿಯಾಗಿ ಊಟ ಮಾಡಿಕೊಂಡು ಬರಬಹುದಿತ್ತು. ಆದರೆ 'ಕ್ಲೋಕ್ ರೂಂ'ನಲ್ಲಿ ನಮ್ಮ ಇತರ ಸಾಮಾನುಗಳನ್ನಿಟ್ಟುಕೊಳ್ಳಲು ಒಪ್ಪಿದರೂ ವೀಣೆಯನ್ನು ಮಾತ್ರ ಇಟ್ಟುಕೊಳ್ಳಲು ನಿರಾಕರಿಸಿದರು. ಆ ವಾದ್ಯಾಂಗನೆಗೆ ಮುಸುಕು ಹಾಕಿ ಕಟ್ಟಿಲ್ಲ; ಪೆಟ್ಟಿಗೆಯಲ್ಲಿಟ್ಟು ಬೀಗ ಹಾಕಿಲ್ಲ; ಆದ್ದರಿಂದ ನಿಯಮಾವಳಿಗಳಂತೆ ಅದು ನಮ್ಮ ಹೊಣೆಯಲ್ಲ ಎಂದು ಸ್ವಚ್ಛವಾಗಿ ನಿರಾಕರಿಸಿದ, ಮತ್ತೊಮ್ಮೆ ಸಾಮಾನುಗಳೊಡನೆ ವೀಣೆಯು ಸಮೇತ ಪ್ಲಾಟ್‌ಫಾರ್ಮಿಗೇ ಬಂದು ಬಿದ್ದೆವು. ಏನು ಮಾಡಬೇಕು? ಪ್ಲಾಟ್‌ಫಾರ್ಮೇ ಗತಿ. ಊಟಕ್ಕೆ ಹೋಗಬೇಕಿದ್ದರೂ ಮಹಡಿಯ ಭೋಜನ ಶಾಲೆಗೆ ಹೋಗಬೇಕು. ಇಬ್ಬರೂ ಒಮ್ಮೆಲೇ ಹೋಗುವಂತಿಲ್ಲ. ಪದ್ಮಳನ್ನು ಬಿಟ್ಟು ಒಬ್ಬನೇ ಹೋದರೆ ನಮ್ಮ ಹಾಸಿಗೆಗಳು ಪೆಟ್ಟಿಗೆಗಳು, ವೀಣೆ ಇವುಗಳನ್ನು ಆಕೆ ಒಬ್ಬಳೇ ನೋಡಿಕೊಳ್ಳಲು ಭಯ. ಆಕೆಗೆ ಭಾಷೆ ಬಾರದು. ನನಗೆ ಮುಂದಿನ ರೈಲಿಗೆ ಕಾದಿರಿಸಿದುದನ್ನು ಖಚಿತಮಾಡಿಕೊಳ್ಳಬೇಕಾದ ಅವಶ್ಯಕತೆ ಇತ್ತು. ಹೇಗೋ, ಆ ರಿಜರ್ವೇಶನ್ ಕೊಠಡಿಗೆ ಓಡಿದೆ. ನಮ್ಮ ನಾಡಿನ ರೇಲ್ವೆಯವರ ಲಂಚಾವತಾರ ಅಲ್ಲಿ ಕೋರೈಸುವಂತಿತ್ತು. 'ಅಯ್ಯಾ, ಮೈಸೂರಿನಿಂದಲೇ ಕಾದಿರಿಸಿದ್ದೇನೆ. ಯಾವ ಗಾಡಿ, ಬೋಗಿ ನಂಬರ್ ಏನು ಎಂಬಷ್ಟು ಮಾತ್ರ ನೀನು ತಿಳಿಸಬೇಕಷ್ಟೆ' ಎಂದರೆ ಪುಸ್ತಕ ನೋಡಿದ ನಾಟಕ ಮಾಡಿ 'ರಿಸರ್ವ್ ನೈ ಹುವಾ' ಎಂದ ಸರ್ದಾರ್‌ಜೀ. ಸರಿ, ವಾಗ್ವಾದ. ಕೊನೆಗೆ ಮೇಲಿನ ಅಧಿಕಾರಿಯ ಬಳಿ ಹೋದೆ. ಆತನೊಬ್ಬ ತಮಿಳ. ಅವನ ಭಾಷೆಯಲ್ಲೇ ಮಾತನಾಡಿದಾಗ ವಿಚಾರಿಸುವುದಾಗಿ ಹೇಳಿ ನನ್ನ ನೆರವಿಗೆ ಬಂದ. ಬೋಗಿಯ ಸಂಖ್ಯೆ ಇತ್ಯಾದಿ

ಗಳನ್ನು ಸರ್ದಾರ್‌ಜಿ ಗುರುತಿಸಿ ಕೊಟ್ಟ. ಮತ್ತೆ ಪ್ಲಾಟ್‌ಫಾರ್ಮಿಗೆ ಬಂದೆ, ಊಟ ಮಾಡಿಕೊಂಡು. ಪದ್ಮಳನ್ನು ಊಟಕ್ಕೆ ಕಳಿಸಿ ನಾನು ಕಾವಲು ಕೂತೆ. ಚಳಿ ಹೆಚ್ಚುತ್ತಿತ್ತು. ಬಂದು ಹೋಗುವವರ ದೃಷ್ಟಿಯೆಲ್ಲಾ ನಮ್ಮ ವೀಣೆಯ ಮೇಲೆ. ಆಕೆಯಾದರೋ ನಿರ್ಲಕ್ಷ್ಯದಿಂದಿದ್ದಾಳೆ.

ರಾತ್ರಿ ನಮ್ಮ ಗಾಡಿ ಬಂತು. ಪ್ಲಾಟ್‌ಫಾರ್ಮಿನ ಕೂಲಿಯನ್ನು ಕೇಳಿದರೆ ವೀಣೆ ನೋಡಿಯೇ ಹತ್ತು ರೂಪಾಯಿಗಳನ್ನು ಕೇಳಿದ. ೩-೪ ರಜಾಯಿಗಳನ್ನು ಇಡಿಸಿದ್ದರೂ ಅಲ್ಲಿನ ಜನರಿಗೆ ಹಾಸಿಗೆಯ ಭಾರ ಭಾರವೇ ಅಲ್ಲ. ಆದರೆ ವೀಣೆ ಭಾರವಾಗಿ ಕಂಡಿರಬೇಕು. ಆದ್ದರಿಂದ ದುಬಾರಿ. ಬಡ ಪೆಟ್ಟಿಗೆ ಒಪ್ಪಲಿಲ್ಲ. ಕೊನೆಗೊಮ್ಮೆ ನಾವೇ ಅದನ್ನು ಹೊರುವ ನಿಶ್ಚಯ ಮಾಡಿದೆವು. ಮೊದಲು ನನ್ನ ಹಾಸಿಗೆ, ಪೆಟ್ಟಿಗೆ ತೆಗೆದುಕೊಂಡು ಆ ಸರ್ದಾರ್‌ಜಿ ಗುರುತು ಹಾಕಿಕೊಟ್ಟಿದ್ದ ಬೋಗಿಗೆ ಹೋಗಿ ಅಲ್ಲಿ ಸಾಮಾನಿಟ್ಟು ಪುನಃ ಹಿಂತಿರುಗಿ ಪದ್ಮಳನ್ನೂ ವೀಣಾಳನ್ನೂ ಕರೆತರಬೇಕಾಯಿತು. ಗಾಡಿಯಲ್ಲಿ ಕೂತು ನಿಟ್ಟುಸಿರು ಬಿಟ್ಟೆ. ಆದರೆ ನಮ್ಮದು ದುರದೃಷ್ಟ. ಗಾಡಿ ಹೊರಡಲು ಹತ್ತು ನಿಮಿಷಗಳಿರುವಾಗ, ಅಲ್ಲಿಗೆ ಬಂದ ಕಂಡಕ್ಟರ್ ನಮ್ಮ ಟಿಕೆಟ್‌ಗಳನ್ನು ಪರೀಕ್ಷಿಸಿ ಇದು ನೇರಾಗಿ ಜಮ್ಮುವಿಗೆ ಹೋಗುವ ಬೋಗಿ, ನೀವು ಅಂಬಾಲಾದಲ್ಲಿ ಇಳಿಯಬೇಕು. ಈ ಬೋಗಿಯಲ್ಲ, ಮತ್ತೊಂದನ್ನು ಹಿಂದೆ ಲಗತ್ತಿಸಿದೆ, ಇಳಿಯಿರಿ ಎಂದ. ಸರ್ದಾರ್ ಜೀ ಗುರುತು ಹಾಕಿಕೊಟ್ಟಿದ್ದಾನೆಂದರೆ, ಅದಕ್ಕೆ ನಾನು ಹೊಣೆಯಲ್ಲ. ಇಳಿದು ಆ ಬೋಗಿ ಹತ್ತಿ, ಎಂದ. ಇಷ್ಟೆಲ್ಲಾ ಆಗುವುದರೊಳಗೆ ಮತ್ತೆ ಐದು ನಿಮಿಷಗಳು ಜಾರಿದುವು. ಸ್ಟೇಶನ್ನಿನ ಸರ್ದಾರ್‌ಜೀ ನಮ್ಮ ಲಂಚ ಕೊಡದ ಮನೋಭಾವಕ್ಕಾಗಿ ಸೇಡು ತೀರಿಸಿಕೊಂಡಿದ್ದನೇನೋ, ಬೇಕೆಂದೇ ತಪ್ಪು ತಿಳಿವಳಿಕೆ ಕೊಟ್ಟ. ಮಾಡಬೇಕೇನು? ಮತ್ತೆ ಗಂಟು, ಗದಡಿ, ವೀಣೆ-ಹಾಂ, ಆ ವೀಣೆ ಕೂಡ-ಕೆಳಗಿಳಿಸಿ, ಹೊರೆಗಳನ್ನು ಒಂದೊಂದೇ ಹೊತ್ತು, ಓಡಿ, ತೇಕಿ, ಸುಮಾರು ೮-೧೦ ಬೋಗಿಗಳ ಹಿಂದಿದ್ದ 'ನಮ್ಮ ಬೋಗಿ'ಗೆ ಬಂದು ಸಾಮಾನುಗಳನ್ನು ಒಳಗೆ ತಳ್ಳಿ ವೀಣಾದೇವಿಯವರನ್ನು ಭಯಭಕ್ತಿಗಳಿಂದ ಒಳಗೆಳೆದುಕೊಂಡು ನಮ್ಮ ಜಾಗದಲ್ಲಿ ಕೂತೆವು. ನನಗೇನೋ ಇನ್ನೂ ಕಾತುರ. ಮತ್ತೆ ಯಾರು ಬಂದು ಎಬ್ಬಿಸುತ್ತಾರೋ ಎಂದು. ಇಲ್ಲಿನ ಇನ್ನೊಂದು ಸಮಸ್ಯೆ ಎಂದರೆ 'ರಾಷ್ಟ್ರಭಾಷೆ'ಯಾದ ಹಿಂದಿ ಇಲ್ಲಿನ ಜನರಿಗೇ ಅರ್ಥವಾಗದು. ಇಲ್ಲಿಂದ ಮುಂದೆ ಎಲ್ಲಾ ಅವರ ಭಾಷೆ-ಪಂಜಾಬಿ, ಅವರೇನು ಕನ್ನಡಿಗರು ಕೆಟ್ಟು ಹೋದರೇ ಸರ್ವಧರ್ಮ ಸಮನ್ವಯದ ಜೊತೆ ಸರ್ವ ಭಾಷಾ ಸಮನ್ವಯವನ್ನೂ ಮಾಡಿಕೊಳ್ಳಲಿ. ಕನ್ನಡಿಗನ ಔದಾರ್ಯಕ್ಕೆ ಕನ್ನಡ ಭಾಷೆ ಬಲಿ! ಕರ್ನಾಟಕದಲ್ಲಿಯೇ ಅನೇಕರಿಗೆ ಕನ್ನಡ ಅರ್ಥವಾಗುವುದಿಲ್ಲವೆಂಬುದು ಹಾಸ್ಯಾಸ್ಪದ. ಹೋಗಲಿ ಬಿಡಿ.

ಕೊನೆಗೊಮ್ಮೆ ರೈಲು ಹೊರಟಿತು. ಆದರೆ ನಾವು ಅಂಬಾಲಾದಲ್ಲಿ ಇಳಿದು ಮತ್ತೊಂದು-ಗಾಡಿ ಹತ್ತಬೇಕಿತ್ತು. ಆ ನಿಲ್ದಾಣ ಬರುವುದೂ ಬೆಳಗಿನ ಝಾವದಲ್ಲಿಯೇ. ಮತ್ತೆ ಈ ವೀಣೆಯನ್ನು ಇಳಿಸಿ ಹತ್ತಿಸಬೇಕಲ್ಲ ಎಂತ ಯೋಚನೆ. ಈಗ ನೋಡಿ ಆಕೆಯನ್ನು ಕಂಡಾಗ ನನ್ನಲ್ಲಿ ಆಗುತ್ತಿದ್ದ ಪ್ರತಿಕ್ರಿಯೆ ಕ್ರೂರ ಎನ್ನಬಹುದು. ಹಾಳಾದ್ದು, ಹೇಗಾದರೂ ಮುರಿದು ಹೋಗಬಾರದೇಕೆ? ಇಲ್ಲೇ ಬಿಸಾಡಿ ಹೋಗಬಹುದಲ್ಲ ಎನ್ನುವಷ್ಟು ಕೋಪ. ಆ ವರ್ಷ ಅಲ್ಲಿ ಹಿಮದ ಗಾಳಿ ಬೀಸತೊಡಗಿತ್ತು. ಅಸಹನೀಯ ಚಳಿ. ನಾವು ತಂದಿದ್ದ ರಗ್ಗುಗಳು. ಸ್ವೆಟರ್‌ಗಳು ನಿಷ್ಪ್ರಯೋಜಕ. ನಮ್ಮಲ್ಲಿ ರಜಾಯಿ ಇರಲಿಲ್ಲ. ಚಳಿಯಂತೂ ಒಳಗಿಂದಲೇ ಮೂಳೆಗಳನ್ನು ಕೊರೆಯುವ ಅನುಭವ. ನಿದ್ದೆ ಬಾರದು. ಬಂದರೂ ಸ್ಟೇಶನ್ನಿನ ನಿರೀಕ್ಷಣೆಯಿಂದ ನಿದ್ದೆ ಮಾಡುವಂತಿಲ್ಲ. ನಮ್ಮ ಬರ್ತಿನಲ್ಲಿ ಕುಳಿತ, ಮಲಗಿದ ಯಾವುದೇ ಭಂಗಿಯಲ್ಲೂ ಸ್ವಲ್ಪ ಕದಲಿದರೂ ಹೊಸ ಚಳಿ! ಅದನ್ನು ವಿವರಿಸಲಾಗದು; ಅನುಭವಿಸಿಯೇ ಅರಿಯಬೇಕು.

ಅಂತೂ ಅಂಬಾಲಾ ಬಂತು. ಇಳಿದೆವು,

ಆ ವೀಣೆಯೆಂಬ ಮರದ ಹಿರಿಯ ತುಂಡನ್ನು ಹೊತ್ತು. ಸ್ಟೇಶನ್ನಿನಲ್ಲಿ ಮತ್ತೆ ಒಂದೆರಡು ಗಂಟೆಗಳು ಕಾಯಬೇಕಿತ್ತು. ಆದರೆ ಪದ್ಮಳಿಗೆ ಅಲ್ಲಿ ಮಣ್ಣಿನ ದೊಡ್ಡ ಒಲೆಯಲ್ಲಿ ನಿಗಿ ನಿಗಿ ಉರಿಯುತ್ತಿದ್ದ ಕಲ್ಲಿದ್ದಲ ಬೆಂಕಿಯ ಮುಂದೆ ಕುಳಿತ ನಾಲ್ವರ ಗುಂಪು ಕಣ್ಣಿಗೆ ಬಿತ್ತು. ಬಿಸಿ ಚಾ ಬೇರೆ ಕುದಿಯುತ್ತಿತ್ತು. ಅಲ್ಲಿಗೆ ಸಾಮಾನುಗಳೊಡನೆ ಸರಿದೆವು. ಆದರೆ ಅವರಾರೂ ಕೂತಲ್ಲಿಂದ ಅಲುಗಾಡಲಿಲ್ಲ. ನಾವು ಕನ್ನಡದಲ್ಲಿ ಮೆಲು ದನಿಯಲ್ಲಿ ಮಾತನಾಡುತ್ತಿದ್ದೆವು. ಹಿಂದಿಯಲ್ಲಿ ಸ್ವಲ್ಪ ಸರೀರಿ ಎಂದು ನಾವು ಮಾಡಿದ ಪ್ರಾರ್ಥನೆ ಅವರಿಗೆ ಅರ್ಥವಾದಂತೆ ತೋರಲಿಲ್ಲ. ಜೊತೆಗೆ ಹಿತವಾದ ಬೆಂಕಿಯನ್ನು ಬಿಟ್ಟು ಸರಿಯುವುದರಲ್ಲಿ ಅರ್ಥವಿದೆಯೇ? ಏನು ಮಾಡಬೇಕಿಗ, ಪದ್ಮಳನ್ನು ಕನ್ನಡದಲ್ಲಿ ಕೇಳಿದೆ,-"ಹೋಗಲಿ ಬಿಸಿ ಟೀ ಕುಡಿಯೋಣವೇ?" ಇಷ್ಟರಲ್ಲಿ ಮುಸುಕೆಳೆದು ತಲೆ ತಗ್ಗಿಸಿ ನಿದ್ದೆ ಮಾಡುತ್ತಿದ್ದ ತಲೆಯೊಂದು ಮೇಲೆದ್ದಿತು. ಇದ್ದಕ್ಕಿದ್ದಂತೆ ಆ ತಲೆಯಿಂದ 'ಯಾವೂರಾತ್ರಿ ನಿಮ್ದು?' ಎಂಬ ಉದ್ಗಾರ, ಪ್ರಶ್ನೆ! ನಮಗೆ ಆಶ್ಚರ್ಯ! ಸ್ವಾಭಾವಿಕವೆನ್ನುವಂತೆ ಧಾರವಾಡದ ಧ್ವನಿಯಲ್ಲಿ ಎಲಾ, ಇವನ ಎಂದೆ ದೂರದ ಅಂಬಾಲಾದಲ್ಲಿನ ಕನ್ನಡದ ಸೊಲ್ಲು ಕೇಳಿ. ಆತ ಪಕ್ಕಕ್ಕೆ ಸರಿದ. 'ಬರ್ರೀ ಬಾಯಾರೇ, ಕೂಡ್ರಿ, ಚಳಿ ಬಾಳೈತಿ —ಇಲ್ಲಿ ಕೂಡ್ರಿ' ಎಂದು— ನಮಗೆ ಸ್ವರ್ಗಕ್ಕೆ ಮೂರೇ ಗೇಣು ಉಳಿದಂತಾಯ್ತು. ಮತ್ತೆ ಯಾವ ಕ್ಷಣದಲ್ಲಿ ಆಹ್ವಾನವನ್ನು ಹಿಂದಕ್ಕೆ ಪಡೆಯುತ್ತಾನೋ ಎನ್ನುವಂತೆ ಒಮ್ಮೆಲೆ ಆ ಜಾಗ ಆಕ್ರಮಿಸಿದೆವು. 'ಬಾಯಾರು,' ನಾನು ಒತ್ತಿಕೊಂಡು ಇದ್ದದ್ದರಲ್ಲೇ ಜಾಗ ಮಾಡಿಕೊಂಡು ಕುಳಿತೆವು. ಆಹಾ, ಏನು ಸುಖ! ಅವನು ಮತ್ತೇನೋ ಆ ಅಂಗಡಿಯವನಿಗೆ ಹೇಳಿದ. ಆತ ಬಿಸಿ ಬಿಸಿ ಚಹಾ ಕೊಟ್ಟ. ಅಮೃತ ಸಹ ಅಷ್ಟು ಆಪ್ಯಾಯಮಾನವಾಗಿರದು ಎನ್ನಿಸಿತು ಆ ಕ್ಷಣ. ನಂತರ— ಬಿಸಿ ಚಹಾ ದೇಹದೊಳಗಿಳಿದಂತೆಲ್ಲಾ ನಮಗೆ ಸ್ಥಳ ಮಾಡಿಕೊಟ್ಟ ಪುಣ್ಯಾತ್ಮನನ್ನು ಮಾತ



"ಹಲ್ಲೊ!! ಬೇಜಾರಾಗ್ತಾಯಿದೆ ಯಾವುದೋ ಕಾದಂಬರಿಯನ್ನು ನೋಡುತ್ತಿದ್ದೇನೆ......"

ನಾಡಿಸಬೇಕೆಂಬ ಬುದ್ಧಿ ಹೊಳೆಯಿತು. ಆತನಿಗೂ ನಾವೆಲ್ಲೋ ಸಂಗೀತಗಾರರು, ಕಛೇರಿ ಮಾಡಲು ಹೊರಟಿದ್ದೇವೆ ಎನಿಸಿತ್ತಂತೆ. ಪರಸ್ಪರ ಪರಿಚಯದ ಬಳಿಕ ನಮ್ಮ ಬವಣೆ ಅವನಿಗೂ ಅರ್ಥವಾಯಿತು. ಆತ ನಮ್ಮ ನಾಡಿನ ವಾಯುವ್ಯದ ಗಡಿಯಲ್ಲಿ ರಕ್ಷಣಾ ನಿರತನಾಗಿದ್ದ ಒಬ್ಬ ಕನ್ನಡ ಯೋಧ ಲ್ಯಾನ್ಸ್‌ನಾಯಕ್ ಎಂದು ತನ್ನ ಹುದ್ದೆಯನ್ನು ವಿವರಿಸಿದ ನೆನಪು. ಆತನದು ಬೆಳಗಾಂ ಸಮೀಪದ ಒಂದು ಗ್ರಾಮ, ಪರಮ ಪಾವನವೆನಿಸಿದ ಕನ್ನಡದ ಸೊಲ್ಲು ವರ್ಷಗಳ ಬಳಿಕ ಅವನ ಕಿವಿಗೆ ಬಿತ್ತಂತೆ. ಎಂತಲೇ ನಮ್ಮವರೆಂದು ಅಂಗಡಿಯವನಿಗೆ ಪರಿಚಯಿಸಿದ. ತನ್ನ ಕತೆಯನ್ನು ಹೇಳಿಕೊಂಡ. ತನ್ನ ಹಳ್ಳಿಗೆ ಹೋಗಿ ನಾಲ್ಕಾರು ವರುಷಗಳೇ ಸಂದಿವೆ ಎಂದ. ಎಲ್ಲಾ ಸೌಕರ್ಯಗಳಿದ್ದರೂ ಕನ್ನಡ ಭಾಷಾ ಬಂಧುಗಳಾರೂ ಅಲ್ಲಿರಲಿಲ್ಲ. ತನ್ನವರನ್ನು ಯಾವಾಗ ಕಾಣುವುದೆಂಬುದೂ ತಿಳಿಯದ ಸ್ಥಿತಿ– ಎಂದೆಲ್ಲ ತನ್ನ ಬವಣೆಯನ್ನು ತೋಡಿಕೊಂಡ. ನನಗೆ ನನ್ನದೇ ಸಂಕಟ, ಮತ್ತೊಮ್ಮೆ ಅಂತಹ ಅವೇಳೆಯಲ್ಲಿ ವೀಣೆಯೊಡನೆ ಇನ್ನೊಂದು ರೈಲು ಹತ್ತಬೇಕಲ್ಲಾ ಎಂದು, ಪದ್ಮಳು ಕೊನೆಗೆ ಆತನನ್ನೇ ಕೇಳಿದಳು. ಅಲ್ಲಿಂದ ಸುಮಾರು ೩ ಘಂಟೆಗಳ ಪ್ರಯಾಣ ಮಾಡಬೇಕಿತ್ತು. ನಮಗೆ 'ಸ್ವಲ್ಪ ಸಹಾಯ ಮಾಡೀಪ್ಪಾ' ಎಂದಳು ರೈಲು ಬಂದಾಗ. ಆತನ ನೆರವಿನೊಡನೆ ನಮ್ಮ ಬೋಗಿಗೆ ಬಂದು ಹೇಗೋ ಹತ್ತಿ ಕುಳಿತೆವು, ಆತನಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸಿ.

ಚಂಡೀಘಡ ಸೇರಿದಾಗ ಬೆಳಗಾಗಿತ್ತು! 'ಆಗಿತ್ತು' ಎಂದು ಗಡಿಯಾರ ತೋರಿಸಿತಷ್ಟೆ. ೩–೪ ಅಡಿಗಳ ದೂರಕ್ಕೂ ಏನೂ ಕಾಣದಂತಹ ದಟ್ಟವಾದ ಮಂಜು ಮುಸುಕಿತ್ತು. ಅಸಾಧ್ಯ ಚಳಿ– ಮಾತನಾಡಿದರೆ ಸಿಗರೇಟ್ ಹೊಗೆಬಿಟ್ಟಷ್ಟು ದಟ್ಟವಾದ ಮಂಜು ಹವೆ ಬಾಯಿಂದ ಸೂಸುತ್ತಿತ್ತು. ಉಸಿರಾಟದಲ್ಲೂ ಹಾಗೆಯೇ. ಆದರೆ ಸದ್ಯ ಸಾಮಾನು ಹೊರುವ ಕಷ್ಟ ಸ್ವಲ್ಪ ಮಟ್ಟಿಗೆ ತಪ್ಪಿತ್ತು ಸಮ್ಮೇಳನದ ಸ್ವಯಂ ಸೇವಕರು ಹೊರೆ ಹೊತ್ತಿದ್ದರಿಂದ. ಆದರೆ ಆ ವೀಣಾದೇವಿಯವರನ್ನು ಕಂಡು ಅವರಿಗೂ ಅಚ್ಚರಿ. ಬೇರೆ ಬೇರೆ ಕಡೆಗಳಿಂದ ಬಂದ ಪ್ರಾಧ್ಯಾಪಕರಾದರೋ 'ಕ್ಯಾ ಗೋಪಾಲ್ ಸಾಬ್ ಏ ಬೀನಾ ಕಬ್ ಸೀಖೀ' ಎಂದೊಬ್ಬರು 'ಎಂಟರ್‌ಟೈನ್‌ಮೆಂಟ್ ಮೇ ಆಪ್ ಕಾ ಭಿ ಪ್ರೋಗ್ರಾಂ ಹೈ ಕ್ಯಾ? ಷುಕ್ರಿಯಾ' ಎಂದು ಇನ್ನೊಬ್ಬರು 'ಏ ಕ್ಯಾ ಭಾಯೀ ಏ ಚಾಲು ಕ್ಯೊಂಕಿ ಬೀನಾ ಹೈ ಕ್ಯಾ? ಕಹಾಂ ಮಿಲಾ? ದಿಖಾನೆ ಲಾಯೇ? ಬಹುತ್ ಸುಂದರ್' ಎಂದು ಮೂರನೆಯವರು. ಈ ಪ್ರಶ್ನೆಗಳಿಗೆ ಏನು ಉತ್ತರ ಹೇಳಲಿ? ಹೂಂ ಎಂದು ತಲೆಯಾಡಿಸಿ ಕೊನೆಗೊಮ್ಮೆ ನಮಗೆ ನಿಗದಿಗೊಳಿಸಿದ್ದ ವಿದ್ಯಾರ್ಥಿನಿಯರ ಹಾಸ್ಟೆಲ್ ಸೇರಿದೆವು. ಅಲ್ಲಿ ಮೀನಾಕ್ಷಿ ಎಂದೊಬ್ಬ ಸ್ವಯಂ ಸೇವಕಿ. ನನ್ನ ಪತ್ನಿಯ ರಗ್ಗಾವತಾರ, ಮುಸುಕಾವತಾರ, ವೈನಡುಕಗಳನ್ನು ಕಂಡು ಓಡಿ ಹೋಗಿ ಮಣ್ಣಿನ ಒಲೆಯೊಂದನ್ನು ತಂದಳು. ಕಲ್ಲಿದ್ದಲಿನಿಂದ ಅದನ್ನು ಜಾಜ್ವಲ್ಯಗೊಳಿಸಿದಳು.

ಮೂರು ದಿನಗಳು ಯಾವ ತೊಂದರೆಯೂ ಇರಲಿಲ್ಲ. ಅಷ್ಟರಲ್ಲಿ ಮರು ಪ್ರಯಾಣದ ವಿವರಗಳನ್ನು ಈ ಬಾರಿ ನನ್ನ ಭಾವ ಮೈದುನನಿಗೆ ಸ್ಪಷ್ಟವಾಗಿ ತಿಳಿಸಿ ನಿಲ್ದಾಣದ ಎರಡು ತುದಿಗಳಲ್ಲೂ ಗಂಡ ಹೆಂಡಿರಿಬ್ಬರೂ ನಿಂತಿದ್ದು ನಮ್ಮನ್ನು ಗುರುತಿಸಿ, ಸದ್ಯ, ಆ ವೀಣೆಯನ್ನು ವಶಕ್ಕೆ ತೆಗೆದುಕೊಳ್ಳಬೇಕೆಂದು ತಿಳಿಸಿದೆ. ಸಮ್ಮೇಳನ ಮುಗಿದ ಬಳಿಕ ನಮಗೆ ಅಮೃತಸರ ಮುಂತಾದ ಸ್ಥಳಗಳನ್ನು ಕಾಣುವ ಆಲೋಚನೆ ಇತ್ತು. ಆದರೆ ಸಮ್ಮೇಳನದ ಕೊನೆಯ ಸಂಜೆಯೇ ನಮ್ಮ ಬಿಡದಿಯನ್ನು ತೆರವು ಮಾಡಬೇಕೆಂದು ಆದೇಶ ಬಂತು. ಮತ್ತೊಮ್ಮೆ ವೀಣೆಯದೇ ಯೋಚನೆ. ಆ ವಿದ್ಯಾರ್ಥಿ ನಿಲಯದ ವಾರ್ಡನ್ನರನ್ನೂ ಕಂಡು, ಗೋಗರೆದು ಅವರನ್ನೊಪ್ಪಿಸಿ ಎರಡು ದಿನಗಳ ಮಟ್ಟಿಗೆ ವೀಣೆಯನ್ನು ಅವರ ಸುಪರ್ದಿನಲ್ಲಿ ಬಿಟ್ಟೆವು. ಅಮೃತಸರಕ್ಕೆ ಹೋಗಿ ಬಂದುದೇ ಒಂದು ಅನುಭವ. ಅಂತೂ ಅಲ್ಲಿಂದ ಹಿಂದಿರುಗಿದೆವಾದರೂ ನಾವು ಬಂದಾಗ ವಾರ್ಡನ್ ಇರಲಿಲ್ಲ. ಅವರಿಗಾಗಿ ಕಾದು ನಮ್ಮ

ವೀಣೆಯನ್ನು ಪಡೆಯುವ ವೇಳೆಗೆ ನಮ್ಮ ಪ್ರಯಾಣದ ಏರ್ಪಾಡುಗಳು ಸ್ವಲ್ಪ ಮಟ್ಟಿಗೆ ತಲೆ ಕೆಳಗಾಗಿದ್ದವು. ಆ ದಿನ ಅಲ್ಲಿ ಉಳಿಯಬೇಕಾಯ್ತು, ದುಬಾರಿ ವೆಚ್ಚ ಮಾಡಿ. ಮರು ದಿನ ಹೇಗೋ ಮಾಡಿ ಚಂಡೀಘಡದಿಂದ ಆಗ್ರಾಗೆ ಹೋಗುವ ಬೆಳಗಿನ ಗಾಡಿಯನ್ನು ಹತ್ತಿದೆವು. ಅರ್ಧ ರಾತ್ರಿಯ ವೇಳೆಗೆ ಆಗ್ರಾ ತಲಪುವ ರೈಲದು. ಕೇಂದ್ರ ಪುರಾತತ್ವ ಇಲಾಖೆಯವರ ಅತಿಥಿ ಗೃಹದಲ್ಲಿ ತಂಗಲು ಮೊದಲು ಏರ್ಪಡಿಸಿದ್ದೆ. ಆದರೆ ಈಗ ನಾವು ತಲಪುವ ಸಮಯವೆಲ್ಲಾ ಅಸ್ತವ್ಯಸ್ತ. ಜೊತೆಗೆ ವಿಪರೀತ ಚಳಿಯ ಪರಿಣಾಮವಾಗಿ ಸಹಧರ್ಮಿಣಿ ಅಸ್ವಸ್ಥಳಾಗಿದ್ದಳು. ನೆಗಡಿ, ಕೆಮ್ಮು, ಜ್ವರ ಇತ್ಯಾದಿ. ನನಗಿದ್ದ ಒಂದು man power ಕಡಿಮೆಯಾಯಿತಷ್ಟೇ ಅಲ್ಲ, ಪದ್ಮಳೂ ಒಂದು ಲಗ್ಗೇಜ್ ಆಗಿದ್ದಳು. ಚಂಡೀಘಡದಲ್ಲಿ ಸಾಮಾನುಗಳನ್ನು ಗಾಡಿಗೆ ತುಂಬಲು, ಆಗ್ರಾದಲ್ಲಿ ಅರ್ಧರಾತ್ರಿಯಲ್ಲಿ ಅದನ್ನು ಇಳುಹಲು ನಾನು ಪಟ್ಟ ಪಾಡು ಅಸಹನೀಯ. ಅಲ್ಲಿ ಇಳಿದ ಬಳಿಕ ಮೈಸೂರಿನ ಹೋಟಲೊಂದಕ್ಕೆ ಹೋದೆವು. ವೀಣೆಯದೇ ಸಮಸ್ಯೆ. ಅದನ್ನು ಇತರ ಸಾಮಾನುಗಳಂತೆ ಅಲಕ್ಷ್ಯದಿಂದ ಹೊರುವಂತೆಯೂ ಇಲ್ಲ. ಟ್ಯಾಕ್ಸಿ ಮಾಡಿದರೂ ನಮ್ಮ ಇತರ ಸಾಮಾನುಗಳು ಡಿಕ್ಕಿಯಲ್ಲಿ, ಆಕೆ ಮಾತ್ರ ರಾಜಾರೋಷವಾಗಿ ಧಿಮಾಕಿನಿಂದ ನಮ್ಮ ತೊಡೆಗಳ ಮೇಲೆ!

ಆಗ್ರಾದ ಹೋಟೆಲಿನಲ್ಲಿ ಎರಡು ದಿನಗಳಿದ್ದೆವು. ಟ್ಯಾಕ್ಸಿಯಲ್ಲಿ ಪ್ರೇಕ್ಷಣೀಯ ಸ್ಥಳಗಳನ್ನು ಕಂಡೆವು. ಪದ್ಮಳಿಗೆ ಒಂದು ವಿಧದ ಖುಷಿ. ಅವಳ ಅನಾರೋಗ್ಯದ ಕಾರಣ ನಾನು ಟ್ಯಾಕ್ಸಿ ಏರ್ಪಡಿಸಿದ್ದರಿಂದ ರಾಣಿಯಂತೆ ಎಲ್ಲ ಕಡೆಯೂ ವರ್ತಿಸಿದಳು. ಪಂಜಾಬಿನ ಊಟ ಅವಳಿಗೆ ಹಿಡಿಸಿರಲಿಲ್ಲವಾಗಿ ಇಲ್ಲಿ ಬರೀ ಹಸಿ ಮೆಣಸಿನ ಕಾಯನ್ನು ಕಡಿದು, ಕಡಿದು ತಿಂದಳು. ನಾನು ಬೇಡವೆಂದರೂ ಆಗ್ರಾದಲ್ಲಿ ದೊಡ್ಡ ಗಾತ್ರದ ಅಮೃತ್ (ಸೀಬೆ ಹಣ್ಣು) ಗಳನ್ನು ತಿಂದೇ ತಿಂದಳು. ಅವಳ ಜ್ವರ ಗಾಯಬ್! ನನ್ನ ಜೇಬಿನ ಹಣ ಸಹ ಅಷ್ಟೇ ಬೇಗನೆ ಕರಗತೊಡಗಿತ್ತು.

ಪ್ರಯಾಣದ ಆರಂಭದಲ್ಲೇ ನಮ್ಮ ಮರು ಪ್ರಯಾಣಕ್ಕೂ ಏರ್ಪಾಡುಗಳನ್ನು ಮಾಡಿದ್ದ ಕಾರಣ, ಹಾಗೂ ಚಂಡೀಘಡದಲ್ಲಿ ಒಂದು ದಿನದ ಏರು ಪೇರಾದ್ದರಿಂದ ಆಗ್ರಾದಲ್ಲಿ ನಮ್ಮ ವಾಸವನ್ನು ಮೊಟಕುಗೊಳಿಸಿ ಮದರಾಸಿನ ರೈಲನ್ನು ಹತ್ತಿದೆವು. ಅಗಲೂ ಅರ್ಧ ರಾತ್ರಿಯಲ್ಲೇ ಆ ರೈಲು ಬಂದದ್ದು. ಅದರಲ್ಲಿ ನಮ್ಮ ಡಬ್ಬಿಯಲ್ಲಿ ನಮಗಾಗಿ ಕಾದಿರಿಸಿದ ಜಾಗ ಬಾಗಿಲ ಬಳಿಯ ಎರಡು ಬರ್ತ್‌ಗಳು, ಮತ್ತೊಮ್ಮೆ ವೀಣೆಯನ್ನು ಎಲ್ಲಿಡಬೇಕೆಂಬ ಯೋಚನೆ. ಹತ್ತಿ ಇಳಿಯುವವರ ಕಾಟ, ಗೊಣಗಾಟ. ಕುಲುಕಾಟದಲ್ಲಿ ವೀಣೆ ಪಕ್ಕಕ್ಕೆ ಜಾರಿ ಬೀಳುತ್ತದೇನೋ ಎಂಬ ಆತಂಕ ಬೇರೆ. ಕೊನೆಗೊಮ್ಮೆ ಎದುರು ಬದುರಿನ ಎರಡು ಪಾಯಖಾನೆಗಳ ನಡುವೆ ಅದನ್ನು ಸ್ಥಾಪಿಸಿದೆವು. ಮೂರನೇ ದಿನ ಬೆಳಗ್ಗೆ ಬೆಜವಾಡದಲ್ಲಿ ತಿಂಡಿ ತಿಂದೆವು ಆದರೆ ಓಂಗೋಲು ಬರುವ ವೇಳೆಗೆ ನಿಲ್ದಾಣದ ಮೊದಲ ತುದಿಯಲ್ಲೇ ಶ್ರೀರಂಗಳನ್ನು ಕಂಡೆ. ಬಹುಶಃ ತಾವು ಮಾಡಿದ ತಪ್ಪನ್ನು ನಾವು ವಿಶ್ಲೇಷಿಸಲೆಂದೋ ಏನೋ ಆಕೆ ನಿಲ್ದಾಣಕ್ಕೆ ಊಟ ತಂದಿದ್ದಳು. ಎಲ್ಲಾ ಮೂಸಿ ಹೊಡೆಯಲು! ಇತರ ತಿನಿಸುಗಳು ಬೇರೆ. ಒಮ್ಮೆ ಊಟ ಆಗಿದ್ದರೂ, ವಾರದ ಬಳಿಕ ಖಾರವಾದ ಸಾರು, ಸಾಂಬಾರನ್ನು ಕಂಡ ನನ್ನ ಪಳಿಗೆ ನಾವು ಪಟ್ಟ ಶ್ರಮದ ನೆನಪೇ ಆಗಲಿಲ್ಲ. ಇನ್ನೊಂದು ತುದಿಯಲ್ಲಿದ್ದ ಶ್ರೀರಂಗಳ ಗಂಡ ಸಹ ಬಂದ, ಆ ಮೂರು–ನಾಲ್ಕು ನಿಮಿಷಗಳಲ್ಲಿ ಸಾಧ್ಯವಾದಷ್ಟು ಮುಕ್ಕಿ, ಉಳಿದದ್ದನ್ನು ಗಂಟು ಕಟ್ಟಿಕೊಂಡು ವೀಣಾಳನ್ನು ಅವರಿಗೊಪ್ಪಿಸಿ, ನಾನು ಬಿಟ್ಟ ಬಾಟಲುಗಳ ಗತಿ ಏನಾಯ್ತು ಎಂದು ಕೇಳಿದೆ. ಎಲ್ಲಾ ಒಡೆದು ಹೋಗಿತ್ತು. ಭಾವ, ಎಂದಳು ಪೆಚ್ಚು ಮೋರೆ ಹಾಕಿಕೊಂಡು. 'ನಿನ್ನ ಪುಣ್ಯ, ಈ ಬಾರಿ ಬುದ್ಧಿಯಿಂದಿದ್ದೀಯಾ. ಇಲ್ಲದಿದ್ದರೆ ಖಂಡಿತ ವೀಣೆಯನ್ನೂ ಹಾಗೆಯೇ ಕೆಳಗೆ ಹಾಕಿ ಹೋಗುತ್ತಿದ್ದ' ಎಂದೆ. ರೈಲು ಕದಲಿತು. ಆ ವಾರದಲ್ಲಿ ಮೊದಲ ಬಾರಿಗೆ ನಿರಂತರವಾಗಿ ನಿದ್ರೆ ಮಾಡಿದೆ. ✡

ನಿಮ್ಮ ಶಬ್ದ ಭಾಂಡಾರ ಬೆಳೆಯಲಿ

ಶಬ್ದ ಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಪ್ರತಿ ತಿಂಗಳೂ ಕೆಲವು ಶಬ್ದಗಳನ್ನು ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆಮೇಲೆ ಇದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥವನ್ನು ವಿವರಿಸಿದೆ.

೧. **ಆಕರ**
(ಅ) ಉತ್ಪತ್ತಿ ಸ್ಥಾನ, (ಆ) ಮರಿ (ಇ) ಆಲಿಸುವಿಕೆ (ಈ) ಮುಂದಿನದು

೨. **ಜೇತಾರ**
(ಅ) ಮಾದುಕ (ಆ) ನೇಯ್ಗೆಗಾರ (ಇ) ಗೆಲ್ಲುವವನು (ಈ) ಬಿಲ್ಲುಗಾರ

೩. **ಪಟಾಯಿಸು**
(ಅ) ಧ್ವಜ ಹಾರಿಸು (ಆ) ಮೋಸ ಮಾಡು (ಇ) ಉಡಾಫೆ ಮಾತಾಡು (ಈ) ಮನವರಿಕೆಯಾಗು

೪. **ಹಟಾಯಿಸು**
(ಅ) ಮನವರಿಕೆಯಾಗು (ಆ) ದೂರ ಮಾಡು (ಇ) ಬಡಿಬಡಿಸು (ಈ) ಉಳುಮೆಮಾಡು

೫. **ಏಕೋಭಾವ**
(ಅ) ಅಸ್ಥಿರ ಮನಸ್ಸು (ಆ) ಒಂದೇ ಮನಸ್ಸು (ಇ) ಇಲ್ಲದಿರುವಿಕೆ (ಈ) ಧಿಕ್ಕಾರವೃತ್ತಿ

೬. **ಏಕಗ್ರಾಹಿ**
(ಅ) ಪಟ್ಟುಹಿಡಿಯುವ (ಆ) ಮೊಸಳೆ (ಇ) ಶರಣಾಗತಿ (ಈ) ಶತ್ರು

೭. **ಮಸ್ತಿ**
(ಅ) ಅಸ್ಪಷ್ಟತೆ (ಆ) ಸಹಗಮನ ಮಾಡಿದವಳು (ಇ) ಮಿದುಳು (ಈ) ಸೊಕ್ಕು

೮. **ಖಾತರಿ**
(ಅ) ಹೊಂಡ (ಆ) ದೊಡ್ಡಸ್ತನ (ಇ) ಭರವಸೆ (ಈ) ಅಪಾಯ

೯. **ಮುಕ್ತಹಸ್ತ**
(ಅ) ಉದಾರ (ಆ) ಜಿಪುಣ (ಇ) ಬಿಗಿಯಾದ ಮುಷ್ಟಿ (ಈ) ಕೈ ತಪ್ಪಿದ

೧೦. **ವಿದ್ಯಮಾನ**
(ಅ) ಗೆಲುವು (ಆ) ಅಳತೆ (ಇ) ಇದ್ದ ಸಂಗತಿ (ಈ) ಪಂಡಿತರಿಗೆ ಮನ್ನಣೆ

೧೧. **ತಾಜಾಕಲಂ**
(ಅ) ಮಸಿ ಕುಡಿಕೆ (ಆ) ವಿಶೇಷ ವಿಚಾರ (ಇ) ಹೊಸ ಹಣ್ಣು (ಈ) ಒಂದು ತರದ ಅಕ್ಕಿ

೧೨. **ತಳವೆಳಗು**
(ಅ) ನಕ್ಷತ್ರದ ಪ್ರಕಾಶ (ಆ) ನಸುಕು (ಇ) ಅಡೆತಡೆ (ಈ) ವಿಸ್ಮಯ

ಶಬ್ದ ಭಾಂಡಾರದ ಸರಿಯಾದ ಅರ್ಥಗಳು

೧. **ಆಕರ** (ಅ) ಉತ್ಪತ್ತಿ ಸ್ಥಾನ, ಸಂಗ್ರಹದ ಸ್ಥಳ. ಉದಾ:— ಸಂಸಾರವೆಂಬುದು ದುಃಖದ ಆಕರ. [ಸಂ.]

೨. **ಜೇತಾರ** (ಇ) ಗೆಲ್ಲುವವನು, ವಿಜಯಿ. ಗೆದ್ದವನು. ಉದಾ:— ಇಂದ್ರಿಯ ಜೇತಾರ. [ಸಂ.]

೩. **ಪಟಾಯಿಸು** (ಈ) ಮನವರಿಕೆಯಾಗು, ಮನಸ್ಸಿಗೆ ತಿಳಿ; ಮನಗಾಣಿಸು, ತಿಳಿ ಹೇಳು. ಉದಾ:— ವಿವೇಕದ ಮಾತು ಅವನಿಗೆ ಪಟಾಯಿಸಲಿಲ್ಲ. [ಹಿಂದೀ, ಪಟನಾ, ಮರಾಠಿ, ಪಟಣೇಂ= ಹೊಂದಿಕೆಯಾಗುವಿಕೆ]

೪. **ಹಟಾಯಿಸು** (ಅ) ದೂರಮಾಡು, ಹೊರಡಿಸು. ಉದಾ:— ಬಂದ ಅತಿಥಿಯನ್ನು ಹಟಾಯಿಸಿದ. [ಹಿಂದೀ, ಹಟಾನಾ=ದೂರಮಾಡು]

೫. **ಏಕೋಭಾವ** (ಅ) ಒಂದೇ ಮನಸ್ಸು, ಅನನ್ಯವಾದ ಭಕ್ತಿ. ಉದಾ:— ಏಕೋಭಾವದಿಂದ ಶಿವನನ್ನು ಧ್ಯಾನಿಸಿದ. [ಸಂ. ಏಕ=ಒಂದು + ಭಾವ = ಎಣಿಕೆ.]

೬. **ಏಕಗ್ರಾಹಿ** (ಅ) ಪಟ್ಟುಹಿಡಿದ, ಹಿಡಿದ ಛಲ ಬಿಡದ, ಹಟವಾರಿ. ಉದಾ:— ಅವನದು ಏಕಗ್ರಾಹಿ ಬುದ್ಧಿ. [ಸಂ, ಏಕ=ಒಂದು + ಗ್ರಾಹಿ=ತೆಗೆದುಕೊಳ್ಳುವ]

೭. **ಮಸ್ತಿ** (ಈ) ಸೊಕ್ಕು, ಮದ; ಆನೆ ಮೊದಲಾದ ಪ್ರಾಣಿಗಳಿಗೆ ಕಾಲಕಾಲಕ್ಕೆ ಬರುವ ಸೊಕ್ಕು. ಉದಾ:— ಮಸ್ತಿಗೆ ಬಂದ ಆನೆ [ಫಾರಸಿ]

೮. **ಖಾತರಿ** (ಇ) ಭರವಸೆ, ನಂಬಿಕೆ; ನಿಶ್ಚಯ; ಖಚಿತ. ಉದಾ:— ಖಾತರಿ ಮಾಡು. [ಅರಬ್ಬಿ – ಖಾತಿರ್ = ಗೌರವ, ವಿಶ್ವಾಸ]

೯. **ಮುಕ್ತಹಸ್ತ** (ಅ) ಉದಾರ, ಧಾರಾಳವಾಗಿ ಕೊಡುವ ಕೈ, ಬಿಡುಗೈ, ಕೊಡುಗೈ. ಉದಾ:— ಮುಕ್ತ ಹಸ್ತದಿಂದ ದಾನ ಮಾಡಿದ. [ಸಂ. ಮುಕ್ತ=ತೆರೆದ + ಹಸ್ತ=ಕೈ]

೧೦. **ವಿದ್ಯಮಾನ** (ಇ) ಇದ್ದ ಸಂಗತಿ, ವಸ್ತುಸ್ಥಿತಿ; ತಥ್ಯ; ಸಮಾಚಾರ. ಉದಾ:— ಅಲ್ಲಿನ ವಿದ್ಯಮಾನಗಳನ್ನು ವಿವರಿಸಿದ. [ಸಂ. ವಿದ್ಯಮಾನ=ಇರುವಂಥ]

೧೧. **ತಾಜಾಕಲಂ** (ಅ) ವಿಶೇಷ ಸಮಾಚಾರ, ಪತ್ರದಲ್ಲಿ ಮರೆತ ವಿಚಾರವನ್ನು ಕೊನೆಯಲ್ಲಿ ಸೇರಿಸಿದ್ದು. ಉದಾ:— ಪತ್ರದಲ್ಲಿನ ತಾಜಾಕಲಂ ಗಾಬರಿಗೊಳಿಸುವಂತಿತ್ತು. [ಫಾರಸಿ, ತಾಜಾ= ಹೊಸ + ಕಲಮ್=ಲೇಖನಿ]

೧೨. **ತಳವೆಳಗು** [ಈ] ವಿಸ್ಮಯ, ಬೆರಗು ಗಾಬರಿ. ಉದಾ:— ಅವಳ ರೂಪ ಕಂಡು ತಳವೆಳಗಾದ. [ಕನ್ನಡ]

ನಿಮ್ಮ ಶಬ್ದ ಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಅರಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದ ಶಕ್ತಿಯ ತರಗತಿಗಳನ್ನು ತಿಳಿಯಿರಿ.

೬—೮	ಸರಿಯಿದ್ದರೆ	... ಸಾಧಾರಣ
೯–೧೦	,,	... ಉತ್ತಮ
೧೧–೧೨	,,	... ಅತ್ಯುತ್ತಮ




ಬೆಳ್ಳಕ್ಕಿಯ ಹಾಡು

ಶಶಿಧರ ವಿಶ್ವಾಮಿತ್ರ

ಗದ್ದೆಯಂಚಿನ ನೇರಿಳೆ ಮರದಡಿ ನಿಂತಿದ್ದೆ. ಯಾರು ಯಾರನ್ನೋ ಕೂಗಲು ದೃಷ್ಟಿ ಧ್ವನಿಯತ್ತ ಹರಿಯಿತು. ಪೈರು ಕಟಾವಾಗಿ ಕಳೆ, ಕೂಳೆ ಸಾಲು ತುಂಬಿದ್ದ ಚೌಕು ಚೌಕನ್ನ ಗದ್ದೆಗಳ ವಿಸ್ತಾರ ಅಂಕಣ. ನಂತರ, ಸಾವಧಾನವಾಗಿ ಜಾರಿ ಇಳಿದು ನಡೆದ ಕೆರೆಯ ಹಸಿರನ್ನ ಪಾತ್ರ. ಈ ಬಿಸಿಲಿನಲ್ಲಿ ಲಕಲಕ ಮಿರುಗುವ ನೀರ ಹರವು. ಥಟ್ಟನೆ ಎದ್ದ ಕೆರೆಯ ಏರಿ. ಇದನ್ನೇರಿದ್ದ ತೋಟದ ತೆಂಗು ಕಂಗಿನ ಹಸಿರು ಛತ್ರಿಗಳು. ಹಿನ್ನೆಲೆಯಾಗಿ ನೀಲಿಯೋಂಧರೆ ನೀಲಿ ಆಕಾಶ, ಏನು ಏನಾ ಶಬ್ದ? ಮಧ್ಯಾಹ್ನವಾಗಿ ಬಿಸಿಲಿನ್ನೂ ಕಂತಿಲ್ಲವಾದರೂ, ಇನ್ನೂ ಮೇಯದಲೆ ನೆರಳಿನಲ್ಲೇ ಇದ್ದರೆ ಹೊಟ್ಟೆ ತುಂಬೀತೆ ಎಂಬ ಚಿಂತೆಯಿಂದ ಮರಗಳಡಿ ಅಡ್ಡವಾಗಿದ್ದ ದನಗಾಹಿ ಹುಡುಗರು ಕಾಲ್ನಡೆಗಳನ್ನು ಚೆದುರಿಸುತ್ತಿದ್ದ ಶಬ್ದ.

ದನಗಾಹಿಗಳ ಪೂಚಣಿಕೆಗೆ ಕಾಲ್ನಡೆಗಳು ನೆರಳಿನಿಂದ ಚಲಿಸಿ ಗದ್ದೆ ಖಾನೆಯಲ್ಲಿ ಚೆದುರಿಕೊಳ್ಳತೊಡಗಿದವು. ಏನದು, ಕೊಕ್ಕರೆಯೇ? ಹೌದು. ಹಳದಿಗಪ್ಪು ಕಾಲ ಮೇಲೆ ಅಡದೆ ಹಾಡದೆ ತೂಗದೆ ಮಿಸುಕದೆ ನಿಶ್ಚಲ ನಿಂತ ಕೊಕ್ಕರೆ. ಹೀಗೆ ನಿಂತ ಕೊಕ್ಕರೆಯು ಮೈಯ ಮಾಸಲು ಬೂದುಗಪ್ಪು ಹೇಗೆ ನೇಕ್ಕೆ ಹೊಂದಿಕೊಂಡು ಇದ್ದರೂ ಇಲ್ಲದಂತೆ ಮಾಯವಾಡಿಬಿಡುತ್ತದೆ! ರೆಕ್ಕೆ ಬಿಚ್ಚಿ ಹಾಡಿ ನೇವೊದ್ದ ಗಗನಕ್ಕೆ ಎಕ್ಕಿದರೆ ಹಾಲಂಬಿಳಿ ಮೈಯಿಂದ ತೊಳಗುವ ಈ ಕೊಕ್ಕರೆ, ಕಾಲ್ನಡೆಗಳು ಗದ್ದೆ ಖಾನೆಯಲ್ಲಿ ಓಡಿಯಾಡುವುದನ್ನು ಕಂಡು ಕತ್ತು ಬಳುಕಿಸಿದಾಗ] ಕಂಡದ್ದು, ಅಗೋ ಅಲ್ಲೊಂದಿದೆ. ಇದಿಗೋ, ಈ ತುಂಡಿನಲ್ಲಿ ಇನ್ನೂ ಒಂದು ನಿಂತಿದೆ. ಮರಗಳ ಮೇಲೂ ಹೇವು ಕುಳಿತಿರಬೇಕು. ಈ ಹಕ್ಕಿಗೇ ಮೊಸಲು ಎಂಬ ಚೇಕರದಿಂದ ಆಕಾಶವೇರಿ ಬಾನ ಮಡಿಲಲ್ಲಿ ಕಮಾನು ಕೊರೆದು ನಿಸೂರು ಕೆಳಗಿಳಿದು ಇದೇ ಗದ್ದೆ ಖಾನೆಯಲ್ಲಿ ಚದುರಿಕೊಂಡ ಕಾಲ್ನಡೆಗಳು ಬಾಯಾಡುತ್ತ ಸಾವಧಾನ ನಡೆದಾಡಿದಾಗ ಅವುಗಳ ಹಿಂದೆಯೋ ಮುಂದೆಯೋ ಅಕ್ಕವೋ ಪಕ್ಕವೋ ಜೊತೆ ಜೊತೆ ಕೇವು ಸಮಯ



ವಂತೂ ಅಂಗುಲಗಳಷ್ಟು ಸಮೀಪ ನಡೆಯಲು ಪ್ರಾರಂಭಿಸಿವೆ. ಹಕ್ಕಿಯ ಬೆಳ್ಳಿ ಮೈ ಸೊಗಸೋ, ಹಾರು ಹೊಗಸೋ, ಪಹರೆಯ ನಡೆಸೊಗಸೋ ಎಂಬ ಸೋಜಿಗದಲ್ಲಿದ್ದಾಗ ಹುಲ್ಲೊಳಗೆ ಹುದುಗಿದ ಹುಪ್ಪಟೆ ಚದುರಿದ ಕ್ಷಣ ಎಂಥ ಚಟುಕಿನಿಂದ ಗಬಕಿಕೊಂಡಿತು! ಕಣ್ಣಿವೆ ಇಕ್ಕುವಷ್ಟರಲ್ಲಿ ಜರುಗಿ ಹೋದ ಹುಳು ಬೇಟೆಯ ಚಟುಕು ಮನಸ್ಸಿನಲ್ಲಿ ಹೊರಳತೊಡಗಿದಾಗ ಹಕ್ಕಿ ಕಾಲ್ನಡೆಗಳ ಸಹಬಾಳ್ವೆಯ ನಯ ಕಣ್ಣಿಗೆ ಕಟ್ಟುತ್ತದೆ. ಈ ಇಗ್ಗಾಲು ನಾಲ್ಕಾಲುಗಳ ನಂಟು ಬಹು ದಿನದ್ದು. ಬಹು ಗಾಢವಾದದ್ದು. ಹಿಂಗಾಲು ಕಡಿಯುತ್ತಿದ್ದ ಉಣ್ಣೆಯನ್ನು ಕೊಕ್ಕರೆ ಹೆಕ್ಕಿದಾಗ, ಗಂಗೆ ಹಸು ತೀಟೆ ಮಾಡಬೇಡ; ದೂರ ಹೋಗು ಎಂಬಂತೆ ಕಾರು ಝಾಡಿಸಿ ಬಾಲ ಬೀಸಿ ಜೋರಾಗಿ ಉಸಿರು ಬಿಟ್ಟು ಕತ್ತಾಡಿಸಿ ಕೊಕ್ಕರೆಯತ್ತ ಕಣ್ಣು ಮಿಸ್ತರಿಸಿ ನೋಡಿದ್ದಕ್ಕೆ, ಕೊಕ್ಕರೆ ಒಂದು ಹೆಜ್ಜೆ ಹಿಮ್ಮೆಟ್ಟಿ ನೀಟು ನಿಂತು ಕತ್ತು ಕೊಂಕಿಸಿ, ಗಂಗೆಯೇ, ನಿನ್ನ ಕಾಲು ಕಚ್ಚಿ ಹಿಡಿದಿದ್ದ ಉಣ್ಣೆ ಹೆಕ್ಕಿ ಉಪಕಾರ ಮಾಡಿದರೆ ತೀಟೆ ಮಾಡಬೇಡ; ದೂರ ಹೋಗು ಎಂದು ಯಾಕೆ ಸಿಟ್ಟು ಮಾಡುತ್ತಿದ್ದೀ? ಎಂಬುದಾಗಿ ಪ್ರಶ್ನಿಸಿದುದಕ್ಕೆ ಗಂಗೆ ಹಸು ಬಾಲ ನೀಟು ಬಿಟ್ಟು ಕತ್ತು ಬಾಗಿಸಿ ಉಣ್ಣೆ ಹೆರಕಲು ಕಿವಿಯನ್ನೇ ಒಡ್ಡೋಣವೇ? ಇನ್ನಷ್ಟು ಹೊತ್ತಿನಲ್ಲಿ ಪರಿಚಯಿಸಿಕೊಡಲು ತನ್ನ ಮಗಳ ಬಳಿಗೋ ಕೊಕ್ಕರೆಯನ್ನು ಕೊಂಡು ಹೋಗೋಣವೇ! ಸಮಾಧಾನ, ಸಾವಧಾನ, ಸಹಬಾಳುವೆಗಳನ್ನು ಹೊಂದಿಸಿ ಎರಕ ಹೊಯ್ದು ಕಡೆದ ವಿಗ್ರಹಗಳಂತೆ ಹಸು–ಕರು–ಕೊಕ್ಕರೆ.

ನೇರ ಎದುರಿಗೆ ಅಲೆಯ ಅಲಗುಗಳನ್ನು ಮಲಗಿಸುತ್ತಿದ್ದ ಕೆರೆಯ ಹಿಂದಿನ ತೋಟದ ಹಸಿರು ಛಾವಣಿಯ ಹಿಂಬದಿಯ ಆಕಾಶದ ನೀಲಿ ಬೋಗುಣಿಯ ಅಂಚಿನಲ್ಲಿ ಎಂದೋ ಕಂಡು ದೃಷ್ಟಿ ಅತ್ತ ಹರಿಯಿತು. ಏನದು ಹಾರುತ್ತಾ ಬರುತ್ತಿರುವುದು – ಒಂದು ಅಲ್ಲ ಒಂದೆರಡು ಹಕ್ಕಿಯಂತೆ ಕಂಡದ್ದು ಏಳೆಂಟಾಗಿ, ಇಷ್ಟರಲ್ಲಿ, ಅನೇಕ ಹಕ್ಕಿಗಳು ಅತ್ಯಾಧುನಿಕ

ತೇಜಿ ವಿಮಾನಗಳು ವಿಶೇಷ ನೋಟಕ್ಕೇದು ಬಹು ಸೈರಣೆಯಿಂದ ಕಟ್ಟಬಲ್ಲ ವ್ಯೂಹವನ್ನು ನಾಚಿಸುವಂತೆ ಬಾಣದರ್ಶನ ವ್ಯೂಹದಲ್ಲಿ ನಿಶ್ಶಬ್ದ ಧಾವಿಸಿ ಬರುತ್ತಿರುವುದು ಗೋಚರವಾಗಿತ್ತು. ತಮ್ಮಿಂದ ರಚಿಯಿತವಾದ ವ್ಯೂಹಕ್ಕೆ ಮೈಯನ್ನೂ ಮನಸ್ಸನ್ನೂ ಗತಿಯನ್ನೂ ಕೊಟ್ಟರೆ ಕೊಂಡ ಆ ಹಕ್ಕಿಗಳು ನೀಲಬಾನೆಂಬ ಬಲ್ಲಿಗೆ ಹ್ಯಾಗೆ ಬೆಳ್ಳಿ ಹದೆ ನಿಶ್ಶಬ್ದ ನೇಯುತ್ತಿವೆ! ಇವಾದರೂ ಎಲ್ಲಿಂದ ಬಂದವು, ಎಲ್ಲಿಗೆ ಹೋದಾವು, ಯಾಕೆ? ಯಾರನ್ನು ಕೇಳಲಿ? ಹಾರು ಹಕ್ಕಿಯನ್ನೇ? ಅವಾದರೋ ಉಸುರದೆ, ಕೊಸರದೆ ಕೆಳಗೆ ಕೂಡ ನೋಡದೆ ಹೋಗಿ ಬಿಟ್ಟವಲ್ಲ; ಕೆಳಗೆ ಗದ್ದೆಯಂಕಣದಲ್ಲಿದ್ದ ಹಕ್ಕಿಗಳೂ ಹಾರು ಹಕ್ಕಿಗಳನ್ನು ಗಮನಕ್ಕೇ ತಂದುಕೊಂಡಿರಲಿಲ್ಲವಲ್ಲ; ಇಂಥ ನಿರ್ಲಿಪ್ತತೆ ಇವಕ್ಕೆ ಯಾಕೆ?

ಯೋಚಿಸಹೋಗಿ ಭ್ರಾಂತನಾಗಿ ಬಲ್ಲೆನೆಂದುಕೊಳ್ಳುವ ಪಕ್ಷಿ ಶಾಸ್ತ್ರಜ್ಞರು ಏನು ಹೇಳುತ್ತಾರೆ ಕೇಳೋಣ ಎನ್ನಿಸಿತು ಇವರಿಗೆ. ಈ ಹಕ್ಕಿಯ ತೂಕ ಗಾತ್ರ ಎತ್ತರ ರೆಕ್ಕೆಗಳೆಬ್ಬಿಸಬಲ್ಲ ವಾಯುಶಕ್ತಿ, ಮೊಟ್ಟೆ ಇಡುವ ವಿಧಾನ, ಮರಿ ಮಾಡುವ ಸಮಯ, ತಂಗುದಾಣ, ಹಾರು ವೇಗ, ಓಹೋ ಇದಿಷ್ಟೇ ಅಲ್ಲ, ಒಂದೊಂದು ಹಕ್ಕಿಯ ಎಂತೆಡೆಯ ಪುಕ್ಕದಲ್ಲಿ ಎಂತಿಷ್ಟು ಧಾತುಗಳು, ಉಪ್ಪುಗಳು, ಆಮ್ಲಗಳು ಪರಮಾಣುಗಳು ಇವೆ ಎಂಬುದೆಲ್ಲ ಗೊತ್ತು!

ಈ ಹಕ್ಕಿಗಳು ಹುಟ್ಟಾ ಅಲೆಮಾರಿಗಳು.

ಬಿಸಿಲು ಚಳಿ ಮಳೆ ಗಾಳಿ, ಬೆಟ್ಟ, ಬೆಂಗಾಡು, ಕಣಿವೆ ಮೈದಾನ, ಕಂಡ ಕಾಣದ ಜಾಗ ಹಗಲು ರಾತ್ರೆ ಎನ್ನದೆ ನೂರಾರು ಮೈಲಿಗಳನ್ನು ಇವು ಎಂಥ ಅನಾಯಾಸ ಕ್ರಮಿಸುತ್ತವೆ ಗೊತ್ತೆ? ಮಳೆಗಾಲಕ್ಕೆ ಇಲ್ಲಿರಬೇಕು, ಬೇಸಿಗೆಗೆ ಇಲ್ಲಿ, ಛಳಿಗಾಲದಲ್ಲಿ ಇಲ್ಲಿ, ಕೋಯಿಲುಗಾಲದಲ್ಲಿ ಅಲ್ಲಿ ಎಂಬ ಇವುಗಳ ಕಾಲಜ್ಞಾನ; ತವರು ಇದು, ಕೂಡು ಮನೆ ಅದು, ಹೆರುಮನೆ ಇದು, ಅಡುಗೆ ಮನೆ ಇದು ಎಂದು ನಿರ್ಧರಿಸುವ ಇವುಗಳ ದೇಶಜ್ಞಾನ; ಅಪಾಯ– ಅನುಕೂಲಗಳಿಗೆ ತಕ್ಕಂತೆ ಯಾನ ನಿರೂಪವನ್ನು ಥಟ್ಟನೆ ಬದಲಾಯಿಸಿಕೊಳ್ಳಬಲ್ಲ ಸಾಮರ್ಥ್ಯಗಳನ್ನು ಕುರಿತು ಯೋಚಿಸಿದರೆ ಬೆರಗಾಗುತ್ತದೆ. ಕ್ಲಿಪ್ತ ಕಾಲದಲ್ಲಿ ಹೊರಟು ನೂರು ನೂರು ಮೈಲಿ ಹಾರಿಕೊಂಡು ಮುಂಗುರುತಾದ ಎಡೆಗೇ ಬರುತ್ತವಲ್ಲ, ಇಂಥ ಯಾನಕ್ಕೆ ಬೇಕಾದ ಛಲ, ಬಲ, ಪರ್ಯಟನ, ಪ್ರೌಢಿಮೆ, ಗಣಕಯಂತ್ರ ನಿರ್ದೇಶಿತ ಆಧುನಿಕ ವಿಮಾನ ಯಾನಕೌಶಲಕ್ಕೂ ಮಿಗಿಲಾದದ್ದು, ತಮ್ಮ ಯಾನಕೌಶಲಕ್ಕೆ ದಿಕ್ಸೂಚಿಯಾಗಿ ಈ ಹಕ್ಕಿಗಳು ಸೂರ್ಯನನ್ನು ಬಳಸಿಕೊಳ್ಳುತ್ತವೆ ಎಂದುಕೊಂಡೆವು. ಅಷ್ಟು ಸಾಕಾಗದೆ ನಕ್ಷತ್ರಗಳನ್ನು ಬಳಸಿಕೊಳ್ಳುತ್ತವೆ ಅಂದುಕೊಂಡೆವು. ಇದೂ ಸಾಕಾಗದೆ ಭೂಮಿಯ ಕಾಂತಶಕ್ತಿಯನ್ನೂ ಬಳಸಿಕೊಳ್ಳುತ್ತವೆ ಎಂದುಕೊಂಡೆವು. ಈಗ ಇವು ಯಾವುವೂ ಸಾಕಾಗದೆ, ಈ ಹಕ್ಕಿಗಳ ತಳಿಯಲ್ಲಿ ಅಡಕವಾದ ವಿಶೇಷ ಸಾಮರ್ಥ್ಯದಿಂದ ಎಂದುಕೊಂಡಿದ್ದೇವೆ.

ಒತ್ತರಿಸುವ ಬೆಕ್ಕಸಬೆರಗನ್ನು ಗಾಂಭೀರ್ಯದಿಂದ ಮುಚ್ಚಿಡುತ್ತಾ ಪಕ್ಷಿತಜ್ಞರು ಇಷ್ಟು ಮಾತ್ರವನ್ನು ಹೇಳಿದರೂ ಮನಸ್ಸು ಒಪ್ಪವೊಲ್ಲದು. ಗದ್ದೆಖಾನೆಯಲ್ಲಿ ನಿಶ್ಶಬ್ದ ನಿಂತ ಹಕ್ಕಿಗಳನ್ನು ನೋಡಿದೆ. ಎಲ. ದೇವರೇ, ಕೋತವೇ ನಾನೇನು ಬಲ್ಲೆ ಎಂಬ ಮುಗ್ಧತೆಯೇ ಹಾಲಾಗಿ ಗಟ್ಟಿಕಟ್ಟಿ ನೀಟು ನಿಂತರೆ ಮಂಡಿಮುಟ್ಟವೂ ಬಾರದ ಈ ಹಕ್ಕಿ, ಕಾಲ್ನಡೆಗಳ ಹಿಂದೆ ಮುಂದೆ ಓಡಾಡಿಕೊಂಡು ಹುಳು–ಹುಪ್ಪಟೆ ತಿರಿಯುವ ಈ ಹಕ್ಕಿ, ಪಕ್ಷಿತಜ್ಞರನ್ನೂ ಗೊಂದಲಕ್ಕೆ ಬಿದ್ದು ಬಿಟ್ಟಿದೆಯಲ್ಲ. ಅರಿಯಲಾಗದ ಪ್ರಶ್ನೆ ತಲೆಯನ್ನು ಒತ್ತಿ ಹಿಡಿದಾಗ ಆಗುವಂಥ ಮಂಪರು ಕವಿದು, ಆ ಹಕ್ಕಿ ಅದನ್ನೇ ಕೇಳಿದರೆ ಏನು ಹೇಳೀತು ಎನ್ನಿಸಿತು. ತನ್ನಂತೆ ನಿಂತಿದ್ದ ಬೆಳ್ಳಕ್ಕಿಯೊಂದರ ನಸು ನೀಟು ನವುರು ಮೈಯನ್ನು ದೃಷ್ಟಿಯಿಂದಲೇ ತಡವತೊಡಗಿದೆ.

ಗದ್ದೆಖಾನೆಯಲ್ಲಿ ಹಾಯಾಗಿ ಮೇಯುತ್ತಿದ್ದ ಕಾಲ್ನಡೆಯ ಪಕ್ಕ ಸಾವಧಾನವನ್ನು ಬಿಸ್ರುತ್ತಾ ಮಳೆ ಹಕ್ಕುತ್ತಿದ್ದ ಆ ಬೆಳ್ಳಕ್ಕಿಗೆ ಕಚಗುಳಿ ಇಟ್ಟ ಹಾಗೆ ಆಗಿರಬೇಕು. ಬಿಸಿಲಿಗೆ ಮೈ ಒಡ್ಡುವ ನೆಪದಿಂದ ರೆಕ್ಕೆಗಳೆರಡನ್ನೂ ಭುಜ ಮುಟ್ಟ ಎತ್ತಿ

ಪಕ್ಕೆಯ ತಿಪ್ಪೆಳನ್ನು ಕೊಕ್ಕಿದಿಂದ ನಯವಾಗಿ ಬಾಚಿಕೊಳ್ಳುತ್ತಾ ಕತ್ತು ಬಳುಕಾಡಿಸುತ್ತಾ ನನ್ನತ್ತ ದೃಷ್ಟಿ ಬೀರಿತು. ಆ ಹಾಲು ಬಿಳಿ ಮೈ ಹಕ್ಕಿಯ ಬಳುಕಿನ ವೈಯಾರವನ್ನು ಕಣ್ಣಿಗೆ ಕಟ್ಟಿಕೊಳ್ಳುತ್ತಿರುವಷ್ಟರಲ್ಲಿ ಆ ಹಕ್ಕಿ ರೆಕ್ಕೆ ಬೀಸಿ, ನೆಲದಿಂದ ಎಕ್ಕಿ, ಗಾಳಿಯ ಬೆನ್ನೇರಿ ಚಂದಿರಗೆ ಡೊಂಕು ನೇಯುತ್ತಾ ಸಮೀಪ ಬಂದಿಳಿದು, ಪುನಃ ರೆಕ್ಕೆ ತೆರೆದು ಕೊಕ್ಕಿನ, ಬಾಚಣಿಗೆಯಲ್ಲಿ ತಿಪ್ಪೆಳವನ್ನು ಬಾಚಿಕೊಳ್ಳುತ್ತಾ, ಏಕಾಏಕಿ ನನ್ನ ದೃಷ್ಟಿಯಲ್ಲಿ ದೃಷ್ಟಿ ಇಟ್ಟಿತು.

ದೃಷ್ಟಿಗಳ ಮಿಲನವಾದೊಡನೆಯೇ ನಾನು ಪುಳಕಗೊಂಡೆ. ಆ ಹಕ್ಕಿಗೂ ಹಾಗೆಯೇ ಆಗಿರಬೇಕು. ಕತ್ತು ವಾಲಿಸಿ ಪುನಃ ಪುನಃ ನೋಡಿತು. ಬೆರಗಿನ ಬುರುಗಿನಲ್ಲಿ ಮುಳುಕಾಡುತ್ತಿದ್ದ ನನ್ನನ್ನು ಕುರಿತು ಬೆಳ್ಳಕ್ಕಿ ಹೇಳಿತು.

ನಾನೆಲ್ಲಿಂದ ಬಂದೆ, ಎಲ್ಲಿಗೆ ಹೋಗಲಿದ್ದೇನೆ, ಯಾಕೆ? ಎಂಥ ಘನವಾದ, ಆದರೆ ಇತ್ಯರ್ಥ ಸಾಧ್ಯವಿಲ್ಲದ್ದರಿಂದ, ಕಾಲಹರಣದ ಪ್ರಶ್ನೆಗಳು! ನನ್ನನ್ನೇ ಕಾಡದ ಪ್ರಶ್ನೆಗಳು ನಿಮ್ಮನ್ಯಾಕೆ ಕಾಡಬೇಕು? ತಿಣುತಿಣುಕಿ ಮನಮಂಥನ ಮಾಡಿದ ಮೇಲೆ ಹೊರಡುವ ಉತ್ತರಗಳಿಂದ ಆಗಬೇಕಾದದ್ದು ಏನು? ಬೇಕು ಬೇಡದ್ದಕ್ಕೆ ಅರ್ಥ ಕಾಣಲು ಹೊರಟ ನೀವು ನಿಮ್ಮ ಹಿಂದೆ ನೋಡಿ. ಅಲ್ಲಿ ಬೆಳೆದು ನಿಂತಿರುವ ನೇರಳೆ ಮರವನ್ನು ಯಾಕೆ ಹಾಗೆ ಬೆಳೆದು ನಿಂತಲ್ಲೇ ನಿಂತಿದ್ದೀಯೆ? ಎಂದು ಕೇಳಿದರೆ ಏನು ಹೇಳಿಯಾತು? ಬಹು ಚಿಂತನೆ ಮಾಡಿ, ಅಯ್ಯೆರಿಗೆ, ಬೆಳೆಬೆಳೆದು ನಿಲ್ಲುವ ಸ್ವಭಾವ ನನ್ನದಾದ್ದರಿಂದ ಹೀಗೆ ಬೆಳೆದು ಹೀಗೆ ನಿಂತಿದ್ದೇನೆ ಎಂದು ತಾನೆ? ಇದರಿಂದ ಏನು ತೋರಿಕೊಂಡ ಹಾಗೆ ಆಯಿತು?

ಇಷ್ಟು ಹೇಳಿ ಬೆಳಕ್ಕಿ ರೆಕ್ಕೆ ಅಗಲಿಸಿ ಕಾಲಾಡಿಸಿ ತನ್ನ ಮೈ ಇಡೀ ತೋರಿಸಿ ಹೇಳಿತು. ಈ ನನ್ನ ಮೈ ನೋಡಿ, ದೂರ ಹಾಕಲಿಕ್ಕೆಂದೇ ಹ್ಯಾಗೆ ಮಾಡಲ್ಪಟ್ಟಿದೆ. ಗುಬ್ಬಚ್ಚಿಯೂ ಹಾರಿತು; ಕಾಗೆಯೂ ಹಾರಿತು; ರೆಕ್ಕೆ ಇರುವ ಹಕ್ಕಿಗಳೆಲ್ಲ ಅಷ್ಟಷ್ಟು ಹಾರಾವೇ. ಆದರೆ ನನ್ನ ಹಾರಿಕೆ ಇವುಗಳ ಹಾರಿಕೆ ಅಲ್ಲ. ಹಾರುವಾಗ ಹಾರಿಕೆಯ ಹೊರತು ಇನ್ನೇನೂ, ಕಡೆಗೆ ನನ್ನ ಮೈ ಮನಸ್ಸು ಯಾವುದೂ ಜ್ಞಪ್ತಿಯಲ್ಲಿ ಉಳಿದಿರುವುದಿಲ್ಲ. ಒಕ್ಕರೆ ನೆಟ್ಟ ಬೀಜ ಆಡಾಡುತ್ತಾ ಹೇಗೆ ಗಿಡವಾಗಿ ಮರವಾಗಿ ಬೆಳೆದು ನಿಲ್ಲುವುದೋ ಹಾಗೆಯೇ ನನ್ನ ಹಾರಿಕೆ ಕೂಡ. ಹುಟ್ಟಿ ಬೆಳೆಯುವುದರ ಹೊರತು ಆ ಬೀಜಕ್ಕೆ ತೂಕವೇ ಗಾತ್ರವೇ ಎತ್ತರವೇ ವಯಸ್ಸೇ ಏನು ಗೊತ್ತು? ಗೊತ್ತಾಗಿ ಆಗಬೇಕಾದದ್ದು ಏನು? ಆಳವಾಗಿ ಯೋಚಿಸಿದರೆ ನನ್ನ ಹಾರಿಕೆಯೂ ನೆತ್ತಿ ಭಿತ್ತಿಯಲ್ಲಿ ಕೆತ್ತಿರುವ ಮುಂದಿನ ತಂಗುದಾಣ ತಲಪುವ ನಿಮಿತ್ತ ಮಾತ್ರ. ಈ ತಂಗುದಾಣವೋ ಮುಂದಿನದರ ನಿಮಿತ್ತ. ಹೀಗೆ ನಮ್ಮ ಜೀವ ಬಾಳಿ ಬಳುಕಾಡುತ್ತದೆ; ಹಾರಹಾರುತ್ತಲೇ ಜೀವನಯಾತ್ರೆ ಮುಗಿಸಿ ಬಿಡುತ್ತದೆ. ಈ ಮುಗಿವೂ ವೈಯುಕ್ತಿಕವಾಗಿ ನನ್ನನ್ನು ಕುರಿತು ಆಡಿಕೊಳ್ಳುವ ಮಾತಷ್ಟೆ. ತಂಗುದಾಣಗಳು ಬದಲಾಗುವಂತೆ ನನ್ನ ಬದಲು ಬೇರೊಂದು ಹಕ್ಕಿ ಬಂದೀತು ತಾನೆ.

ತಾನಾಡಿದ ಮಾತು ನಿನಗೆ ಅರ್ಥವಾಗಿದೆಯೆ? ಎಂಬಂತೆ ನೋಡಿ ಬೆಳ್ಳಕ್ಕಿ ಮುಂದುವರೆಯಿತು. ಇನ್ನು ಎಲ್ಲಿಂದ ಬಂದೆವು, ಎಲ್ಲಿಗೆ ಹೋದೇವು, ಯಾಕೆ ಎಂದೆಲ್ಲ ಪ್ರಶ್ನೆಗಳು. ಹಾರಲಿಕ್ಕೇ ಹುಟ್ಟಿದ ಮೇಲೆ ಎಲ್ಲಾದರೂ ಹಾರುತ್ತಿರಬೇಕು ತಾನೆ? ಈಗ ನಾನೂ ನನ್ನ ಬಳಗವೂ ಈ ಸುತ್ತ ಹರಡಿಕೊಂಡಿದ್ದೇವೆ. ಹುಳ ಹುಪ್ಪಟೆ ಅರಸುತ್ತಾ ಒಂದೆರಡು ಕಾಲ ತಂಗುತ್ತೇವೆ. ನಿಮ್ಮ ಕಾಲಮಾನದ ವಾರವೋ ಹದಿನೈದು ದಿನವೋ; ಅಗೋ ಆ ಕೆರೆ ನೀರಿನ್ನ ನೆರಿಗೆ, ಒಡಿದು ಬಂದು ನನ್ನ ಮೈಯ ಪುಕ್ಕ ತೀಡುವ ಗಾಳಿ ತಂದ ವರ್ತಮಾನವೋ; ಅಥವಾ ಮೇಲೆ ಗೋಳವಾಗಿ ಮಲಗಿರುವ ನೀಲಿ ಮನೆಯಲ್ಲಿ ಹಾಯುತ್ತಾ ಬಂದ ಮೋಡದ ಹೇಳಿಕೆಯೋ; ರಾತ್ರಿಯ ನಿಶ್ಶಬ್ದದಲ್ಲಿ ತೇಲಾಡುವ ನಕ್ಷತ್ರಗಳು ಪಿಸುಗುಟ್ಟಿದ ಕಿವಿಮಾತೋ ಅಥವಾ, ಈ ಮಾತನ್ನು ಹೇಳಲಾರೆ ಬಿಡಲಾರೆ, ಅಥವ ಅಥವಾ– ಹಾ, ಹಾ, ಹೇಳಲೇಬೇಕಲ್ಲ ಪ್ರಶ್ನೆ

ನಿಮ್ಮದು ತಾನೆ ಅಥವಾ ನಿಮ್ಮಂಥ ಪ್ರಪಂಚವನ್ನೇ ಆಳ ಹೊರಟ ಮನುಷ್ಯರ ಆಕ್ರಮಣಗಳ ಭೀತಿಯಿಂದಲೋ, ಅಂತೂ, ಈ ಜಾಗದ ಈಗಿನ ಋಣ ತೀರಿತು ಎಂಬ ಅರಿವು ನನಗೋ ನನ್ನ ಬಳಗದಲ್ಲೊಬ್ಬರಿಗೊ ಆಗಿ ಮುಂದಿನ ತಂಗುದಾಣದ ಚಿತ್ರ ಕಾಣಿಸಿಕೊಳ್ಳುತ್ತದೆ. ಒಂದು ಹಕ್ಕಿಯ ಕನಸು ಮುಂದಿನ ಕ್ಷಣಗಳಲ್ಲಿ ಬಳಗದ ಸ್ವತ್ತಾಗಿ ಆ ಕನಸಿನ ತಾಣಕ್ಕೆ ಹೋಗುವ ತವಕ ಮೈತುಂಬಿ ಉಕ್ಕಿ ಹರಿದು ನಿಂತ ನೆಲ, ಊಟದ ಹಂಗು, ಇಗೋ– ಆ ಗಂಗೆ ಮನುವಿನ ಸ್ನೇಹ ಎಲ್ಲವೂ ಕರಗಿ ಗಗನಕ್ಕೆ ಎಕ್ಕಿದ್ದೇ ರೆಕ್ಕೆ ಬೀಸ ತೊಡಗುತ್ತೇವೆ. ನಿರಭ್ರ ಆಕಾಶದಲ್ಲಿ ಕಾಲು ಮಡಚಿ, ಕತ್ತು ಮುಂಚಾಚಿ ಸ್ವಚ್ಛ ಶೀತಲ ಗಾಳಿ ಹೀರಿ ನಾಲ್ಕು ಬಾರಿ ರೆಕ್ಕೆ ಬೀಸುವುದಕ್ಕಿಲ್ಲ; ಬಳಗದ ಯಾವುದೋ ಹಕ್ಕಿ ತಂತಾನ ನಾಯಕನಾಗಿ ಮುಂಚೂಣಿ ನಿಂತರೆ ಮಿಕ್ಕ ಹಕ್ಕಿಗಳೆಲ್ಲ ಆ ನಾಯಕನೆಂಬ ಮುಂಚೂಣಿಯ ಹಿಂಪಾರ್ಶ್ವದ ಅಕ್ಕ ಪಕ್ಕದ ಅಲುಗಾಗಿ ಬಿಡುತ್ತವೆ. ಹೀಗೆ ಕನಸು ನನಸುಮಾಡುವ ವ್ಯೂಹ ಕಟ್ಟಿ ದೇಶ ಲಂಘನದಲ್ಲಿ ತೊಡಗಿದ ಹಕ್ಕಿಗಳಿಗೆ ಗೊತ್ತ ಹೊರತು, ಹೊತ್ತಿಲ್ಲ; ಹಾರುವ ಇಂಬಿನ ಹೊರತು ಸೋಲಿಲ್ಲ ಸುಸ್ತಿಲ್ಲ. ಇದೇ ಹಕ್ಕಿಯೇ ಸದಾ ಮುಂಚೂಣಿಯಲ್ಲಿರಬೇಕು ಎಂಬ ಅರಸುಮಂತಿಕೆ; ಇಂಥಲ್ಲೇ ಇಂಥಿಂಥ ಹಕ್ಕಿ ಇರಬೇಕು ಎಂಬ ಶ್ರೇಣಿ ಪಟ್ಟದ ಕೋಟಲೆ ಹಾರು ಹಕ್ಕಿಯ ತಲೆಗೆ ಅಂಟುವುದಿಲ್ಲ. ಮುಂಚೂಣಿ ಹಕ್ಕಿ ಹಿಂದೆ ಬಿದ್ದರೆ ಇನ್ನೊಂದು ಅಲ್ಲಿ ಸಿದ್ಧವಾದೀತು; ಎಡ ಜೋರಿ ಹಕ್ಕಿ ಮಾಲಿದರೆ ಬಲಜೋರಿ ಹಕ್ಕಿ ಬುದ್ಧಿ ಹೇಳೀತು; ಹಕ್ಕಿಯೊಂದು ಹಿಂದೆ ನಿಂತರೆ ಬಳಗವೇ ನಿಂತು ಯಾಕೆ ಎಂದು ಕೇಳೀತಲ್ಲಾ. ಗುರಿ ಮುಟ್ಟುವವರು ನಾನಲ್ಲ, ನಾವು ತಾನೆ? ಆದ್ದರಿಂದ ನಮ್ಮ ತಮ್ಮವರನ್ನು ಬಿಟ್ಟು ಹೋಗೋಣೆಲ್ಲಿ ?

ಸೂರ್ಯನ ಬೆಳಕು ರಾಶಿಗೆ ಮೈಯೊಡ್ಡಿ ಮಾತನಾಡುತ್ತಿದ್ದ ಹಕ್ಕಿಯನ್ನು ನೋಡುತ್ತಾ, ಎಲಾ! ಎಂಥ ಸಂತಸ ತುಂಬಿದ ಜೀವನ ಈ ಹಕ್ಕಿಗಳದು ಎಂದುಕೊಂಡೆ. ಬಾನಿನ ಮಡಿಲಲ್ಲಿ ತೇಲಿಕೊಂಡು, ಹಾಡಿಕೊಂಡು, ಕೂಡಿಕೊಂಡು ಹಾರುವ ಆಟ ಆಡುತ್ತಾ; ಕೆಳಗೆ ಥಟ್ಟನೆದ್ದು ಬೀಳುವ ಗುಡ್ಡಗಳು ಅಂಗಣದ ಅಚ್ಚುಕಟ್ಟಿನಲ್ಲಿ ಮೈಹಾಸಿ ಮಲಗಿರುವ ಹೊಲಗದ್ದೆ ತೋಟಗಳು, ಬೆಳ್ಳಿ ನೆಕ್ಕಿ ಥಳಥಳ ಮಿನುಗುವ ಕೊಳಗಳು, ಹಾವಾಗಿ ಹರಿಯುವ ನದಿ ತೊರೆಗಳು, ನೂರಾರು ಊರು ಕೇರಿಗಳು– ಇವೆಲ್ಲವನ್ನೂ ಕಾಣುತ್ತಾ ಬೇಕೆನಿಸಿದ ಕಡೆ ಇಳಿದು ಬೇಕೆನಿಸಿದಷ್ಟು ದಿನ ತಂಗಿ ಪುನಃ ಬಾನು ಹಿಡಿದು ಉಡ್ಡಯಿಸತೊಡಗುವುದು, ಆಹಾ, ಯಾರಿಗುಂಟು ಇಂಥ ಮುಕ್ತ ಜೀವನ!

ಕತ್ತನ್ನು ನಾಗನಂತೆ ಬಳುಕಿಸಿ, ದೃಷ್ಟಿಯಿಂದಲೇ ನನ್ನ ಅಂತರಾಳವನ್ನು ಕದಡಿ ಬೆಳ್ಳಕ್ಕಿ ಮಾತನಾಡಿದ್ದಿತು. ದೃಶ್ಯ, ಸೌಂದರ್ಯ! ಈ ಕನಸು, ಈ ಆಸೆ ಎಲ್ಲಾ ನಿಮ್ಮದು. ನನ್ನ ತಂಗುದಾಣದ ಹೊರತು ಇನ್ನೊಂದು ಯಾವುದೂ ಹಾರು ಹಕ್ಕಿಯ ಕನಸು ಮನಸಿನಲ್ಲಿ ಇರುವುದಿಲ್ಲ. ಹಾರು ಹಕ್ಕಿಗೆ ಕೆರೆಕೊತ್ತಳ, ಬೆಟ್ಟ ಗುಡ್ಡಗಳ ಸೌಂದರ್ಯ ಏಕೆ ಬೇಕು? ಹೊರಲಾಗದ ಸೌಂದರ್ಯವನ್ನು ಹೊರಹೋಗುವ ನಿಮ್ಮ ಐಷಾರಾಮತನ ನಮಗಿಲ್ಲ. ಇಲ್ಲಿ ಒಂದು ವಿಷಯ ಹೇಳಲೇಬೇಕು. ಹೀಗೆ ಕಾರುವ ಹಗೆ ಎಬ್ಬಿಸುವ ಊರುಕೇರಿಗಳ ಮೇಲೆ ಹಾರುವಾಗಲಂತೂ ಎಷ್ಟು ಬೇಗ ಮನುಷ್ಯರಿಂದ ದೂರ ಹೋದೇವು ಎಂತಲೇ ಹಾರುತ್ತೇವೆ. ಸಾವಧಾನ ಬೀಸುವ ರೆಕ್ಕೆಗಳಿಗೆ ನಿಮ್ಮಿಂದ ಎಂಥ ಉದ್ವೇಗ! ನನ್ನಂತೆ ಹಾರಿ ಹೋಗುವ ಹಕ್ಕಿಗೆ ನೀವು ಎಷ್ಟು ಭಯ ಆತಂಕಗಳನ್ನು ತಂದಿಟ್ಟಿದ್ದೀರಿ ಎನ್ನುವುದನ್ನು ಯೋಚಿಸಬಲ್ಲಿರಾ? ಇದರ ಮೇಲೆ, ನೀವು ಮನುಷ್ಯರು ಎಲ್ಲೆಲ್ಲೂ ಇರುತ್ತೀರಿ. ನಾವೆಲ್ಲಿ ಹಾರಿದರೂ ನೀವು ಇರುತ್ತೀರಷ್ಟೇ ಅಲ್ಲ, ಈ ಭೂಮಿ, ಆ ಮನೆ, ಆ ಕೆರೆ, ಈ ಮರ ಇವೆಲ್ಲಕ್ಕೂ ನೀವೇ ಯಜಮಾನರು ಎಂಬಂತೆ ನಡೆಯುತ್ತೀರಿ. ನಿಮ್ಮದೆಂದುಕೊಂಡ ಈ ಭೂಮಿಗೇ ಈ ಮನೆಗೇ ಈ ಕೆರೆಗೇ ಈ ಮರಕ್ಕೇ ಯಾವುದಕ್ಕೂ ತೊಂದರೆ ಕೊಡದೆ, ನಮ್ಮಷ್ಟಕ್ಕೆ ಬಂದು ಬಂದಷ್ಟು ಪುಳ ಹುಪ್ಪಟೆ ಹಕ್ಕಿ ಹೋಗುವ

(೮೦ನೆಯ ಪುಟಕ್ಕೆ ಮುಂದುವರಿದಿದೆ.)

ಸ್ವರ್ಣವರ್ಷದಲ್ಲಿ 'ಐ.ಏ.ಎಂ'

ಪ್ರಲ್ಹಾದ ಕುಳಲಿ*

ಪ್ರತಿ ಸಲ ಅಕ್ಟೋಬರ್ ಮೊದಲ ವಾರದಲ್ಲಿ ವಿಮಾನದಳ ಸಪ್ತಾಹ ಆಚರಣೆ. ಸ್ವರ್ಣಮಹೋತ್ಸವವನ್ನು ಈ ವರ್ಷ ಆಚರಿಸಲಾಗುತ್ತದೆ. ವಿಮಾನದಳ ಪೈಲಟ್‌ಗಳ ಆರೋಗ್ಯ, ಶಾರೀರಿಕ ಸಮರ್ಥತೆ ಮುಂತಾದವುಗಳಿಗೆ ಸಂಬಂಧಿಸಿದಂತೆ ವಿವಿಧ ವೈದ್ಯಕೀಯ ಚಟುವಟಿಕೆಗಳು ಹಾಗೂ ಸಂಶೋಧನಾ ಕಾರ್ಯದಲ್ಲಿ ತೊಡಗಿರುವ ಇನ್‌ಸ್ಟಿಟ್ಯೂಟ್ ಆಫ್ ಏವಿಯೇಷನ್ ಮೆಡಿಸಿನ್ (ಐ. ಏ. ಎಂ.) ಬೆಂಗಳೂರಿನಲ್ಲಿದೆ. ಅದರ ಖ್ಯಾತಿ ವಿದೇಶಗಳಲ್ಲೂ ಹರಡಿದೆ. ಸ್ವರ್ಣಮಹೋತ್ಸವದ ಈ ವರ್ಷದಲ್ಲಿ ಅದರ ಕಿರುಪರಿಚಯ, ಈ ಲೇಖನ.

ನೀಲ ಆಗಸದಲ್ಲಿ ಎತ್ತರೆತ್ತರಕ್ಕೆ ಹಾರುವ ವಿಮಾನಗಳ ತಾಂತ್ರಿಕ ಸೂಕ್ಷ್ಮತೆಯ ಪರೀಕ್ಷೆಯಷ್ಟೇ ಅವುಗಳನ್ನು ನಡೆಸುವ ಚಾಲಕರ ಆರೋಗ್ಯ ಪರೀಕ್ಷೆಯೂ ಮಹತ್ವದ್ದಾಗಿದೆ.

ಈ ಕಾರ್ಯವನ್ನು ತುಂಬ ಪರಿಣಾಮಕಾರಿಯಾಗಿಯೂ ಯಶಸ್ವಿಯಾಗಿಯೂ ನಿರ್ವಹಿಸುತ್ತ ಬಂದಿರುವ ಶ್ರೇಯಸ್ಸು ಬೆಂಗಳೂರು ನಗರದಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಏವಿಯೇಷನ್ ಮೆಡಿಸಿನ್ (ಐ. ಏ. ಎಂ.) ಸಂಸ್ಥೆಯದು. ಅದರ ಖ್ಯಾತಿ ವಿಶ್ವದಾದ್ಯಂತ ಹರಡಿದೆ.

ಎರಡೂವರೆ ದಶಕಗಳ ಹಿಂದೆ ಏವಿಯೇಷನ್ ಮೆಡಿಸಿನ್ ಶಾಲೆಯಾಗಿ ಪ್ರಾರಂಭವಾದ ಈ ಸಂಸ್ಥೆ ಸಾಧಿಸಿದ ಪ್ರಗತಿ ಅದ್ಭುತವಾದದ್ದು. ೧೯೬೦ರಲ್ಲಿ ಐ. ಏ. ಎಂ. ಎಂದು ಅದರ ಹೆಸರನ್ನು ಬದಲಾಯಿಸಲಾಯಿತು.


ಏರೋ ಮೆಡಿಕಲ್ ಮೌಲ್ಯೀಕರಣ, ತರಬೇತಿ ಹಾಗೂ ಸಂಶೋಧನ ಕೇಂದ್ರಗಳಲ್ಲಿ ಈ ಸಂಸ್ಥೆಯ ವೈಜ್ಞಾನಿಕ ಚಟುವಟಿಕೆಗಳು ಭಾರತದಲ್ಲಿ ಅಷ್ಟೇ ಅಲ್ಲ, ವಿದೇಶಗಳಲ್ಲಿಯೂ ಪ್ರಶಂಸೆ ಗಳಿಸಿವೆ.

ಆಕಾಶಯಾನಕ್ಕೆ ಸಂಬಂಧಿಸಿದ ಯಾವುದೇ ವೈದ್ಯಕೀಯ ಸಮಸ್ಯೆಗಳನ್ನು ಎದುರಿಸಬಲ್ಲ ಪ್ರೌಢಿಮೆ, ಪರಿಣತಿ, ವೈಶಿಷ್ಟ್ಯ ಇವುಗಳನ್ನು ಈ ಸಂಸ್ಥೆ ಪಡೆದುಕೊಂಡಿದೆ. ಅದರ ಶ್ರೇಯಸ್ಸು ಅಲ್ಲಿ ಅವಿರತವಾಗಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿ ವರ್ಗಕ್ಕೆ ಸೇರಿದೆ.

ತರಬೇತಿ

ರಕ್ಷಣಾ ಸೇವೆಗಳಲ್ಲಿರುವ ವೈದ್ಯಕೀಯ ಅಧಿಕಾರಿಗಳು, ಇಂಡಿಯನ್ ಏರ್‌ಲೈನ್ಸ್, ಏರ್ ಇಂಡಿಯ ಸಂಸ್ಥೆಗಳೂ ಸೇರಿದಂತೆ ಸಿವಿಲಿಯನ್ ವೈದ್ಯರಿಗೂ, ವಿದೇಶೀಯರಿಗೂ, ಏವಿಯೇಷನ್ ಮೆಡಿಸಿನ್ ವ್ಯಾಸಂಗದಲ್ಲಿ ಐ. ಏ. ಎಂ. ಸ್ನಾತಕೋತ್ತರ ತರಬೇತಿ ನೀಡುತ್ತಿದೆ. ಬೆಂಗಳೂರು ವಿಶ್ವವಿದ್ಯಾಲಯ ಹಾಗೂ ಇಂಡಿಯನ್ ಮೆಡಿ

* ಲೇಖಕರು ಬೆಂಗಳೂರಲ್ಲಿ 'ಸಂಯುಕ್ತ ಕರ್ನಾಟಕ'ದ ಮುಖ್ಯ ವರದಿಗಾರರಾಗಿದ್ದಾರೆ.



ಹೈ ಆಲ್ಟಿಟ್ಯೂಡ್ ಇಲೆಕ್ಟ್ರೋಕಾರ್ಡಿಯೋಗ್ರಾಮ್

ಲ್ ಕೌನ್ಸಿಲ್. ಈ ಸಂಸ್ಥೆಯು ಸ್ನಾತಕೋತ್ತರ ಡಿಪ್ಲೋಮಾ ಹಾಗೂ ಎಂ. ಡೀ ವ್ಯಾಸಂಗಗಳಿಗೆ ಮನ್ನಣೆ ನೀಡಿದೆ.

ಸಂಶೋಧನೆ

ವಿಮಾನಗಳ ಹಾರಾಟದಲ್ಲಿ ಕಾರ್ಯಾಚರಣೆ, ಸಿದ್ಧತಾ ನಿರ್ವಹಣೆ, ದಕ್ಷತೆ ಹಾಗೂ ಸುರಕ್ಷೆ ಇವುಗಳಿಗೆ ಸಂಬಂಧಿಸಿದ ಏರೋ ಮೆಡಿಕಲ್ ಸಮಸ್ಯೆಗಳ ಬಗ್ಗೆ ಅಧ್ಯಯನ ಹಾಗೂ ಅನ್ವಯಾತ್ಮಕ ಸಂಶೋಧನೆಗೆ ಹೆಚ್ಚಿನ ಮಹತ್ವವನ್ನು ನೀಡಲಾಗುತ್ತಿದೆ. ಈ ಕಾರ್ಯದಲ್ಲಿ ಅದು ವಿಮಾನದಳದ ಕಮ್ಯಾಂಡ್ ಆಸ್ಪತ್ರೆಯ ಸಹ ಯೋಗವನ್ನು ಪಡೆದುಕೊಳ್ಳುತ್ತಿದೆ.

ಏರೋ ಮೆಡಿಕಲ್ ಮೌಲ್ಯೀಕರಣ

ವಿಮಾನದಳದ ವಿಮಾನಗಳಲ್ಲಿ ಮಾನವ ಎಂಜಿನಿಯರಿಂಗ್ ಸಮಸ್ಯೆಗಳು, ಜೀವರಕ್ಷಣೆ ವ್ಯವಸ್ಥೆ, ಹಾಗೂ ಹಾರಾಗುವ ಸಮಸ್ಯೆಗಳಿಗೆ ಸಂಬಂಧಿಸಿ ದಂತೆ, ವಿಮಾನ ಹಾಗೂ ಸುರಕ್ಷತಾ ಉಪಕರಣ ಗಳ ಏರೋ ಮೆಡಿಕಲ್ ಮೌಲ್ಯೀಕರಣವನ್ನು ಇಲ್ಲಿ ನಡೆಸಲಾಗುತ್ತದೆ. ವಿಮಾನ ಕೈಗಾರಿಕೆಯೊ ದನೆಯೂ ವಿಮಾನ ಅಭಿವೃದ್ಧಿಯ ಪ್ರಾರಂಭಿಕ ಹಂತದಿಂದಲೇ ಸಂಪರ್ಕ ಇಟ್ಟುಕೊಂಡು ಇಂಥ ಸಮಸ್ಯೆಗಳು ಉದ್ಭವಿಸಿದಾಗ ಅವುಗಳನ್ನು ನಿವಾರಿಸುವ ಬಗ್ಗೆ ಸಲಹೆ ಹಾಗೂ ಮಾರ್ಗ ದರ್ಶನವನ್ನು ಐ. ಎ. ಎಂ. ನೀಡುತ್ತದೆ.

ಶಾರೀರಿಕ ಅರ್ಹತೆ

ವಿಮಾನದಳದ ವಿಮಾನ ಹಾರಾಟ ಸಿಬ್ಬಂದಿ ವರ್ಗದ ಪ್ರತಿಯೊಬ್ಬರ ಶಾರೀರಿಕ ಅರ್ಹತೆಯ ಮೌಲ್ಯೀಕರಣವನ್ನು ಪೂರ್ಣ ಪರೀಕ್ಷೆಗೊಳಪಡಿಸ ಲಾಗುತ್ತಿದೆ. ಅದಕ್ಕಾಗಿ ಅತ್ಯಾಧುನಿಕ ಉಪ ಕರಣಗಳನ್ನು ಐ. ಎ. ಎಂ. ಹೊಂದಿದೆ. ಈ ಸೌಕರ್ಯ ಇತರ ಸಿವಿಲಿಯನ್ ಏರ್‌ಲೈನ್ ಸಿಬ್ಬಂದಿ

ವರ್ಗಕ್ಕೂ ದೊರೆಯುತ್ತದೆ.

ವೈದ್ಯಕೀಯ ಮೌಲ್ಯೀಕರಣ ಕೇಂದ್ರದಲ್ಲಿ ಈ ಕೆಳಗಿನ ಉಪಕರಣಗಳ ಸೌಕರ್ಯಗಳಿವೆ:

ಇಲೆಕ್ಟ್ರೋಕಾರ್ಡಿಯೋಗ್ರಫಿ, ಕಂಪ್ಯೂಟರೈಸ್ಡ್ ಟ್ರೆಡ್‌ಮಿಲ್, ಬೈಸಿಕಲ್ ಎರ್ಗೋಮೆಟ್ರಿ. ಆ್ಯಂಬುಲೇಟರಿ ಇ. ಸಿ. ಜಿ. ಮಾನಿಟರಿಂಗ್, ಪ್ರಿಕಾರ್ಡಿಯಲ್ ಎಸ್‌ಟಿ–ಟಿ ಮ್ಯಾಪಿಂಗ್ ಎಕೋಕಾರ್ಡಿಯೋಗ್ರಫಿ ಇತ್ಯಾದಿ.

ರೋಗಗಳನ್ನು ಪ್ರಾರಂಭದ ಹಂತದಲ್ಲೇ ಗುರುತಿಸುವುದು, ಕೆಲವೊಂದು ಆರೋಗ್ಯ ಕೊರತೆಗಳಿರುವ ತರಬೇತಿ ವರ್ಗ, ಸಿಬ್ಬಂದಿ ವರ್ಗದವರ ಸೇವೆಯ ಸುರಕ್ಷಿತ ಬಳಕೆ ಇತ್ಯಾದಿಗಳ ಬಗ್ಗೆಯೂ ಗಮನ ಕೊಡಲಾಗುತ್ತಿದೆ.

ವಿವಿಧ ವಿಭಾಗಗಳು

ಎತ್ತರದಲ್ಲಿ ವಿಮಾನ ಹಾರಾಟ ನಡೆಸುವಾಗ ಉಂಟಾಗುವ ಹವಾಮಾನ ಒತ್ತಡಗಳ ವೈಪರೀತ್ಯದ ಪರಿಣಾಮ ಚಾಲಕ ಹಾಗೂ ಸಿಬ್ಬಂದಿ ವರ್ಗದವರ ಮೇಲೆ ಯಾವ ಯಾವ ರೀತಿ ಆಗುತ್ತದೆ? ಅದರಿಂದ ಉಂಟಾಗುವ ಮಾನಸಿಕ ಸ್ಥಿತಿ ಇತ್ಯಾದಿಗಳ ಬಗ್ಗೆಯೂ ಅಧ್ಯಯನ ಹಾಗೂ ಸಂಶೋಧನೆಗಳು ನ್ಯೂರೋಸೈಕಿಯಾಟ್ರಿ ವಿಭಾಗದಿಂದ ನಡೆಯುತ್ತಿದೆ. ಉಷ್ಣಾಂಶ, ಕಂಪನ, ಸದ್ದು, ವೇಗವರ್ಧನೆ ಇತ್ಯಾದಿಗಳಿಂದ ಉಂಟಾಗುವ ಪರಿಣಾಮಗಳಿಗೆ ಪರಿಹಾರವನ್ನು ಕಂಡುಹಿಡಿಯುವುದು ಇಲ್ಲಿನ ಫಿಜಿಕ್ಸ್ ಇಲಾಖೆಯ ಕಾರ್ಯವಾಗಿದೆ. ಮನುಷ್ಯ ದೇಹದ ಮಾದರಿಗಳನ್ನು ಅಭಿವೃದ್ಧಿಪಡಿಸಿ, ದೇಹವರ್ಧನೆಯ ಪರಿಣಾಮಗಳನ್ನು ಅಧ್ಯಯನ ಮಾಡಲಾಗುತ್ತಿದೆ.

ಏವಿಯೇಷನ್ ಪೆಥಾಲಜಿ ಹೈಆಲ್ಟಿಟ್ಯೂಡ್ ಫಿಜಿಯಾಲಜಿ, ಏವಿಯೇಷನ್ ಫಿಜಿಯಾಲಜಿ, ಮಾನವ ಎಂಜಿನಿಯರಿಂಗ್ ವಿಭಾಗ, ಫಿಜಿಯಾಲಜಿ ವಿಭಾಗ ಇತ್ಯಾದಿಗಳ ಕಾರ್ಯ ಐ. ಎ. ಎಫ್. ಚಾಲಕ ಹಾಗೂ ಸಿಬ್ಬಂದಿ ವರ್ಗದ ಸಾಮರ್ಥ್ಯತೆಯ ಭರವಸೆಗೆ ನಾನಾ ರೀತಿಯ ವೈಜ್ಞಾನಿಕ ಚಟುವಟಿಕೆಗಳಲ್ಲಿ ಕಾರ್ಯನಿರತವಾಗಿದೆ.

ಶೀತಲಗೊಳಿಸುವ ಉಪಕರಣ

ವಿಮಾನದ ಕಾಕ್‌ಪಿಟ್‌ನಲ್ಲಿ ಉಂಟಾಗುವ ತಾಪ(ಬಿಸಿ)ದಿಂದ ಉಂಟಾಗುವ ಸಮಸ್ಯೆಯ ನಿವಾರಣೆಗೆ ಒಂದು ಸೂಕ್ಷ್ಮ ಉಪಕರಣವನ್ನು ಇತ್ತೀಚೆಗೆ ಐ. ಐ. ಎಂ. ಕಂಡುಹಿಡಿದಿದೆ. ಕಾಕ್‌ಪಿಟ್‌ನಲ್ಲಿನ ಬಿಸಿ ವಾತಾವರಣವನ್ನು ಶೀತಲಗೊಳಿಸುವ ಈ ಉಪಕರಣ ಎಷ್ಟು ಚಿಕ್ಕದಾಗಿದೆ ಎಂದರೆ ಒಂದೇ ಸೀಟಿನ ವಿಮಾನದ ಕಾಕ್‌ಪಿಟ್‌ನಲ್ಲೂ ಅದರ ಲೇಔಟಿನ ಬದಲಾವಣೆ ಇಲ್ಲದೇ ಅಳವಡಿಸಬಹುದಾಗಿದೆ. ಈ ಉಪಕರಣ ಈಗಾಗಲೇ ಪರೀಕ್ಷೆಗಾಗಿ ಕಾದಿದೆ.

ಕೊಳಲೂದಿ ಊರಿನ ಇಲಿಗಳನ್ನೆಲ್ಲ ಊರಹೊರಗಿನ ಕೆರೆಗೊಯ್ದು ಕೊಂದವನ ಕಥೆ ಗೊತ್ತು ನಿಮಗೆ. ಜರ್ಮನಿಯ ಬಾಲಕರಿಗೆ ಜನಪ್ರಿಯವಾದ ಕಥೆಯಿದು. ಕೇವಲ ಕಲ್ಪನೆಯಾದದ್ದು ಈಗ 'ಖರೆ'ಯಾಗಿದೆ. ಅಮೇರಿಕದ ಕಂಪನಿಯೊಂದು ಈಗ ಇಂಥ ಚಿಕ್ಕ ಯಂತ್ರವೊಂದನ್ನು ತಯಾರಿಸಿದೆ. ಇದು ಇಲಿಗಳಿಗೆ ಆಕರ್ಷಕವಾಗುವ ಉಚ್ಚ ಸ್ವರವೊಂದನ್ನು ಹೊರಡಿಸುತ್ತದೆ. ಈ ಸ್ವರ ಕೇಳಿದ ೨೨೦ ಮೀಟರ್ ಸುತ್ತಲಿನ ಇಲಿಗಳು ಯಂತ್ರದೆಡೆ ಓಡಿಬರುತ್ತವೆ. ಈ ಯಂತ್ರವನ್ನು ಒಂದು ದೊಡ್ಡ ಬೋನಿನೊಳಗಿರಿಸಲಾಗಿರುತ್ತದೆ. ಹೀಗಾಗಿ ಬೋನಿನೊಳಗೆ ಬಂದ ಇಲಿಗಳು ಹೊರಗೋಡಿ ಪಾರಾಗುವಂತೆಯೇ ಇಲ್ಲ. ಈ ಯಂತ್ರ ಸಹಿತ ಬೋನನ್ನು ಎಲ್ಲಿ ಬೇಕಾದರೂ ಸಾಗಿಸಬಹುದಂತೆ.

ಪದಾರ್ಥ ಚಿಂತಾಮಣಿ

ಅಳತೆ

ಅಳತೆ ಮಾಡುವುದು ಬಹು ಪ್ರಾಚೀನವಾದ ಮಾನವ ಕ್ರಿಯೆ. ಒಂದು ಭಾಷಾ ಗುಂಪಿನಲ್ಲಿ ಈ ಕ್ರಿಯೆಗೆ ಇರುವ ಶಬ್ದ ಬಹಳ ಮಟ್ಟಿಗೆ ಸಾರ್ವತ್ರಿಕವಾಗಿರುವುದರಿಂದ ಈ ಕ್ರಿಯೆಯ ಪ್ರಾಚೀನತೆಯ ಅರಿವಾಗುತ್ತದೆ. **ಅಳೆ** ಧಾತು ದಕ್ಷಿಣ ದ್ರಾವಿಡದಲ್ಲೆಲ್ಲ ಇದೆ; ಸಂಸ್ಕೃತದ **ಮಾ** (= ಅಳೆ) ಋಗ್ವೇದ, ಇರಾಣದ ಪ್ರಾಚೀನ ಜೆಂದ್, ಗ್ರೀಕ್, ಲ್ಯಾಟಿನ್, ಸ್ಲಾವಿಕ್, ಲಿಥುವೇನಿಯನ್ ಮುಂತಾದ **ಭಾರೋಪ್ಯ** ಭಾಷೆಗಳಲ್ಲೆಲ್ಲ ಸ್ವಲ್ಪ ಹೆಚ್ಚು ಕಡಿಮೆ ಅದೇ ರೂಪದಲ್ಲಿದೆ. ಈ ಪದಗಳು ಉದ್ದಳತೆಗೂ ಘನ ಅಳತೆಗೂ ಕೆಲ ಮಟ್ಟಿಗೆ ತೂಕಕ್ಕೂ ಅನ್ವಯಿಸುತ್ತವೆ.

ಅಳತೆಯ ಮೂಲ ಆಧಾರ ಮನುಷ್ಯನ ಅವಯವಗಳೇ ಎಂಬುದೂ ನಾವು ಬಳಸುವ ಶಬ್ದಗಳಿಂದ ತಿಳಿಯುತ್ತದೆ. ಕನ್ನಡದ **ಗೇಣು**, ಸಂಸ್ಕೃತದ **ವಿತಸ್ತಿ**, ಇಂಗ್ಲೀಷಿನ **ಸ್ಪ್ಯಾನ್** ಅಗಲಿಸಿದ ಕೈಯ ಹೆಬ್ಬೆಟ್ಟಿನಿಂದ ಕಿರಿ ಬೆರಳ ವರೆಗಿನ ದೂರ; ಇಂಗ್ಲೀಷಿನ **ಫುಟ್**, ಕನ್ನಡದ **ಅಡಿ** ಪಾದದ ಉದ್ದಳತೆಯನ್ನು ಆಧರಿಸಿದವು. ಕನ್ನಡದ **ಮೊಳಕೈಯ** ಮೊಳಗಂಟಿನಿಂದ ಉಂಗುರ ಬೆರಳಿನ ತುದಿ ವರೆಗಿನ ಅಳತೆಯಾದರೆ, **ಮಾರು** ಎರಡೂ ತೋಳುಗಳನ್ನು ನೇರಕ್ಕೆ ಬಿಡಿಸಿದಾಗ ಎದೆಯನ್ನು (ಮಾರ್ = ಎದೆ) ಎಡಗೈ ಬೆರಳ ತುದಿಯಿಂದ ಬಲಗೈ ಬೆರಳು ತುದಿ ವರೆಗಿನ ಅಳತೆಯಾಗುತ್ತದೆ. ಯಾಕೋ ಏನೋ ಪಾಶ್ಚಾತ್ಯರಲ್ಲಿ **ಅಡಿ** (ಫುಟ್) ಮುಖ್ಯಾಧಾರವಾದರೆ ನಮ್ಮಲ್ಲಿ **ಗೇಣು** ಪ್ರಾಧಾನ್ಯ ಪಡೆಯಿತು. ಆದರೆ ನಮ್ಮಲ್ಲಿ **ಕೂಡ** "ಜಗವ **ಮೂರ ಅಡಿ** (ಸಂಸ್ಕೃತ: **ತ್ರಿಪಾದ್**) ಮಾಡಿದ" **ತ್ರಿವಿಕ್ರಮ**(= ಮೂರು ಹೆಜ್ಜೆಯವ)ನ ಕಥೆ ಅಡಿಯ ಆಧಾರಮಾನವನ್ನು ಸೂಚಿಸುತ್ತದೆ.

ವಿಶೇಷವೆಂದರೆ, ಈ **ಅಡಿ** (ಫುಟ್) ಅಥವಾ **ಗೇಣಿನ** ಉಪವಿಭಾಗ ಮಾಡುವಾಗ ಬಳಸಿದ ಭಾಜ್ಯ ಕೂಡ ಯುರೋಪಿನಲ್ಲಿಯೂ ನಮ್ಮಲ್ಲಿಯಂತೆ **ಹನ್ನೆರಡು** ಆಗಿರುವುದು. ಹನ್ನೆರಡು **ಅಂಗುಲ** (= ಬೆರಳು) ಅಂದರೆ ಒಂದು ಗೇಣು = ಅಡಿ. ಹನ್ನೆರಡು **ಇಂಚು** = ಒಂದು ಫುಟ್. **ಇಂಚು** ಎಂಬುದು ಲ್ಯಾಟಿನ್ನಿನ **ಅನ್ಸಿಯ**(= ಹನ್ನೆರಡರ ಅಂಶ)ದಿಂದ ಬಂದದ್ದು. (ಆದರೆ **ಇಂಗ್ಲೀಷ್ ಇಂಚು** ನಮ್ಮ ಪ್ರಾಚೀನ ಅಂಗುಲಕ್ಕಿಂತ ದೊಡ್ಡದು; **ಫುಟ್** ಗೇಣಿಗಿಂತ ೧/೩ ಅಂಶ ದೊಡ್ಡದು.)

ಮನುಷ್ಯ ಮನುಷ್ಯರೊಳಗಿನ ಎತ್ತರದ ಅಂತರದಿಂದ ಈ ಅಳತೆಗಳು ಅವ್ಯವಸ್ಥೆಗೆ ಕಾರಣವಾಗಿ ಸ್ವತಂತ್ರ ಪ್ರಮಾಣಿತ ಅಳತೆ ಅವಶ್ಯವಾಗಿ ಬಂದಿರಬೇಕು. (ಇದರಲ್ಲಿ ಕೆಲ ತಮಾಷೆಗಳೂ ನಡೆದವು. ಇಂಗ್ಲಂಡಿನಲ್ಲೊಬ್ಬ ರಾಜ ತನ್ನ ಕೈ ನೀಡಿದಾಗ ತನ್ನ ಮೂಗಿನ ತುದಿಯಿಂದ ಕೈ ತುದಿಯ ವರೆಗಿನ ಉದ್ದವನ್ನು ದೇಶಕ್ಕೆಲ್ಲ ಪ್ರಮಾಣಿತ ಅಳತೆಯಾಗಿ ಮಾಡಿದನಂತೆ!) ಹೀಗೆ ಸ್ವತಂತ್ರವಾದ ಅಳತೆಕೋಲುಗಳು ಬಂದವು. ಇಂಗ್ಲೀಷರು **ಫುಟ್, ಯಾರ್ಡುಗಳನ್ನು** ತಂದು ಹೇರಿಸುವ ವರೆಗೆ ಕರ್ನಾಟಕದಲ್ಲಿ ದೊಡ್ಡ ದೊಡ್ಡ ಅಳತೆಗಳಿಗೆ ಪ್ರಮಾಣಿತ **ಗಳೆಗಳೂ** ಅದಕ್ಕಿಂತ ಚಿಕ್ಕ **ಕೋಲುಗಳೂ** ಇದ್ದವು; **ಗಜಗಳೂ** ಇದ್ದವು. ಮೂರಡಿಗೆ ಒಂದು ಗಜ ಎಂದು ನಾವು ಚಿಕ್ಕವರಿದ್ದಾಗ ಕಲಿತಿದ್ದೆವು (ಗಜ = **ಯಾರ್ಡ್**). **ಗಳೆ, ಕೋಲು** ಪದಗಳು ಸ್ವಯಂವೇದ್ಯವಾಗಿವೆ. **ಗಜ** ಸಂಸ್ಕೃತವಾಗಿ ಕಾಣಿಸಿದರೂ ಅದು ನಿಜಕ್ಕೂ ಪಾರಸೀಕ ಪದ. ಆದರೆ ೧೪ನೇ ಶತಮಾನದ ಮಂಗರಸ ಅದನ್ನು ಉಲ್ಲೇಖಿಸುವುದರಿಂದ ಅದು **ತ್ರಾಸಿನ** ಹಾಗೆ ಸಾಕಷ್ಟು ಹಿಂದೆಯೇ ಪಾರಸೀಕದಿಂದ ಕನ್ನಡದಲ್ಲಿ ಸೇರಿಕೊಂಡದ್ದು. ಆದರೆ **ಕೋಲೇ** ಇರಲಿ, **ಗಜವೇ** ಇರಲಿ, **ಯಾರ್ಡೇ** ಇರಲಿ ಎಲ್ಲದರ **ಅರ್ಥವೂ** (ಅಳೆಯುವ) **ಕೋಲು** ಅಥವಾ **ಕಂಬಿ** ಎಂದೇ. ಮನುಷ್ಯ ಚಿಂತನೆ ಸಾರ್ವದೇಶಿಕವಾದದ್ದು!

ಇಂಗ್ಲಿಷ್ ಅಳತೆಗಳು ಬರುವ ಮುಂಚೆ ನಮ್ಮಲ್ಲಿ ಬಳಕೆಯಲ್ಲಿದ್ದ ದೂರದ ಅಳತೆಗಳು ಸ್ವಾರಸ್ಯವಾಗಿವೆ. ಸಂಸ್ಕೃತದ **ಕ್ರೋಶ** ಅಂದರೆ **ಕೂಗು** (ಕನ್ನಡ) ಕೂಗಿದರೆ ಎಷ್ಟು ದೂರ ಕೇಳಿಸುತ್ತೋ ಅಷ್ಟು ದೂರ (ಕ್ರುಶ್ = ಕೂಗು). ಕನ್ನಡದ **ಗಾವುದ** ಸಂಸ್ಕೃತದ **ಗವ್ಯೂತದ** ತದ್ಭವ. ಅದರ ಅರ್ಥ- **ಗೋಚರಾವಿನಷ್ಟು** ದೂರ; ಅರ್ಥಾತ್ ಊರಿನ ಆಕಳ ಹಿಂಡನ್ನು ಮೇಯಲು ಕಳಿಸುವಷ್ಟು ದೂರ, ಎರಡು ಕೂಗಳತೆ ಅಥವಾ ಎರಡು ಮೈಲಿನಷ್ಟು ಎಂದು ಲೆಕ್ಕ.

ಇನ್ನು ಇಂಗ್ಲೀಷಿನ **ಫರ್ಲಾಂಗ್**, **ಮೈಲು**ಗಳ ಮಾತೂ? **ಫರ್ಲಾಂಗ್** ಫರೋಲಾಂಗ್ (furrow-long)ದಿಂದ ಹುಟ್ಟಿದ್ದು. **ಫರೋ** ಅಂದರೆ ರಂಟೆ ಹೊಡೆದ ಸಾಲು; ಹೊಲ ಗದ್ದೆಗಳು ಹತ್ತಿಕರೆ ವಿಸ್ತೀರ್ಣದ ಚಚ್ಚೌಕಗಳೆಂದೂ ಅಂಥ ಹೊಲದ ಒಂದು ಭುಜದಷ್ಟು ಉದ್ದಕ್ಕೆ ರಂಟೆ ಹೊಡೆದರೆ ಒಂದು ಫರ್ಲಾಂಗೆಂದೂ ಕಲ್ಪನೆ. **ಮೈಲ್** ಎಂಬುದು ಲ್ಯಾಟಿನ್ನಿನ mille (=೧೦೦೦) ನಿಂದ ಹುಟ್ಟಿದ್ದು, ಸಾವಿರ ಹೆಜ್ಜೆ ದೂರವೇ ಒಂದು ಮೈಲು.

ಕನ್ನಡದ **ಹರದಾರಿ** ನಿಜಕ್ಕೂ **ಹರಿದಾರಿ** ಇರಬೇಕೆಂದು ಕಿಟ್ಟೆಲ್. ಇವರಲ್ಲಿ ಹರಿಪರ ಪ್ರಶ್ನೆ ಇಲ್ಲ; ಉಚ್ಚಾರ ಭೇದ ಅಷ್ಟೇ. **ಹರಿ** ಅಂದರೆ ಓಡು. ಬಹುಶಃ ಒಂದು ನಿಟ್ಟೋಟದಲ್ಲಿ ಎಷ್ಟು ದೂರ ಹೋಗಬಹುದೋ ಅಷ್ಟು.


ಇಂದು ಈ ಕೈ-ಕಾಲುಗಳನ್ನವಲಂಬಿಸಿದ ಅಳತೆಗಳೆಲ್ಲ ಕಣ್ಮರೆಯಾಗಿ ಸ್ವತಂತ್ರವಾದ **ಮೀಟರ್** ಮತ್ತು ಅದರ ಅಂಶಗಳೂ ಗುಣಕಗಳೂ ಜಾರಿಗೆ ಬರುತ್ತಿವೆ. **ಮೀಟರ್** ಆದರೂ ಮಾನದ ಗ್ರೀಕ್, ರೂಪದಿಂದ ಹೊರಟದ್ದು. ಸಂಸ್ಕೃತದಲ್ಲಿಯೂ **ಮಾತ್ರಾ** (=ಪ್ರಮಾಣ, ಅಳತೆ) ಇದೆ. ಕನ್ನಡದಲ್ಲಿ ಬಳಕೆಯಲ್ಲಿರುವ **ಮಾತ್ರೆ** **ಗುಳಿಗೆ** ಎಂಬರ್ಥವನ್ನು ಪಡೆದಿದೆ. ಉದಾಹರಣೆಗೆ ಕಸ್ತೂರೀ ಮಾತ್ರೆ. ನಿಜಕ್ಕೂ ಇದು ಇಂಗ್ಲೀಷಿನಲ್ಲಿ **ಡೋಜ್** ಎನ್ನುವ, ಒಮ್ಮೆ ನುಂಗಬೇಕಾದ ಔಷಧದ ಅಳತೆ ಎಂದೇ ಪ್ರಾರಂಭವಾದದ್ದು.

ಈ **ಅಳತೆ**, **ಮಾನ** ಮತ್ತು ತತ್ಸಮಾನ ವಿದೇಶಿ ಪದಗಳು ಬೆಳಸಿಕೊಂಡ ಅರ್ಥ-ಚ್ಛಾಯೆಗಳು ಅಗಣಿತ. ಅಳತೆ ಎಂದರೆ ಒಂದು ಮಿತಿಯೊಳಗಿರುವುದಲ್ಲವೆ? ಶಕ್ತಿಯ ಮಿತಿಯೂ ಅದರಲ್ಲಿ ಸೇರುತ್ತದೆ. ಹೀಗೆ **ಅಳವು**=ಶಕ್ತಿ ಆಯಿತು (ನನ್ನಳವಿನದಲ್ಲ). ಶಕ್ತಿಯ ಮಿತಿಯೊಳಗೆ ಬಂದದ್ದು ಅಳವಿಗೆ ಸಿಕ್ಕಿದ್ದು. ಸಂಸ್ಕೃತದ **ಮಾನ**ವಂತೂ ಇಂಥ ಅನೇಕ ಅರ್ಥಗಳನ್ನು ಸಂಪಾದಿಸಿಕೊಂಡಿದೆ. **ಪುರಾವೆ**ಗೆ **ಪ್ರಮಾಣ** ಅನ್ನುತ್ತೇವೆ; ಅಳತೆಯಿಂದ ಖಚಿತಪಡಿಸಬಲ್ಲದ್ದೇ ಪ್ರಮಾಣ. ತನ್ನ ನಡೆಯನ್ನು ಅಳತೆಯಲ್ಲಿರಿಸಿಕೊಳ್ಳುವುದೇ **ಮಾನ**; ಹಾಗಿರಿಸಿಕೊಂಡವ **ಮಾನವಂತ**; ಅಂಥವರು ವಿರಳವಾದ್ದರಿಂದ ಅವರಿಗೆ ನಾವು ಕೊಡುವುದು **ಮಾನ**. ಸರಿಯಾಗಿ ಅಳೆಯಲಾಗದಿದ್ದರೂ ಸುಮಾರಾಗಿ ಅಳೆಯಬಲ್ಲದ್ದು **ಅನುಮಾನ**. ಒಂದೇ ಅಳತೆಯುಳ್ಳವರು **ಸಮಾನ**ರು; ಪಾರಸೀಕ ಭಾಷೆಯಲ್ಲಿ ಅವರೇ **ಮಾನಿಂದ**ರು. ಒಬ್ಬನ ನಿಜ ಅಳತೆಗಿಂತ ಕಮ್ಮಿಯಾಗಿ ಅವನನ್ನು ಲೆಕ್ಕಿಸುವುದು **ಅವಮಾನ**. ಸುಮಾರಾಗಿ ಒಂದೇ ಅಳತೆಗೆ ಒಳಪಡಿಸುವುದು **ಉಪಮಾನ**.

ಅಳತೆ, **ಮಾನ**ಗಳಿಂದ ಹುಟ್ಟಿದ ಉಪ **ಅರ್ಥ**ಗಳು ದೂರದೂರದ ಭಾಷೆಗಳಲ್ಲಿ ಒಂದೇ ತೆರನಾಗಿರುವುದೊಂದು ಸೋಜಿಗ. ಅಳತೆಯಲ್ಲಿರುವವನಿಗೆ ನಾವು **ಮಾನ**, **ಸಂಮಾನ** ಕೊಡುತ್ತೇವೆ. ಅರಬೀ ಭಾಷೆಯಲ್ಲಿ **ಕದ್ರ** ಅಂದರೆ **ಅಳತೆ**, ಪ್ರಮಾಣ. ಅದೇ ಶಬ್ದ ಮರ್ಯಾದೆ, **ಪ್ರತಿಷ್ಠೆ**, ದೊಡ್ಡಸ್ತಿಕೆ ಎಂಬರ್ಥವನ್ನೂ ಕೊಡುತ್ತದೆ. ಹೀಗೆ ಉರ್ದುವಿನಲ್ಲಿ **ಕದ್ರ** ಕರನಾ ಅಂದರೆ ಯೋಗ್ಯತೆಗೆ ಮನ್ನಣೆ ಕೊಡುವುದು. ಇಂಗ್ಲೀಷಿನಲ್ಲಿಯೂ a man of measure ಅಳತೆಯ ಮನುಷ್ಯ ಅಂದರೆ ಘನಸ್ತಿಕೆಯವನು.

ಅಳತೆ, **ಮಾನ** ಪದಗಳ ಆಧಾರಗಳು ಹೇಗೆ ಶರೀರದ ಅವಯವಗಳಾಗಿದ್ದವೆಂದು ಮೇಲೆ ವಿವರಿಸಿದೆ. ಆದರೆ **ಅಳೆ**, **ಮಾ** ಇತ್ಯಾದಿ ಧಾತುಗಳ ಮೂಲಾಧಾರ ಕಲ್ಪನೆ ಯಾವುದಿರಬಹುದು? ಅಳೆಗೆ **ಆಳ್**=ಮನುಷ್ಯ, ಗಂಡಸು ಎಂಬುದೇ ಮೂಲವಾಗಿರಬಹುದೆ? ಅಳುದ್ದ, ಆಳೆತ್ತರ ಎಂಬ ಮಾತುಗಳು ಇಂದಿಗೂ ಇವೆ. ಹಾಗೆಯೇ **ಮಾ**, **ಮಾನ** ಪದಗಳಿಗೆ ಮನಸ್ಸಿನ ಸಂಬಂಧ ಹಚಲು ಸಾಧ್ಯವಿದ್ದರೂ ಮನುಷ್ಯನು ಮೂರ್ತದಿಂದ ಅಮೂರ್ತಕ್ಕೆ ಭಾಷೆಯನ್ನು ಬೆಳಸಿದನೆಂಬುದನ್ನು ಒಪ್ಪುವುದಾದರೆ ಮಾನಕ್ಕೆ ಮೂರ್ತ ಆಧಾರವನ್ನು ಅನ್ವೇಷಿಸಬೇಕಾಗುತ್ತದೆ. ಲ್ಯಾಟಿನ್ನಿನಲ್ಲಿ Manus ಅಂದರೆ ಕೈ. ಮುಂದೆ ಭಾರತೀಯಾರ್ಯ ಭಾಷೆಗಳಲ್ಲಿ ಈ ಪದ ಲುಪ್ತವಾದರೂ ಪ್ರಾಕ್ ಭಾರೋಪ್ಯದಲ್ಲಿದ್ದಿರಬಹುದಾದ ಈ ಪದವೇ ಸಂಸ್ಕೃತ ಮಾನಕ್ಕೂ ಆಧಾರವೊದಗಿಸಿರಬಹುದೇ? ಇದು ಬರಿ ಕಲ್ಪನೆಯ ಕೈಬೀಸು-ಸಿದ್ಧಾಂತವಲ್ಲ.

ಪಾವೆಂ


ಕ್ರಿಕೆಟ್ ಕಾಮೆಂಟರಿ.....
ಕಾಮೆಂಟರಿ ಬಾಕ್ಸಿನಲ್ಲಿ
"ಕಪಿಲದೇವ್ ಬಾರಿಸಿದ ಚೆಂಡು ಇತ್ತಕಡೆಗೇ ಹಾರಿ ಬರುತ್ತಿದೆ..... ಮತ್ತು.....!!"
PANDU.
"..... ಒಂದು ನಿಮಿಷ ತಾಳಿ.... ಕಾಮೆಂಟರಿ ಕೇಳಿ ಹೇಳ್ತೀನಿ.... ಔಟ್ ಆದ್ನೋ ಅಲ್ಲವೋ ಅಂತ....!"


PANDU...

(೬೨ನೆಯ ಪುಟದಿಂದ ಬಂದದ್ದು)

ನಮ್ಮಂಥ ನಿರುಪದ್ರವಿಗಳ ಮೇಲೆಯೂ ನಿಮಗೆ ಅಕ್ಕರೆ ಇಲ್ಲವಲ್ಲ. ಈ ಇದೇ ತಾಣಗಳಿಗೆ ಎಂಥ ಅಭಿಮಾನವಿಟ್ಟು ಬರುತ್ತೇವೆ ಗೊತ್ತೇ? ಆದರಲ್ಲೇಲ್ಲ ನೀವು ಮನುಷ್ಯರು ಯಾವುದೋ ತಂತ್ರ ಹಿಡಿದು ಯಮನಾಗಿ ಕಾದಿರುತ್ತೀರಲ್ಲ. ಹಾರುವುದೇ ಸ್ವಭಾವವುಳ್ಳ ನಾವು ಹಾರಿ ಬಂದಿಳಿಯದಿರುವುದಾದರೂ ಹೇಗೆ? ನಮ್ಮ ಸಂತತಿ ಇರುವುದೇ ನಿಮಗೆ ಬೇಡವೇ? ನೀವು ಮನುಷ್ಯರು ಯಾಕೆ ಇಂಥ ಕಪಟಿಗಳೂ ನಿಷ್ಠುರರೂ ಅಭಿಮಾನಶೂನ್ಯರೂ ಆಗಿದ್ದೀರಿ?

ಹೊಟ್ಟೆ ಕಲಸಿ, ಮಾತು ಬದಲಾಯಿಸಿದರೆ ಬೇರೇನು ಎನ್ನಿಸಿ, ಹಕ್ಕಿಯ ಬಳಗದ ಚಿತ್ರ, ಸಂಸಾರದ ರಚನೆ, ಗಂಡ–ಹೆಂಡಿರ ಬಾಳ್ವೆಯ ರೀತಿ, ಮಕ್ಕಳು ಮರಿಗಳ ಪಾಲನೆ ಪೋಷಣೆ ಇತ್ಯಾದಿ ವಿಷಯಗಳ ಬಗೆಗೆ ಗಮನ ಹರಿಸಿದ್ದಾಗ, ಗಗನದಂಚಿನಲ್ಲಿ ಮತ್ತಷ್ಟು ಹಕ್ಕಿಗಳು ಕೂಡು ಬಂದಿದ್ದವು. ಹೆಚ್ಚೇನಿಲ್ಲ, ಏಳೆಂಟು ಹಕ್ಕಿಗಳ ಸಣ್ಣ ವ್ಯೂಹ. ಶಿಸ್ತಿನಿಂದ ನಿಶ್ಯಬ್ದ ಹಾಯುತ್ತಿದ್ದ ಆ ವ್ಯೂಹದ ಮುಂಚೂಣಿ ಹಕ್ಕಿ ಕೆಳಗೆ ನೋಡಿ ಕ್ರ್ರೋಂಕ್ ಎಂಬ ಕೂಗಿದ್ದಿತು. ಗದ್ದೆ ಬಾನೆಯ ಹಕ್ಕಿಗಳೆಲ್ಲ ಕತ್ತೆತ್ತಿ ನೋಡಿದವು. ಬಹುಕಾಲದ ನಂಟರನ್ನು ಕಂಡೆವೆಂಬ, [illegible] ಬಿಗ್ಗಿ ಗಗನದಿಂದ ಇಳಿಯುತ್ತಿದ್ದ ಹಕ್ಕಿಗಳಿಗೂ ನೆಲದಲ್ಲಿ ಹರಡಿಕೊಂಡಿದ್ದ ಹಕ್ಕಿಗಳಿಗೂ ಏಕ ಕಾಲದಲ್ಲಿ ಉಂಟಾಗಿದೆಯೆಂದು ನನಗೆ ನನ್ನ ಹಕ್ಕಿಯ ಬಡಲು ಸೂಸಿದ ಸಂಭ್ರಮದಿಂದಲೇ ಗೋಚರವಾಗಿತ್ತು. ಈ ಹಕ್ಕಿ, ನಮಿರನ್ನು [illegible], ಬರಮಾಡಿಕೊಳ್ಳುವೆನೆಂಬ, [illegible] [illegible] [illegible] ತಿರುಗಿತ್ತು! [illegible] ಗಂಡಿನ [illegible] ಹಕ್ಕಿಗೆ ಅಳವಟ್ಟ ಈ ಹಕ್ಕಿಯ [illegible] ಬೇಕು. [illegible] [illegible] ಅಗೋ. ಈಗಲೇ [illegible] [illegible] ನೋಡು.

ಆ ಜೋಡಿಯನ್ನು ಸಾವಧಾನವಾಗಿ ನೋಡುತ್ತಾ, ನಿಮಗೇನನ್ನಿಸುತ್ತದೆ. ವಿಚಾರ ಮಾಡಿ ನೋಡಿ, ಗಂಡು–ಹೆಣ್ಣು, ದಾಂಪತ್ಯ, ಮಕ್ಕಳು, ಲಾಲನೆ ಪೋಷಣೆ. ಬಾಳಹಾದಿಯ ರೂಢಿ ಇವುಗಳು ಮನುಷ್ಯನೊಬ್ಬನ ಸ್ವತ್ತೆ? ಕಾಗೆ, ಗುಬ್ಬಿ, ಮೀನು, ಇರುವೆಗೆ ಇರುವ ಹಾಗೆ ನಮಗೂ ನಿಸರ್ಗದತ್ತವಾದ ಜೀವನ ಕ್ರಮ ಇದೆ. ಮೊಟ್ಟೆಯಿಟ್ಟು ಮರಿಮಾಡಿ ಆ ಮರಿಗೆ ತುತ್ತಿಟ್ಟು ನಡೆ ನುಡಿ ಹಾರಲು ಕಲಿಸಿ ಉಣಿಸು ಮರಕಾಪ ಪರಿಪೋಳಿಕೊಟ್ಟು ಅವಮ್ಮ, ಈ ಕಂದ ನನ್ನದು ಎಂದು ಭೂಮಿ ತಾಯಿಯ ಮಡಿಲಿಗೆ ಹಾಕುವ ವಾತ್ಸಲ್ಯ. ಪ್ರೀತಿ, ಸ್ನೇಹಗಳ ಹಂಗಿಕೆ ನಮಗಿಲ್ಲದೆ ನಾವು ಹಕ್ಕಿಗಳು ಹೇಗಾದೇವು?

ನನ್ನ ಕರುಳಾದರೂ ಎತ್ತೆತ್ತ ಒನೆದಾಡಿತು ಗೊತ್ತೆ? ಕರುಳ ಹಿಡಿತ ಬಿಟ್ಟು, ಕನಸು ಹಣೆದೆ. ಕೊಕ್ಕರೆಯ ಮರಿಯಲ್ಲಿ, ಮರವೊಂದರ ಎಡೆಯಲ್ಲಿ, ತಂದೆ ತಾಯಿಗಳು ಕಟ್ಟಿದ ಗೂಡು ತೊಟ್ಟಿಲಿನಲ್ಲಿ ಕೊರಳಿಟ್ಟು ಕೂಗುವ ಕಂದಮ್ಮಗಳು; ಅಮ್ಮಾ, ಇಷ್ಟು ಹೊತ್ತೇಕೆ ಮಾಡುತ್ತಿ?, ಅಪ್ಪಾ, ಇನ್ನೂ ಬಿಸಿಲು ಕಾಯಿಸಿಕೊಂಡು ಕೂತೆಯೇಕೆ? ಬೇಗ ತಿನಿಸು ತರಬಾರದೇ? ಈ ಅಮ್ಮ, ಆ ಅಪ್ಪ ಮಕ್ಕಳ ಉಣಿಸಿಗಾಗಿ ಎಷ್ಟು ಕೆರೆ, ಎಷ್ಟು ಗದ್ದೆಯ ಕಣ ತಡಕಬೇಕು ಗೊತ್ತೇ?, ಅಗೋ ಅಲ್ಲೊಂದು ಕೊಕ್ಕರೆಯ ಮರಿ ಕೂತಿದೆ. ಅಮ್ಮ, ಅಪ್ಪ ತಿರಿತಿರಿದು ತಂದುಣಿಸಿದ ಗುಕ್ಕಿಂದು ಉಬ್ಬುಬ್ಬಿ ಒಡಲ ಭಾರ ಗಾತ್ರ ಮಾಡಿಕೊಂಡ ಮರಿ. ಅಮ್ಮ, ಅಪ್ಪನ ಗಾತ್ರವಾದರೂ ಮೈ ಕಸುವು ಇದಕ್ಕಿಲ್ಲ. ಹಾರಲಿಕ್ಕೇ ತಾನು ಹುಟ್ಟಿದ್ದೇನೆ; ಆದ್ದರಿಂದ ಹಾರಲೇಬೇಕು ಎಂದು ಗೊತ್ತಿದ್ದರೂ ಹಾರಲೇ ಹೆದರುತ್ತಿದೆ. ಅವರೆ ಹಾರದೆ ಗತ್ಯಂತರವಿಲ್ಲ. [illegible] ಭಯ, ಬಿದ್ದೇನು, ಹೇಗೆ ಹಾರಲಿ? ಅಪ್ಪ, ಹೀಗೆ ರೆಕ್ಕೆ ಎತ್ತು, ಹೀಗೆ ಚಿಮ್ಮು, ಹಾಗೆ ರೆಕ್ಕೆ ಬಡಿ. [illegible] ಎಂದೆಲ್ಲ ಹೇಳಿ ಹೇಳಿ ಸಾಕಾಗಿ ಗದರಹೋದಾಗ, [illegible] ಮೊಚೆರಕೆಗೆ ತೊಡಗಿತು. ಕಡೆಗೊಮ್ಮೆ ಮರಿ ಕಾಲೆತ್ತಿ ಚಿಮ್ಮಿ ಧಪಧಪ ರೆಕ್ಕೆ

ಬಡಿಯುತ್ತಾ ಹಾರಹೋಗಿ ಹೇಗೆ ಹೇಗೋ ಆಗಿ. ಕಣ್ಣು ಕತ್ತಲಿಸ ಭೀತಿ ಆವರಿಸಿ. ರೆಕ್ಕೆ ಬಡಿ ಬಡಿದು ಕುಕ್ಕರಿಸಿ, ಇಳಿದು ಬರುತ್ತಾ. ಇನ್ನು ನಾನು ಹಾರಲೋದಿಲ್ಲವಾ ಎಂದು ದೋಂಹುಬಿಡಿದುದ್ದಕ್ಕೆ. ಅಮ್ಮ, ಅಗೋ ಅಗ ರಾತ್ರೆ ಬಂದಿಳಿದ ಅಪ್ಪ. ಮಗನಿಗೆ ನೀರು ಹೇಗೋ ಈಜು ಹೇಗೋ ಹಕ್ಕಿಗೆ ಆಕಾಶ-ಹಾರು ಹಾಗೆ ಎಂದು ಅಲ್ಲಿಗರೆದು ಧೈರ್ಯ ತುಂಬಿದ್ದರಿಂದ. ಮುದ್ದು ಮರಿ ಹೇಗೆ ಧೈರ್ಯತಂದುಕೊಂಡು ಮರಳಿ ಯತ್ನ ಮಾಡಿತು! ಇನ್ನೊಂದು ಮತ್ತೊಂದು ಮಗುದೊಂದು ಯತ್ನ ಮಾಡಿ. ಆಕಾಶದಲ್ಲಿ ಬಡಬೀಸು ರೆಕ್ಕೆ ಬೀಸುವಂತಾಗಿ. ಈ ಹಾರುವುದೇನೂ ಅಂಥ ಕಷ್ಟವಲ್ಲ ಎನ್ನಿಸಿದಾಗ. ಆಕಾಶವೆಲ್ಲ ತನ್ನ ದೆಂಬಂತೆ ಹೇಗೆ ಅಲ್ಲಿಲ್ಲೇ ಹಾರಾಡಿತು! ಆ ಮರಿಯಿಂದ ಹೊಮ್ಮಿದ ಕುಹಿಲಿನ ಸಂತಸಕ್ಕೆ ಎಣೆಯುಂಟೆ, ಸಾಟಿಯುಂಟೆ ? ನೀಲಿಗೋಳದ ಕೆಳಗೆ ಹಸಿರು ಹುದಿಲಿನ ಮೇಲೆ ಇಂಥ ಆಟ ಕಂಡು ಹೈನವಿರೆದ್ದ ಗರತಿ. ಗೆಯ್ಯು ಬರುವ ಗಂಡಸಿಗೆ ಅಡಿ ಒರುವ ಕಂದಸಿಗೆ ಅಂಬಲಿ ಬಿಕ್ಕಲು ಚಿಕ್ಕ ಮಟುಕುವಾಗಲೀ ಎದ್ದು ಬಿಟ್ಟು ಬೀಸುವ ಗಿರಣಿಯಾಗಿ ಹೈಚವರಿಬ್ಬರೂ ಎದ್ದೊಂದೆಲೂ ಹಾಡುತ್ತಿದ್ದಾಳೆ:

ಎಷ್ಟುಗೊರವನ ಹಕ್ಕಿ.
ನಾಗಾಭರಣವಿಕ್ಕಿ ಗಗನಕ್ಕೆ ಏಕ್ಕಿ.
ಹಾರುತ್ತಿವ್ರೋ! ಮುತ್ತಿಗೆಟುವ ಸಾಲರಳಿ ಮುರಕೇ॥
ಬೆಳ್ಳಿ ಬೆಳುವನ ಹಕ್ಕಿ
ನೂರು ಕರೆ ತಂಡುಂದು ಪ್ಯೆ ಬೆಳ್ಳಿ ಬಿನಗಿಸಿ
ಕೊಂಡು.
ರಾವುತನ ಕನಸಂದು ನೂರು ಜಟ್ಟವ ಏರಿ
ದಿಗ್ಮೇಳಕಾಲ ಉಂದು ಹಗಲಿರುಳ ಜೆನ್ನಿಗೆ
ಹಾರಿಬಂದಾವ್ರೋ ಬಾನೆಂಬ ಬಿಕ್ಕಿಗೆ ಗಾವುದವ
ಹದವಾಗೂ ನೇಯುತ॥

ಕೊಕ್ಕರೆಯ ಮರಿಯ ಹಿಮ್ಮೇಳನದಲ್ಲಿ ಗರತಿಯ ಹಾಡನ್ನು ಗುನುಗುನುಗುತ್ತಿದ್ದವನಿಗೆ ಏಕೋ ಕಸಿವಿಸಿಯಾಗಿ ಕಣ್ಣು ಬಿಟ್ಟರೆ, ಎದುರಿಗೆ ಕೊಕ್ಕರೆ ಇಲ್ಲ. ನನ್ನ ಜೊತೆ ಈಗಷ್ಟೇ ಗಳಪುತ್ತಿದ್ದ ಕೊಕ್ಕರೆ ಎಲ್ಲಿ ಹಾರಿಹೋಯಿತು ? ಕಣ್ಣನ್ನು ಅತ್ತಿತ್ತ ಆಡಿಸಿದ್ದೆ. ಇಷ್ಟರಲ್ಲಿ ದನಗಳ ಹಿಂದೆ ಮುಂದೆ ಚಲಿಸುತ್ತಿದ್ದ ಕೊಕ್ಕರೆಗಳೂ ಏಕೋ ರೆಕ್ಕೆ ಬಡಿದು ಹಾರಿ ಸನಿಹದ ಮರ ಹೊಕ್ಕಿದ್ದುವು. ಯಾಕೆಂದು ತಿಳಿಯಲು ತಡಕಾಡಿದ್ದಾಗ ಗದ್ದೆಯಂಕಣದ ಒಂದು ಕೋವಿನಲ್ಲಿ ಯಾರೋ ನಡೆದುಬರುತ್ತಿರುವುದು ಕಂಡಿತ್ತು. ಯಾರದು, ದನಗಾಹಿಯೇ? ಅಲ್ಲ, ಕೆಂಗ. ಕೆಂಗನನ್ನು ಕಂಡ ಕ್ಷಣ ಇನ್ನೇನು ಘಟಿಸಲಿರುವುದರ ಇಂಬಾಗಿ ಮುಗಿದ ಬಳ್ಳಿ ಮುಳ್ಳಾಗಿ ಮೈಗೆ ಬಿಗಿದುಕೊಂಡು, ಏನೂ ಮಾಡೆನೋ ಎಂಬ ನಿಷ್ಕ್ರಿಯೆ ಊಡಿಸುವ ವಿಷಣ್ಣತೆಯನ್ನು ಕ್ರೋಧದ ಉರಿ ಹಿಡಿದು ಬೇಯಿಸಿ, ಸೀಯಿಸಿ, ಹಗೆಯಾಗಿಸಿ, ಹೊಗೆಕಾರಿಸಿ ಪುನಃ ಅದೇ ನಿಷ್ಕ್ರಿಯ ಕರುಳು ಬಳಸಿ ಮೈಜಡವಾಗಿ, ಕಡೆಗೆ ಗಂಟಲುಬ್ಬಿ ನಿಂತಲ್ಲೇ ಗೊಂಬೆ ನಿಂತು ಗದ್ದೆಯ ಬದುವಿನ ಮೇಲೆ ಸರಸರ ನಡೆದುಬರುತ್ತ ಕೆಂಗನತ್ತಲೆ ದೃಷ್ಟಿಯಿಟ್ಟಿದ್ದೆ.

ಮೇಯುತ್ತಿದ್ದ ದನ, ಹಾರಿಹೋದ ಕೊಕ್ಕರೆಗಳು ಕೂತ ಮರ, ಗದ್ದೆಯಂಚು ಇವು ಯಾವುದರ ಕಡೆ ತಿರುತಿರುಗಿ ಕಣ್ಣಾಡಿಸುತ್ತಾ ನಡೆದು ಬಂದ ಕೆಂಗ, ಅಚ್ಚುಕಟ್ಟು ಎಡೆಯೊಂದನ್ನು ಚುನಾಯಿಸಿ ತಾನು ತಂದಿದ್ದ ಕೊಕ್ಕರೆ ಸಿಳ್ಳನ್ನು ನೆಲದಲ್ಲಿ ಹೂತಿಟ್ಟು, ಸಿಡಿಯುವ ಸುತ್ತಿನ ಉರುಳುಸೂತ್ರವನ್ನು ಸರಿಪಡಿಸಿ, ಬಗಲಿನಲ್ಲಿದ್ದ ಡಬ್ಬಿಯಿಂದ ಕುಂಬಾರಹುಳುವನ್ನು ಸಿಳ್ಳಿನ ಮಧ್ಯದ ಮೊಳೆಗೆ ಸಿಕ್ಕಿಸಿದ್ದ. ಎದ್ದು ನಿಂತು ತನ್ನ ಕೆಲಸ ಸರಿಯಾಗಿದೆಯೆ? ಎಂದು ಪರೀಕ್ಷಿಸಿ ನೋಡಿ, ಸುತ್ತ ಇನ್ನಷ್ಟು ಕಣ್ಣಾಡಿ ಅಷ್ಟು ದೂರ ನಡೆದು ಅಲ್ಲೂ ಒಂದು ಕಡೆ ಇನ್ನೊಂದು ಕೊಕ್ಕರೆ ಸಿಳ್ಳನ್ನು ಅಗಿದು ಮೇಯುತ್ತಿದ್ದ ದನಗಳ ಜೊತೆ ದನಗಾಹಿಯಂತೆ ನಿಂತ.

ಬೇಟೆಯಲ್ಲಿ ಸೈ ಎನ್ನಿಸಿಕೊಂಡಿದ್ದ ಕೆಂಗ ನೋಡಲು ಅಸಹಾಯನಾದ ಆಳೇನಲ್ಲ. ಆಗಲೋ ಈಗಲೋ ಸಿಕ್ಕುವ ಕೂಲಿ. ಅಪರೂಪದ ಮೊಲ-ಹಕ್ಕಿಗಳ ಬೇಟೆ, ಮತ್ತೂ ಅಪರೂಪಕ್ಕೆ ಬೀಳುವ ಊರ ದನ ಇವು ಯಾವತ್ತಿಗೆ ಕೆಂಗನನ್ನೂ ಅವನ ಕುಟುಂಬವನ್ನೂ ಸುಪುಷ್ಟ ಕಾಯನನ್ನಾಗಿ ಮಾಡಿಯಾವು ? [ಬಡತನದ ಬೀಸುಗಲ್ಲಿಗೆ ಸಿಕ್ಕು ನುಚ್ಚಾಗಿದ್ದರೂ ಮನಸ್ಸು ಉತ್ಸಾಹದಿಂದ ಕೆಂಗನ ಕಾಯ ಬಡಕಲಾದರೂ ಉಕ್ಕೇ. ಬಿಟ್ಟ ಬಾಣ ಸಿಕ್ಕೀತೆಂದರೆ, ಗುಟ್ಟೆಯಲ್ಲಿ ಮೊಲ ದಕ್ಕೀತೆಂದರೆ ಕೆಂಗ ನಡೆಯಬಲ್ಲಷ್ಟು ದೂರ ತೋರಬಲ್ಲ ತಾಳ್ಮೆ ಅವನಂಥವರಿಗೆ ಮಾತ್ರ ಸಾಧ್ಯ. ಈಗ ಕಾಡೇ ಇಲ್ಲವಾಗಿ ದಿನದಿನದ ಸೌದೆ ಸೊಪ್ಪಿಗೆ ಇದ್ದ ಗುಟ್ಟೆಯು ಕುರುಚಲು ಕಾಡೂ ಕಾಣದಂತಾಗಿ ಹೋದರೂ, ಎಲ್ಲಿಯೋ ಇದ್ದ ನೆರವಿನಲ್ಲಿ ಬಹುಕಷ್ಟದಿಂದ ಜೀವ ಹಿಡಿದುಕೊಂಡಿದ್ದ ನರಿಯೋ ಕಾಡುಬೆಕ್ಕೋ ಮೊಲವೋ ಗೌಜುಗವೋ. ಕಡೆಗೆ ಕಾಲಕಾಲಕ್ಕೆ ಹಾರಿ ಬರುವ ಕೊಕ್ಕರೆಯೋ, ಸುಳಿವಾದರೆ ಬಿಟ್ಟಾನೆಯೆ ಕೆಂಗ. ಕೂಲಿ ಕದ್ದು, ಹಗಲು ರಾತ್ರಿ ಕದ್ದು [illegible] ಹೂಡಿ. ಹೇಗೋ ಅಂತೂ ಬೇಟೆ ಹಿಡಿದು [illegible] !

ಹಾರುವ ಕೊಕ್ಕರೆಯನ್ನು ಹಿಡಿಯಲು ಕೆಂಗ ಸಿದ್ಧಪಡಿಸಿದ್ದ ಕೊಕ್ಕರೆ ಸಿಳ್ಳ, ಇದಕ್ಕೆ ಸಿಡಿಬಿಂತಲೂ. ನಾಗಪ್ಪನಂತೂ ಕರೆಯುತ್ತಾನೆ. ಒರಟೊರಟಾಗಿ ಕಂಡರೂ ಎಂಥ ಕುತ್ತೇಟು ಉರುಳು ಗೊತ್ತೆ? ಕಿಟ್ಟ ದಪ್ಪನ್ನ ಮೊಳದುದ್ದ ಮರದ ಬೊಡ್ಡೆಯ ಮಧ್ಯ ಎರಡು ಗೇಣಿನ ಅಡ್ಡಪಟ್ಟಿ. ಉರುಳು ಸೂತ್ರ ಜಾರುವಂತೆ ಈ ಕ್ರಾಸಿನ ಸುತ್ತ ತಲೆಯಿಲ್ಲದ ಬಾಗು ಮೊಳೆಗಳು. ನಟ್ಟ ನಡುವೆ, ಅಚ್ಚುಕಟ್ಟಿನ ಎಡೆಯಲ್ಲಿ ಕೊಕ್ಕರೆ ತಿನ್ನುವ ಏಗುಟ್ಟುವ ಕುಂಬಾರ ಹುಳು ಚುಚ್ಚಲು ಇನ್ನೊಂದು ಮೊಳೆ. ಇದರ ಮೇಲೆ ಹಾದು ಹೋಗುವಂತೆ, ಮರದ ಬೊಡ್ಡೆಯ ಹಿಂತುದಿಯಿಂದ ಮುಂತುದಿಯ ಜಾರು ಮೊಳೆಗೆ ಸೆಳೆದು ಸಿಕ್ಕಿಸಿದ ಸ್ಪ್ರಿಂಗಿನಂತಹ ಸಿಡಿಕಂತೆ. ಮರದ ಕ್ರಾಸು ಕಾಣದಂತೆ ನೆಲದಲ್ಲಿ ಹೂತು, ಸ್ಪ್ರಿಂಗು ಸಿಡಿಯು ತಲೆಯಿಂದ ಬಾಗುಮೊಳೆಗಳ ಸುತ್ತ ಉರುಳು ಸೂತ್ರ ಕಟ್ಟಿ, ಮಧ್ಯ ಹುಳು ಗಾಳದ ಆಸೆ ತೋರಿಸಿದ ಹುಳು [illegible]

ಕೊಕ್ಕರೆ ಸಿಳ್ಳ ಸಿದ್ಧ–ಹೋದ ಆಸಿಗೆ ಕೊಕ್ಕರೆ ತಲೆಹಾಕಿದ ಕೂಡಲೆ ಸಿಡಿಸನ್ನಿ ಜಾರಿ, ಮಿಂಚಿಂತೆ ಹಿಂಜಗ್ಗಿ ಸುತ್ತಲ ಉರುಳು ಸೂತ್ರವನ್ನು ಕೊಕ್ಕರೆಯ ಕತ್ತಿಗೆ ಬೀರುಗುಣಿಕೆಯಾಗಿ ಬಿಗಿದು ಬಿಡುತ್ತದೆ.

ದನಗಳೊಡನಾಡುವ ದನಗಾಹಿಗಳನ್ನು ಕೊಕ್ಕರೆಗಳು ಬಲ್ಲವೇ ಬಲ್ಲವು. ದನಗಳನ್ನು ಪಾಲಿಸುವ ಇವನಿಂದ ತಮಗೆ ಏನು ತೊಂದರೆ ಬಂದೀತು? ಈಗ ರಂಗಕ್ಕಿಳಿದ ಕೆಂಗ ದನಗಾಹಿಯಲ್ಲವೆಂದು ಕೊಕ್ಕರೆಗಳು ಹೇಗೆ ಬಲ್ಲವು? ಮರಗಳ ಮೇಲೆ ಕೂತಿದ್ದ ಕೊಕ್ಕರೆಗಳು ಅಷ್ಟು ಹೊತ್ತಿನ ಮೇಲೆ ಒಂದೊಂದಾಗಿ ಹಾರಿಳಿದು ಬಂದು ಅಲ್ಲಿಲ್ಲಿ ನಡೆದಾಡತೊಡಗಿದುವು. ಹೀಗೆ ಬಂದಿಳಿದ ಕೊಕ್ಕರೆಗಳಿಗೆ ಗಾಬರಿಯಾಗದಂತೆ ಕೆಂಗ ದನಗಳನ್ನು ತಾನು ಸಿಡಿ ಹೂಡಿರುವ ಜಾಗದೆಡೆಗೆ ಓಡಿಸಿದ್ದ. ತುಸು ಹೊತ್ತಿನಲ್ಲಿ ಕೊಕ್ಕರೆಗಳು ದನಗಳ ಜೊತೆ ತನ್ನಂತೆ ನಿಂತಿದ್ದ ಕೆಂಗನನ್ನು ಮರೆತು ದನಗಳು ಹಿಂದೆ ಮುಂದೆ ಓಡಾಡತೊಡಗಿದುವು.

ಬೇಟೆಯಲ್ಲಿ ತಾಳ್ಮೆಗೆ ಜಾಣ್ಮೆಗೆ ಬಹು ದೊಡ್ಡ ಸ್ಥಾನವಿದೆ. ಪ್ರಾಯಶಃ ಕೊಕ್ಕರೆಗಳಿಗೆ ತನ್ನಿಂದ ಯಾವ ಭಯವೂ ಇಲ್ಲ ಎಂಬ ನಿರಾತಂಕಭಾವ ಮೂಡುವವರೆಗೂ ಕಾದಿದ್ದ ಕೆಂಗ. ಸಿಡಿಗೂ ತನಗೂ ಕೊಕ್ಕರೆಗಳು ಮಧ್ಯಸ್ಥವಾಗುವಂತೆ ದನಗಳ ಗುಂಪಿನಿಂದ ದೂರ ಬಂದು ಪಕ್ಕದೆ ನಿಂತ. ತುಸು ಹೊತ್ತು ನಿಂತು ಪ್ರಕ್ಕೆ ಆಡಿಸದೆ ಅಲ್ಲಲ್ಲಿ ನಿಲ್ಲುತ್ತಾ ನಿಧಾನವಾಗಿ ಹೆಜ್ಜೆ ಇಡುತ್ತಾ ಕೊಕ್ಕರೆಗಳತ್ತ ಚಲಿಸತೊಡಗಿದ. ಕೊಕ್ಕರೆಗಳಿಗೋ ದನಗಳ ಮಧ್ಯ ಇದ್ದವ ಇಲ್ಲೇಕೆ ಬಂದ ಎಂಬ ಸೋಜಿಗ, ಯಾವ ಚೇಷ್ಟನೆಯನ್ನೂ ತೋರದೆ ಶಾಂತವಾಗಿ ಮುಂದ ವರೆಯುತ್ತಿದ್ದ ಇವನಿಂದ ತೊಂದರೆಯಿಲ್ಲದಿರಬಹುದೆಂಬ ನಿರಾತಂಕ. ನಂತರ, ಈ ದನಗಾಹಿ ಸಮೀಪಿಸತೊಡಗಿದಂತೆ ಇವನೇಕೆ ಅಕಾರಣವಾಗಿ ಇಷ್ಟು ಸಮೀಪ ಬರುತ್ತಿದ್ದಾನೆ ಎಂಬ ಭಯ ಕಾಡಿ. ಕತ್ತೆತ್ತಿ ಅವನತ್ತಲೇ ನೋಡಿದ್ದವು. ಪ್ರಾಣಿಸ್ವಭಾವ ಬಲ್ಲವನಾದ ಕೆಂಗನಿಗೆ ಇವುಗಳಲ್ಲಿ ತುಸು ಅಸ್ವಸ್ಥತೆ ಮೂಡಿಸಬೇಕು, ಹೆಚ್ಚು ಗಾಭರಿ ಕೊಡದು ಎಂಬುದು ಅನುಭವವೇದ್ಯವಾದುದೇ. ಕೊಕ್ಕರೆಗಳನ್ನು ತೀರ ಸಮೀಪಿಸಿದ ಮೇಲಂತೂ ಎರಡೆರಡೇ ಹೆಜ್ಜೆ ಇಡುತ್ತಾ ಮುಂದೆ ಬರತೊಡಗಿದ. ಕೊಕ್ಕರೆಗಳು ಅವನತ್ತಲೇ ನೋಡತೊಡಗಿದವು. ಗಾಭರಿ ಹೆಚ್ಚಾದ ಕೂಡಲೇ ತಮ್ಮ ಅನುಚರರತ್ತ ಕತ್ತು ಕೊಂಕಿಸಿ, ಈ ತಂಟೆ ಸಾಕು, ಹಾರೋಡೋಣವೇ ಎಂಬಂತೆ ರೆಕ್ಕೆ ಬಿಚ್ಚಿ ಹೋಗಿ, ಮನಸ್ಸಾಗದೆ ಮತ್ತೆ ಕೆಂಗನತ್ತಲೇ ನೋಡಿದ್ದವು. ಕೆಂಗ ಇನ್ನೆರಡು ಹೆಜ್ಜೆ ಇಟ್ಟ ಕ್ಷಣ ಕೆಲವು ಅಳುಕಿನಿಂದ ರೆಕ್ಕೆ ಬಿಚ್ಚಿ ಹರಡಿ ನಿಂತರೆ ಕೆಲವು ಅಷ್ಟು ದೂರ ಚಲಿಸಿ ನಿಂತವು. ಈಗಂತೂ ಕೆಂಗ ತೀರ ಲೆಕ್ಕಾಚಾರವಾಗಿ ಒಂದೊಂದೇ ಹೆಜ್ಜೆ ಇಟ್ಟುಕೊಂಡು ಮುಂದೆ ಬರತೊಡಗಿದ. ಅಸ್ವಸ್ಥತೆಯ ವೇಗ ಮಿತಿಯಲ್ಲಿದ್ದ ಕೆಲವು ಕೊಕ್ಕರೆಗಳು ಹಾರಿ ಹೋದರೂ ಕೆಲವು ಕೆಂಗ ಹೂಡಿದ್ದ ಸಿಡಿಯ ಸನಿಹಕ್ಕೆ ನಡೆದು ನಿಂತವು. ತನ್ನ ಉದ್ದೇಶ ಸಾಧಿಸಿದ ಕೆಂಗ ಈಗ ನಿರ್ಲಿಪ್ತನಂತೆ ಸ್ಥಾಣುವಾಗಿ ನಿಂತ. ಕೊಕ್ಕರೆಗಳೂ ತಮ್ಮಂತೆ ನಿಂತವು.

ಆದರೆ ಉದ್ದೇಶಪೂರ್ವಕ ಸ್ಥಾಣುವಾಗಿ ನಿಂತಿದ್ದ ಕೆಂಗನಂತೆ ಕೊಕ್ಕರೆಗಳು ಇದ್ದೆಡೆಯೇ ಎಷ್ಟು ಹೊತ್ತು ನಿಂತಾವು? ಇನ್ನು ನಿಂತಿರಲು ಸಾಕೆನ್ನಿಸಿ ಕೊಕ್ಕರೆಗಳಲ್ಲೊಂದು ಒಂದೆರಡು ಹೆಜ್ಜೆ ಇಟ್ಟಿತು. ಅದರ ಕಣ್ಣಿಗೆ ಸಿಳ್ಳಿನ ಸನಿಹವೆ ಮಿಳಿಗುಟ್ಟುತ್ತಿದ್ದ ಮೀನು ಕಂಡಿರಬೇಕು. ಇನ್ನೊಂದು ಹೆಜ್ಜೆ ಇಟ್ಟು ಕತ್ತು ಬಾಗಿಸಿದ್ದಿತು.

ಉಣಿಸಿಗೆ ಬಾಯಿ ಹಾಕಹೋದ ಕೊಕ್ಕರೆಯ ಕತ್ತನ್ನು ಉರುಳು ಬಂಧ ಬಿಗಿದಿದ್ದ, ಕತ್ತು ಉರುಳೊಳಗೆ ಸಿಕ್ಕಿ ಹಾಕಿಕೊಂಡ ಕ್ಷಣ ಕೊಕ್ಕರೆ ವಿಕಾರವಾಗಿ ಆರ್ತನಾದ ಮಾಡಿ ಕತ್ತು ಮೈ ರೆಕ್ಕೆ ಕಾಲುಗಳನ್ನು ಝಾಡಿಸಿದ್ದ, ಮಿಕ್ಕವು ಗರಬಡಿದಂತೆ ಕ್ರೋಂಕ್ ಎಂಬ ಕ್ರಂದನ ಹೊರಡಿಸಿ ಗಗನವಡರಿದ್ದು, ಕ್ಷಣ ತಡಮಾಡದೆ ನುಗ್ಗೋಡಿ ಬಂದ ಕೆಂಗ ಇನ್ನೂ ಒದ್ದಾಡುತ್ತಿದ್ದ ಕೊಕ್ಕರೆಯ ಕತ್ತು ತಿರುಚಿ ಅದನ್ನೂ ಸಿಳ್ಳಿಯನ್ನೂ ಬಗಲಿಗೇರಿಸಿ, ಹೂಡಿದ್ದ ಇನ್ನೊಂದು ಸಿಳ್ಳನ್ನೂ

ತೆಗೆದುಕೊಂಡು ನಡೆಯುತ್ತಿದ್ದ ಎಲ್ಲವೂ [illegible] ಹೋಲಿ ನಿಂತಂತೆ ನಿಂತಿದ್ದ ನನಗೆ ಕಂಡಿದ್ದಿತು. ಕೆಂಗನ ಬಗಲಿನಲ್ಲಿ ತೂಗಾಡುತ್ತಿದ್ದ ಕೊಕ್ಕರೆಯ ಶವ ದೃಷ್ಟಿಗೆ ಬಿದ್ದಾಗ–ಲಂತೂ, ಹೊಟ್ಟೆ ಕಲಕಿ. ಅವನನ್ನೇಕೆ ಕೂಗಿ ಕರೆದು ಈ ಹತ್ಯೆ ತಪ್ಪಿಸದೆ, ಹೇಡಿ ನಿಷ್ಕ್ರಿಯತೆ ಹಿಡಿದು ನಿಂತೆ? ಎಂದು ನನ್ನನ್ನು ನಾನೇ ಶಪಿಸಿಕೊಂಡೆ.

ಆದರೆ ಬುದ್ಧಿ ಹೆಣೆಯುವ ಸಮಾಧಾನಗಳು ವಿಚಿತ್ರರವು! ಈ ಹೊತ್ತು ಈ ಹತ್ಯೆ ತಪ್ಪಿಸಬಹುದು, ನಾಳೆ? ನಾಡಿನ ಉದ್ದಗಲ ಇರುವ ಕೆಂಗರು? ಕೆಂಗರೋ, ಕೋಳಿ ಕಾಣದೆ ಕರುಳುಗೆಟ್ಟು ಕೊಕ್ಕರೆ ಕೊಲ್ಲುವರು. ಶೂಸ್ಟ್ ಟಿರು ತೊಟ್ಟು, ಬ್ರಾಂದಿ ಕುಡಿದು ಬಂದೂಕ ಹಿಡಿದು, ಬೇಟೆಯ ಮೋಜು ಮಾಡುವವರು. ಇವರಿಗೆ ಯಾರು ಎಷ್ಟು ಸಲ ಎಷ್ಟು ಕಾಲ ಬೋಧನೆ ಮಾಡಲು ಸಾಧ್ಯ?

ಆದರೂ ಕೈಲಾಗುವುದನ್ನು ಮಾಡದೆ ಕೈಕಟ್ಟಿ ಕೂರುವುದು ಯಾತರ ನಡಾವಳಿ? ಇಂಥದ್ದೆ ಒಂದು ಪ್ರಸಂಗದಲ್ಲಿ ಕೆಂಗನನ್ನು ಪ್ರಶ್ನಿಸಿಯೂ ಇದ್ದೆ.

"ಯಾಕೋ ಈ ಬಡಪಾಯಿ ಕೊಕ್ಕರೇನ ಕೊಂದು ತಿಂತೀ?"

ತರವಲ್ಲದ ಕೆಲಸ ಮಾಡಿದ್ದೇನೆಂದು ಅವನ ಮುಖಚರ್ಯೆ ನುಡಿದಿದ್ದರೂ, ಧ್ವನಿಗೆ ಬಲವಂತದ ಸಮರ್ಥನೆ ಹೇರಿ ಉತ್ತರಿಸಿದ್ದ.

"ಸಾಲ ಸೋಲ ಉಪವಾಸ ವನವಾಸವಾಗಿ ಇರೇನು ಸ್ವಾಮಿ. ಹೊಟ್ಟೆಗಿಲ್ಲದಾಗ ಎಂಥಾದ್ದೂ ತಿಂತೀನಿ."

"ನೀನು ಕೊಲ್ಲೋ ಮೊಲ, ನರಿ, ಈ ಪಕ್ಕಿ, ಇವೆಲ್ಲ ಅಪರೂಪದವು ಕಣೋ. ಹೀಗೆ ಕೊಂದು ಇವುಗಳ ಸಂತತೀನೇ ನಾಶ ಆದ್ರೆ ಆಗೋ ನಷ್ಟ ತುಂಬೋಕಾಗುತ್ತೇನೋ?"

ನನ್ನ ಮಾತಿನ ಕಳಕಳಿ ಎಲ್ಲರಿಗೂ ಅರ್ಥವಾಗುವಂತೆ ಇವನಿಗೂ ಅರ್ಥವಾಗಿರಲೇಬೇಕು. ಆದರೆ ನಾಡು ಸಾಕುತ್ತೇನೆನ್ನುವ ದೊಡ್ಡವರು ಕಾಡನ್ನೇ ಗುಡಿಸುವಾಗ? ಕೆಂಗ ಹೇಳಿದ್ದ.

"ಕುಂಬಾರ್ರು ಹುಳ ನಾಶ ಆಗ್ತದೇಂತ ಹುಳಾ ತಿನ್ನದೇ ಬಿಟ್ರೆ ಈ ಕೊಕ್ರೆ ಬದುಕ್ತದಾ ? ಈ ಕೊಕ್ರೆ ಹುಳಾನ ಹೇಗೆ ತಿಂತದೋ ಹಂಗೆ ನಾನೀ ಕೊಕ್ರೇನ ತಿಂತೀನಿ. ಆದ್ರಾಗೇನು ತಪ್ಪು? ತಿನ್ನಾಕೇಂತ ಕೋಳಿ ಸಾಕೋದು ಕುಯ್ಯೋವಾಗ ಕಣ್ಣೀರಿಡ್ತಾರ ಬುದ್ದಿ? ಕೊಯ್ತಾರೆ, ತಿಂತಾರೆ."

"ತಿನ್ನೋಕೇಂತ ಸಾಕೋ ಕೋಳಿ ವಿಷಯ ಬೇರೆ ಕಣೋ ಕೆಂಗ; ನಾಡು, ಕಾಡು ದಾರಿ ಬರೋ ಕೊಕ್ಕರೆಯ ವಿಷಯ ಬೇರೆ. ಇದರ ಕುಲಕ್ಷಯ ಆದರೆ ಪುನಸ್ಸೃಷ್ಟಿ ಅಸಾಧ್ಯ. ತನಗೆ ಬೇಕಾದ್ದರಿಂದ ಕೋಳಿಯ ಕುಲವನ್ನು ಮನುಷ್ಯ ಹೇಗೆ ಕಾಪಾಡಿಕೊಂಡು ಬರುತ್ತಿದ್ದಾನೆ, ನೋಡು."

ಕೆಂಗನಲ್ಲಿ ಭೂತದಯೆಯ ಸಾಮಾನ್ಯ ಧರ್ಮವನ್ನು ಬಿಸುಟಿದ್ದಂತೆ ಕೆಂಗ ಹಿಡ್ಡನಾಗಿ ವಿಷಯ ಹೊರಳಿಸಿ ಜಾರಿಕೊಂಡಿದ್ದ. ನಿಜದಲ್ಲಿ ಕೆಂಗನೂ ಕನಿಕರದ ಮನುಷ್ಯನೇ. ಆದರೆ ಬಾಳ್ವೆಯ ಪರಿಸ್ಥಿತಿ ಅವನ ಕನಿಕರವನ್ನು ಹರಿದು ಹತ್ತು ದಾರಿಗೆ ಎಳೆದಿತ್ತು. [illegible] ಜಬರುದಸ್ತಿನಿಂದ ಕನಿಕರವನ್ನು ಬಾಳಿಸಲಾದೀತೇ?

ಹೊಟ್ಟೆಯನ್ನು ಕಲಕುತ್ತಿದ್ದ ಅಸಹಾಯಕತೆಯನ್ನು ಶಮನ ಮಾಡಲು ಎಲ್ಲೆಲ್ಲೋ ಅಡ್ಡಾಡಿದೆ. ಕೆಂಗ ಕೊರಳು ಮುರಿದ ಕೊಕ್ಕರೆ ಗಂಡೋ–ಹೆಣ್ಣೋ? ಅಥವ, ಅಥವ ನನ್ನೊಡನೆ ಸಂವೇದಿಸಿದ ಕೊಕ್ಕರೆಯೋ? ಸ್ವಂತಿಕೆ ಅಂಟಿಕೊಂಡ ಕ್ಷಣ [illegible] ನನ್ನ ಕೊಕ್ಕರೆಯೋ [illegible] ಗೂಡಿಗೆ [illegible] ಕೊಂಡು ತನ್ನ ಮಕ್ಕಳ [illegible] ಈಗ [illegible] ಪಾಡಿಕೆಯಲ್ಲಿ ಬೇಯುತ್ತಾ ಇದ್ದರೆ ಮಾಡುವುದೇನು? ತನ್ನ ದಿಕ್ಕು ದೆಸೆ ಎಲ್ಲವೂ ಆಗಿದ್ದ ಗಂಡನ ಶವದ ಮುಂದೆ ಭರಿಸಲಾಗದ ವೇದನೆಯನ್ನು ಹೊಮ್ಮಿಸುತ್ತಾ ಕಮಂಟ ಬಿದ್ದಿದ್ದ ಹೆಂಗಸು. ಮನೆ,ಮಾತು,ಮಕ್ಕಳು ಮತ್ತು ತನ್ನನ್ನ ತಾನೆಂಬ ದಿಕ್ಕಿಗೆ ಆಕರತಾರೆಯಾಗಿ ತನ್ನವೇಬ ದೀಡಿಗೆ ಕ್ಷೇತ್ರವಾಗಿ ಬಾಳು ಬೆಳಗಿಸುತ್ತಿದ್ದ ಹೆಂಡತಿಯ ಶವದ ಪಕ್ಕ ಕಣ್ಣೀರಿಗರೆ [illegible] ದುಃಖದಿಂದ ತಲೆಯ ಮೇಲೆ ಕೈಹೊತ್ತು ಕೂತಿದ್ದ ಗಂಡ. ದುಃಖಕ್ಕೆ ಗಂಡೇನು ಹೆಣ್ಣೇನು?

ಕತ್ತೆತ್ತಿ ನೋಡಿದ್ದೆ. ಬಾನ ಗೋಳಕ್ಕೆ ನೂರಾಗಲೋ ಬೂದು ಪಾಚಿ ಕವಿದುಕೊಂಡಿತ್ತು. ಎಲ್ಲೋ ನಕ್ಷತ್ರವೊಂದು ಮಿಣುಕಾಡುವ ಸಾಹಸದಲ್ಲಿ ತೊಡಗಿತ್ತು. ಏನೋ ಬಿಚ್ಚಿ ಹರಿದಂತೆ ಶಬ್ದ? ಪಕ್ಷಿಯ ಕ್ರಂದನವೋ? ಒಂದು ಪಕ್ಷಿಯ ವ್ಯಥೆ ಗಗನಮಂಡಲ ಸುತ್ತಿ ಕರೆದೀತೆ? ಕಣ್ಣು ಕಿಸ್ಕರಿಸಿ ನೋಡಿದ್ದೆ. ಸಾವಿರ ಸಾವಿರ ಪಕ್ಷಿಗಳು ಶಿಸ್ತಿನ ವ್ಯೂಹ ಕಟ್ಟಿ ನಿಶ್ಶಬ್ದ ಹಾರಬೇಕು. ಪಕ್ಷಿಯೊಂದು ಆದ್ಯಂತವಿಲ್ಲದ ಬಾನಂಗಳದಲ್ಲಿ ಕ್ರಂದಿಸುತ್ತ ದಿಕ್ಕೆಟ್ಟಂತೆ ಎತ್ತೆತ್ತಲೋ ಹಾರುತ್ತಿತ್ತು. ಅರಸಬಾರದುದನ್ನು ಅರಸಹೊರಟ ಪರಿತಾಪ ಆ ಒಂಟಿ ಪಕ್ಷಿಯ ಅಳಲಿನಲ್ಲಿ ಪಾಕವಾಗಿದ್ದರೆ, ಅರಸಲಾಗದುದನ್ನು ಅರಸಹೊರಟ ಪಕ್ಷಿಯದು ಆ ಪಕ್ಷಿಯ ಹಾರಿನಲ್ಲಿ ಚೆಲ್ಲಿಸಿಬಿಡಿತ್ತು.

ಉನ್ಮತ್ತಗೊಂಡವನ ಪಕ್ಷಿ.

ಪ್ರೇಮದ ಸಂಟ್ಟು ಬಿಸಿಲಾಗ ಹಿಮ
ಇರುಳಾಗ ನೋವು ಅತ್ತತ್ತು ಚುಕ್ಕಿ
ಎತ್ತೆತ್ತ ಹಾರ್ತ್ಯೋ ಒಂಟಿ ಬಿಳಿಯ ಹಕ್ಕಿ.

ಉಳಿದಿರುವುದೊಂದಿದೆ. ಇಂಥ ಅಸಹಾಯಕತೆಯನ್ನು ಅನುಭವಿಸುವುದಕ್ಕಿಂತ ಕೊಕ್ಕರೆ ಹಿಡಿದು ಹೋದ ಕ್ಷಣ ಕಂಗನ್ನು ತಪ್ಪಿದ್ದರೇ ಲೇಸೆನಿಸುತ್ತದೆ. ಸ್ವಾಂತಿಕೆ ಇಲ್ಲದ ಕನಿಕರವೂ ಒಂದು ಕನಿಕರವೇ? ✡



ಥೈಲ್ಯಾಂಡಿನ ಪೆಂಚಾಪಾಂಗ್ ಇವಪ್ಪಾಪ್ ಎಂಬಾಕೆಗೆ ಅಲ್ಲಿಯ ವರಿಷ್ಠ ನ್ಯಾಯಾಲಯ ವಿಧಿಸಿದ್ದ ೧೦೦೧ ವರ್ಷಗಳ ಸೆರೆವಾಸದ ಶಿಕ್ಷೆಯನ್ನು ಕಡಿಮೆ ಮಾಡಿದೆ. ಅದಕ್ಕಾಗಿ ಆಕೆ ಸಲ್ಲಿಸಿದ್ದ ವಿನಂತಿ ಅರ್ಜಿಯನ್ನು ಮನ್ನಿಸಿದ ನ್ಯಾಯಾಲಯ ಶಿಕ್ಷೆಯನ್ನು ೮೮೫ ವರ್ಷಗಳೆಂದು ಸಾರಿದೆ. ಸಾರ್ವಜನಿಕ ಸಂಸ್ಥೆಯೊಂದರ ಸುಮಾರು ೩೬೦೦೦ ಬಾಹ್ಟ್ (೧೧೫೦೦೦ರೂಪಾಯಿಗಳು) ಗಳನ್ನು ದುರುಪಯೋಗಪಡಿಸಿಕೊಂಡದ್ದಕ್ಕಾಗಿ ಆಕೆಗೆ ಈ ಶಿಕ್ಷೆ!

●●

ಪಶ್ಚಿಮ ಜರ್ಮನಿಯ ಪೋಲೀಸರು ಶಿಮ್ಸ್ ಎಂಬ ಔಷಧಿ ತಯಾರಕನೊಬ್ಬನನ್ನು ಮೋಸದ ಪ್ರಕರಣವೊಂದರಲ್ಲಿ ಬಂಧಿಸಿದ್ದಾರೆ. ಆತ 'ಮೂರ್ಖತನ ಕಡಿಮೆ ಮಾಡಬಲ್ಲ ಮಾತ್ರೆ'ಗಳನ್ನು ತಯಾರಿಸಿ ಕೆಲವರಿಗೆ ಮಾರಿದ್ದ. ಅಂಥ ಔಷಧಿಯ ತಯಾರಿಕೆ ಸಾಧ್ಯವೆ? ಎಂಬುದನ್ನು ಆ ಮಾತ್ರೆ ಖರೀದಿಸಿದ ಕೆಲ 'ಜಾಣ ಮೂರ್ಖರು' ನಂತರ ವಿಚಾರಿಸಿ, ತಾವು ಮೋಸ ಹೋಗಿದ್ದೇವೆಂದು ಅರಿತು ಪೋಲೀಸರಿಗೆ, ಮೊರೆ ಹೋಗಿದ್ದರಂತೆ.

●●

"ರೂಪದರ್ಶಿನಿಯರ ಫೋಟೋ ತೆಗೀತಿರುವಾಗ ನೀವು ಯಾವುದರ ಮೇಲೆ ಹೆಚ್ಚು ಲಕ್ಷ್ಯ ಕೇಂದ್ರೀಕರಿಸುತ್ತೀರಿ?"

"ಪತ್ನಿಯ ಮೇಲೆ."

ಅಮೇರಿಕದಲ್ಲಿ ದಾಂಪತ್ಯ

ಡಾ. ಮೈ. ಶ್ರೀ. ನಟರಾಜ

ಅಮೇರಿಕದಲ್ಲಿ ನೆಲೆಸಿರುವ ಕನ್ನಡಿಗ ಡಾ. ಮೈ. ಶ್ರೀ. ನ. ಅವರು ಅಲ್ಲಿಯ ಸಾಮಾಜಿಕ ಸ್ಥಿತಿ–ಗತಿಗಳನ್ನು ಬಹು ಕೂಲಂಕಷವಾಗಿ ಅಭ್ಯಸಿಸಿದವರು. ಅಲ್ಲಿಯ ದಾಂಪತ್ಯದ ಸರಸ–ವಿರಸಗಳನ್ನು ಇಲ್ಲಿ ನಿವೇದಿಸುವುದರೊಂದಿಗೆ ಅಮೇರಿಕದ ವಿವಾಹವಿಚ್ಛೇದದ ಪ್ರಕರಣಗಳನ್ನು ಕುರಿತು ಮುಖ್ಯವಾಗಿ ಚಿಂತಿಸಿದ್ದಾರೆ. ಭಾರತದಲ್ಲಿ ಕೂಡ ಅಂಥದೇ ಪರಿಸ್ಥಿತಿ ನಿರ್ಮಾಣವಾಗುತ್ತಿರುವುದೇನೋ ಎಂಬಂಥ ಭಯವಿರುವ ಸಂದರ್ಭದಲ್ಲಿ ಈ ಲೇಖನ ಹೆಚ್ಚು ಬೆಳಕು ಚೆಲ್ಲಬಹುದು.

ನವವಧುವಿನ ಸುಂದರ ಬಿಳೀ ಉಡುಪಿನಲ್ಲಿ ಕಂಗೊಳಿಸುತ್ತಿದ್ದಳು ಸೂಸನ್. ಆಕೆಯ ವರ ರಾಬರ್ಟ್– ಎಂದೂ ಸೂಟು ಧರಿಸದವ– ಇಂದು ಹೊಚ್ಚ ಹೊಸ ಸೂಟಿನಲ್ಲಿ ಥಳಥಳಿಸುತ್ತಿದ್ದ! ಪಾದ್ರಿ, "ನೀವಿಬ್ಬರೂ ಇನ್ನು ದಂಪತಿಗಳಾದಿರಿ, ಚುಂಬನ ವಿನಿಮಯ ಮಾಡಿಕೊಳ್ಳಬಹುದು," ಎಂದೊಡನೆಯೇ ಎಲ್ಲಿಲ್ಲದ ಆತುರದಿಂದ ಇಬ್ಬರೂ ಚುಂಬಿಸಿದ್ದರು, ಜೀವನದ ಅಪೂರ್ವ ಘಳಿಗೆಯೊಂದರಲ್ಲಿ ಅನುಭವವಾಗುವ ತಲ್ಲಣವನ್ನು ಅನುಭವಿಸುತ್ತಾ. ಪ್ರೀತಿಯಲ್ಲಿ ಸಿಕ್ಕಿಬಿದ್ದಿದ್ದ ಸೂಸನ್ ಮತ್ತು ರಾಬರ್ಟರು ಈಗಲೀಗ ವಿವಾಹಿತರಾಗಿದ್ದರು. ಶೇಕಡಾ ೯೦ ಅಮೇರಿಕನ್ನರು ಇದೇ ರೀತಿ 'ಪ್ರೇಮಾನುಭವ' ಪಡೆದು ಮದುವೆಯಾಗುವವರು.

ಐದು ವರ್ಷಗಳ ತರುವಾಯ: ಅದೇ ಸೂಸನ್ ಮತ್ತು ರಾಬರ್ಟ್ – ಅವಳು ಕಂಬನಿ ಸುರಿಸುತ್ತಾ, ಅವನು ಬುಸುಗುಟ್ಟುತ್ತಾ– ವಕೀಲನ ಕಚೇರಿಯಲ್ಲಿ ಮುಖಾಮುಖಿಯಾಗಿದ್ದರು! ಸಿಟ್ಟು, ನೋವು, ದುಃಖ ಮತ್ತು ನಿರಾಸೆಗಳಿಂದ ಕೂಡಿ, ಅವರಿಬ್ಬರೂ ವಿಚ್ಛೇದನದ ಅರ್ಜಿಯ ಬಗ್ಗೆ ಚರ್ಚಿಸಲು ಬಂದಿದ್ದರು. (ಸೂಸನ್ ಮತ್ತು ರಾಬರ್ಟ್ ಮದುವೆಯಾದ ವರ್ಷ ೧೯೭೬. ಆ ವರ್ಷ ಮದುವೆಯ ಬಂಧನಕ್ಕೆ ರುಜು ಹಾಕಿದ್ದವರಲ್ಲಿ ಸುಮಾರು ಅರ್ಧದಷ್ಟು ದಂಪತಿಗಳು ವಿಚ್ಛೇದನದ ಅರ್ಜಿಗೂ ರುಜು ಹಾಕುವರೆಂಬುದು ಇತ್ತೀಚಿನ ಅಂಕಿ ಅಂಶಗಳಿಂದ ರುಜುವಾತಾದ ವಿಚಾರ.)

"ನಾವು ಪ್ರೇಮಿಸುತ್ತಿದ್ದೆವು ಎಂದು ಭಾವಿಸಿದೆ"–ಸೂಸನ್ ಅನ್ನುತ್ತಾಳೆ. "ಆದರೆ, ಮದುವೆಗೆ ಮುನ್ನ ದಿನಕ್ಕೆ ಸಾವಿರ ಸಾರಿ 'I love you' ಎನ್ನುತ್ತಿದ್ದ ನನ್ನ ಗಂಡ ಮದುವೆಯಾದ–ಮೇಲೆ ಆ ಮಾತನ್ನಾಡುವುದೇ ಅಪರೂಪವಾಯ್ತು." "ನಾವು ಪ್ರೀತಿಸುತ್ತಿದ್ದೆವೆಂದು

(ವಿವಿಧ ಮೂಲಗಳಿಂದ)

ಅವಳು ಭ್ರಮಿಸುತ್ತಿದ್ದಿರಬಹುದಷ್ಟೇ." ರಾಬರ್ಟ್‌ನ ಅಂಬೋಣ. "ಆದರೆ ನನ್ನ ಸಂತೋಷಕ್ಕಾಗಿ ಏನನ್ನೂ ಮಾಡಲಿಲ್ಲ–ಮಲಗುವ ಕೋಣೆಯಲ್ಲೇ ಆಗಲೀ, ಹೊರಗೇ ಆಗಲಿ."

ಸೂಸನ್ ಮತ್ತು ರಾಬರ್ಟ್‌ರ ಕತೆ ಶೇಕಡಾ ೫೦ ರಷ್ಟು ಅಮೇರಿಕನ್ನರ ಜೀವನದ ಪ್ರತಿಬಿಂಬ. ಸಮಾಜಶಾಸ್ತ್ರಜ್ಞರ ಅನುಭವದ ಪ್ರಕಾರ, ಮದುವೆಯಾಗುವವರ ಪೈಕಿ ಅರ್ಧದಷ್ಟು ಜನರಿಗೆ ದಾಂಪತ್ಯದ ಜೀವನವನ್ನು ಹಂಚಿಕೊಳ್ಳುವ ಸಾಮರ್ಥ್ಯವಿಲ್ಲದಿರುವುದೇ ಈ ದುರಂತಕ್ಕೆ ಕಾರಣವಾಗಿದೆ. ಹಂಚಿಕೊಂಡು ಬಾಳುವುದು ಸುಲಭದ ಕೆಲಸವಲ್ಲ. ಅದಕ್ಕೆ ತಯಾರಿ ಬೇಕು. ಹೆಣ್ಣು ಗಂಡುಗಳಿಬ್ಬರೂ ಸರಿ ಸಮರಾಗಿ ದುಡಿಯಬೇಕು. ಇಬ್ಬರೂ ಏಕಾಂಗಿಯಾಗಿ ನೂರಕ್ಕೆ ತೊಂಬತ್ತು ಅಂಕದವರಾಗಿದ್ದರೆ, ಒಟ್ಟಾಗಿ ನೂರಕ್ಕೆ ಐವತ್ತೋ ಅರುವತ್ತೋ ಪಡೆದರೆ ಅದೇ ಹೆಚ್ಚು!

ರಾನ್ ಮತ್ತು ರಾಬಿನ್ ಬಾಲ್ಟಿಮೋರಿನಲ್ಲಿ ವಾಸಿಸುತ್ತಾರೆ. ಅವರು ಕಡು ಬಡತನದಿಂದ ಇದೀಗ ಸುಖಲೋಲುಪತೆಯ ಮಟ್ಟಕ್ಕೇರಿರುವುದಕ್ಕೆ ಕಾರಣ – ರಾನ್ ಕಷ್ಟಪಟ್ಟು ಓದಿ ಈಗ ದಂತವೈದ್ಯನಾಗಿರುವುದೇ ಆಗಿದೆ. ರಾಬಿನ್ ಶಿಶುವಿಹಾರವೊಂದರಲ್ಲಿ ಶಿಕ್ಷಕಿ. ಒಂದೇ ಮಗುವಿನ ತಾಯಿ ತಂದೆಗಳಾದ ಇವರಿಬ್ಬರ ವಿವಾಹವಾಗಿ ೧೧ ವರ್ಷಗಳು ಸಂದಿವೆ. 'ಆದರ್ಶ ದಂಪತಿಗಳೆಂದರೆ ನಾವೇ' ಎಂದು ತಿಳಿದಿದ್ದ ಇವರ ವೈವಾಹಿಕ ಜೀವನ ಈಗ ಭೂಕಂಪಕ್ಕೆ ಸಿಕ್ಕಿ ಬಿದ್ದ ಕಟ್ಟಡದ ಹಾಗೆ ಕಂಪಿಸಿ ಕುಸಿಯುತ್ತಿದೆ. ಕಾರಣ? ಇಬ್ಬರ ಮನಸ್ಸುಗಳ ನಡುವೆ ಉಂಟಾಗಿರುವ ಗೋಡೆ–ವಾಕ್ಸಂಪರ್ಕದ ಅಭಾವ.

ರಾಬಿನ್ ಹೇಳುತ್ತಾಳೆ– "ನನ್ನ ಮನಸ್ಸನ್ನು ಅರಿತುಕೊಳ್ಳಲು ಆತ ಯತ್ನಿಸುವುದೇ ಇಲ್ಲ." ರಾನ್ ಹೇಳುತ್ತಾನೆ– "ಮದುವೆ ಜೀವನದ ಅಳತೆಗೋಲಿನಲ್ಲಿ ೧೦ ಅತ್ಯುತ್ತಮ ಮತ್ತು ೧ ಅತಿ ಹೀನ ಎಂದಿಟ್ಟುಕೊಂಡರೆ ನಮ್ಮ ದಾಂಪತ್ಯ ಪ್ರಾಯಶಃ ೧ ಅಥವಾ ೨ ರಲ್ಲಿರಬಹುದು." ಆದರೆ ರಾನ್ ಮತ್ತು ರಾಬಿನ್ ಸುಲಭವಾಗಿ ಕೈ ಬಿಡುವವರಲ್ಲ. ಅನೇಕ ದಿನಗಳ ತಾಳ್ಮೆಯ ಮತ್ತು ಶಿಸ್ತಿನ ಫಲವಾಗಿ– ಮನೋವಿಜ್ಞಾನಿಗಳ ಸಹಾಯದಿಂದ–ಇಬ್ಬರಿಗೊಬ್ಬರು ಹೇಗೆ ವಾಕ್ಸಂಪರ್ಕ ಬೆಳೆಸಿಕೊಳ್ಳಬಹುದೆಂಬುದನ್ನು ಕಲಿತರು. ಈಗ, ಅಳತೆಗೋಲಿನಲ್ಲಿ ೭ ಅಥವಾ ೮ ರ ಹತ್ತಿರ ಬಂದಿದ್ದಾರೆ.

ಪಶ್ಚಿಮ ಆಂಟೇರಿಯೋ ವಿ. ವಿ. ನಿಲಯದ ಡಾ. ಎಡ್ವರ್ಡ್ ವೇರಿಂಗ್ ವೈವಾಹಿಕ ಜೀವನದ ಎಂಟು ನಿಯಮಗಳನ್ನು ಈ ಕೆಳಕಂಡಂತೆ ಗುರ್ತಿಸಿದ್ದಾರೆ.

೧. **ಹೊಂದಾಣಿಕೆ**– ಜೊತೆ ಜೊತೆಯಾಗಿ ಕೆಲಸ ಮಾಡುವುದು. ಮತ್ತು ಜೊತೆಯಾಗಿ ವಿಹರಿಸುವುದು.

೨. **ಮನಸ್ತಾಪ ನಿವಾರಣೆ**–ಭಿನ್ನಾಭಿಪ್ರಾಯಗಳನ್ನು ಮೊಳಕೆಯಲ್ಲೇ ಚಿವುಟಹಾಕುವುದು.

೩. **ತೆರೆದ ಮನ**– ಭಾವನೆಗಳನ್ನು, ನಂಬಿಕೆಗಳನ್ನು ಮತ್ತು ಬಯಕೆಗಳನ್ನು ಯಾವ ತಡೆಯೂ ಇಲ್ಲದೇ ವ್ಯಕ್ತಪಡಿಸುವುದು.

೪. **ಪ್ರೀತಿ**– ಆಪ್ತ ಭಾವನೆಗಳ ಪ್ರದರ್ಶನ.

೫. **ಅನುರಾಗ**– ಲೈಂಗಿಕ ಸುಖವನ್ನು ಕೊಟ್ಟು ತೆಗೆದುಕೊಳ್ಳುವುದು.

೬. **ವ್ಯಕ್ತಿತ್ವ**– ತನ್ನತನವನ್ನು ಕಾಪಾಡಿಕೊಳ್ಳುವುದು.

೭. **ಬದ್ಧತೆ**– ಪರಸ್ಪರ ನಿಷ್ಠೆ. ಮತ್ತು,

೮. **ಬಹಿರಂಗ ಪ್ರದರ್ಶನ**– ಮಿತ್ರರ– ಸಂಬಂಧಿಕರ ನಡುವೆ ಉಂಟುಮಾಡುವ ಚಿತ್ರ.

ಪ್ರತಿಯೊಬ್ಬರೂ ಗಮನಿಸಬೇಕಾದ ಅಂಶ – 'ಹೇಗೆ ಮಾತಾಡಬೇಕು ?' ಎಂಬುದು ಎಷ್ಟು ಮುಖ್ಯವೋ, 'ಹೇಗೆ ಆಲಿಸಬೇಕು ?' ಎಂಬುದೂ ಅಷ್ಟೇ ಮುಖ್ಯ. ಸ್ಯಾಂಟಿಯಾಗೋದಲ್ಲಿನ ಕ್ಯಾಲಿಫೋರ್ನಿಯಾ ವಿ. ವಿ. ನಿಲಯದ ಡಾ. ಗ್ಯಾರಿ ಬಷ್ಲರ್ ಪ್ರಕಾರ, ದಾಂಪತ್ಯ ಮುರಿದು ಬೀಳಲು ಕಾರಣ – ನಿತ್ಯ ಬಡಿದಾಟದ ಕಾರಣಗಳಾದ ಹಣಕಾಸು, ಮಕ್ಕಳು, ಅತ್ತೆ ಮಾವಂದಿರು ಮತ್ತು ಲೈಂಗಿಕ ವಿಷಯಗಳ

ಗಿಂತ – ವಿಚಾರಗಳನ್ನು ವ್ಯಕ್ತಪಡಿಸುವ ರೀತಿಯೇ ಆಗಿದೆ. ನಡುವಿಲ್ಲದ ವಾಗ್ವಾದ ಸಣ್ಣ ಕದನವನ್ನು ಘೋರ ಯುದ್ಧವನ್ನಾಗಿ ಪರಿಣಮಿಸುತ್ತದೆ!

ರಷ್ಯದ ಸಾಹಿತಿ ಲಿಯೋ ಟಾಲ್‌ಸ್ಟಾಯ್ ತನ್ನ ಕಾದಂಬರಿ– 'ಅನ್ನ ಕಾರೆನೀನ'ದ ಮೊದಲ ವಾಕ್ಯದಲ್ಲಿ ಈ ರೀತಿ ಹೇಳುತ್ತಾನೆ. "ಸುಖೀ ಸಂಸಾರಗಳೆಲ್ಲ ಸುಖೀ ಸಂಸಾರಗಳೇ. ಆದರೆ ಪ್ರತಿಯೊಂದು ಅಸುಖೀ ಸಂಸಾರವೂ ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿರುತ್ತದೆ." ಒಟ್ಟಿನಲ್ಲಿ ಸುಖೀ ಸಂಸಾರಗಳಲ್ಲಿ ಬೆಳೆದ ಮಕ್ಕಳು ಸಾಧಾರಣವಾಗಿ ಸುಖೀ ಸಂಸಾರಗಳನ್ನುಂಟು ಮಾಡುತ್ತವೆ. ಆದರೆ ಅಮೇರಿಕದಲ್ಲಿ ಸುಖೀ ಸಂಸಾರಗಳ ಸಂಖ್ಯೆ ದಿನೇ ದಿನೇ ಕಡಿಮೆಯಾಗುತ್ತಿರುವಾಗ, ಬೆಳೆಯುವ ಮಕ್ಕಳ ಮೇಲೆ ಪರಿಣಾಮವಾಗದೇ ಇರುವುದೇ? ಪ್ರಾಮಾಣಿಕವಾಗಿ ಪರಸ್ಪರ ವಿಚಾರ ವಿನಿಮಯ ಮಾಡಿಕೊಳ್ಳುವ ಶಕ್ತಿ ಮತ್ತು ಯುಕ್ತಿ ದಂಪತಿಗಳಿಗಿಲ್ಲದ ಮೇಲೆ ಘರ್ಷಣೆಯಿಂದ ಉತ್ಪತ್ತಿಯಾದ ನಂಜು ವಂಶಪಾರಂಪರ್ಯವಾಗುವುದರಲ್ಲಿ ಸಂದೇಹವಿಲ್ಲ. ಈ ಎಲ್ಲ ಕಾರಣಗಳಿಂದಾಗಿ ದಾಂಪತ್ಯವನ್ನು ಸುಖಮಯವಾಗಿಸುವುದು ಪಾದ್ರಿಯ ಮುಂದೆ ಆಣೆ ಭಾಷೆ ಮಾಡುವಾಗ ಕಂಡಷ್ಟು ಸುಲಭವಲ್ಲ.

ಸಿಡ್ ಮತ್ತು ಬಾರ್ಬರಾರನ್ನೇ ತೆಗೆದುಕೊಳ್ಳೋಣ. ಇವರು ತಮ್ಮನ್ನು ಸುಖೀ ದಂಪತಿಗಳೆಂದು ಭಾವಿಸುತ್ತಾರೆ. ಇವರಿಗೆ ಮೂವರು ಮಕ್ಕಳು. ಇವರು ತಮ್ಮ ದಾಂಪತ್ಯವನ್ನು ೧೦೦ಕ್ಕೆ ೯೦ ಅಥವಾ ೯೫ರ ಮಟ್ಟದ್ದು ಎಂದು ಪರಿಗಣಿಸಿದ್ದಾರೆ. ಆತ ಇನ್ಶೂರೆನ್ಸ್ ಕಂಪನಿಯಲ್ಲಿ ಕೆಲಸ ಮಾಡುತ್ತಾನೆ. ಆಕೆ ಅಧ್ಯಾಪಕಿ. ಈ ದಂಪತಿಗಳು ಹಿಂದೆ ತಿಳಿಸಿದ ದಾಂಪತ್ಯದ ೮ ರಹಸ್ಯಗಳನ್ನು ಸಿದ್ಧಿಪಡಿಸಿಕೊಂಡಿದ್ದಾರೆ. ಎಲ್ಲಕ್ಕಿಂತ ಹೆಚ್ಚಾಗಿ ಅವರು ಆರನೇ ಅಂಶ– 'ವ್ಯಕ್ತಿತ್ವಕ್ಕೆ' ಹೆಚ್ಚು ಪ್ರಾಮುಖ್ಯ ಕೊಡುತ್ತಾರೆ. ಬಾರ್ಬರಾ ಹೇಳುತ್ತಾಳೆ– "ನಮ್ಮ ದಾಂಪತ್ಯದಲ್ಲಿ ನಮ್ಮಿಬ್ಬರಿಗೂ ಸಂಪೂರ್ಣ ಸ್ವಾತಂತ್ರ್ಯವಿದೆ. ನಾನು ಆಗಾಗ್ಗೆ ಗಂಡನ ಮೇಲೆ ಮಕ್ಕಳನ್ನು ಹೊರಿಸಿ ಹೊರಟುಹೋಗುತ್ತೇನೆ. ನನ್ನ ಗಂಡನೇ ನನಗೆ ಉತ್ತೇಜನ ಕೊಟ್ಟು ಕಳುಹುತ್ತಾನೆ. ನಾನು ಒಂದು ತಿಂಗಳು ಬೇಕಾದರೂ, ಒಬ್ಬಳೇ ಹೊರಟು ಹೋದರೂ ಅವನು ಆಕ್ಷೇಪಿಸುವುದಿಲ್ಲ." (ಓದುಗರು, ಇದು ಅಮೇರಿಕನ್ ದಂಪತಿಗಳ ವಿಷಯವೆಂಬುದನ್ನು ಮರೆಯಲಾಗದು. ಭಾರತೀಯ ಮಹಿಳೆಯರು ತಿಂಗಳುಗಟ್ಟಲೇ ಗಂಡಂದಿರನ್ನು ಬಿಟ್ಟು ತೌರಿಗೆ ಹೋಗುವುದು ಸರ್ವೇಸಾಮಾನ್ಯ. ಆ ರೀತಿ ಅಮೇರಿಕನ್ ಮಹಿಳೆಯರು ತಿಂಗಳುಗಟ್ಟಲೇ ಗಂಡಂದಿರನ್ನು ಬಿಟ್ಟುಹೋದರೆ ಅಕ್ಕಪಕ್ಕದವರು ಗುಸು–ಗುಸು ಪಿಸು–ಪಿಸು ಮಾತಾಡಲು ಪ್ರಾರಂಭಿಸುತ್ತಾರೆ. ದಂಪತಿಗಳು ಬೇರಾಗುವ ತಯಾರಿಯಲ್ಲಿರುವುದೇನೋ ಎಂದು ಶಂಕಿಸುತ್ತಾರೆ.)

ಅರಿತವರ ಮತದ ಪ್ರಕಾರ, ಹೆಣ್ಣು ಇಂದು 'ಅಬಲೆ'ಯ ಪಾತ್ರ ವಹಿಸಲು ಸಿದ್ಧಳಿಲ್ಲ. ಇಂದಿನ ಹೆಣ್ಣುಗಳು ಅಧಿಕ ಸಂಖ್ಯೆಯಲ್ಲಿ ನೌಕರಿ ಮಾಡಿ ತಮ್ಮ ಹಣಕಾಸಿನ ಸ್ವಾತಂತ್ರ್ಯವನ್ನು ಪಡೆದುಕೊಂಡಿದ್ದಾರೆ. ಊಟ ಬಟ್ಟೆಗಳಿಗೆ ಗಂಡನ ಮುಂದೆ ಕೈ ಚಾಚಬೇಕಿಲ್ಲ. ಆದ್ದರಿಂದ ಆಕೆಯ ಮನಸ್ಸಿಗೆ ತೃಪ್ತಿಯಾಗದಿದ್ದಲ್ಲಿ ಅವಳು ಮದುವೆಯ ಬಂಧನವನ್ನು ಕಿತ್ತೊಗೆಯುತ್ತಾಳೆ. ಸಿಡ್ ಮತ್ತು ಬಾರ್ಬರಾರ ನಡುವೆ ಸಾಮರಸ್ಯವಿರುವುದಕ್ಕೆ ಅನೇಕ ಕಾರಣಗಳಿವೆ. ಸಿಡ್ ಹೇಳುತ್ತಾನೆ– "ನಾವು ಲೈಂಗಿಕ ದೃಷ್ಟಿಯಿಂದ ಸಹ ತುಂಬಾ ತೃಪ್ತರಾಗಿದ್ದೇವೆ. ಬಾರ್ಬರಾ ಮದುವೆ ನಂತರ ತನ್ನ ಯೌವನವನ್ನು ಕಾಪಾಡಿಕೊಂಡು ಬಂದಿ[illegible] ತುಂಬಾ ಆಕರ್ಷಕಳಾಗಿದ್ದಾಳೆ." ಅಷ್ಟೇ ಅಲ್ಲ. ಈ ದಂಪತಿಗಳು ಪರಸ್ಪರ ವಿಚಾರ ವಿನಿಮಯ ಮಾಡಿಕೊಳ್ಳುತ್ತಾರೆ. ಪರಸ್ಪರ ಮಾನಸಿಕ ಉದ್ವೇಗಗಳಿಗೆ ಪೂರಕರಾಗುತ್ತಾರೆ. ಭಿನ್ನಾಭಿಪ್ರಾಯಗಳನ್ನು ಪರಸ್ಪರ ನೋಡಿದಂತೆ ನಿವಾರಿಸಿಕೊಳ್ಳುತ್ತಾರೆ. ಉದಾಹರಣೆಗೆ, ತಪ್ಪು ಮಾಡಿದಾಗ ಮಕ್ಕಳನ್ನು ಶಿಕ್ಷಿಸಿದರೆ ತಪ್ಪಿಲ್ಲವೆಂದು ಸಿಡ್‌ನ ಅಭಿಪ್ರಾಯ. ಬಾರ್ಬರಾ ಮಾತ್ರ ಮಕ್ಕಳನ್ನು ಮುಟ್ಟಕೂಡದೆನ್ನುತ್ತಾಳೆ. "ನಮ್ಮಿಬ್ಬರ ಮಧ್ಯೆ ಈ ಬಗ್ಗೆ ಅನೇಕ ಬಾರಿ

ಚರ್ಚೆಗಳು ನಡೆದಿವೆಯಾದರೂ ನಾವು ಆ ಬಗ್ಗೆ ಜಗಳಾಡಿ ಪರಸ್ಪರ ನೋಯಿಸಿದ್ದಿಲ್ಲ." ಪ್ರತಿ ಸಾರಿ ಮಕ್ಕಳನ್ನು ಶಿಕ್ಷಿಸಬೇಕಾಗಲೆಲ್ಲ ಬಾರ್ಬರಾ ವಿನಯದಿಂದ, ಆದರೆ ಪ್ರಭಾವಶಾಲಿಯಾಗಿ– ಶಿಕ್ಷೆಯ ವಿರುದ್ಧ ವಾದಿಸುತ್ತಾಳೆ. ಸಿಡ್ ಅವಳ ಮಾತಿಗೆ ಗೌರವ ಕೊಡುತ್ತಾನೆ. ಅಂತೂ ಅನೇಕ ದಿನಗಳ ಮೇಲೆ, ಇತ್ತೀಚೆಗೆ ಅವನು ಮಕ್ಕಳನ್ನು ಶಿಕ್ಷಿಸುವುದನ್ನು ಬಿಟ್ಟಿದ್ದಾನೆ.

ದಾಂಪತ್ಯ 'ಕಲೆ' ಕೆಲವರಿಗೆ ಸುಲಭವಾಗಿ ಕರಗತವಾಗುತ್ತದೆ. ಒಂದು ಸಂಶೋಧನೆಯ ಪ್ರಕಾರ ಹೆಂಡತಿ 'ಲಿಗಾಟಿ'ಯಾಗಿದ್ದರೆ–ಅಂದರೆ ಹೆಚ್ಚು ಶಾರೀರಿಕ ಚಟುವಟಿಕೆ ಉಳ್ಳವಳಾಗಿದ್ದರೆ ಮತ್ತು ಪ್ರಭಾವಶಾಲಿಯಾದ ವ್ಯಕ್ತಿತ್ವವನ್ನು ಹೊಂದಿದ್ದರೆ ಮತ್ತು ಗಂಡ 'ಹೆಣ್ಣಿಗ ಮಂಜ'ನಾಗಿದ್ದರೆ ಅಂದರೆ, ಮೃದು ಸ್ವಭಾವದವನಾಗಿದ್ದರೆ, ಸಂಸಾರದಲ್ಲಿ ಹೆಚ್ಚಿನ ಸುಖ ಮತ್ತು ಸಾಮರಸ್ಯವಿರುತ್ತದಂತೆ.

ಅದೇ ಸಂಶೋಧನೆಯ ಪ್ರಕಾರ, ಸಮರಸವಿಲ್ಲದ ಸಂಸಾರಗಳಲ್ಲಿ ಸಾಧಾರಣವಾಗಿ ಗಂಡ ವಿಪರೀತ ಅಧಿಕಾರ ಚಲಾಯಿಸುವ 'ಮೀಸೆ ಮನುಷ್ಯ'ನಾಗಿರುತ್ತಾನೆ. ಮತ್ತು ಹೆಂಡತಿ ಗಂಡನ ಮಾತಿಗೆ ಉಸಿರೆತ್ತದೆ ವಿಧೇಯಳಾಗುತ್ತಾಳೆ. (ಈ ಮೋಜಿನ ಸಂಗತಿ ಸಮಾಜದ ಸಂಸ್ಕೃತಿಗೆ ಸಂಬಂಧಪಟ್ಟಿದ್ದಾದ್ದರಿಂದ, ಓದುಗರು ಗಮನಿಸಬೇಕು).

ಮನೋವಿಜ್ಞಾನಿಗಳ ಪ್ರಕಾರ ಗಂಡಂದಿರಿಗೆ ಸಂಭಾಷಣೆಯ ಮಾರ್ಗ ತಿಳಿಯುವುದು ಕಷ್ಟ. ಒಂದು ಸಂಶೋಧನೆಯಲ್ಲಿ ಗಂಡ ಹೆಂಡತಿ ತಿಳಿಯದಂತೆ ಅವರ ಚರ್ಚೆ ಮತ್ತು ಮಾತುಕತೆಗಳನ್ನು ಗಮನಿಸಲಾಯಿತು. ಪ್ರತಿ ಬಾರಿಯೂ ಹೆಣ್ಣು ಸಂಭಾಷಣೆಯನ್ನು ಪ್ರಾರಂಭಿಸಿತು. ಗಂಡು ಅದನ್ನು ಕಡಿದುಹಾಕಿತು. ಅದೇ–ಗಂಡು ಪ್ರಾರಂಭಿಸಿದ ಮಾತನ್ನು ಹೆಣ್ಣು ತಪ್ಪದೇ ಮುಂದುವರೆಸಿತು. ಅಷ್ಟೇ ಅಲ್ಲ, ಗಂಡಂದಿರಿಗೆ

ತಮ್ಮ ಹೆಂಡತಿಯೊಂದಿಗೆ ಏನು ಹೇಳಬೇಕೋ ತಿಳಿಯುವುದಿಲ್ಲ. ಹೆಂಗಸರೊಂದಿಗೆ ಸರಿಸಮಾನವಾಗಿ ಮಾತನಾಡುವ ವಿಷಯಗಳೇ ಇಲ್ಲದವೆಂದು ಗಂಡುಗಳ ಧೋರಣೆ! ಕ್ರೀಡೆಗಳು, ವ್ಯವಹಾರ, ವ್ಯಾಪಾರ, ವಹಿವಾಟು ಮುಂತಾದ ಗಂಡಸರಿಗೆ ಸಂಬಂಧಿಸಿದ 'ವಿಷಯ'ವನ್ನು ಹೆಂಗಸರ ಕೈಲಿ ಚರ್ಚಿಸಿ ಪ್ರಯೋಜನವೇನು? ಎಂಬ ವಾದ. ಸರಾಸರಿ ಗಂಡಿಗೆ ತನ್ನ ಪ್ರೀತಿಯನ್ನು ವ್ಯಕ್ತಪಡಿಸಲು ಬರುವುದಿಲ್ಲ. ಹೆಣ್ಣಿನ ಮೇಲೆ ಅವಲಂಬನೆ ಇದ್ದರೂ ಅದನ್ನು ಒಪ್ಪಿಕೊಳ್ಳುವ ದೊಡ್ಡ ಮನಸ್ಸಿರುವುದಿಲ್ಲ. ಹೆಣ್ಣುಗಳ ಕಷ್ಟ ಬೇರೆಯದೇ. ಅವರಿಗೆ, ತಮ್ಮ ಮನಸ್ಸನ್ನು ತೆರೆದ ಪುಸ್ತಕದಂತೆ ಓದುವ ಗಂಡನಿರಬೇಕು. ಕ್ಷಣ ಕ್ಷಣಕ್ಕೆ ಬದಲಾಗುವ ಹೆಣ್ಣಿನ ಮನಸ್ಸನ್ನು ಓದುವುದಾದರೂ ಹೇಗೆ? ಸರಾಸರಿ ಗಂಡಸಿಗೆ ಹೆಂಡತಿಯ ಮನಸ್ಸಿಗಿಂತ ಅವಳು ಮಲಗುವ ಕೋಣೆಯಲ್ಲಿ ಕೊಡಬಹುದಾದ ಶರೀರ ಸುಖ ಮತ್ತು ಹಸಿವೆ ನೀಗಿಸಲು ಅಡಿಗೆ ಮನೆಯಲ್ಲಿ ತೋರಿಸಬಹುದಾದ ಕೈಚಳಕ ಇವೇ ಮುಖ್ಯವಾಗಿರುತ್ತವೆ. ಸರಾಸರಿ ಹೆಣ್ಣಿಗೆ ಗಂಡಿನಿಂದ 'ಪ್ರೇಮ' ಬೇಕು—ಆದರೆ ಬಾಯಿ ಬಿಟ್ಟದನ್ನು ಹೇಳುವ ರೀತಿ ತಿಳಿಯದು. ಅನೇಕ ವೇಳೆ ತಾನು ಏನು ಮಾಡಿದರೆ ತನ್ನ ಗಂಡನಿಗೆ/ಹೆಂಡತಿಗೆ ಸುಖ ದೊರಕುವುದೋ ಎಂಬುದನ್ನು ತಿಳಿಯುವುದೇ ಮಹಾ ಪ್ರಯಾಸದ ವಿಷಯವಾಗುತ್ತದೆ. ಉದಾಹರಣೆಗೆ ಗಂಡನಿಗೆ ತನ್ನ ಸಹೋದ್ಯೋಗಿಯನ್ನು ಮನೆಗೆ ಆತಿಥ್ಯಕ್ಕೆ ಕರೆಯಲು ಇಚ್ಛೆಯಾಗಬಹುದು. ಅದೇ ದಿನ, ಹೆಂಡತಿಗೆ ತನ್ನ ಗಂಡನೊಂದಿಗೆ ಸಿನಿಮಾಕ್ಕೆ ಹೋಗಲು ಆಸೆಯಾಗಬಹುದು. (ಇಂತಹ ಸಂದರ್ಭಗಳಲ್ಲಿ ಯಾರಾದರೂ ಒಬ್ಬರಿಗೆ ಅಥವಾ ಇಬ್ಬರಿಗೂ ನಿರಾಸೆ ಕಾದಿರುತ್ತದೆ.)

ನೋವ ವಿ. ವಿ. ನಿಲಯದ ಮನೋವಿಜ್ಞಾನ ವಿಭಾಗದ ಡಾ. ನೇಥನ್ ಅಫ್ರಿನ್, ದಂಪತಿಗಳಿಗಾಗಿ ಒಂದು 'ಪರೀಕ್ಷೆ' ತಯಾರಿಸಿದ್ದಾರೆ. ತೊಂದರೆಯಲ್ಲಿರುವ ದಂಪತಿಗಳು ಅವರನ್ನು ಭೇಟಿಯಾಗಲು ಬಂದಾಗ ಅವರಿಗೆ ಈ ಪರೀಕ್ಷೆ ಕೊಡುತ್ತಾರೆ. ಇದರಲ್ಲಿ ಎರಡೇ ಪ್ರಶ್ನೆಗಳು: ೧) ನಿಮ್ಮ ಗಂಡನಿಗಾಗಿ / ಹೆಂಡತಿಗಾಗಿ ಮಾಡುವ ಹತ್ತು ಕ್ರಿಯೆಗಳನ್ನು ಪಟ್ಟಿಮಾಡಿ. ಮತ್ತು, ೨) ನಿಮ್ಮ ನಿಮಗಾಗಿ ಪತಿ / ಪತ್ನಿ ಮಾಡಬೇಕೆನ್ನಿಸುವ ಹತ್ತು ಕ್ರಿಯೆಗಳನ್ನು ಪಟ್ಟಿ ಮಾಡಿ. ಇಂತಹ ಪರೀಕ್ಷೆಗೊಳಪಟ್ಟ ಮೇಲೆ ಅನೇಕ ಉಪಕಾರಗಳಾಗುತ್ತವೆ. ಉದಾಹರಣೆಗೆ, ಗಂಡು, ಹಾಸಿಗೆಯಲ್ಲಿ ತನ್ನ ಹೆಣ್ಣಿನ ಬಗ್ಗೆ ತೋರುವ ಒರಟುತನದ ಬಗ್ಗೆ ಮಾಹಿತಿ ಪಡೆಯಬಹುದು. ಅಥವಾ, ಹೆಣ್ಣಿಗೆ—ತನ್ನ ಗಂಡನಿಗೆ ತನಗಿಷ್ಟವಾಗುವ ಯಾವುದೋ ಅಡಿಗೆ ಕೆಲಸವೋ ಮತ್ತೊಂದೋ ಕೆಲಸದಲ್ಲಿ ತೊಡಗಲು ಬೇಕಾದ ಏಕಾಂತವನ್ನೊದಗಿಸಬೇಕೆಂಬ ವಿಷಯ ಮನದಟ್ಟಾಗಬಹುದು. ಹಂಟ್ಸ್‌ವಿಲ್, ಆಲಬಾಮಾದ ಡಾ. ಜ್ಯಾಕ್ ಟರ್ನರ್ ಎಂಬ ಮನೋವಿಜ್ಞಾನಿ ಇದೇ ರೀತಿಯ ಒಂದು 'ಆಟ'ವನ್ನು ಕಂಡುಹಿಡಿದಿದ್ದಾರೆ—'ನಿಮ್ಮ ಹೆಂಡತಿ ಗಂಡ ನಿಮಗಾಗಿ ಮಾಡಿದ ಸುಖ ತರುವ ಸಂಗತಿಯನ್ನು ಕಂಡುಹಿಡಿಯಿರಿ' ಎಂಬ ಆಟ. ಈ ಆಟದಲ್ಲಿ ತಮ್ಮ ಮನಸ್ಸಿಗೆ ಸುಖ ತರುವ—ಸಣ್ಣ ಪುಟ್ಟ ವಿಚಾರಗಳನ್ನು ಗುರುತು ಹಾಕುತ್ತಾ ಹೋಗಬೇಕು—ಕಣ್ಣು ಹೊಡೆದದ್ದು, ಕೆನ್ನೆ ಚಿವುಟಿದ್ದು, ಹಿಂದಿನಿಂದ ಬಂದು ಆಲಿಂಗಿಸಿದ್ದು—ಅದು ಎಷ್ಟೇ ಸಾಧಾರಣವಿರಲಿ. ಗುರುತು ಹಾಕುತ್ತಾ ಹೋಗಬೇಕು. ಹೀಗೆ ಮಾಡುತ್ತಾ ಹೋದಾಗ, ಎಂತೆಂತಹ ಕ್ಷುಲ್ಲಕ ವಿಷಯಗಳು ಮನಸ್ಸಿಗೆ ಹಿತವನ್ನುಂಟು ಮಾಡುತ್ತವೆ, ಎಷ್ಟೆಷ್ಟು ವಿಧದಲ್ಲಿ ಗಂಡ ಹೆಂಡಿರು ಸುಖವನ್ನು ಕೊಟ್ಟು ತೆಗೆದುಕೊಳ್ಳಬಹುದೆಂಬ ವಿಷಯ ಮನದಟ್ಟಾಗುತ್ತದೆ. ಒಬ್ಬರನ್ನು ಸಂತೋಷಪಡಿಸಿದರೆ ಅವರಿಂದ ಸಂತೋಷ ಪಡೆಯಬಹುದೆಂಬ ವಿಚಾರ ಮನೋವಿಜ್ಞಾನದಲ್ಲಿ ಸಿದ್ಧವಾದದ್ದು. ಇತರರನ್ನು ಅಸಂತೋಷಗೊಳಿಸಿದರೆ ಅಸಂತೋಷ ಪ್ರಾಪ್ತಿಯಾಗುತ್ತದೆಂಬ ವಿಷಯವೂ ಸಿದ್ಧ. ಘರ್ಷಣೆಯಿಂದ ಘರ್ಷಣೆ ತಾನೇ ಉತ್ಪತ್ತಿಯಾಗುವುದು?

ಲಾಸ್ ಆಂಜಲೀಸ್‌ನಲ್ಲಿರುವ ಕ್ಯಾಲಿ

ಕ್ಯಾಲಿಫೋರ್ನಿಯಾ ವಿ. ವಿ. ನಿಲಯದ ಡಾ. ಲಿಬರ್ ಮನ್‌ರವರ ಪ್ರಕಾರ ದಾಂಪತ್ಯ ಮುರಿಯುವ ಕಾರಣಗಳು ಸಾಧಾರಣವಾಗಿ ಹುಟ್ಟು ಗುಣಗಳು. ಏಕೆಂದರೆ ಹುಟ್ಟು ಗುಣಗಳನ್ನು ಬದಲಾಯಿಸುವುದು ಬಲು ಕಷ್ಟ– ಅಸಾಧ್ಯ. ಉದಾಹರಣೆಗೆ– ಆತನಿಗೆ ಎತ್ತರದ ದಿಂಬು ಬೇಕು, ಆಕೆಗೆ ಎತ್ತರದ ದಿಂಬಿನಿಂದ ಕತ್ತು ನೋವು ಬರುತ್ತದೆ. ಅವಳಿಗೆ ಬಿಸಿ ಹೊದಿಕೆ ಬೇಕು. ಅವನಿಗೆ ಕಂಬಳಿಯಿಂದ ಸೆಖೆಯಾಗಿ ನಿದ್ರೆ ಹತ್ತುವುದಿಲ್ಲ. ಆತ, ಟೂಥ್ ಪೇಸ್ಟನ್ನು ತುದಿಯಿಂದ ಅದುಮಿ, ನೀಟಾಗಿ ಮುಚ್ಚಳ ಹಾಕುತ್ತಾನೆ. ಆಕೆ, ಪೇಸ್ಟನ್ನು ಮಧ್ಯದಿಂದ ಒಚೊಕಿ ವಿಕಾರವಾಗಿ ತಿರುಚಿ ಮುಚ್ಚಳ ಹಾಕದೇ ಇಡುತ್ತಾಳೆ. ಅವನು ಕಾಲು ಚೀಲಗಳನ್ನು ದಿಕ್ಕಾಪಾಲಾಗಿ ಎಸೆಯುತ್ತಾನೆ. ಅವಳು ಬಟ್ಟೆ ಬರೆಗಳನ್ನು ಓರಣವಾಗಿ ಮಡಿಸಿಡುತ್ತಾಳೆ. ಅವನಿಗೆ ಗೆಳೆಯರೆಂದರೆ ಪ್ರಾಣ, ಅವಳಿಗೆ ಜನಗಳ ಗುಂಪಿನಲ್ಲಿ ತಲೆ ಸಿಡಿಯುತ್ತದೆ. ಅವಳಿಗೆ ಸಂಗೀತವೆಂದರೆ ಪ್ರಾಣ, ಅವನೋ ಸಂಗೀತವೆಂದರೆ ಹಾಸ್ಯ ಮಾಡಿ ರೇಗಿಸುತ್ತಾನೆ. ಹೀಗೆ ಒಬ್ಬರಿಗೆ ಸುಖ ಕೊಡುವಂಥಾದ್ದು ಇನ್ನೊಬ್ಬರಿಗೆ ಮೈ ಉರಿಸುತ್ತದೆ. ಹೀಗಾಗಿ, ಒಬ್ಬರನ್ನೊಬ್ಬರು ಅರಿತೋ ಅರಿಯದೆಯೋ ಅಸಂತೋಷಗೊಳಿಸುತ್ತಾ ಹೋಗುತ್ತಾರೆ. ಕೊನೆಗೊಂದು ವಿಷ ಘಳಿಗೆಯಲ್ಲಿ ಅದುಮಿಟ್ಟ ಸಿಟ್ಟೆಲ್ಲಾ ಒಮ್ಮೆಗೇ ಅಸ್ಫೋಟವಾಗುತ್ತದೆ. *

ಪರಸ್ಪರ ಸಂಭಾಷಣೆಯ ಮಾರ್ಗವನ್ನು ತಿಳಿಸುವಾಗಲೆಲ್ಲ ಮನೋವಿಜ್ಞಾನಿಗಳು ಮೊದಲು ಕಲಿಸುವ ಗುಟ್ಟು 'ಆಲಿಸುವ ಕಲೆ' ಎರಡೇ ಗುಟ್ಟು– ತಮ್ಮ ಮನೋಭಿಪ್ರಾಯವನ್ನು ಇತರರಿಗೆ ನೋವಾಗದಂತೆ ತಿಳಿಸುವ ಕಲೆ. ಮೂರನೇ ಗುಟ್ಟು– ತಮ್ಮ ಅಭಿಪ್ರಾಯಗಳನ್ನು ಹಿತವಾಗಿ, ಆದರೆ, ದೃಢವಾಗಿ ವ್ಯಕ್ತಪಡಿಸುವ ಕಲೆ, ಮತ್ತು, ಕೊನೆಯದಾಗಿ, ಭಿನ್ನಾಭಿಪ್ರಾಯಗಳನ್ನು ಮೊಳೆಯದಂತೆ ಬಗೆ ಹರಿಸಿಕೊಳ್ಳುವ ಕಲೆ. ಆರ್ಲೀ ಯೂಜೆಲ್ ಮತ್ತು ಕೊಲಂಬಿಯಾ ವಿ.ವಿ.ನಿಲಯದ ಕಾರೊಲ್ ಫ್ಲ್ಯಾಕ್ಸ್ ಇತ್ತೀಚಿಗೆ ಒಂದು ಪುಸ್ತಕ ಬರೆದಿದ್ದಾರೆ. 'Getting your way– The nice way' (ನಿಮ್ಮಿಚ್ಛೆಯಂತೆ ನಡೆಸಿಕೊಳ್ಳುವ ಮಾರ್ಗ – ನಯ ಮಾರ್ಗ) ಈ ಪುಸ್ತಕದಲ್ಲಿ ಮನೋವಿಜ್ಞಾನಿಗಳು ಕಲಿಸುವ ಸಂಭಾಷಣೆಯ ಮಾರ್ಗವನ್ನು ಚರ್ಚಿಸಿದ್ದಾರೆ. ಅವರ ಪ್ರಕಾರ ಈ ಕಲೆಯನ್ನು ಯಾರು ಬೇಕಾದರೂ ಕಲಿಯಬಹುದು. ಆದರೆ ಯತ್ನಿಸದೇ ಬರುವ ಕಲೆಯಲ್ಲ ಇದು! ಇಂಥಾ ಒಂದು ಯತ್ನ ಮುರಿಯಲಿರುವ ದಾಂಪತ್ಯವನ್ನುಳಿಸಬಹುದು.

ಬಾಲ್ಟಿಮೋರಿನ ಲಿನ್ ಮತ್ತು ರಾಬಿನ್ ದಂಪತಿಗಳು ಈ ಕಲೆಯನ್ನು ಅಭ್ಯಾಸ ಮಾಡಲು ತೊಡಗಿದಾಗಿನಿಂದ ತಮ್ಮ ಅನೇಕ ತೊಂದರೆಗಳನ್ನು ಸರಿಪಡಿಸಿಕೊಂಡಿದ್ದಾರೆ. ದಾಂಪತ್ಯವೆಂದರೆ 'ಹಂಚಿಕೊಳ್ಳುವ ಕಲೆ.' ಹಂಚಿಕೊಳ್ಳಬಲ್ಲ, ಪ್ರತಿ ವ್ಯಕ್ತಿಯೂ ಇದರಲ್ಲಿ ಜಯಶಾಲಿಯಾಗಬಹುದು.

ಮೇಲಿನ ಲೇಖನ ಮತ್ತು ಅಂಕಿ ಅಂಶಗಳು ಅಮೇರಿಕನ್ ಸಮಾಜಕ್ಕೆ ಅನ್ವಯಿಸುವಂತಹುದಾದರೂ, ಭಾರತದಿಂದ ಬಂದು ಅಮೇರಿಕದಲ್ಲಿ ನೆಲೆಸಿರುವ–ನೆಲೆಸುತ್ತಿರುವ ದಂಪತಿಗಳಿಗೂ ಅನ್ವಯಿಸಬಹುದಾಗಿದೆ. ಇಲ್ಲಿಯ ಸಮಾಜದ ಒತ್ತಡಕ್ಕೆ ಒಳಗಾದ ಭಾರತೀಯರನೇಕರು ದಾಂಪತ್ಯವನ್ನು ಮುರಿದು ವಿಚ್ಛೇದನಕ್ಕೆ ಶರಣು ಹೋಗಿದ್ದಾರೆ. ಆದರೆ ಸದ್ಯಕ್ಕೆ ಅಂತಹ ಭಾರತೀಯರ ಸಂಖ್ಯೆ ಅಮೇರಿಕನ್ ಅಂಕಿ ಅಂಶಗಳಿಗೆ ಹೋಲಿಸಿ ನೋಡಿದಾಗ ಬಹು ಚಿಕ್ಕದಾಗಿ ಕಾಣುತ್ತದೆ. ✡

(* ಮೇಲೆ ಉಪಯೋಗಿಸಿದ ಹೆಸರುಗಳೆಲ್ಲ ಕಾಲ್ಪನಿಕವಾದರೂ ಅವರ ಸಮಸ್ಯೆಗಳು ಕಾಲ್ಪನಿಕವಲ್ಲ.)

ಯುಗೋಸ್ಲಾವಿಯಾದ ಕಾರಖಾನೆಯೊಂದರ ಕಾರ್ಮಿಕರು ಹೆಗಲುಗಳವರೆಗೆ ಇಳಿಬೀಳುವ ಹಾಗೆ ಕೂದಲು ಬೆಳೆಸಿದ್ದನ್ನು ಕಂಡು ಅದರ ಆಡಳಿತಾಧಿಕಾರಿ ಕೂದಲು ತೆಗೆಸಲು ಒಪ್ಪದ್ದಿದವರ ಸಂಬಳದಲ್ಲಿ ಪ್ರತಿಶತ ಐದರಷ್ಟನ್ನು ಮುರಿದುಕೊಂಡು ಒಪ್ಪಿದವರಿಗೆ ಬಹುಮಾನರೂಪದಲ್ಲಿ ಕೊಡುವುದಾಗಿ ಸಾರಿದ.

ಇದಕ್ಕಾಗಿ ಕಾರಖಾನೆಯ ಎದುರಿನ ನಾಲ್ಕು ಕ್ಷೌರದಂಗಡಿಯವರು ಆಡಳಿತಾಧಿಕಾರಿಗೆ ಕೈ ಬಿಸಿ ಮಾಡಿದ್ದರೆಂದು ನಂತರ ತಿಳಿಯಿತು.



ಮೂಲ: **ಡಾ. ಶಶಿಪ್ರಭಾ ಶಾಸ್ತ್ರಿ**
ಕನ್ನಡಕ್ಕೆ: **ಗಿರಿಜಾ ಶಾಸ್ತ್ರಿ**

ಕೊನೆಗೂ ಆ ದಿನ ಬಂದೇಬಿಟ್ಟಿತ್ತು. ಮಗಳನ್ನು ಅತ್ತೆಮನೆಗೆ ಕಳುಹಿಸಿಕೊಡುವ ಸಂಭ್ರಮದಲ್ಲಿ, ಅವಳಿಗೆ ಗಮನವೇ ಇಲ್ಲದಂತೆ. ಯಾವ ದಿನಕ್ಕಾಗಿ ಅವರಿಬ್ಬರೂ ಇಷ್ಟೊಂದು ತವಕ ಪಡುತ್ತಿದ್ದರೋ, ಆ ತಾರೀಖು, ಈ ಮದುವೆ ಸಂಭ್ರಮದ ನಡುವೆಯೇ ಆ ಸಂಭ್ರಮವೂ ನಡೆದುಹೋಗಲೋ ಎಂಬಂತೆ ಬಂದಿತ್ತು. ಮಗಳ ಮದುವೆಗೆ ಒಂದು ತಿಂಗಳು ಮುಂಚಿತವಾಗಿಯೇ ಅವನು ಕಾಯಿಲೆ ಬಿದ್ದಿದ್ದ. ಕೆಮ್ಮು ಹಾಗೂ ದಮ್ಮು ಇರುವುದೇನೋ ಎಂಬಂತೆ ಉಸಿರು ಸಿಕ್ಕಿಕೊಂಡಾಗ ಒಂದೆರಡು ದಿನ ಮಂಚವನ್ನೂ ಹಿಡಿಯುತ್ತಿದ್ದ. ಮೈ ಮುಟ್ಟಿದಾಗ ಜ್ವರ ಇರುವವರಂತೆ ತೋರುತ್ತಿತ್ತು. ಒಂದೆರಡು ದಿನ ಉರುಳಾಡಿ ಓಡಾಟ ಪ್ರಾರಂಭಿಸುತ್ತಿದ್ದ. ಮತ್ತೆ ಅದೇ ಕೆಮ್ಮು. ಹೀಗಾಗಿ ರಜದ ಒಂದೂವರೆ ತಿಂಗಳೂ ಮಂಚದಲ್ಲೇ ಬಿದ್ದುಕೊಂಡು ಏಳಲಾಗದೇ ಹೋದಾಗ ಎಲ್ಲ ಕೆಲಸಗಳನ್ನೂ ಅವಳೊಬ್ಬಳೇ ನಿಭಾಯಿಸಬೇಕಾಯಿತು. ಹಾಗೆ ನಿಭಾಯಿಸಿ ಅವಳಿಗೆ ಅಭ್ಯಾಸವೂ ಇತ್ತು. ಮದುವೆಯ ಕೆಲಸ ಪೂರೈಸಿತೋ ಇಲ್ಲವೋ ಎನ್ನುವಷ್ಟರಲ್ಲೇ ತಾನಿನ್ನು ಕೆಲಸಕ್ಕೆ ಹೋಗಬೇಕಾದ್ದಿಲ್ಲವೆಂದು ಅವನು ಹೇಳಿದಾಗ ಅವಳಿಗೆ ವಿಚಿತ್ರವೆನಿಸಿತ್ತು.

"ಅರೇ?" ಅಂತಃಕರಣದಲ್ಲಿ ಎಲ್ಲೋ ಒಂದು ಆಹ್ಲಾದದ ಕೂಗೆದ್ದರೂ, ಯಾವುದೋ ಆತಂಕದ ಚಿಕ್ಕ ಗಂಟೆಯೂ ಒಳಗೊಳಗೇ ಬಾರಿಸಿತ್ತು. ಆದರೂ ಚೇತರಿಸಿಕೊಂಡು ಹೇಳಿದಳು, "ಒಳ್ಳೇಯದು, ನೀವು, ದೇವರ ದಯದಿಂದ ಇಷ್ಟು ದಿನ ಸರ್ಕಾರಿ ಸೇವೆ ಮಾಡಿದ್ದಾಯ್ತು. ಈಗ ಸುಖವಾಗಿ ಮನೇಲಿ ಕುಳಿತು ಸುಧಾರಿಸಿಕೊಳ್ಳಿ." 'ಸುಧಾರಿಸಿಕೊಳ್ಳಿ' ಅನ್ನುತ್ತಿದ್ದ ಹಾಗೇ ಇನ್ನೊಂದು ಅವ್ಯಕ್ತ ಭಯ ಅವಳ ಎದೆಯನ್ನಾವರಿಸಿತ್ತು. ತಾನು ಇಷ್ಟು ಧೈರ್ಯ ಹೇಳಿ ಸಮಜಾಯಿಸಿ ಮಾತನಾಡಿ, ತಮ್ಮ ಜೀವನ ಇನ್ನು ಮುಂದೆ ಹೇಗೆ ಸಾಗಬೇಕೆಂದು ಲೆಕ್ಕ ಹಾಕುತ್ತಲೇ ಅವನನ್ನು ಸರ್ಪಕಾವಲು ಕಾಯುತ್ತಿದ್ದಾಗಲೂ ಮಾಧವನ ಈ ಮೌನ ಹಾಗೂ ಎಳೀತಾನೇ ಇರೋ ರೋಗಗಳು. ಮನಸ್ಸಿನಲ್ಲಿ ಬೇರೆಯಾಗಿಯೇ ಏನನ್ನು ನೇಯುತ್ತಾ ಇವೆಯೋ? ಮದುವೆ ಗಲಾಟೇಲಿ ಅವಳು ಎಲ್ಲಾ ಮರೆತಿದ್ದರೂ, ಅವನು ತನ್ನ ಮೇಲೆ ಕವಿಯುತ್ತಿರುವ ಮೋಡಗಳನ್ನು ಗಮನಿಸದೆ ಹೋದ್ದಾನು? ಒಳಗೊಳಗೇ ಏನೋ ಯೋಚನೆ ಅವನನ್ನು ಕಬಳಿಸುತ್ತಿತ್ತು. ತನ್ನ ಪತಿಗಿಂತ ಸೀನಿಯರ್, ರಘುಪತಿ ರಿಟೈರಾದ ಆರು ತಿಂಗಳಲ್ಲೇ ಸ್ವಾಮಿಪಾದ ಸೇರಿದ್ದ. ಈ ಅಶುಭಯೋಚನೆ ತಲೆ ಹೊಕ್ಕಾಗ ಅವಳಿಗೆ ಮೈ ನಡುಕ ಬಂದಿತ್ತು. ಛಿ, ಛಿ, ಎಂದು ತಲೆ ಕೊಡವಿದ್ದಳು. ಮೊದಲೆಲ್ಲಾ ಕೆಟ್ಟ ಯೋಚನೆಗಳು ಬಂದಾಗ ಏನಾದರೂ ಕೆಲಸದಲ್ಲಿ ತೊಡಗಿ ಅದನ್ನು ಮರೆಯುತ್ತಿದ್ದಳು. ಅವಳು ಮಾಧವನೊಂದಿಗೆ ಆಗಾಗ ಹೇಳುತ್ತಲೂ ಇದ್ದಳು— ನಿಮ್ಮ ಸ್ನೇಹಿತರಿಗಿಂತ ನೀವೇ ಎಷ್ಟೋ ಜಾಣರು, ಧೈರ್ಯಸ್ಥರು. ನಿವೃತ್ತಿ ಆದರೂ ನಿಮಗೆ ಮುಖದಲ್ಲಿ ದಣಿವು ಕಾಣೋದೇ ಇಲ್ಲ. ಅರವತ್ತಾಗಿದೆ ಅಂತಲೂ ಅನ್ನಿಸೋಲ್ಲ. ರಿಟೈರಾಗಿ ಮನೇಲೇ ಸುಧಾರಿಸಿಕೊಂಡವರಂತೂ ಎಲ್ರೂ ಎಷ್ಟು ಚೆನ್ನಾಗಿ ಆರೋಗ್ಯ ನೋಡ್ಕೊಂಡಿದ್ದಾರೆ ಅಂತ ಹೊಟ್ಟೆ ಉರಿ ಪಟ್ಕೊಂಡೇ ಹೊಗಳ್ತಾರೆ.

ಅವಳು ಮನೋವೈಜ್ಞಾನಿಕ ರೀತಿಯಲ್ಲಿ ಪ್ರಭಾವ ಬೀರುವ ಪ್ರಯತ್ನ ನಡೆಸಿದ್ದಳು. ಆಗಾಗ ಅಂತಹ ಉದಾಹರಣೆಗಳನ್ನೂ ಕೊಡುತ್ತಿದ್ದಳು. ಒಮ್ಮೊಮ್ಮೆ ಮಾಧವನೂ ಹೇಳಿ

ನ್ನುಂಟು: "ರಜ್ಞನ ಬಾಬೂನ ನೋಡಿದೆಯಾ? ಆರೇಳು ವರ್ಷ ಆಯ್ತು ರಿಟೈರಾಗಿ. ಇವತ್ತಿಗೂ ಏನು ಚಟುವಟಿಕೆ, ಓಡಾಟ! ಒಂದಿನವೂ ದೇವರ ಬಳೀ ಹೋಗೋದು ತಪ್ಪಲ್ಲ."

"ಅಷ್ಟಲ್ಲದೆ" ಪತಿಯು ಮನಃತೃಪ್ತಿಯಾಗಿ ಸಮರ್ಥನೆಯನ್ನೂ ಮಾಡಿದ್ದಳು. ಆದರೆ ಅವಳ ಕಣ್ಣ ಮುಂದೆ ತದ್ವಿರುದ್ಧವಾದ ಚಿತ್ರವೇ ತೇಲಿ ಬಂದಿತ್ತು. ಬೆಳಿಗ್ಗೆ ಅವಳು ಹಾಲಿಗೆ ಹೋಗುವಾಗ, ರಜ್ಞನ ಬಾಬೂ ಹಿಂದಿನಿಂದ ಅಥವಾ ಪಕ್ಕದಿಂದ ಕದ್ದು ಹೋಗುವುದನ್ನು ಎಷ್ಟೋ ಬಾರಿ ಕಂಡಿದ್ದಳು. ದೇವಸ್ಥಾನದಿಂದ ಅತ ಬರುತ್ತಿರ್ತಾನೆ. ಕೈಯಲ್ಲಿ ಹೂವಿನ ಬುಟ್ಟಿ. ಕಟ್ಟಿಗೆಯಂತಹ ಮೈ ಮೇಲೆ ಶಾಲೋ, ಶಲ್ಯವೋ ಇರುತ್ತೆ. ಅವಳು ನಮಸ್ಕಾರ ಹೇಳೋಣವೆಂದುಕೊಳ್ಳುವ ಹೊತ್ತಿಗೆ, ಅತ ಕಂಡೂ ಕಾಣದಂತೆ ಬೇರೆ ಕಡೆ ಮುಖ ತಿರುಗಿಸಿಕೊಂಡಾಗ ಗೊತ್ತಾಗುತ್ತೆ ಹಿಂದಿನ ಸ್ನೇಹ, ಪರಿಚಯ ಆತನಿಗಿಂದು ಬೇಡವಾಗಿದೆಯೆಂದು. ಅವಳಂದುಕೊಳ್ಳುತ್ತಾಳೆ: "ಹೀಗೆ ಕದ್ದು ಬರುವರೆ ಏನು ಸುಖ! ರಿಟೈರ್ ಆದರೇನಂತೆ? ಸಿಂಹದ ಹಾಗೆ ಎದೆ ಮುಂದಿಟ್ಟು ಓಡಾಡಲು ಸಾಧ್ಯವಿಲ್ಲವೇ? ನಿವೃತ್ತರಾಗೋದೇನು ಮಹಾಪರಾಧವೇ?" ರಜ್ಞನ ಬಾಬೂನ ನಡವಳಿಕೆ ಅವಳಿಗೆ ಅಸಹ್ಯ ಹಾಗೂ ಕಸಿಕರ ತರಿಸುತ್ತೆ. ಈಗೇನೋ ಅವಳು ತನ್ನ ಪತಿಯ ಮಾತನ್ನು ಸಮರ್ಥಿಸಿದ್ದಳು; ಮುಂದೆ ವರೆಸಿ ಕೊಂಡು ಹೋಗಲಿಲ್ಲ. ಅವಳನ್ನು ತಕ್ಷಣ ಬೇರೆ ಯೋಚನೆಯೇ ಸೆರೆಹಿಡಿಯಿತು.

"ಕೇಳಿ ಇಲ್ಲಿ! ಇದುವರೆಗೆ ನೀವು ಕಳಿಸಿದ್ದರಲ್ಲೇ ಸ್ವಲ್ಪ ಉಳಿಸಿ ಬ್ಯಾಂಕಿನಲ್ಲಿ ಹಾಕಿದೀನಿ. ನಿಮ್ಮ ಪ್ರಾವಿಡೆಂಟ್ ಫಂಡಿನ ದುಡ್ಡೂ, ಇದೂ ಎರಡೂ ಸೇರಿಸಿ 'ಫಿಕ್ಸ್ಡ್ ಡಿಪಾಸಿಟ್' ಮಾಡಿಬಿಡಿ. ಪೆನ್ಶನ್ನಿನ ದುಡ್ಡೇ ನಮ್ಮಿಬ್ಬರಿಗೂ ಹೇಗೋ ಸಾಕಾಗುತ್ತೆ. ಅದರಲ್ಲೇ ಸಾಧ್ಯವಾದ್ರೆ ಉಳಿಸಲೂ ಪ್ರಯತ್ನಿಸೋಣ." ದುಡ್ಡಿನ ಯೋಚನೆ ತನ್ನ ಪತಿಯ ತಲೆ ತಿನ್ನುತ್ತಿರಬಹುದೇನೋ ಎಂದು ಧೈರ್ಯ ಕೊಡಬಯಸಿದ್ದಳು; [illegible] ಈ ತರಹ ಮಾತ ಮಾಡುತ್ತಿದ್ದಳು. ಗಂಡಸರಿಗೆ ದುಡ್ಡಿನ ಯೋಚನೆಗಿಂತ ತಲೆ ತಿನ್ನುವ ಯೋಚನೆ ಬೇರಾವುವುದೂ ಇಲ್ಲ. ಇದೊಂದರಿಂದ ಮುಕ್ತಿ ಸಿಕ್ಕಿದರೆ ಮಿಕ್ಕೆಲ್ಲಾ ಯೋಚನೆಗಳೂ ಗೌಣ ಎಂದು ಅವಳ ನಂಬಿಕೆ. ಹಾಗೆ ನೋಡಿದರೆ ಅವರಿಗೆ ಮಿಕ್ಕ ಯಾವ ಯೋಚನೆಗಳೂ ಇರಲೇ ಇಲ್ಲ. ಆಗಾಗ ಅವಳೇ ಅದನ್ನೂ ಪ್ರಸ್ತಾಪಿಸುತ್ತಿದ್ದಳು— "ನೀವೇ ಅದೃಷ್ಟವಂತರು ಬಿಡಿ; ರಿಟೈರಾಗೋದಕ್ಕೆ ಮುಂಚೆಯೇ, ಮಕ್ಕಳ ವಿದ್ಯಾಭ್ಯಾಸ, ನೌಕರಿ, ಮುಂಜಿ, ಮದುವೆ ಎಲ್ಲಾ ಪೂರೈಸಿದಿರಿ. ಎಲ್ಲಾ ನಿಮ್ಮ ಮುಂದಾಲೋಚನೆ ಅನ್ನಿ. ಇವತ್ತು ಮಗ ಅಮೇರಿಕದಲ್ಲಿದ್ದಾನೆ. ಮಗಳು ಲಕ್ಷಣವಾಗಿ ಸಂಸಾರ ಮಾಡ್ಕೊಂಡು ಅತ್ತೇ ಮನೇಲಿ ಇದ್ದಾಳೆ. ಇದಕ್ಕಿಂತ ಪುಣ್ಯ ಇನ್ಯಾರು ಕೇಳಿಕೊಂಡು ಬಂದಿರ್ತಾರೆ!" ಎಲ್ಲಾ ಶ್ರೇಯಸ್ಸನ್ನೂ ಪತಿಗೇ ಕೊಟ್ಟಿದ್ದಳು, ಅವಳಿಗೆ ಈ ಮಾತೆಲ್ಲಾ ಬೊಮ್ಮಗಾರಿಕೆಯೆಂತ ಗೊತ್ತಿದ್ದರೂ. ನಿಜ ಪ್ರಾಯಶಃ ಮಾಧವನಿಗೂ ಗೊತ್ತಿತ್ತೋ ಏನೋ. ಆದರೂ ಅವನ ಆತ್ಮವಿಶ್ವಾಸ ಬೆಳೆಸುವ ಪ್ರಯತ್ನ ಈ ರೀತಿ ಮಾತುಗಳ ಮೂಲಕ ನಡೆಸಿದ್ದಳು. ಇನ್ನೇನು ಮಾಡಬಹುದು ತಾನೇ... ಅವಳ ಯೋಚನೆ ಮುಂದುವರೆಯುತ್ತಲೇ ಇತ್ತು.

ಎಂದಾದರೂ ಕೆಲಸ ಮಾಡಿ ಮಾಡಿ, ಬೇಸತ್ತು ಹಾಗೇ ಎರಡು ನಿಮಿಷ ಒರಗಿಕೊಂಡಾಗ, ಕಣ್ಣು ರೆಪ್ಪೆಗಳು ತೆರೆಯುವುದಕ್ಕೇ ಹರತಾಳ ಮಾಡಿದಾಗ. ದೇಹದ ಅಂಗ ಅಂಗಗಳೂ ನೋವಾಗುತ್ತಿರುವಂತೆ ಭಾಸವಾದಾಗ. ಮನಸ್ಸು ಕೇಳುತ್ತೆ— ಯಾರಾದರೂ ಒಂದು ಲೋಟ ಬಿಸಿ ಕಾಫಿ ತಂದು ಕೊಡಬಾರದೇ ಎಂದು. ಕಡೇ ಪಕ್ಷ ಒಂದು ಲೋಟ ತಣ್ಣೀರು ತಂದು ಕೊಡಬಾರದೇ ಅನ್ನಿಸುತ್ತೆ. ಆದರೂ ಆ ಇಚ್ಛೆಯನ್ನು ಪ್ರಕಟಿಸಲಾರದೇ, ಹೇಗಾದರೂ ಏಳುವ ಸಾಹಸ ಮಾಡುತ್ತಾಳೆಯೇ ಹೊರತು ಪತಿಗೆ ಒಂದು ಮಾತು ಹೇಳಲಾರಳು. ಆತನೇನಾದರೂ "ಹೇಗಿದ್ದೀ, ವಿಶ್ರಮಿಸಿಕೊಂಡೇ? ನನಗೆ ಕಾಫಿ ಮಾಡುತ್ತೀಯಾ... ನಾನು [illegible] ಹಾಲೇ ಇದೇ

ನೀಂತ," ಅಂತ ಅಂದುಕೊಂಡರೆ ಎಂದು ಹೆದರುತ್ತಿದ್ದಳು. ಮೊದಲೆಂದೂ ಇಷ್ಟು ಎಚ್ಚರ ವಹಿಸಬೇಕಾಗಿರಲಿಲ್ಲ.

ಈಗ ಹೆಜ್ಜೆ ಹೆಜ್ಜೆಗೂ ಎಚ್ಚರವಾಗಿರಬೇಕಾಗಿತ್ತು. ಏನಾದರೂ ಭಯ, ಆಶಂಕೆ ಅವಳನ್ನು ಕಾಡುತ್ತಲೇ ಇರುತ್ತಿತ್ತು. ಮೊದಲೆಲ್ಲಾ ಏಂಗಾವಲೂ ಬಟ್ಟೆ ಒಗೆಯುವಾಗಲೋ ಅಡಿಗೇ ಮನೆ ತೊಳೆಯುತ್ತಿದ್ದಾಗಲೋ ಅಲ್ಲಿಂದಲೇ ಕೂಗಿ ಹೇಳುತ್ತಿದ್ದಳು– "ಟೇಬಲ್ ಮೇಲೆ ಎಲ್ಲಾ ಅಣಿ ಮಾಡಿಟ್ಟಿದೀನಿ. ನೀವೇ ಬಡಿಸಿಕೊಂಡು ಊಟ ಮಾಡ್ಬಿಡಿ. ನನ್ಗಿನ್ನೂ ಹೊತ್ತಾಗುತ್ತೆ"... ಆದ್ರೆ ಈಗ... ಮೊದಲಿಗಿಂತ ಚುರುಕಾಗಿ ಓಡಾಡಿ, ತಾನೇ ತಟ್ಟೆ ಹಾಕಿ, ಬಡಿಸಿ, ಜೊತೇಲಿ ಕುಳಿತು ಊಟ ಮಾಡುತ್ತಿದ್ದಳು. ಪತಿಯ ವಿಚಾರದಲ್ಲಿ ಎಳ್ಳಷ್ಟೂ ಉಪೇಕ್ಷೆ, ಅಸಾವಧಾನತೆ ಇರದಂತೆ ಎಚ್ಚರ ವಹಿಸುತ್ತಿದ್ದಳು.

ಪತಿಗೆ ಪೂರ್ಣ ಗೌರವವನ್ನೂ ಆದರವನ್ನೂ ನೀಡಲೆತ್ನಿಸುವ ಭಾವನೆ, ಹೆಜ್ಜೆ ಹೆಜ್ಜೆಗೂ ಎಚ್ಚರ ವಹಿಸುವ ಪ್ರಯತ್ನಗಳು ಅವಳನ್ನು ಒಳಗಿಂದೊಳಗೆ ಕ್ಷಯಿಸಿದ್ದವು. ಪತಿಯ ಜೊತೆಗೇ ಈಗ ಅವಳಿಗೂ ವಯಸ್ಸಾಗಿತ್ತು. ಅದು ಬೇರೆ ವಿಷಯ. ಆದರೆ ಈ ಸಮ್ಮಾನ ಸ್ನೇಹಪೂರಿತ ಮನಃಸ್ಥಿತಿಯ ಪ್ರದರ್ಶನದಲ್ಲೇ ತನ್ನನ್ನು ಆವರಿಸಿಟ್ಟುಕೊಳ್ಳುವ ಕೆಲಸ ವಿಪರೀತ ಕಷ್ಟಕರವಾಗಿತ್ತು. ಬಹುಶಃ ಇದು ಹಿಂದಿನ ಮೂವತ್ತು ವರ್ಷಗಳಿಂದ ಅವಳು ನಿಭಾಯಿಸಿಕೊಂಡು ಬಂದ ಕರ್ತವ್ಯಕ್ಕಿಂತ ಒಂದು ಷಟ್ಟು ಹೆಚ್ಚಿನದಾಗಿಯೇ ಇತ್ತು. ಮೂವತ್ತು ವರ್ಷಗಳು !! ಎಂತಹ ದೀರ್ಘ ಅವಧಿ! ಈಗಲೂ ನಿನ್ನೆಯ ದಿನದ ಮಾತಿನಂತಿದೆ. ಅಮ್ಮ ನಿಟ್ಟುಸಿರು ಬಿಟ್ಟು ಗೊಣಗಿಕೊಳ್ಳುತ್ತಿದ್ದಳು: "ಹೇಗಾದರೂ ಕತ್ತಿಗೊಂದು ಮಾಂಗಲ್ಯ ಎಂದು ಬಿದ್ದರೆ ಸಾಕು ಈ ಹುಡುಗಿಗೆ. ತನ್ನವರು ಎಂದು ನಕ್ಕೊಂಡು ಎರಡು ಮಾತಾದ್ರು ಆಡ್ತಾಳೆ ಪಾಪ." ಅಪ್ಪ ಶಲ್ಯದ ಅಂಚಿನಲ್ಲಿ ಕಣ್ಣೊರೆಸುತ್ತಾ ಹೇಳುತ್ತಿದ್ದರು: "ಪದ್ಮನ ಯೋಚನೆ ಬಿಟ್ಟುಬಿಡು. ತನ್ನ ಸಂಪಾದನೆಲೀ ತಾನು ಹಾಯಾಗಿ ಉಡ್ಕೊಂಡು ಇರ್ತಾಳೆ. ದೇವರು ಕಣ್ಬಿಟ್ಟಾಗ ಮದುವೇನೂ ಆಗುತ್ತೆ."

"ನಂ ಪದ್ಮಂಗೇನು, ಅಂತಹ ಜಾಣೆ. ಯಾರಾದ್ರೂ ದಮ್ಮಯ್ಯ ಅಂತ ಮಾಡ್ಕೊಂಡು ಹೋಗ್ತಾರೆ. ದೇವರೇ!! ಸ್ವಾಮಿ ನಮ್ಮಪ್ಪ. ಇನ್ನೂ ಎಷ್ಟು ಕಾಯಬೇಕಪ್ಪಾ." ಎಂದು ಕ್ಷೀಣ ಧ್ವನಿಯಲ್ಲೇ ತಿರುಪತಿ ವೆಂಕಟರಮಣನಿಗೆ ಕೈ ಮುಗಿದಿದ್ದಳು.

ಇಪ್ಪತ್ತೆರಡು ಇಪ್ಪತ್ಮೂರು ವಯಸ್ಸಾಯ್ತು ಅಂದರೆ ಆಗಿನ ಕಾಲದಲ್ಲಿ ವಿಪರೀತವೇ ಆಗಿತ್ತು. ಆದ್ದರಿಂದಲೇ ಅಮ್ಮ, ಅವಳ ಎದ್ದು ಕಾಣುವ ದೇಹ, ರೂಪ, ಯೌವನವನ್ನು ನೋಡಿ, ನಿಃಶ್ವಾಸ ಬಿಡುತ್ತಿದ್ದಳು. ಆಗಾಗ ಪ್ರಾಯಶಃ ಕಣ್ಣೀರು ಸುರಿಸುತ್ತಿದ್ದದೂ ಉಂಟು. ದುಡ್ಡಿನ ಯೋಚನೆಯಿಂದಲೋ ಏನೋ, ಮಗಳ ಸಂಪಾದನೆಯಿಂದ ಮನೆಯ ಪ್ರತಿಯೊಬ್ಬರ ಹೊಟ್ಟೆ ಪಾಡಿನ ಕಥೆಯೂ ಕಳೆಯುತ್ತಿದ್ದಾಗ, ಮದುವೆಗೆ ಬೇಕಾದ ಗಂಟು ಎಲ್ಲಿರುತ್ತೆ? ದುಡ್ಡಿಲ್ಲದಿದ್ರೆ, ಒಳ್ಳೇ ಮನೆತನ, ವರ ಎಲ್ಲದರ ಕಲ್ಪನೆಯೂ ಕನಸೇ ಆಗಿತ್ತು. ಅಮ್ಮನ ಆಲೋಚನೆಯಿಂದ ಅವಳಿಗೂ ಆಗಾಗ ಅನ್ನಿಸುತ್ತಿತ್ತು: "ಈ ಮನೆಯಲ್ಲಿ ನಾನಿರುವುದೇ ಬೆಟ್ಟದಂತಹ ಸಮಸ್ಯೆಯಾಗಿ ಕಾಡುತ್ತಿರುವಾಗ, ಹೇಗಾದರೂ ನನಗೆ ಬೇಗ ಮುಕ್ತಿ ಸಿಗಬಾರದೇ? ನನ್ನ ಸಂಪಾದನೆ ಇಷ್ಟು ಮುಖ್ಯವಾಗಿದ್ದರೂ ನನ್ನ ಮದುವೆಗೆ ಹಾತೊರೆಯುವ ತಾಯಿ –ಓ– ಎಷ್ಟು ಮಮತಾಮಯಿ.

ಕನಸನ್ನು ಅವಳೂ ಕಂಡಿದ್ದಳು. ಎಲ್ಲ ಪ್ರಾಯಸ್ಥ ಕನ್ಯೆಯರಂತೆ – ಚಿಕ್ಕ ಮನೆ. ಮುದ್ದಾದ ಎರಡು ಮಕ್ಕಳು, ಹಗಲಿಗೆ ಹಗಲು ಕೊಟ್ಟು ಸಂಸಾರ ನಿಭಾಯಿಸಿಕೊಂಡು ಹೋಗುವ ಪತಿ – ಪತ್ನಿಯರ ಒಂದು ಜೋಡಿ...ಅಜ್ಜಿ, ತಾಯಿ, ತಂದೆ ಮತ್ತು ಇನ್ನಾರ ಆಶೀರ್ವಾದದ ಫಲವೋ ಅಥವಾ ತನ್ನ ಭಾಗ್ಯದ್ದೇ ಆಟವೋ ಗೊತ್ತಿಲ್ಲ, ಅಂತೂ ಎಲ್ಲ ತಮ್ಮ ತಂಗಿಯರ ಸಂಸಾರಗಳನ್ನೂ ನೆಟ್ಟಗೆ ನಿಲ್ಲಿಸಿದ ನಂತರ ಅವಳ ಮದುವೆಯೂ ಆಗಿತ್ತು. ಹೇಗೋ. ಅವಳ ಎಲ್ಲಾ

ಕನಸುಗಳೂ, ಶಬ್ದಾರ್ಥದಲ್ಲಿ ನಿಜವಾಗಿದ್ದವು. ಅಂದರೆ ಒಂದು ಚಿಕ್ಕ ಚೊಕ್ಕ ಮನೆ ಬಾಡಿಗೆಯದು, ಮೂರು ನಾಲ್ಕು ವರ್ಷಗಳಲ್ಲೇ ಹುಟ್ಟಿದ ಎರಡು ಮಕ್ಕಳು— ಒಂದು ಗಂಡು, ಒಂದು ಹೆಣ್ಣು. ಆದರೆ ಭುಜಕ್ಕೆ ಭುಜ ಕೊಟ್ಟು ಸಂಸಾರ ನಿಭಾಯಿಸಿಕೊಂಡು ಹೋಗುವ ಜೋಡಿಯ ಕನಸು ಮಾತ್ರ ನನಸಾಗಿಯೇ ಉಳಿಯಿತು. ಎಣಿಸಿದ ಹಾಗೆ ಸಿಗುತ್ತಿದ್ದ ಕೆಲವೇ ರೂಪಾಯಿಗಳಲ್ಲಿ ಎಂತಹ ಜವಾಬ್ದಾರಿಯುತ ಮನುಷ್ಯನೂ ಸಂಸಾರ ತೂಗಿಸುವುದು ಅಸಂಭವವಾಗಿತ್ತು. ಅಂತಹದರಲ್ಲೂ ಈ ಹೆಣ್ಣು ಸಂಸಾರ ನಡೆಸುತ್ತಲೇ ಸಾಗಿದ್ದಳು.

ಪತಿಯ ನೌಕರಿಯೂ ಮೊದಲು ಕಾಯಂ ಆಗಿರಲಿಲ್ಲ. ಕ್ರಮೇಣ ಆದಾಗ ಪತಿಯು ಸದಾ ಕಾಲ ಹೊರನಾಡುಗಳಲ್ಲಿಯೇ ಇರಬೇಕಾಗಿದೆಯೆಂದು ತಿಳಿಯಿತು. ಸರಕಾರೀ ನೌಕರೀ ಬೇರೆ. ಮುಂದೆಯಲ್ಲಿ ಉನ್ನತಿ ಮುಂತಾದವುಗಳು ದಕ್ಕಲು ಅಂತಹ ಶರತ್ತುಗಳಿಗೆ ಒಪ್ಪದೇ ವಿಧಿ ಇರಲಿಲ್ಲ. ಅದಕ್ಕೆ ತಕ್ಕಂತೆ ಮೆಟ್ಟಿಲು ಮೆಟ್ಟಿಲಾಗಿ ಏರಿ ಡಿಫೆನ್ಸ್ ಅಕೌಂಟ್ಸ್ ಆಫೀಸಿನಲ್ಲಿ ಮುಖ್ಯ ಅಕೌಂಟೆಂಟ್ ಪದವಿಗೇರಿದ್ದ. ಪತ್ನಿ ದಕ್ಷಿಣ ಭಾರತದ ಯಾವುದೋ ಮೂಲೆಯಲ್ಲಿರುತ್ತಿದ್ದಾಗ, ಪತಿ ಉತ್ತರ ಭಾರತದ ಸುಂದರ ಅಥವಾ ಕಳಪೆ ನಗರಗಳಲ್ಲಿ ಎಲ್ಲೋ ಗೊತ್ತುಗುರಿ ಇಲ್ಲದೇ ಕಾಲ ಹಾಕುತ್ತ ಇರುತ್ತಿದ್ದ. ವರ್ಷವೆಲ್ಲಾ ಅವಳೇ ಮನೆಯ ಎಲ್ಲಾ ಸುಖ ದುಃಖಗಳನ್ನು ಅನುಭವಿಸುತ್ತಿದ್ದಳು— ಮಕ್ಕಳ ವಿದ್ಯಾಭ್ಯಾಸ, ಅವರುಗಳಿಗೆ ಪಾಠ ಹೇಳಿಕೊಡುವುದು, ಅವರ ಕಾಯಿಲೆ ಕಸಾಲೆಗಳು ಅವರ ಬೇಡಿಕೆಗಳು. ಮನೆಯ ಓರಣ, ಬಂದು ಹೋದವರಿಗೆ ಆತಿಥ್ಯ. ಒಂದೇ, ಎರಡೇ, ಕೊನೆ ಮೊದಲಿಲ್ಲದೆ ಸಾಗಿದ್ದವು ಅವಳ ಕರ್ತವ್ಯಗಳು. [illegible] ಮೂವತ್ತು ವರ್ಷಗಳು, ಅವರಲ್ಲಿ ತನ್ನ ಸ್ವಂತ ಕಾಯಿಲೆಗಳೆಷ್ಟೋ! ಮಕ್ಕಳು ತಿಂಗಳುಗಟ್ಟಲೇ ನ್ಯುಮೋನಿಯಾ, ಟೈಫಾಯ್ಡುಗಳಲ್ಲಿ ನರಳುತ್ತಿದ್ದಾಗ ತನ್ನ ಶಕ್ತಿಮೀರಿ ಸೇವೆ ಶುಶ್ರೂಷೆ ಮಾಡಿದ್ದೆಷ್ಟೋ— ಎಲ್ಲ ಸಹಿಸಿಕೊಂಡೇ ನಡೆದಿದ್ದಳು.

ಮಾಧವ ವರ್ಷಕ್ಕೊಂದು ಬಾರಿ ತಿಂಗಳ ರಜೆಯ ಮೇಲೆ ಬರುತ್ತಿದ್ದ. ಮೆಡಿಕಲ್ ಲೀವ್ ಎಂದು ನಾಲ್ಕಾರು ದಿನಗಳ ರಜೆ ಮುಂದುವರೆಸುತ್ತಿದ್ದ. ಆಗಲೂ ಮಕ್ಕಳ ಪರೀಕ್ಷೆಗಳ ಗಲಾಟೆಯ ನಡುವೆ ಅಪರೂಪದ ಪತಿಗೋಸ್ಕರ ಆದರ ಆತಿಥ್ಯಗಳೂ ಸದ್ದಿಲ್ಲದೇ ನಡೆದುಹೋಗುತ್ತಿದ್ದವು. "ಮನೆಯಲ್ಲಿ ಯಜಮಾನರು ಇದ್ದಾರೆ" ಎಂಬ ಭಾವನೆಯೇ ಹಿತಕರವಾಗಿರುತ್ತಿತ್ತು. ಹೊರಗಿನವರೂ ಯಜಮಾನ ಇರುವುದನ್ನು ಸ್ವಲ್ಪ ಗೌರವಿಸುತ್ತಾರೆ. "ಕಿರಣನ ತಂದೆ ಬಂದಿದ್ದಾರೆ. ಅವನು ನಮ್ಮ ಜೊತೆ ತುಂಬಾ ಹೊತ್ತು ಆಡ್ತಾನೋ ಇಲ್ವೋ" ಎಂದು ಮಕ್ಕಳೂ ಆಡಿಕೊಳ್ಳುತ್ತಿದ್ದರು.

ಆ ದಿನಗಳಲ್ಲಿ ವಯಸ್ಸೂ ಚಿಕ್ಕದಿತ್ತು. ಬಿಸಿ ರಕ್ತದ ಹುಮ್ಮಸ್ಸಿನಲ್ಲಿ ಎಲ್ಲವನ್ನೂ ಸುಧಾರಿಸಿಕೊಂಡು ಹೋಗುವ ಚೈತನ್ಯವೂ ಇತ್ತು. ಈಗ ಆ ಶಕ್ತಿ ಕುಗ್ಗುತ್ತಾ ಬಂದಿತ್ತು. ಕೊನೆಗೊಂದು ದಿನ 'ಹಕ್ಕಿಗಳೆರಡೂ' ಗೂಡು ಸೇರಿಕೊಳ್ಳಲೇಬೇಕಲ್ಲ...ಆ ದಿನದ ಕಲ್ಪನೆಯೂ ಅವಳ ಮೈ ಮರೆಸುತ್ತಿತ್ತು. ಆ ಕಲ್ಪನೆಯೇ ಮದುವೆ ಮುಂಜಿಗಳಂಥ ಭಾರೀ ಕೆಲಸಗಳನ್ನೂ ಮಾಡಿಸಿ ಮುಗಿಸಿತ್ತು. ಕಷ್ಟಗಳು ಏನೂ ಬಾರದೇ ಇರಲಿಲ್ಲ. ಒಳ್ಳೆ ಮನೆತನದ ಅಳಿಯ, ಸೊಸೆಯರನ್ನು ಹುಡುಕುವ ಸಾಹಸ, ಸಾಮಾನು ಸರಂಜಾಮು ಒಟ್ಟುಗೂಡಿಸುವಿಕೆ... ಎಲ್ಲ ಹೇಗೋ ನಡೆದು ಹೋಗಿದ್ದವು. ಮಾಧವನಿರುತ್ತಿರಲಿಲ್ಲವಾದ್ದರಿಂದ ನೆರೆಹೊರೆಯವರ ದಾಕ್ಷಿಣ್ಯಕ್ಕೂ ಒಳಗಾಗಬೇಕಾಗುತ್ತಿತ್ತು. ಮಕ್ಕಳೂ ದೊಡ್ಡರಾಗಿದ್ದರಿಂದ ಸಂಭಾಳಿಸಿಕೊಂಡು ಹೋದರೂ ಅವಳ ಮನಸ್ಸಿನ ಒಂಟಿತನ, ಮನೋದ್ವಂದ್ವ, ಅವ್ಯಕ್ತವಾಗಿಯೇ ಬತ್ತಿಹೋಗುತ್ತಿದ್ದ ಎಷ್ಟೋ ಅಭಿಲಾಷೆಗಳು... ಎಲ್ಲವನ್ನೂ ಪತಿಯ ಮುಂದೆ ವ್ಯಕ್ತಪಡಿಸಲೆಂದು ಗಂಟು ಕೂಡಿಟ್ಟಿರುತ್ತಿದ್ದಳು. ಆದರೆ ಪತಿ ಬಂದಾಗ ಎಷ್ಟೋ ಘಟನೆಗಳ ಹೊಸತನ ಹಳಸಿಹೋಗಿರುತ್ತಿತ್ತು. ಎಷ್ಟೋ ಪ್ರಶ್ನೆಗಳು ಪ್ರಶ್ನೆಗಳಾಗಿಯೇ ಉಳಿದಿರುತ್ತಿರಲಿಲ್ಲ. ಹೀಗಾಗಿ ಪತಿ ಬರುವ ವೇಳೆಗೆ

ಹೇಳಬೇಕಾದ ಮಾತುಗಳೇ ಇಲ್ಲವೇನೋ ಎನ್ನುವ ಸ್ಥಿತಿ ಗೋಚರವಾಗುತ್ತಿದ್ದರೂ ಅವನು ಮನೆಗೆ ಬರುವ ದಿನಗಳ ನಿರೀಕ್ಷೆ ನಡೆಸೇ ಇದ್ದಳು.

ಈಗ ಆ ಕ್ಷಣ ಬಂದಿತ್ತು. 'ಜೋಡಿ ಹಕ್ಕಿಗಳು ಗೂಡು ಸೇರುವ' ಅವಳ ಕಲ್ಪನೆ ನಿಜವಾಗಿತ್ತು ಮೂವತ್ತು ವರ್ಷಗಳ ನಂತರ. ಜರ್ಜರ ದೇಹದ ಒಳಗಿನ ಮನಸ್ಸು ಅಷ್ಟೇ ಹೊಸತಾಗಿ ಕನಸುಗಳಿಂದ ತುಂಬಿ. ಆಸೆಗಳ ಆಗರವಾಗಿದ್ದಾಗ ಅವಳಿಗೆ ತನ್ನ ಹೊಸ ಜವಾಬ್ದಾರಿಯ ಬೋಧವಾಗಿತ್ತು. ಪತಿಗೆ ಮನಃಸ್ಥೈರ್ಯ ಕೊಡಬೇಕಾದ ತನ್ನ ಕರ್ತವ್ಯ, ಅವನ ಸೌಖ್ಯ, ತನ್ನದಲ್ಲದೆ ಬೇರೆಯಾದ ಪತಿಯ ಅಸ್ತಿತ್ವ ಈ ವಿಷಯಗಳೇ ಅವಳಿಗೆ ದೊಡ್ಡ ಸಮಸ್ಯೆಗಳಾಗಿದ್ದವು. ಅವರ ಇಷ್ಟಗಳನ್ನು ಪಡೆಯುವ ಬಗೆ ಹೇಗೆ? ಇದುವರೆಗೆ ಅವಳು ಮಾಡಿದ್ದ ಚಿಕ್ಕಪುಟ್ಟ ಉಪಾಯಗಳು ಕ್ರಮೇಣ ತನ್ನ ಅರ್ಥಗಳನ್ನು ಕಳೆದುಕೊಳ್ಳುತ್ತಿರುವಂತೆ ಭಾಸವಾಗುತ್ತಿತ್ತು. ಸಂಪೂರ್ಣ ಸ್ನೇಹ ಹಾಗೂ ಸ್ಥೈರ್ಯಗಳಿಂದ ಕೂಡಿದ ಅವಳ ಸಮರ್ಪಣಭಾವವೂ ಮಾಧವನನ್ನು ತುಷ್ಟಿಗೊಳಿಸಲಿಲ್ಲ. ಅವನು ಮಾತು-ಮಾತಿಗೆ ಸಿಡಿದೇಳುತ್ತಿದ್ದ. ಕೋಪ ಅವನ ಮೂಗಿನ ತುದಿಯಲ್ಲೇ ಇರುತ್ತಿತ್ತು. ಆತನಿಗಾಗಿ ಮಾಡಬೇಕಾದ ಯಾವ ಕೆಲಸದಲ್ಲಿಯೂ ನಿಮಿಷವೂ ಹೊತ್ತಾಗಬಾರದು.

ಅವನನ್ನು ಸಂಜೆಯಲ್ಲಿ ಸುತ್ತಾಡಲು ಹೊರಡಿಸುತ್ತಿದ್ದಳು. ಅವನ ಅಭಿರುಚಿಗೆ ವಿರುದ್ಧವಾಗಿ ಹೇಗೋ ಅಂತೂ ಹೊರಟಾಗ ಇವಳಿಂದ ಮುಂದೆ ಅರ್ಧ ಫರ್ಲಾಂಗ್ ದೂರದಲ್ಲಿ ಅವನು ನಡೆದು ಹೋಗುವುದನ್ನು ಕಾಣಬಹುದಿತ್ತು. ಏನು ? ಇದೇ ಕನಸಿಗಾಗಿ ಅವಳು ಹಾತೊರೆಯುತ್ತಿದ್ದಳೇ ಇಂದಿನ ವರೆಗೂ ? ಎಲ್ಲ ಮನೆಗಳಲ್ಲೂ ಯಜಮಾನರು ನಿವೃತ್ತರಾಗಿ ಮನೆ

ಮಂದಿಯೊಡನೆ ಆರಾಮವಾಗಿ ಹೊಂದಿಕೊಂಡು ಕಾಲಯಾಪನೆ ಮಾಡುತ್ತಿರುತ್ತಾರೆ. ಅವಳಿಗೆ ಪತಿಯ ಬಗ್ಗೆ ಕನಿಕರವೂ ಇತ್ತು. ಮೊದಲು ಕಾಲವೇ ಬೇರೆ ಇತ್ತು. ಅವಿಭಕ್ತ ಕುಟುಂಬವಿರುತ್ತಿತ್ತು. ಪರಿವಾರದವರೆಲ್ಲಾ ಒಟ್ಟಿಗೆ ಇರುತ್ತಿದ್ದರು. ಒಬ್ಬರು ನಿವೃತ್ತಿ ಹೊಂದಿದರೂ, ಮಕ್ಕಳು ಮೊಮ್ಮಕ್ಕಳೊಂದಿಗೆ ಕಾಲ ಕಳೆಯಬಹುದಾಗಿತ್ತು. ಅಲ್ಲದೇ ಕುಟುಂಬದ ಎಷ್ಟೋ ಸಮಸ್ಯೆಗಳು ಅವರುಗಳಿಗೆ ಏಕಾಕಿತನದ ಭಾವನೆ ಬರಲು ಬಿಡುವು ಕೊಡುತ್ತಿರಲಿಲ್ಲ. ಈಗ ಅವಳ ಪತಿಗಾದರೋ ಅಂಥಾದ್ದೇನೂ ಇರಲಿಲ್ಲ. ಮಕ್ಕಳು ಮೊಮ್ಮಕ್ಕಳೊಂದಿಗೆ ವಿದೇಶದಲ್ಲಿದ್ದಾರೆ. ತನ್ನದಾದರೂ ಅಂತಹ ಪರಿಸ್ಥಿತಿಯೇ ತಾನೇ. ಪತಿಗೆ ಇಷ್ಟಾದರೂ ಗಮನ ಬೇಡವೇ – ಜೀವನವೆಲ್ಲಾ ಒಂಟಿಯಾಗಿ ಕಾಯ್ದು ಸಂಸಾರ ನಿಭಾಯಿಸಿದ್ದಾಳೆ.

ಈಗಲಾದರೂ ತಾನು ಶಾಂತವಾಗಿದ್ದು ಅವಳನ್ನು ಸುಖವಾಗಿ ಇರಗೊಡಬೇಕು ಎಂದು. ತಾನು ದುಃಖಿ. ಇಂತಹದೊಂದು ವಿಷಯ ಅಥವಾ ವ್ಯವಹಾರ ತನ್ನನ್ನು ಸಂತಾಪಗೊಳಿಸುತ್ತಿದೆ ಎಂಬುದರ ಸುಳಿವೂ ಪತಿಗೆ ಹತ್ತದಂತೆ ಇತ್ತು ಅವಳ ನಡವಳಿಕೆ. ಅಷ್ಟು ತಡೆಯದೇ ಹೋದಾಗ ಬಚ್ಚಲು ಮನೆಯಲ್ಲೋ, ಹಿತ್ತಲಲ್ಲೋ ಒಂದು ಕ್ಷಣ ಅತ್ತು ಕಣ್ಣೊರೆಸಿಕೊಳ್ಳುತ್ತಿದ್ದಳು. "ಇಂಥ ನಾಜೂಕಾದ ಘಳಿಗೆಯಲ್ಲೇ ಧೈರ್ಯಗೆಟ್ಟರೆ ಹೇಗೆ? ಇಷ್ಟು ಅನುಭವಿಸಿದ್ದಾಗಿದೆ; ಇದೂ ಗೃಹಸ್ಥಾಶ್ರಮದ ಕರ್ತವ್ಯಗಳಲ್ಲೊಂದು ಅಂಗವೇ?" ಎನ್ನುತ್ತೆ ಮನಸ್ಸು. ಪತಿಯ ಮನಃಪ್ರಸನ್ನತೆಗಾಗಿ ದೂರದೇಶದ ಮಕ್ಕಳ ಪ್ರಸ್ತಾಪ ತೆಗೆಯುತ್ತಿದ್ದಳು. "ಎಂಥಾ ಮುದ್ದು ಮಕ್ಕಳು! ಕಿರಣ್ ಬರೆದೂ ಬರೆದೂ ಸುಸ್ತಾದ- ನಮ್ಮನ್ನು ಬರಹೇಳಿ. ಸೊಸೆಯಂತೂ ಸರಿಯೇ ಸರಿ. ಎಷ್ಟು ಗಾಂಭೀರ್ಯ, ಏನು ಕಥೆ! ನಮಗೆ ಸ್ವಲ್ಪ ತಾಪತ್ರಯವಾಗಿದೆ ಅಂದ್ರೂ ಒದ್ದಾಡಿ ಹೋಗ್ತಾಳೆ ಪಾಪ. ನಮಗೆ ಬೇಕೂ ಅನ್ನಿಸಿದಾಗಲೆಲ್ಲ ಓಡಿ ಬರಲು ಸಾಧ್ಯವೇ? ಏನು ತಪ್ಪಿದರೂ ವಾರಕ್ಕೊಂದು ಕಾಗದ ತಪ್ಪಿಲ್ಲ. ದೇವರು ಎಲ್ಲಾದ್ರೂ ಚೆನ್ನಾಗಿಟ್ಟಿರಲಿ, ಅವಳನ್ನು. ಶಶಿ ಅಂತೂ ಅಪ್ಪ, ಅಮ್ಮ ಎಂದರೆ ಪ್ರಾಣ ಬಿಡ್ತಾಳೆ. ನಮ್ಮ ಪುಣ್ಯ ಒಟ್ನಲ್ಲಿ." ಇನ್ನು ಏನೇನೂ ಇದ್ದದ್ದು, ಇಲ್ಲದ್ದು, ಎಲ್ಲ ಸೇರಿಸಿ ಹೇಳಿದ್ದೂ ಹೇಳಿದ್ದೇ. ಅವನು ಮಾತ್ರ ನಿರ್ವಿಕಾರನಾಗಿ ಗೋಡೆ ನೋಡ್ತಾ ಕುಳಿತಿರುತ್ತಿದ್ದ. ಎಂದಾದ್ರೂ ಯಾರಿಗಾದ್ರೂ ಪತ್ರ ಬರೆಯೋದು... ಏನೂ ಇಲ್ಲ. ಬಂದ ಕಾಗದಗಳನ್ನೆಲ್ಲ ಅವಳೇ ಓದಿ ಜವಾಬು ಕೊಡಬೇಕಾಗಿತ್ತು. ಹಾಗೂ ಹೀಗೂ ಓಲಾಡುತ್ತ ದೋಣಿ ದಡ ಮುಟ್ಟಿತು ಅನ್ನೋ— ಹೊತ್ತಿಗೆ ವಿಸ್ಫೋಟವೇ ಆಯಿತು.

ಆ ದಿನದ ಪತ್ರಗಳನ್ನು ಅವಳು ನೋಡಿರಲಿಲ್ಲ. ಮಾಧವನೇ ಸ್ವತ ಓದಿ ಹೇಳಿದ... "ನನ್ನ ಸ್ನೇಹಿತ ಬರೆದಿದ್ದಾನೆ, ನಾಲ್ಕು ದಿನ ಬಂದುಹೋಗು, ಅಂತ. ಏನೋ ಹೊಸ ಫ್ಯಾಕ್ಟರಿ ತೆಗೀತಾನಂತೆ. ಸಹಾಯ ಮಾಡ್ತೀಯಾ? ಅಂತಲೂ ಸೇರಿಸಿದ್ದಾನೆ. ನಾನೂ ಸುಮ್ಮನೇ ಕೂತಿದ್ದೀನಲ್ಲ ಹೇಗೂ, ಏನಂತಿ?"

"ಏನು?" ದಿಙ್ಮೂಢಳಾಗಿ ಕೇಳಿದಳು.

"ಇಷ್ಟು ಗಾಬರಿ ಏಕೆ? ನಾನೇನು ಓಡಿ ಹೋಗ್ತಿದೀನೆಯೇ? ಸ್ನೇಹಿತ ಬಾ ಅಂತ ಕರೆದರೆ ಇಲ್ಲ ಅಂದರೆ ಏನು ಚೆನ್ನ? ಇಲ್ಲಿ ಇದ್ದೂ ಇದ್ದೂ ಕಾಲು ಗಂಟಿಕ್ಕಿ ಹೋಗಿದೆ."

"ನೀವೇ ಹೋದರೆ ಸಾಕು ಅಂತಿದ್ದೀರೇನೋ. ನಂಗೊತ್ತಿಲ್ಲವೇ, ಕಳ್ಳ ಕದ್ದೇ ಹೋಗ್ತಾನೆ. [illegible] ರೋಪವಾಗಲ್ಲ ಅಂತ. ಇಲ್ಲೂ ಒಂದು ವರ್ಷ ಕಾಲ ಹಾಕಿದಿರಿ ಹಾಗೂ ಹೀಗೂ. ಇಷ್ಟಿದ್ದದ್ದೇ ಹೆಚ್ಚು ಅನ್ನಿ."

"ಸರಿ, ನಿನ್ನ ಮಾತು ಬಿಡು. ಹೇಳಿದರೆ ನಿನಗೆ ಅರ್ಥವೇ ಆಗೋಲ್ಲವೇ?"

"ನಾನು ಏನೂ ಅರ್ಥ ಮಾಡಿಕೋಬೇಕಾದ್ದಿಲ್ಲ. ಇಲ್ಲಿ ನಿಮಗೆ ಮನಸ್ಸು ಒಗ್ಗಲ್ಲ. ನಾನೇನು ತೊಂದರೆ ಕೊಟ್ಟೆ ನಿಮಗೆ, ಹೇಳಿ ನೋಡೋಣ."

"ನೀನು ತೊಂದರೆ ಕೊಟ್ಟೆ ಅಂತ ಯಾವಾಗ ಅಂದೆ, ಅಂತ."

"ನಿಮ್ಮಿಷ್ಟ. ನಿಮ್ಮನ್ನು ತಡೆಯೋಕೆ ನಾನು [illegible]," [illegible]

"ಗಂಡಸು ಕೂತು ಕೆಟ್ಟ ಅಂತ ಗಾದೆ.

ಮಾತಕ್ಕೂ ಎಂದೂ ತಡೆಯದೇ ಇದ್ದೋಳು ಈ ನಾಲ್ಕು ದಿನಕ್ಕೆ ಯಾಕೆ ಹೀಗೆ ಒದ್ದಾಡ್ತಿ?".

ನಾಲ್ಕು ದಿನ ಹೋಗಿ ಬಂದರೇನು ತಪ್ಪು? ಹೋಗಲಿ—ಎಂದು ಸಮಾಧಾನ ಮಾಡಿಕೊಂಡಳು. ಹಿಂದೆಲ್ಲಾ ಸುತ್ತಿ ಸುತ್ತಿ ಬೆಟ್ಟ ಹತ್ತಿದೆ. ಈಗ ಮನೆಯಲ್ಲೇ ಗೂಟ ಹಿಡ್ಕೊಂಡು ಕೂತಿರು ಅಂದ್ರೆ ಸಾಧ್ಯವೇ? ಹುಚ್ಚಿ ನಾನು. ಸುಮ್ಮಗೆ ಹೆದರಿಕೊಂಡೆ... ಅಂದುಕೊಂಡು ಕಣ್ಣೊರೆಸಿಕೊಳ್ಳುತ್ತ ಕೇಳಿದಳು, "ಯಾವಾಗ ಬರ್ತೀರಿ ವಾಪಸ್ಸು?"

"ಒಂದು ವಾರ ಅಬ್ಬಬ್ಬಾಂದ್ರೆ! ಸ್ನೇಹಿತ ಬಿಡ್ತಾನೋ ಇಲ್ಲೋ. ಇಷ್ಟು ದಿನಗಳ ನಂತರದ ಭೇಟಿ. ಜಯಂತ್ ಗೊತ್ತಿಲ್ವೇ ನಿನಗೆ. ಯಾರ ಹತ್ತಿರ ಜಗಳ ಆದ್ರೂ ಇವನ ಹತ್ತಿರ ಮಾತ್ರ ಜಗಳ, ಕದನ ಒಂದು ತೃಣ ಇಲ್ಲ. ಅಂತಹ ಸ್ನೇಹ. ಒಂದು ಪ್ರಾಣ, ಎರಡು ದೇಹ ಅಂತಾರಲ್ಲ ಹಾಗೆ."

ಆ ರಾತ್ರಿಯೆಲ್ಲಾ ಸ್ನೇಹಿತನ ಪ್ರವರವನ್ನೇ ಪ್ರಸನ್ನಚಿತ್ತಳಾಗಿ ಕೇಳಿದಳು. "ನಿಜ. ಗಂಡಸ್ರು ಕೂತು ಕೂತು ಬೆಂಡಾಗಿ ಹೋಗ್ತಾರೆ. ನನ್ನ ವಿವೇಚನೆಗಿಷ್ಟು!" ಅಂದೇ ರಾತ್ರಿ ಅವನ ರಸ್ತೆ ಪ್ರಯಾಣಕ್ಕೆ, ಮಿತ್ರ ಪರಿವಾರಕ್ಕೆಂದು ತಿಂಡಿ ತಿನಿಸುಗಳು ತಯಾರಾದುವು. ಮುಂಜಾನೆ ನಗು ನಗುತ್ತಾ ಪತಿಯನ್ನು ಕಳಿಸಿಕೊಟ್ಟಳು.

ಮಾಧವ ಸುಖವಾಗಿ ತಲುಪಿದ್ದಕ್ಕೆ ಮೂರನೇ ದಿನವೇ ಪತ್ರ ಬಂತು. "ಶೀಘ್ರದಲ್ಲೇ ಹಿಂತಿರುಗುವೆ. ಮಿಕ್ಕ ವಿಚಾರ ಮುಖತಃ," ಎಂದಿತ್ತು. ಕಾಗದ ಓದಿ ಅವಳು. "ಮನೆ ಊಟದ ರುಚಿ ಹತ್ತಿದೆ. ಬರದೇ ಏನ್ಮಾಡ್ತಾರೆ? ಯಾವ ಗಂಡನಿಗೆ ಮನಸ್ಸು ಬರುತ್ತೆ, ಹೀಗೆ ಒಂಟಿಯಾಗಿ ಹೆಂಗಸನ್ನು ಬಿಟ್ಟು ಹೋಗುವುದಕ್ಕೆ. ಮಕ್ಕಳಿದ್ದಾಗ—ಅಂತೂ ಬೇರೆ ವಿಷಯ," ಗರ್ವದಿಂದ ಹೇಳಿಕೊಂಡಳು.

ಮಾಧವ ತನ್ನ ಹೇಳಿಕೆಯಂತೆ ಶೀಘ್ರವೇ ಹಿಂದಿರುಗಿದ. ತಾನು ಹೇಳಿದ್ದ ತಾರೀಖಿಗಿಂತ ಮುಂಚಿತವಾಗಿಯೇ ಬಂದಿದ್ದರಿಂದ ಅವಳು ಸಡಗರದಿಂದ ಮನೆ ತುಂಬ ಓಡಾಡಿದಳು. ಅಡಿಗೇ ಮನೇಲೇ ಸೇರ್ಕೊಂಡು ಬೇಯಿಸಿದ್ದೂ ಬೇಯಿಸಿದ್ದೇ, ಕರಿದದ್ದೂ ಕರಿದದ್ದೇ. ಮನಸ್ಸಿನಲ್ಲೇ ಅಂದುಕೊಳ್ಳುತ್ತಲೂ ಇದ್ದಳು... "ಇಬ್ಬರಿಗೂ ವಯಸ್ಸಾಯ್ತು. ಇನ್ನು ಮೇಲೆ ತುಪ್ಪ, ಎಣ್ಣೆ ಎಲ್ಲಾ ಕಡಿಮೆ ಮಾಡಿ ಮಿತವಾದ ಆಹಾರ ಅಭ್ಯಾಸ ಮಾಡಬೇಕು. ಒಳ್ಳೇ ಆಹಾರ ನೋಡ್ಕೊಂಡ್ರೆ, ಸಾಲದು. ವ್ಯಾಯಾಮ, ಓಡಾಟ, ಎಲ್ಲ ಇದ್ದರೇ ಉತ್ತಮ. ಮನೇಲೂ ಇದ್ದದ್ದರಲ್ಲೇ ಅಚ್ಚುಕಟ್ಟು ಮಾಡ್ತಿದ್ದರೆ ಶಾರೀರಿಕ ಶ್ರಮದ ಅವಶ್ಯಕತೆಯೂ ಪೂರೈಸುತ್ತೆ."

ಊಟ ಮಾಡಿ ಜಗುಲಿ ಮೇಲೆ ಕುಳಿತಾಗ ಅವನು ತನ್ನ ಮಿತ್ರ ಪರಿವಾರದವರ ವಿಷಯಗಳನ್ನೆಲ್ಲಾ ಹೇಳಿದ. ನಡುವೆಯೇ ತೀರ ಸಾಧಾರಣ ವಿಷಯವೆನ್ನುವಂತೆ, "ನನ್ನ ಸ್ನೇಹಿತನ ಜೊತೆ ಇನ್ನೂ ಸ್ವಲ್ಪ ದಿನ ಇರೋಣಾಂತಿದ್ದೀನಿ," ಅಂತಲೂ ಸೇರಿಸಿದ. "ಸ್ನೇಹಿತ ಹೊಸ ಇಂಡಸ್ಟ್ರೀ ತೆಗೆದು ನನ್ನನ್ನು ಮ್ಯಾನೇಜರ್ ಆಗಿ ಮಾಡಿದ್ದಾನೆ. ಈ ವಯಸ್ಸಿನಲ್ಲಿ ಇಷ್ಟರ ಮಟ್ಟಿಗೆ ಕೆಲಸ ಸಿಗೋದೂಂದ್ರೆ ಸಾಮಾನ್ಯವೇ? ಕೆಲಸ ಮಾಡಿದರೆ ದುಡ್ಡೂ ಬರುತ್ತೆ. ಸ್ನೇಹಿತನೂ ನಾನೂ ರಿಟೈರಾಗೋದೇ ಕಾಯ್ತಾ ಇದ್ದನಂತೆ. ನನಗೂ ಅದೇ ಬೇಕಾಗಿತ್ತು."

"ಅಲ್ಲ, ನೀವು ಹೇಳ್ತಿದ್ರಿ..." ಮಾತು ಮುರಿದು ಕೇಳಿದಳು.

"ಹೇಳ್ತಿದ್ರಿ ಅಲ್ಲ. ಹೇಳೋಕೆ ಸಾಹಸ ಪಡ್ತಿದ್ದೆ. ಆದರೆ ಧೈರ್ಯ ಬರ್ತಾ ಇರಲಿಲ್ಲ. ನಿನ್ನ ಪ್ರತಿಯೊಂದು ಸೇವೆಯನ್ನೂ ಅನುಭವಿಸ್ತಾ ಇದ್ದೆ ನಿಜ. ಆದರೂ ಈ ವಾತಾವರಣಕ್ಕೆ ನನ್ನ ಮನಸ್ಸು ಒಗ್ಗಲಿಲ್ಲ ಅಂತ ಯಾವ ಬಾಯಲ್ಲಿ ಹೇಳಲಿ. ಎಲ್ಲಾ ಅಭ್ಯಾಸಬಲ. ನೀನೇ ಹೇಳಿದೆ ಅವತ್ತು. "ಕಳ್ಳ ಕದ್ದೇ ಹೋಗ್ತಾನೆ" ಅಂತ. ಅದರ ಮರ್ಮ ಇವತ್ತು ನನಗೆ ಅರಿವಾಗುತ್ತಾ ಇದೆ. ನನ್ನಿಂದ ಸುಮ್ಮನೆ ಕೂರಲು ಸಾಧ್ಯವಿಲ್ಲ ಪದ್ಮಾ. ಇವತ್ತು ನಿನಗೆ ಎಲ್ಲಾ ಹೇಳಿಬಿಡ್ತೀನಿ. ನಾನೇ ಸ್ನೇಹಿತನಿಗೆ ಕಾಗದ ಬರೆದಿದ್ದೆ ಏನಾದ್ರೂ ಶುರು ಮಾಡು; ನನ್ನ ಕೈಲಾದ ಸಹಾಯ ಮಾಡ್ತೀನಿ. ನನಗೆ ಕೆಲಸ, ಸಂಬಳ ಎರಡೂ ಇದ್ದ ಹಾಗಾಗುತ್ತೆ ಅಂತ.

"ಕೆಲಸವಿಲ್ಲದೇ ಖಾಲಿ ಕುಳಿತಿದ್ದರೆ ಮುಚ್ಚೇ ಬಿಡ್ತಿದ್ದೆ. ಬಿಡುತ್ತೇನೋ. ಆದ್ರೆ [illegible] ನನಗೆ ಸಾಧ್ಯವಾಗುತ್ತಿತ್ತೇ ಪದ್ಮಾ? ತಿರುಗಿ ಬರದೇ

ಇರೋ ಹಾಗೇನೂ ಹೋಗ್ತಾ ಇಲ್ಲ ನಾನು. ಅಲ್ಲಿ ಮನಸ್ಸು ಒಪ್ಪದಿದ್ರೆ ಇಲ್ಲಿಗೇ ಬರ್ತೀನಿ. ಇಲ್ಲಿ ಮನೆ, ಸಂಸಾರ ಎಲ್ಲಾ ಇದ್ದೇ ಇರುತ್ತೆ. ಆದರಿಂದಲೇ ನಿನ್ನನ್ನು ಕರ್ಕೊಂಡು ಹೋಗ್ತಾ ಇಲ್ಲ. ನೀನು ಜೊತೇಲಿದ್ರೆ ಬೇರೆ ಮನೆ ಮಾಡ್ಬೇಕು. ಈಗಿನ ಕಾಲದ ಬಾಡಿಗೆ ವಿಚಾರ ಗೊತ್ತೇ ಇದೆಯಲ್ಲ. ಜಯಂತ್ ನನಗೆ ಮನೆ ಕೊಡೋಕೆ ಸಾಧ್ಯವಿಲ್ಲ ಸದ್ಯಕ್ಕೆ ಅಂದಿದ್ದಾನೆ. ಹಾಗಂತ ನನಗೆ ಹೋದಸಲೇ ಬರೆದೂ ಇದ್ದ ಅನ್ನು.

"ಪದ್ಮಾ, ನೀನು ನನಗೇಂತ ಎಷ್ಟು ತ್ಯಾಗ ಮಾಡಿದ್ದೀ ಅಂತ ನನಗೇನೂ ಗೊತ್ತಿಲ್ಲಾ ಅಂದುಕೋಬೇಡ. ಆದರೆ ನನ್ನ ಸುಖಕ್ಕಾಗಿ, ಈಗಲೂ ಧೈರ್ಯ ಹೇಳಿ ನೀನು ನನ್ನನ್ನು ಕಳಿಸು. ನನ್ನ ಮನಸ್ಸು ಚಿನ್ನ ಹೇಳ್ತಿದೆ. ನೀನು ಎಂದಿಗೂ ಹಿಂದೆಗೆಯುವುದಿಲ್ಲ ಅಂತ ನನಗೆ ಗೊತ್ತು. ಅಯ್ಯೋ! ನಿನ್ನ ಬಿಟ್ಟು ಹೇಗಾದರೂ ಹೋಗಲೋ. ತಿಳೀತಾ ಇಲ್ಲ......"

ಇಷ್ಟು ವರ್ಷಗಳ ನಂತರ ಮಾಧವ ಹೆಂಡತಿಯ ಕೈಗಳನ್ನು ಒತ್ತಿ ಹಿಡಿದಿದ್ದ, ಹತ್ತಿರ ಕುಳಿತು. ಇಷ್ಟು ಕಾಲದ ನಂತರ ಅವನ ಬಾಯಿಂದ, "ಪದ್ಮಾ" ಎಂಬ ಪ್ರೀತಿಯ ಕರೆಯನ್ನೂ ಕೇಳಿದ್ದಳು ಅವಳು. ಎಷ್ಟೋ ವರ್ಷಗಳಿಂದ ಪತಿ ಪತ್ನಿಯರ ಸಂಬಂಧ ಹೆಚ್ಚು ಕಡಿಮೆ ಕಡಿದೇ ಹೋಗಿತ್ತೆಂದರೂ ಈ ಹೊತ್ತಿನ ಈ ಕ್ಷಣದಲ್ಲಿ ಅವಳಿಗೆ ತಾನು ಅಂದು ಕೊಂಡಷ್ಟು ತನ್ನ ಕಾವು ತಣ್ಣಗಾಗಿಲ್ಲವೆಂದು ಅನ್ನಿಸಿತ್ತು.

ಪತಿಯ ಮಾತುಗಳೇ ಅವಳಿಗೆ ಸಮಾಧಾನ ನೀಡಿದ್ದವೋ ಅಥವಾ ಅಥವಾ ಅವಳ ಪತಿಯ ಮೇಲಿನ ಪ್ರೀತಿಯೇ ಅವಳನ್ನು ಈ ತ್ಯಾಗಕ್ಕಾಗಿ ಉತ್ತೇಜಿಸಿತ್ತೋ ಅಥವಾ ಪತಿಯ ಸಂತೋಷವೇ ತನ್ನ ಸಂತೋಷವೆಂಬ ಅವಳ ನಂಬಿಕೆಯೇ ಅವಳನ್ನು ಸಮ್ಮೋಹಗೊಳಿಸಿತ್ತೋ ಗೊತ್ತಿಲ್ಲ. ಅವನ ಪ್ರತಿ ಮಾತಿಗೂ ಅವಳು ಒಪ್ಪಿಗೆ ನೀಡುತ್ತಿದ್ದಳು.

ಪತಿ ಹೇಳುತ್ತಲೇ ಇದ್ದ: "ನಾನೊಂದು ಗೊಡ್ಡಾಗಿ ಕೂತಿರಲಾರೆ ಪದ್ಮಾ ...ನಿಂಗೊತ್ತೇ ಇದೆ... ದುಡ್ಡೂ......"

ಮಾಧವ ತಲೆಯೆತ್ತಿ ನೋಡಿದಾಗ ಅವಳ ಕಣ್ಣಾಲಿಗಳು ತುಂಬಿದ್ದವು. ಅವಳು ಕೂಡ ಹೇಳೋಣ ವೆಂದುಕೊಂಡಳು: "ದುಡ್ಡು, ದುಡ್ಡು, ನನಗೆ ದುಡ್ಡು ಬೇಡ. ನಿಮ್ಮ ಜೊತೆ ಸಹಬಾಳ್ವೆ..." ಅವಳ ಗಂಟಲಿನಲ್ಲಿ ಒಳಗೇ ಯಾರೋ ಅದುಮಿ ದಂತಾಯಿತು.

ಮಾಧವನಿಗೆ ಅರಿವಾದದ್ದು ಅವಳ ಕಣ್ಣೀರು ಮಾತ್ರ. "ನೀನು ಅಳ್ತಾ ಇದ್ದೀಯಾ, ಪದ್ಮಾ."

"ಇಲ್ಲವಲ್ಲಾ" ಅವಳ ಸ್ವರ ತುಂಬಿ ಬಂದಿತ್ತು. ಅವಳ ಕಣ್ಣೀರಿನ ಅರಿವು ಅವಳಿಗೇ ಇದ್ದಂತಿರಲಿಲ್ಲ.

ಪತಿಯ ಉದ್ದನೆಯ ಭಾಷಣವನ್ನು ಕೇಳುತ್ತ ಸುಮ್ಮನೆ ಕುಳಿತೇ ಇದ್ದಳು. ಇಷ್ಟು ದಿನಗಳಿಂದ ಅವಳು ಪೋಷಿಸಿಕೊಂಡು ಬಂದಿದ್ದ ಅವಳ ಕನಸಿನ ಗೂಡು ಈಗ ನುಚ್ಚು ನೂರಾಗಿ ಬಿದ್ದಿತ್ತು. ಕೇವಲ ಒಂದು ಚಿತ್ರ ಮಾತ್ರ ಅವಳ ಮನಃಪಟಲದ ಮುಂದೆ ಮೂಡಿ ಬಂತು. ತನ್ನ ಇಬ್ಬರು ಮಕ್ಕಳ ಪತ್ರಗಳಲ್ಲದೆ ಮೂರನೆಯದೊಂದು ಪತ್ರದ ಕೆಲವು ಪಂಕ್ತಿಗಳಿಗಾಗಿ ಕಾಯುತ್ತ ಕುಳಿತ ಚಿತ್ರ, ಚಿಂತಾಗ್ರಸ್ತ ನಾರಿಯ ಚಿತ್ರ...

ಈ ನಿರೀಕ್ಷೆಯೇನು ಅವಳಿಗೆ ಅಷ್ಟು ಕಷ್ಟವಾಗು ವಂತಹುದೇ? ಹಾಗೆ ನೋಡಿದರೆ ಅವಳೀಗ ನಿವೃತ್ತಳಾದ ಹೆಂಗಸೇ...ಯಾವ ವಿಧವಾದ ಕರ್ತವ್ಯ ಬಾಧೆಗಳೂ ಇಲ್ಲದ ಅವಳಿಂದ ನಿರೀಕ್ಷೆ ಸಾಧ್ಯ.

ಅವಳಿಂದ ಅವನಿಗೆ ಮುಕ್ತಿ ದೊರೆತಿತ್ತು. ✡

ದೇವಾ! ನಾವು ಸಮಸ್ಯೆಯ ಅಂಗವಾಗದೆ ಸಮಸ್ಯೆಯ ಪರಿಹಾರವಾಗುವಂತೆ ಮಾಡುವುದರ ಮೂಲಕ ನಮ್ಮನ್ನೆಲ್ಲಾ ಕರುಣಿಸಯ್ಯಾ!

—ಪೀಟರ್ ಮಾರ್ಷಲ್

ಪಿಯಾಕ್ಷಟ್ಲ ದಾರಿದೀಪ

ಡಾ. ಎಚ್. ಡಿ. ಚಂದ್ರಪ್ಪಗೌಡ

ಏಶಿಯ, ಆಫ್ರಿಕ ಮತ್ತು ದಕ್ಷಿಣ ಅಮೇರಿಕಗಳಲ್ಲಿಯ ಹಿಂದುಳಿದ ಭಾಗಗಳಿಗೆ ಅಸ್ವಾಸ್ಥ್ಯವೆಂದರೆ ಅದೊಂದು ದೈವೀ ಶಾಪ. ಅದರ ನಿವಾರಣೆಗೆ ಅಡ್ಡ ಬರುವುದು ಅಜ್ಞಾನ, ಬಡತನ. ಆದರೆ ಎಂಥ ಕಗ್ಗತ್ತಲಲ್ಲೂ ಆಶೆಯ ಕಿರಣವೊಂದು ಹೊಳೆಯುವಂತೆ ವೈದ್ಯನಲ್ಲದ ವೈದ್ಯನೊಬ್ಬ ಮಾಡಿದ ಫಲದಾಯಕ ಪ್ರಯತ್ನ ಜಗತ್ತಿನ ಗಮನ ಸೆಳೆದಿದೆ. ಆವನ ಪ್ರಯತ್ನದ ಹಿರಿಮೆಯನ್ನರಿತ ಈ ಲೇಖನದ ಲೇಖಕ ಕರ್ನಾಟಕ ಸರಕಾರದ ಸೇವೆಯಲ್ಲಿ ಜಿಲ್ಲಾ ಸರ್ಜನ್ ಆಗಿ ಹೊಣೆ ನಿರ್ವಹಿಸುತ್ತಿರುವಂಥವರು.

ಡೇವಿಡ್ ವರ್ನರ್ ೪೭ ವರ್ಷದ ಅಂಗವಿಕಲ. ಜೀವಶಾಸ್ತ್ರದ ಪದವೀಧರ. ಪ್ರಕೃತಿ ಸೌಂದರ್ಯದ ಆರಾಧಕ. ವನ್ಯಪಕ್ಷಿ ವೀಕ್ಷಣೆ ಹಾಗೂ ಅವುಗಳ ಚಿತ್ರ ರಚನೆ ಆತನ ಹವ್ಯಾಸ.

ಒಮ್ಮೆ ಮೆಕ್ಸಿಕೋದ ಪಶ್ಚಿಮದ ಬೆಟ್ಟಗುಡ್ಡಗಳಲ್ಲಿ ವರ್ನರ್ ತನ್ನ ಹವ್ಯಾಸದ ಬೆನ್ನು ಹತ್ತಿ ತಿರುಗಾಡುತ್ತಿದ್ದ. ಒಂದು ರಾತ್ರಿ ಹಾದಿಯ ಪಕ್ಕದ ಗುಡಿಸಲೊಂದರಲ್ಲಿ ತಂಗಬೇಕಾಯಿತು. ಚಿಕ್ಕಪುಟ್ಟ ಮಕ್ಕಳೂ ಸೇರಿದಂತೆ ಏಳು ಜನರಿದ್ದ ಆ ಗುಡಿಸಲಿನ ಕುಟುಂಬದವರು ಅವನನ್ನು ಆತ್ಮೀಯವಾಗಿ ಸ್ವಾಗತಿಸಿದರು. ಕಡುಬಡವರಾಗಿದ್ದರೂ, ಅವರಲ್ಲಿದ್ದ ಎರಡು ಮೊಟ್ಟೆಗಳ ಆತಿಥ್ಯವನ್ನು ಅವನಿಗೆ ನೀಡಿ, ಮಧ್ಯಾಹ್ನ ಉಳಿದಿದ್ದ ಜೋಳದ ಹಿಟ್ಟು ಮತ್ತು ಹುರುಳಿಕಾಯಿಯನ್ನು ತಾವು ತಿಂದು ಮಲಗಿದರು. ಅವರಲ್ಲಿದ್ದ ಎರಡು ಕಂಬಳಿಗಳು ರಾತ್ರಿಯ ಚಳಿಯನ್ನು ತಡೆಯಲಿಲ್ಲ. ಎರಡು ಗಂಟೆಗೇ ಎದ್ದು ಬೆಂಕಿ ಕಾಯಿಸಬೇಕಾಯಿತು.

ಆ ಸಂಸಾರದ ದಾರುಣ ಪರಿಸ್ಥಿತಿಯ ಪೂರ್ಣ ಪರಿಚಯ ಬೆಳಗಾದ ಮೇಲಾಯಿತು. ಮಗುವೊಂದರ ಕಾಲು ಬಾತುಕೊಂಡಿತ್ತು. ಹುಣ್ಣಿನಿಂದ ಕೀವು ಸುರಿಯುತ್ತಿತ್ತು. ಇನ್ನೆರಡು ಮಕ್ಕಳ ಕುತ್ತಿಗೆಯಲ್ಲಿ ಥೈರಾಯಿಡ್ ಗ್ರಂಥಿಗಳ ಗಡ್ಡೆಗಳಿದ್ದ ವಿಕಾರ ರೂಪ. ನ್ಯೂನ ಪೋಷಣೆಯ

ಅಸ್ಥಿಪಂಜರದ ಹಂದರ ಅವರೆಲ್ಲರದು. ಅವರ ಅಸಹಾಯಕ ಪರಿಸ್ಥಿತಿ ವರ್ನರನ ಮನಸ್ಸ ಕರಗಿಸಿತು. ಜೀವಶಾಸ್ತ್ರದ ಪರಿಚಯವಿದ್ದುದರಿಂದ ಆ ಮಕ್ಕಳ ರೋಗಗಳ ಸೂಕ್ಷ್ಮ ಪರಿಚಯ ಅವನಿಗಾಯಿತು. ಸಾಮಾನ್ಯ ಔಷಧೋಪಚಾರಗಳಿಗೆ ಅವು ಮಣಿಯುವಂತಹವು. ಆದರೆ ಆ ದುರ್ಗಮ ಪ್ರದೇಶದಲ್ಲಿ ಔಷಧಿಗಳಾಗಲಿ, ವೈದ್ಯರಿಗಾಗಲಿ ಎಲ್ಲಿಂದ ಬರಬೇಕು? ಆ ಕಾಯಿಲೆಗಳಿಗೆ ಬೇಕಾಗುವ ಮದ್ದು ಮತ್ತು ಐಯೋಡಿನ್ ಬೆರೆತ ಉಪ್ಪನ್ನು ತಾನೇ ಏಕೆ ಒದಗಿಸುವ ಪ್ರಯತ್ನ ಮಾಡಬಾರದೆಂದೆನಿಸಿತು, ವರ್ನರನಿಗೆ.

ಕೃತನಿಶ್ಚಯನಾಗಿ ವರ್ನರ್, ಆ ದಿನವೇ ಊರಿಗೆ ಹಿಂದಿರುಗಿದ. ತನ್ನಲ್ಲಿದ್ದ ಹಲವಾರು ಪಕ್ಷಿಗಳ ಚಿತ್ರಪಟಗಳನ್ನು ಮಾರಿ, ಕೆಲವು ಔಷಧ ಸಾಮಗ್ರಿಗಳನ್ನು ಕೊಂಡು ಆ ಗುಡಿಸಲಿದ್ದ ಪ್ರದೇಶಕ್ಕೆ ಧಾವಿಸಿದ. ತನಗೆ ಆಶ್ರಯವಿತ್ತ ಗುಡಿಸಲಿನವರೇ ಅಲ್ಲದೇ ಸಾಮಾನ್ಯ ಕಾಯಿಲೆಗಳಿದ್ದ ಇತರರಿಗೂ ತನಗೆ ಗೊತ್ತಿದ್ದ ಔಷಧೋಪಚಾರ ಮಾಡಿದ. ಒಂದು ತಿಂಗಳು ಸುತ್ತುಮುತ್ತಲ ಪ್ರದೇಶದಲ್ಲಿ ತಿರುಗಾಡಿ ಆ ಜನರ ಆರೋಗ್ಯದ ಬಗೆಗೆ ಅಭ್ಯಸಿಸಿದ. ಅದು ಬಡತನದ ತವರು ಮನೆ. ರೋಗ–ರುಜಿನುಗಳ ಉಗ್ರಾಣ. ವ್ಯವಸ್ಥಿತ ವೈದ್ಯಕೀಯ ಸಹಾಯದ ಸುಳಿವೂ ಅಲ್ಲಿಲ್ಲ.

ಪಿಯಾಕ್ಷಟ್ಲ ಯೋಜನೆ

ಆ ಪ್ರದೇಶದ ಜನರಿಗೆ ಕನಿಷ್ಠಮಟ್ಟದ ವೈದ್ಯಕೀಯ ಸೌಲಭ್ಯವಾದರೂ ದೊರೆಯಬೇಕೆಂದು ಪಣ ತೊಟ್ಟು ವರ್ನರ್ ಮತ್ತೆ ಪಟ್ಟಣಕ್ಕೆ ಹಿಂದಿರುಗಿದ. ಅವರು ಅನುಭವಿಸುತ್ತಿದ್ದ ಕಾಯಿಲೆಗಳ ಬಗೆಗೆ ಹೆಚ್ಚು ಹೆಚ್ಚಾಗಿ ತಿಳಿದುಕೊಂಡ. ಸ್ನೇಹಿತರು ಮತ್ತು ಹಿತೈಷಿಗಳ ಸಹಾಯದಿಂದ ಇನ್ನಷ್ಟು ಔಷಧಿಗಳನ್ನು ಖರೀದಿಸಿ ಮತ್ತೆ ಅಲ್ಲಿಗೆ ಪ್ರಯಾಣ ಬೆಳೆಸಿದ. ಈ ಸಾರಿ ಒಂದು ವರ್ಷ ಅಲ್ಲಿ ನಿಲ್ಲುವ ಯೋಜನೆ. ಅಲ್ಲಿಯ ಪರಿಸರದ ನೈರ್ಮಲ್ಯಕ್ಕೆ ಆದ್ಯ ಗಮನ. ಕಾಯಿಲೆಗಳು ಹರಡುವ ರೀತಿ, ಅವುಗಳನ್ನು ಪ್ರತಿಬಂಧಿಸುವ ಬಗೆ ಮತ್ತು ಅವುಗಳ ಚಿಕಿತ್ಸೆಯ ಬಗೆಗೆ ಜನರಿಗೆ ತಿಳುವಳಿಕೆ, ಅನಾದಿಯಿಂದಲೂ ಬಳಕೆಯಲ್ಲಿದ್ದ ಮದ್ದುಗಳ ಸತ್ವಪರೀಕ್ಷೆಯ ಪ್ರಯೋಗ, ಅವು ಪರಿಣಾಮಕಾರಿಯಾಗದಿದ್ದಲ್ಲಿ ಆಧುನಿಕ ಔಷಧಿಗಳ ಬಳಕೆ – ಈ ಎಲ್ಲಾ ಕಾರ್ಯಗಳಲ್ಲೂ ಅಲ್ಲಿಯ ಜನರು ಸಕ್ರಿಯವಾಗಿ ಭಾಗವಹಿಸುವಂತೆ ಅವರನ್ನು ಪ್ರೋತ್ಸಾಹಿಸುವುದು ಹೀಗೆ ಯೋಜನೆಯನ್ನು ಹಾಕಿಕೊಂಡ. ಇದೇ "ಪಿಯಾಕ್ಷಟ್ಲ ಯೋಜನೆ"ಗೆ ನಾಂದಿಯಾಯಿತು. ಅಲ್ಲಿ ಹರಿಯುತ್ತಿದ್ದ ಪಿಯಾಕ್ಷಟ್ಲ ನದಿಯ ಸಲುವಾಗಿ ಆ ಹೆಸರು. ಸುಮಾರು ಐದು ಸಾವಿರ ಚದರ ಮೈಲಿ ಪ್ರದೇಶದ ಹದಿನೈದು ಸಾವಿರಕ್ಕೂ ಹೆಚ್ಚು ಗುಡ್ಡಗಾಡಿನ ಜನರಿಗೆ ಅದರಿಗೆ ಉಪಕಾರ.

ಪಿಯಾಕ್ಷಟ್ಲ ಯೋಜನೆಯು ಆರಂಭವಾದ ಕೆಲ ವರ್ಷಗಳಲ್ಲಿಯೇ ಅಲ್ಲಿ ಜನರಿಂದಲೇ ನಡೆಸಲ್ಪಡುವ ಸುಸಜ್ಜಿತ ಆರೋಗ್ಯ ಕೇಂದ್ರದ ಸ್ಥಾಪನೆ. ಹಳ್ಳಿಗಳಿಂದ ರೋಗಿಗಳನ್ನು ಅಲ್ಲಿಗೆ ಕರೆತರುವ ಏರ್ಪಾಟಾಗಿದೆ. ರೋಗ ನಿರ್ಣಯಕ್ಕಾಗಿ ಪ್ರಯೋಗಶಾಲೆ, ಎಕ್ಸ್‌ರೇ ಮುಂತಾದ ಅನುಕೂಲಗಳೂ ಈಗ ಅಲ್ಲಿ ಲಭ್ಯವಿವೆ. ಕೇಂದ್ರದಲ್ಲಿ ದಂತಚಿಕಿತ್ಸೆ, ಪ್ರಸೂತಿ ಕಾರ್ಯ, ಚಿಕ್ಕಪುಟ್ಟ ಶಸ್ತ್ರಚಿಕಿತ್ಸೆ, ರೋಗನಿರೋಧಕ ಕಾರ್ಯಕ್ರಮ ಇತ್ಯಾದಿ ನಡೆಯುತ್ತಿವೆ. ಕ್ಲಿಷ್ಟವಾದ ಕಾಯಿಲೆಗಳಿದ್ದವರನ್ನು ದೂರದ ಪಟ್ಟಣದ ಆಸ್ಪತ್ರೆಗೆ ಕಳುಹಿಸಲಾಗುತ್ತಿದೆ. ಒಮ್ಮೊಮ್ಮೆ ಪಟ್ಟಣದಿಂದ ತಜ್ಞ ವೈದ್ಯರೂ ಕೇಂದ್ರಕ್ಕೆ ಭೇಟಿ ಕೊಟ್ಟು ಸಲಹೆ ನೀಡುವುದೂ ಉಂಟು. ಆದರೆ ಅವರು ಅಲ್ಲಿ ಚಿಕಿತ್ಸೆ ಮಾಡುವಂತಿಲ್ಲ. ಅಲ್ಲಿಯ ಎಲ್ಲಾ ಕಾರ್ಯಗಳೂ ಕೇಂದ್ರದ ಕಾರ್ಯಕರ್ತರಿಂದಲೇ ನಡೆಯಬೇಕೆಂಬ ಶಿಸ್ತು. ಮುಗ್ಧ ಹಳ್ಳಿಗರು ಜಟಿಲ ಚಿಕಿತ್ಸಾ ಕ್ರಮಗಳನ್ನು ಜಾಣ್ಮೆಯಿಂದ ನಡೆಸುತ್ತಿರುವುದು ಆಶ್ಚರ್ಯವೇ ಸರಿ. ಶಾಲಾ ಮಕ್ಕಳು ಸಹ ನ್ಯೂನ ಪೋಷಣೆಯ ಚಿಹ್ನೆಗಳನ್ನು ಗುರುತಿಸುವಲ್ಲಿ ಪ್ರವೀಣರಾಗುತ್ತಿದ್ದಾರಂತೆ. ಪುಟ್ಟ ತಂಗಿಗೆ ಅತಿಸಾರವಾಗುತ್ತಿದ್ದರೆ ಮನೆಯಲ್ಲೇ ದೊರೆಯುವ ಸಾಮಗ್ರಿಗಳಿಂದ

"ಮರು ನೀರ್ಗೂಡಿಕೆಯ ದ್ರಾವಣ"ವನ್ನು (Oral Rehydration Solution) ಅಣ್ಣ ತಯಾರಿಸಿ ಕೊಡಬಲ್ಲ. ಇವೆಲ್ಲ ಅಲ್ಲಿಯ ಆರೋಗ್ಯ. ಶಿಕ್ಷಣ ಪ್ರಸಾರದ ಪರಿಣಾಮ ಎನ್ನಬಹುದು. ಯೋಜನೆಯ ಆರಂಭದಲ್ಲಿ ಡೇವಿಡ್ ವರ್ನರ್ ಅಲ್ಲಿಯ ಕಾರ್ಯಕ್ರಮಗಳ ಅಧ್ವರ್ಯುವಾಗಿದ್ದರೂ, ಈಗ ಜವಾಬ್ದಾರಿಯನ್ನೆಲ್ಲಾ ಅಲ್ಲಿಯ ಜನರಿಗೇ ಬಿಟ್ಟು ತನ್ನ ಅನುಭವವನ್ನು ಇತರ ಕಡೆ ಪ್ರಚಾರ ಮಾಡುತ್ತಿದ್ದಾನೆ.

ವೈದ್ಯರಿಲ್ಲದೆಡೆಯಲ್ಲಿ

ಡೇವಿಡ್ ವರ್ನರ್, ಪಿಯಾಕ್ಷ್ಟ್ಲ ಪ್ರಯೋಗದಿಂದ ಘಟ್ಟಿಯಿಳಿಸಿದ ಗ್ರಂಥದ ಹೆಸರು ಇದು (Where there is no Doctor). ಸ್ಪಾನಿಷ್ ಭಾಷೆಯ ಅಪಭ್ರಂಶ ರೂಪದ ಗುಡ್ಡಗಾಡಿನವರ ದೇಶೀ ನುಡಿಯಲ್ಲೇ ವರ್ನರ್ ಅದನ್ನು ಮೊದಲು ಬರೆದದ್ದು. ಅನಕ್ಷರಸ್ಥರಿಗೂ ಅರ್ಥವಾಗುವಂತಹ ಸರಳ, ಸಚಿತ್ರ ವಿವರಣೆ. ೧೯೭೭ರಲ್ಲಿ ಇಂಗ್ಲೀಷ್ ಅವತರಣಿಕೆ ಹೊರಬಂದಾಗ ಅಮೇರಿಕದಾದ್ಯಂತ ಅತ್ಯಂತ ಕುತೂಹಲ ಮತ್ತು ಆಸಕ್ತಿ ಕೆರಳಿಸಿತು. ಆ ವರ್ಷದ ಅಮೇರಿಕ ವೈದ್ಯಕೀಯ ಬರಹಗಾರರ ಸಂಘದ ಪಾರಿತೋಷಕ ಅದಕ್ಕೆ ದೊರೆಯಿತು. ಈಗಾಗಲೇ ಪ್ರಪಂಚದ ೧೮–೨೦ ಭಾಷೆಗಳಲ್ಲಿ ಅದು ಭಾಷಾಂತರಗೊಂಡಿದೆ. ಹಿಂದಿ, ಬಂಗಾಲಿ, ಮರಾಠಿ, ಗುಜರಾತಿ ಭಾಷೆಗಳಲ್ಲೂ ಪ್ರಕಟವಾಗಿದೆ. ನಮ್ಮ ದೇಶದ ಕಾಯಿಲೆಗಳ ಹಾಗೂ ಜನರ ಪರಿಸರಕ್ಕೆ ಒಪ್ಪುವ ಇಂಗ್ಲೀಷ್ ಅವತರಣಿಕೆಯನ್ನು ದಿಲ್ಲಿಯ 'ವಾಲಂಟರಿ ಹೆಲ್ತ್ ಅಸೋಸಿಯೇಷನ್' ಆಫ್ ಇಂಡಿಯಾ" ಸಂಸ್ಥೆಯವರು ಪ್ರಕಟಿಸಿದ್ದಾರೆ.

"ಆರೋಗ್ಯ ಸಂರಕ್ಷಣೆಯ ಸೌಲಭ್ಯ ಪ್ರತಿಯೊಬ್ಬನ ಹಕ್ಕು ಮಾತ್ರ ಅಲ್ಲ, ಅದು ಅವನ ಜವಾಬ್ದಾರಿ ಕೂಡ; ಆರೋಗ್ಯ ರಕ್ಷಣೆಯ ಜವಾಬ್ದಾರಿ ವ್ಯಕ್ತಿಯ ಸ್ವಂತ ಅರಿವಿನಿಂದುಂಟಾಗಬೇಕಲ್ಲದೇ, ಅಂತಹ ಅರಿವು ಮೂಡಿಸುವುದು ಎಲ್ಲಾ ಸ್ವಾಸ್ಥ್ಯ ಕಾರ್ಯಕ್ರಮಗಳ ಗುರಿಯಾಗಬೇಕು; ವೈದ್ಯಕೀಯ ಜ್ಞಾನ ಕೆಲವೇ ಜನರ ಗುತ್ತಿಗೆಯಾಗಿ ಉಳಿಯುವುದೆ. ಎಲ್ಲರಿಗೂ ತಿಳಿಯುವಂತಾಗಬೇಕು. ಅತಿ ಸಾಮಾನ್ಯರಿಗೂ ರೋಗರುಜಿನಗಳ ವಿಷಯವನ್ನು ಸರಳವಾಗಿ ಬೋಧಿಸಿದಲ್ಲಿ ಅವರು ರೋಗಗಳ ಚಿಕಿತ್ಸೆ ಮತ್ತು ನಿವಾರಣೆಯಲ್ಲಿ ಸಕ್ರಿಯ ಪಾತ್ರ ವಹಿಸಬಲ್ಲರು. ಕನಿಷ್ಠ ಆರೋಗ್ಯ ರಕ್ಷಣೆಯ ಸೌಲಭ್ಯ ಕೆಲವರಿಗೆ ಮಾತ್ರ ಹಂಚುವ ಸಾಮಗ್ರಿಯಾಗಿ ಉಳಿಯದೆ. ಅದು ಎಲ್ಲರಿಗೂ ಲಭ್ಯವಾಗುವಂತೆ ಆಗಬೇಕು"—ಇದು "ವೈದ್ಯರಿಲ್ಲದೆಡೆಯಲ್ಲಿ" ಗ್ರಂಥವನ್ನು ರಚಿಸಲು ಡೇವಿಡ್ ವರ್ನರ್‌ಗೆ ಸ್ಫೂರ್ತಿ ನೀಡಿದ ವಿಚಾರಧಾರೆ.

ಸ್ವಯಂ ಆರೋಗ್ಯ ರಕ್ಷಣೆ ಮತ್ತು ಸ್ವಚಿಕಿತ್ಸೆಗಳಿಗೆ ಮಿತಿ ಇಲ್ಲದಿಲ್ಲ. ಆದರಿಂದ ವರ್ನರ್ ತನ್ನ ಪುಸ್ತಕದಲ್ಲಿ ರೋಗ ಉದ್ಭವಿಸುವ ಚಿಹ್ನೆಗಳು ಗೋಚರಿಸಿದಾಗ ಏನು ಮಾಡಬಹುದು; ರೋಗ ಉದ್ಭವಿಸಿದಾಗ ಯಾವ ಘಟ್ಟದಲ್ಲಿ ವೈದ್ಯಕೀಯ ಸಲಹೆ ಪಡೆಯಬೇಕು ಹಾಗೂ ವೈದ್ಯಕೀಯ ಸಹಾಯ ದೊರೆಯುವ ವರೆಗೂ ಯಾವ ಕ್ರಮ ತೆಗೆದುಕೊಳ್ಳಬಹುದು ಎಂಬ ಪ್ರಶ್ನೆಗಳಿಗೆ ಉತ್ತರಿಸುವಂತಿದೆ. ಪುಸ್ತಕ ರಚನೆಯಲ್ಲಿ, ವರ್ನರ್ ಅಮೇರಿಕದ ಹಲವಾರು ನುರಿತ ವೈದ್ಯರ ಸಲಹೆ, ಸಹಕಾರ ಪಡೆದಿದ್ದಾನೆ. ಆದರಿಂದ ಇದನ್ನು "ನಕಲಿ" ವೈದ್ಯನಿಂದ ತಯಾರಾದ ಅವೈಜ್ಞಾನಿಕ ಪುಸ್ತಕವೆಂದು ಅಲ್ಲಗಳೆಯುವಂತಿಲ್ಲ.

"ವೈದ್ಯರಿಲ್ಲದೆಡೆಯಲ್ಲಿ" ಗ್ರಂಥದಲ್ಲಿ, ಹಲವಾರು ಕಾಯಿಲೆಗಳಿಗೆ ಪ್ರಥಮ ಚಿಕಿತ್ಸೆ, ಆರೋಗ್ಯ ರಕ್ಷಣೆಯ ನಿಯಮಗಳು, ಸಾಮಾನ್ಯ ಕಾಯಿಲೆಗಳ ಚಿಕಿತ್ಸೆ, ಪ್ರಸವಕಾಲದಲ್ಲಿ ನೆರವು ಮುಂತಾದ ವಿಷಯಗಳಿಗೆ ಆದ್ಯತೆ ಇದೆ. ಗ್ರಾಮದ ಆರೋಗ್ಯ ರಕ್ಷಕರಿಗೆ ಉಪಯುಕ್ತವೆನಿಸುವ ಸಲಹೆಗಳಿವೆ. ರೋಗಿಯ ರೋಗದ ಪರೀಕ್ಷಾವಿಧಾನ, ಪುರಾತನ ನಂಬಿಕೆಗಳ ಸತ್ಯಾಸತ್ಯತೆಗಳ ಬಗೆಗೆ ವ್ಯಾಖ್ಯಾನ, ಸುಲಭವಾಗಿ ದೊರೆಯುವ ಮನೆಮದ್ದುಗಳ ಗುಣಾವಗುಣಗಳ ಉಲ್ಲೇಖ, ಆಧುನಿಕ ಔಷಧಿಗಳ ಉಪಯೋಗ ಮತ್ತು ಅವುಗಳ ದುರುಪಯೋಗದಿಂದಾಗುವ ಹಾನಿಗಳು, ಔಷಧ

ನೀಡುವ ವಿಧಾನ, ಆಹಾರ ಪೋಷಣೆ, ಮಕ್ಕಳು ಮತ್ತು ವೃದ್ಧರ ಬಗ್ಗೆ ವಹಿಸಬೇಕಾದ ಕಾಳಜಿ, ತಾಯಂದಿರು ಮತ್ತು ದಾದಿಯರಿಗೆ ಕಿವಿ ಮಾತು ಹೀಗೆ ಹಲವಾರು ವಿಷಯಗಳ ಬಗೆಗೆ ಉಪಯುಕ್ತ ಮಾಹಿತಿ ಇದೆ. ಯಥೇಚ್ಛ ರೇಖಾಚಿತ್ರಗಳ ಬಳಕೆಯು, ಪುಸ್ತಕದ ವೈಶಿಷ್ಟ್ಯ. ಮೈಮೇಲೆ ಏಳುವ ಕಜ್ಜಿಗೆ ಬೆಂಜೈಲ್ ಬೆಂಜೋಯೇಟ್ ದ್ರಾವಣ ಪರಿಣಾಮಕಾರಿಯಾದ ಔಷಧಿ. ಆದರೆ ಅದು ದೊರೆಯದಿದ್ದರೆ ವೈಯಕ್ತಿಕ ಶುಚಿತ್ವದ ನಿಯಮವನ್ನನುಸರಿಸುವುದಲ್ಲದೆ, ಬೇವಿನಸೊಪ್ಪು ಮತ್ತು ಅರಿಷಿಣಪುಡಿಗಳ ಮಿಶ್ರಣದ ಲೇಪನವು ಪರಿಣಾಮಕಾರಿಯಾಗಬಹುದೆಂದು ಹೇಳಿದೆ. ಅತಿಸಾರವಾಗುವವರಿಗೆ ಮನೆಯಲ್ಲೇ ದೊರೆಯುವ ಉಪ್ಪು, ಸಕ್ಕರೆ, ಅಡಿಗೆ ಸೋಡಾಗಳಿಂದ, ತಯಾರಿಸಬಹುದಾದ "ಮರು ನೀರ್ಗೂಡಿಕೆಯ ದ್ರಾವಣ"ವನ್ನು ತಯಾರಿಸುವ ಸಚಿತ್ರ ವಿಧಾನದ ವಿವರಣೆ; ಶ್ವಾಸನಾಳದಲ್ಲಿ ಆಹಾರ ಸಿಕ್ಕಿ ಉಸಿರು ಕಟ್ಟಿದಾಗ ಪ್ರಾಣ ಉಳಿಸಬಹುದಾದ "ಹೈಮ್ ಲಿಕ್ ಕೈಚಳಕ"ದ ಸಚಿತ್ರ ದರ್ಶನ, ಹೀಗೆ ನೂರಾರು ನಿದರ್ಶನಗಳು ಪುಸ್ತಕವನ್ನು ತುಂಬಿವೆ. ಪ್ರತಿ ವಿಭಾಗವನ್ನು ಗುರುತಿಸಲು ಸಹಾಯಕವಾಗುವಂತೆ ಬೇರೆ ಬೇರೆ ಬಣ್ಣಗಳ ಕಾಗದದಲ್ಲಿ ಅಚ್ಚಾಗಿರುವುದು ಇನ್ನೊಂದು ವೈಶಿಷ್ಟ್ಯ.

ಕನಿಷ್ಠ ಆರೋಗ್ಯ ಸೌಕರ್ಯಗಳ ತೀವ್ರ ಕೊರತೆ ಮೆಕ್ಸಿಕೋದ ಗುಡ್ಡಗಾಡು ಜನರಿಗೆ ಮಾತ್ರ ಮೀಸಲಾಗಿಲ್ಲ. ಭಾರತದಂತಹ ಹಿಂದುಳಿದ ರಾಷ್ಟ್ರಗಳಲ್ಲಿ ಅಂತಹ ಕೊರತೆ ಇರುವ ಪ್ರದೇಶಗಳು ಯಥೇಚ್ಛ. ವೈದ್ಯಕೀಯ ರಂಗದಲ್ಲಿ ಮಹಾಕ್ರಾಂತಿಯಾಗಿರುವ ಈ ಶತಮಾನದಲ್ಲೂ ಅಂತಹ ಪರಿಸ್ಥಿತಿ ಮುಂದುವರಿಯುವುದು ಶೋಚನೀಯ. ಡೇವಿಡ್ ವರ್ನರನಂತಹ ಕಾರ್ಯಯೋಗಿಯ ವಿಚಾರಧಾರೆ ಮತ್ತು ಸಾಹಸ ಕಾರ್ಯ ಈ ದಿಸೆಯಲ್ಲಿ ಒಂದು ಹೊಸ ಹೆಜ್ಜೆ. ವೈದ್ಯರ ಸಹಾಯ ದೊರೆಯದ ಗ್ರಾಮ ಪ್ರದೇಶದಲ್ಲಿರುವವರ ಆರೋಗ್ಯಪಾಲನೆಯ ವಿಷಯದಲ್ಲಿ ಪಿಯಾಕ್ಷಟ್ಲ ಪ್ರಯೋಗ ಪ್ರಪಂಚದಾದ್ಯಂತ ವಿಚಾರವಂತರ ಕಣ್ಣು ತೆರೆಸಿದೆ.

ಡೇವಿಡ್ ವರ್ನರ್ ಈಗ ಬೈಸಿಕಲ್ಲಿನ ಮೇಲೆ ಏಶಿಯಾದ ದೇಶಗಳಲ್ಲಿ ಸಂಚರಿಸುತ್ತಾ ಭಾರತಕ್ಕೆ ಬಂದಿದ್ದಾನೆ. ವಿನೋಬಾ ಭಾವೆಯವರನ್ನು ಭೇಟಿಯಾಗಿ ವಿಚಾರ ವಿನಿಮಯ ನಡೆಸಿದ್ದಾನೆ. ಹೆಸರಾಂತ ವೈದ್ಯ, ಸೇಠಿಯವರ "ಜಯಪುರದ ಕೃತಕ ಕಾಲುಗಳ" ತಯಾರಿಕಾ ಘಟಕದಲ್ಲಿ ಅಭ್ಯಾಸ ನಡೆಸಿದ್ದಾನೆ. ದಿಲ್ಲಿಯ ಅಖಿಲ ಭಾರತ ವೈದ್ಯಕೀಯ ಸಂಸ್ಥೆಯ ವೈದ್ಯ ಸಮೂಹಕ್ಕೆ ಪಿಯಾಕ್ಷಟ್ಲ ಯೋಜನೆ ಬಗೆಗೆ ಚಿತ್ರ ಪ್ರದರ್ಶನ, ಭಾಷಣ ಮಾಡಿ ಮೆಚ್ಚುಗೆ ಗಳಿಸಿದ್ದಾನೆ. ಯುನೆಸ್ಕೋದವರು ಇತ್ತೀಚೆಗೆ ಅಂಗವಿಕಲ ಮಕ್ಕಳ ಬಗೆಗೆ ನಡೆಸಿದ ಸಮ್ಮೇಳನದಲ್ಲಿ ಭಾಗವಹಿಸಿ ಮಾರ್ಗದರ್ಶನ ಮಾಡಿದ್ದಾನೆ.

"ವೈದ್ಯರಿಲ್ಲದೆಡೆಯಲ್ಲಿ" ೪೬೦ ಪುಟಗಳ ಸಚಿತ್ರ ಪುಸ್ತಕ. ಅದರ ಹಕ್ಕನ್ನು ಕಾದಿರಿಸಿಲ್ಲ. ಅದರಲ್ಲಿನ ವಿಷಯಗಳನ್ನು ಅನುಮತಿ ಇಲ್ಲದೆ ಆರೋಗ್ಯ ಪ್ರಚಾರಕ್ಕೆ ಬಳಸಬಹುದು. ವ್ಯಾಪಾರಿ ಮನೋಭಾವದ ಹಣ ಗಳಿಕೆಗೆ ಅದನ್ನು ಉಪಯೋಗಿಸುವಂತಿಲ್ಲ. ಪ್ರಕಟನೆಯ ನಕಲನ್ನು ಕಳುಹಿಸಿದರೆ ಸಂತೋಷ. ಕನ್ನಡವೂ ಸೇರಿದಂತೆ ನಮ್ಮ ಜನರಾಡುವ ಎಲ್ಲಾ ಭಾಷೆಗಳಲ್ಲೂ ಅದು ದೊರೆಯುವಂತಾಗಬೇಕು. ಅದರಲ್ಲಿರುವ ವಿಷಯಗಳನ್ನೇ ಜನಸಾಮಾನ್ಯರು ತಿಳಿದು ಅನುಸರಿಸುವಂತಾದರೆ ನಮ್ಮ ಆರೋಗ್ಯದ ಸಮಸ್ಯೆಗಳು ಬಹಳ ಮಟ್ಟಿಗೆ ಪರಿಹಾರವಾಗುವುದರಲ್ಲಿ ಸಂದೇಹವಿಲ್ಲ. ★

ಭಾವನೆಗಳಿಗೂ ಜ್ಞಾನಕ್ಕೂ ಇರುವ ಅನುಪಾತ ವ್ಯಸ್ತ ಪ್ರಮಾಣದಲ್ಲಿರುವ ಹಾಗೆ ಕಾಣುತ್ತದೆ. ಜ್ಞಾನ ಕಡಿಮೆಯಿದ್ದಷ್ಟೂ ತಲೆ ಬಿಸಿಯಾಗುವುದು ಹೆಚ್ಚು.

—ಬರ್ಟ್ರಂಡ್ ರಸೆಲ್



ಖಾಲಿ ಟ್ಯೂಬಗಳ ಕೊಡುಗೆಯ ಕೊನೆಯ ದಿನಾಂಕವನ್ನು ಅಂತಿಮವಾಗಿ
೩೧ ನೇ ಡಿಸೆಂಬರ ೧೯೮೨ ರ ವರೆಗೆ ವಿಸ್ತರಿಸಿದೆ.

ಪುಟ್ಟ ಕೋಗಿಲೆ ಮತ್ತು ಕೆಂಪು ಗುಲಾಬಿ

ಮೂಲ : ಆಸ್ಕರ್ ವೈಲ್ಡ್
ಕನ್ನಡಕ್ಕೆ : ನಾಚಾರ್


"ಅವಳು ನನ್ನೊಂದಿಗೆ ನರ್ತಿಸಲು ಒಪ್ಪಿದ್ದಾಳೆ; ಆದರೆ ನಾನವಳಿಗೆ ಒಂದು ಕೆಂಪು ಗುಲಾಬಿ ಹೂವನ್ನು ಕೊಟ್ಟರೆ ಮಾತ್ರ!" ಯುವಕ ವಿದ್ಯಾರ್ಥಿ ತನಗೇ ಎಂಬಂತೆ ಹೇಳಿಕೊಂಡ, "ಏನು ಮಾಡಲಿ, ನನ್ನ ತೋಟದಲ್ಲಿ ಒಂದಾದರೂ ಕೆಂಪು ಗುಲಾಬಿ ಇಲ್ಲ!"

ಅವನ ಈ ಸ್ವಗತವನ್ನು ಎತ್ತರದ ಓಕ್ ಮರದ ಮೇಲೆ ಕುಳಿತ ಪುಟ್ಟ ಕೋಗಿಲೆಯೊಂದು ಕೇಳಿಸಿಕೊಂಡಿತು. ಆಶ್ಚರ್ಯದಿಂದ ಒಮ್ಮೆ ಸುತ್ತಲೂ ನೋಡಿತು.

"ನನ್ನ ತೋಟದಲ್ಲಿ ಒಂದಾದರೂ ಕೆಂಪು ಗುಲಾಬಿ ಇಲ್ಲ," ಎಂದು ಹೇಳಿಕೊಳ್ಳುತ್ತಿದ್ದಂತೆ ಅವನ ಸುಂದರ ಕಣ್ಣುಗಳಲ್ಲಿ ನೀರು ತುಂಬಿತು. "ಎಂತಹ ಚಿಕ್ಕ ಪುಟ್ಟ ವಸ್ತುಗಳ ಮೇಲೆ ಈ ಜೀವನದ ಸುಖ ಸಂತೋಷಗಳು ಅವಲಂಬಿತವಾಗಿವೆ! ನಾನು ದೊಡ್ಡ ದೊಡ್ಡ ವಿದ್ವಾಂಸರ ಬೃಹದ್ಗ್ರಂಥಗಳನ್ನೆಲ್ಲಾ ಓದಿದ್ದೇನೆ. ತತ್ತ್ವಶಾಸ್ತ್ರದ ರಹಸ್ಯಗಳನ್ನೆಲ್ಲ ಅರಿತಿದ್ದೇನೆ. ಆದರೆ ಒಂದೇ ಒಂದು ಕೆಂಪು ಗುಲಾಬಿಯ ಕೊರತೆ ನನ್ನ ಜೀವನವನ್ನು ದುಃಖಮಯವನ್ನಾಗಿಸಿದೆ."

ಇವನ ಮಾತುಗಳಲ್ಲೇ ತಲ್ಲೀನನಾಗಿದ್ದ ಆ ಪುಟ್ಟ ಕೋಗಿಲೆ ಹೇಳಿಕೊಂಡಿತು: "ಕೊನೆಗೂ ಒಬ್ಬ ನಿಜವಾದ ಪ್ರೇಮಿ ಇಲ್ಲಿದ್ದಾನೆ. ನಿಜವಾದ ಪ್ರೇಮಿಯೊಬ್ಬನನ್ನು ಕಾಣಲಾಗದಿದ್ದರೂ ಅಮರ ಪ್ರೇಮಿಗಳ ಅಮರಗಾಥೆಯನ್ನು ಪ್ರತಿರಾತ್ರಿಯೂ ಈ ಓಕ್ ಮರಕ್ಕೆ, ನಕ್ಷತ್ರ–ಚಂದ್ರರಿಗೆ ಹಾಡಿನ ಮೂಲಕ ಕೇಳಿಸಿದ್ದೇನೆ. ಅಂಥ ಪ್ರೇಮಗಾಥೆಯ ನಾಯಕನೊಬ್ಬನನ್ನು ಈಗ ಕಾಣುತ್ತಿದ್ದೇನೆ. ಅವನ ತಲೆಗೂದಲು ದಟ್ಟ ಕಾರ್ಮೋಡದಷ್ಟು ಕಪ್ಪು; ಅವನ ತುಟಿಗಳು ಅವನು ಅಪೇಕ್ಷಿಸುತ್ತಿರುವ ಕೆಂಪು ಗುಲಾಬಿಯಷ್ಟೇ ಕೆಂಪು; ನಿರಾಶೆ ಅವನ ಮುಖವನ್ನು ಕವಿದು, ಅದು ದಂತದಂತೆ ಬಿಳಿಚಿಕೊಂಡಿದೆ. ದುಃಖವು ತನ್ನ ಮುದ್ರೆಯನ್ನು ಅವನ ಹುಬ್ಬುಗಳ ಮೇಲೆ ಒತ್ತಿದೆ."

"ರಾಜಕುಮಾರ ನಾಳೆ ರಾತ್ರಿ ಔತಣ ಕೂಟವನ್ನೇರ್ಪಡಿಸಿದ್ದಾನೆ," ಯುವಕ ತನ್ನಲ್ಲಿಯೇ ಗೊಣಗಿಕೊಂಡ, "ನನ್ನ ಪ್ರೇಯಸಿ ನನ್ನ ಜೊತೆಗಿರುವಳು. ನಾನು ಒಂದೇ ಒಂದು ಕೆಂಪು ಗುಲಾಬಿಯನ್ನು ತೆಗೆದುಕೊಂಡು ಹೋದರೆ, ಅವಳು ಸೂರ್ಯೋದಯದ ವರೆಗೂ ನನ್ನೊಂದಿಗೆ ನರ್ತಿಸುವಳು. ಒಂದೇ ಕೆಂಪು ಗುಲಾಬಿಯನ್ನು ಪಡೆಯುವಲ್ಲಿ ಸಫಲನಾದರೆ, ಅವಳನ್ನು ನನ್ನ ತೋಳುಗಳಲ್ಲಿ ಬಂಧಿಸಬಲ್ಲೆ. ನರ್ತಿಸುತ್ತಾ, ಅವಳು ತನ್ನ ತಲೆಯನ್ನು ನನ್ನ ಭುಜದ ಮೇಲೆ ಒರಗಿಸುವಳು. ನನ್ನ ಬೆರಳುಗಳಿಗೆ ತನ್ನ ಬೆರಳುಗಳನ್ನು ಹೆಣೆಯುವಳು. ಆದರೆ…ನನ್ನ ತೋಟದಲ್ಲಿ ಒಂದೇ ಒಂದು ಕೆಂಪು ಗುಲಾಬಿಯೂ ಇಲ್ಲ…ನಾನು ಏಕಾಂಗಿಯಾಗಿ ಕುಳಿತುಕೊಳ್ಳಬೇಕಾಗುತ್ತದೆ. ಅವಳು ನನ್ನೆದುರೇ ಹಾದು ಹೋಗುತ್ತಾಳೆ… ನನ್ನ ಅವಶ್ಯಕತೆಯೇ ಇರುವ



ವುದಿಲ್ಲ. ನನ್ನ ಹೃದಯವೇ ಒಡೆದುಹೋಗುತ್ತದೆ."

"ನಿಜವಾಗಿಯೂ ಇವನೊಬ್ಬ ಅಪೂರ್ವ ಪ್ರೇಮಿ" ಕೋಗಿಲೆ ಸಂತಸದಿಂದ ಉಲಿಯಿತು; "ನಾನು ನಾಯಕನ ಮನೋಭಾವವನ್ನು ಕುರಿತು ಹಾಡುವುದನ್ನೇ ಅವನು ಅನುಭವಿಸುತ್ತಿದ್ದಾನೆ. ನನಗೆ ಸಂತಸ ನೀಡುವ ಆ ಹಾಡು ಅವನಿಗೆ ನೋವನ್ನು ಉಣಿಸುತ್ತಿದೆ. ನಿಜವಾಗಿಯೂ ಪ್ರೇಮ ಒಂದು ವಿಚಿತ್ರ ವಸ್ತು. ಅದು ನವರತ್ನಗಳಿಗಿಂತ ಅಮೂಲ್ಯವಾದುದು. ಅತ್ಯುತ್ತಮ ವಜ್ರಕ್ಕಿಂತ ದುಬಾರಿಯಾದುದು. ಮುತ್ತು ರತ್ನಗಳನ್ನಿತ್ತೂ ಅದನ್ನು ಕೊಳ್ಳಲಾಗದು. ಮಾರುಕಟ್ಟೆಯಲ್ಲಿ ಆಕರ್ಷಕವಾಗಿ ಜೋಡಿಸಿಟ್ಟು ಮಾರಲೂ ಬಾರದು. ವರ್ತಕರ ಬಂಗಾರದ ತಟ್ಟೆಗಳಲ್ಲಿಟ್ಟು ತೂಗಲೂ ಬಾರದು."

"ಸಂಗೀತಗಾರರು ತಮ್ಮ ವೇದಿಕೆಯಲ್ಲಿ ಕುಳಿತುಕೊಂಡಿರುತ್ತಾರೆ," ಯುವಕನ ಗೋಣಗಾಟ ಮುಂದುವರಿಯಿತು, "ತಮ್ಮ ತಂತಿವಾದ್ಯಗಳನ್ನು ಮಿಡಿಯುತ್ತಾರೆ. ನನ್ನ ಪ್ರೇಮಿ ಆ ಮಧುರ ಸಂಗೀತದ ಲಯವನ್ನನುಸರಿಸಿ ಮೃದುವಾಗಿ, ನೆಲಕ್ಕೆ ಕಾಲು ತಗುಲದಂತೆ, ಹಂಸ ನಡಿಗೆಯಲ್ಲಿ ನರ್ತಿಸುತ್ತಾಳೆ. ದೊಡ್ಡ ದೊಡ್ಡ ಶ್ರೀಮಂತರು ತಮ್ಮ ಭವ್ಯ ಉಡುಗೆಗಳಲ್ಲಿ ಅವಳನ್ನು ಸುತ್ತುವರಿದಿರುತ್ತಾರೆ. ಅವಳಿಗೆ ಕೊಡಲು ನನ್ನಲ್ಲಿ ಒಂದೇ ಒಂದು ಕೆಂಪು ಗುಲಾಬಿ ಇಲ್ಲ; ಅವಳು ನನ್ನೊಂದಿಗೆ ನರ್ತಿಸುವುದಿಲ್ಲ." ಅವನು ಹುಲ್ಲಿನ ಮೇಲೆ ಉರುಳಿಕೊಂಡು ತನ್ನ ಅಂಗೈಗಳಿಂದ ಮುಖ ಮುಚ್ಚಿಕೊಂಡು ಅಳತೊಡಗಿದ.

"ಅವನೇಕೆ ಅಳುತ್ತಿದ್ದಾನೆ?" ಹಸಿರು ಹಲ್ಲಿಯೊಂದು ಗಾಳಿಯಲ್ಲಿ ತನ್ನ ಬಾಲವನ್ನಾಡಿಸುತ್ತಾ ಕೇಳಿತು.

"ಯಾಕೆ ಅಳುತ್ತಿದ್ದಾನೆ?" ಬಣ್ಣ ಬಣ್ಣದ ಚಿಟ್ಟೆಯೊಂದು ಅತ್ತಿತ್ತ ಹಾರಾಡುತ್ತ ಕೇಳಿತು.

"ಹಾದಲ್ಲ, ಯಾಕೆ?" ಡೈಸಿ ಪುಷ್ಪವೊಂದು ತನ್ನ ಪಕ್ಕದ ಪುಷ್ಪವನ್ನು ಪಿಸುಮಾತಿನಲ್ಲಿ ಕೇಳಿತು.

"ಒಂದೇ ಒಂದು ಕೆಂಪು ಗುಲಾಬಿಗಾಗಿ ಅಳುತ್ತಿದ್ದಾನೆ," ಅವರೆಲ್ಲರ ಸಮಸ್ಯೆಯನ್ನು ಪರಿಹರಿಸುವಂತೆ ಕೋಗಿಲೆ ಉತ್ತರಿಸಿತು.

"ಒಂದೇ ಒಂದು ಕೆಂಪು ಗುಲಾಬಿಗಾಗಿ?" ಅವು ಒಮ್ಮೆಲೇ ಕೂಗಿದುವು. "ಎಂತಹ ಚಿಕ್ಕ-ಪುಟ್ಟ ವಸ್ತುವಿಗಾಗಿ ಈ ಮನುಷ್ಯ ಅಳುವನಲ್ಲ?" ಆ ಹಲ್ಲಿ ಸಿನಿಕನಂತೆ ಗಹಗಹಿಸಿ ನಕ್ಕಿತು.

ಆದರೆ ಆ ಪುಟ್ಟ ಕೋಗಿಲೆಗೆ ಅವನ ದುಃಖದ ಮರ್ಮ ಗೊತ್ತಿತ್ತು. ಪ್ರೇಮ ಮತ್ತು ಪ್ರೇಮಿಗಳ ವೈಚಿತ್ರ್ಯವನ್ನು ಕುರಿತು ಯೋಚಿಸುತ್ತ ಓಕ್ ಮರದಲ್ಲೇ ಮೌನವಾಗಿ ಕುಳಿತಿತ್ತು.

ಇದ್ದಕ್ಕಿದ್ದಂತೆಯೇ ಆ ಪುಟ್ಟ ಕೋಗಿಲೆ ತನ್ನ ಕಂದು ಬಣ್ಣದ ರೆಕ್ಕೆಗಳನ್ನು ಹರಡಿ ಹಾರಲು ತಯಾರಾಯಿತು. ನೆರಳಿನಂತೆ ಪೊದೆಗಳನ್ನು ದಾಟಿ ತೋಟದಲ್ಲೆಲ್ಲ ಹಾರ ತೊಡಗಿತು. ಹುಲ್ಲು ಮೈದಾನದ ಮಧ್ಯದಲ್ಲಿ ಒಂದು ದೊಡ್ಡ, ಸುಂದರ ಗುಲಾಬಿ ಗಿಡ ಬೆಳೆದುನಿಂತಿತ್ತು. ಅದನ್ನು ಕಂಡ ಕೂಡಲೆ ಕೋಗಿಲೆಯು ಮರು-ಕ್ಷಣವೇ ಅದರ ಪಕ್ಕದಲ್ಲಿ ಬಂದು ಕುಳಿತಿತು.

"ನನಗೊಂದು ಕೆಂಪು ಗುಲಾಬಿಯನ್ನು ಕೊಡು," ಕೋಗಿಲೆ ಕೇಳಿತು, "ನಾನು ನಿನಗಾಗಿ ಒಂದು ಮಧುರ ಗೀತೆಯನ್ನು ಹಾಡುತ್ತೇನೆ."

"ನನ್ನ ಗುಲಾಬಿಗಳು ಬಿಳಿಯವು" ಗಿಡವು ಉತ್ತರಿಸಿತು, "ಸಮುದ್ರದನೊರೆಯಷ್ಟು, ಬೆಟ್ಟದ ಶಿಖರದ ಮೇಲೆ ಕವಿದಿರುವ ಮಂಜಿನಷ್ಟು ಬಿಳಿ, ಒಂದು ಕೆಲಸ ಮಾಡು. ಅಲ್ಲಿ ಕಾಣುವುದಲ್ಲ ಹಳೆಯ 'ಸನ್‌ಡಯಲ್'– ಅದರ ಪಕ್ಕದಲ್ಲಿ ನನ್ನ ಸೋದರಿಯೊಬ್ಬಳಿದ್ದಾಳೆ, ನೀನು ಕೇಳಿದ ಕೆಂಪು ಗುಲಾಬಿಯನ್ನು ಆಕೆ ಕೊಡಬಹುದು, ಹೋಗಿ ವಿಚಾರಿಸು."

ಮರುಕ್ಷಣದಲ್ಲಿಯೇ ಕೋಗಿಲೆಯು ಸನ್-ಡಯಲ್ ಪಕ್ಕದ ಗುಲಾಬಿಯ ಗಿಡದ ಬಳಿ ಹಾರಿ ಬಂದು ಕುಳಿತಿತು. "ನನಗೊಂದು ಕೆಂಪು ಗುಲಾಬಿಯನ್ನು ಕೊಡು, ನಿನಗಾಗಿ ಒಂದು ಸುಮಧುರ ಗೀತೆ ಹಾಡುತ್ತೇನೆ," ಎಂದು ಗಿಡಕ್ಕೆ ಹೇಳಿತು.

"ಆದರೆ, ನನ್ನ ಗುಲಾಬಿಗಳು ಅಚ್ಚ ಹಳದಿ ಬಣ್ಣದವು. ಸ್ವರ್ಣ ಸಿಂಹಾಸನವೇರಿ ಕುಳಿತಿರುವ ಸಮುದ್ರ ಕನ್ಯೆಯ ತಲೆಗೂದಲಿಗಿಂತಲೂ ಹೆಚ್ಚು ಹಳದಿ; ಹುಲ್ಲುಗಾವಲಿನಲ್ಲಿ ಅರಳುವ ಡ್ಯಾಫೋಡಿಲ್‌ಗಳಿಗಿಂತಲೂ ಹೆಚ್ಚು ಹಳದಿ. ನನ್ನ ಸೋದರಿಯೊಬ್ಬಳು ವಿದ್ಯಾರ್ಥಿಯ ಕೊಠಡಿಯ ಕೆಳಗಿನ ಕಿಟಕಿಯ ಬಳಿ ಬೆಳೆದಿದ್ದಾಳೆ. ಅವಳನ್ನು ಕೇಳಿದರೆ, ನಿನಗೆ ಬೇಕಾದ ಕೆಂಪುಗುಲಾಬಿ ಸಿಗಬಹುದು," ಗಿಡ ಉತ್ತರಿಸಿತು.

ಪುಟ್ಟ ಕೋಗಿಲೆ ಮರುಗಳಿಗೆಯಲ್ಲಿ ವಿದ್ಯಾರ್ಥಿಯ ಕಿಟಕಿಯ ಕೆಳಗಿದ್ದ ಗಿಡದ ಬಳಿ ಹಾರಿ ಬಂದು ಕೇಳಿತು, "ಒಂದೇ ಒಂದು ಕೆಂಪು ಗುಲಾಬಿಯನ್ನು ಕೊಟ್ಟರೆ, ನಿನಗಾಗಿ ಒಂದು ಅಮರ ಪ್ರೇಮ ಗೀತೆ ಹಾಡುತ್ತೇನೆ."

ಗುಲಾಬಿ ಗಿಡ ತಲೆ ಅಲುಗಿಸಿ, "ನನ್ನ ಗುಲಾಬಿಗಳು ಅಚ್ಚ ಕೆಂಪು. ಪಾರಿವಾಳದ ಪಾದದಷ್ಟು ಕೆಂಪು; ಸರೋವರದಲ್ಲಿ ತಲೆಯೆತ್ತಿ ನಿಂತಿರುವ ಕಮಲದ ದಳಗಳಿಗಿಂತಲೂ ಕೆಂಪು. ಆದರೆ, ಚಳಿಯು ನನ್ನ ನರ ನರಗಳ ಚೈತನ್ಯವನ್ನೇ ಉಡುಗಿಸಿಬಿಟ್ಟಿದೆ. ದಟ್ಟವಾಗಿ ಬೀಳುತ್ತಿರುವ ಈ ಮಂಜು ನನ್ನ ಮೊಗ್ಗುಗಳನ್ನು ಮುರುಟಿಸಿದೆ, ಬಿರುಗಾಳಿಯು ನನ್ನ ಕೊಂಬೆ ರೆಂಬೆಗಳನ್ನು ಮುರಿದು ಹಾಕಿದೆ. ಈ ವರ್ಷವಿಡೀ ಹೂಗಳನ್ನರಳಿಸುವುದು ನನಗೆ ಸಾಧ್ಯವಿಲ್ಲವಾಗಿದೆ," ಎಂದಿತು.

"ನನಗೆ ಬೇಕಾಗಿರುವುದು ಒಂದೇ ಒಂದು ಕೆಂಪು ಗುಲಾಬಿ," ಕೋಗಿಲೆ ಕಂಬನಿದುಂಬಿ ಹೇಳಿತು. "ಅದನ್ನು ಪಡೆಯಲು ದಾರಿಯೇ ಇಲ್ಲವೇ ?"

"ಒಂದೇ ಒಂದು ದಾರಿಯಿದೆ," ಗಿಡವು ಹೇಳಿತು, "ಆದರೆ ಆ ದಾರಿ ಎಷ್ಟು ಭಯಂಕರವೆಂದರೆ, ಅದನ್ನು ನಿನಗೆ ಹೇಳಲೂ ನನಗೆ ಭಯವಾಗುತ್ತಿದೆ."

ಕೋಗಿಲೆಯ ಆತುರ ಮಿತಿ ಮೀರಿತು, "ಬೇಗ ಹೇಳು, ನನಗೇನೂ ಭಯವಿಲ್ಲ."

"ನಿನಗೆ ಕೆಂಪು ಗುಲಾಬಿ ಬೇಕಾಗಿದ್ದರೆ," ಗಿಡವು ಮುಂದುವರಿಸಿತು, "[illegible]

ಮಧುರ ಗೀತೆಯಿಂದ ನೀನೇ ಕೆಂಪು ಗುಲಾಬಿಯನ್ನು ಸೃಷ್ಟಿಸಬಲ್ಲೆ. ನಿನ್ನ ಹೃದಯದ ಕೆನ್ನೆತ್ತರಿನಿಂದ ಅದನ್ನು ನೆನೆಸಬೇಕು. ನಿನ್ನ ಪುಟ್ಟ ಹೃದಯವನ್ನು ನನ್ನ ಮುಳ್ಳಿಗೆ ಒತ್ತಿ ಹಿಡಿದು ನಿನ್ನ ಮಧುರ ಪ್ರೇಮ ಗೀತೆಗಳನ್ನು ರಾತ್ರಿಯಿಡೀ ಹಾಡಬೇಕು. ನಿನ್ನ ಹೃದಯದಿಂದ ಹರಿವ ರಕ್ತ ನನ್ನ ನರಗಳಿಗೆ ಚೈತನ್ಯವನ್ನು ನೀಡಬೇಕು. ನಿನ್ನ ಹೃದಯದ ರಕ್ತ ನನ್ನದಾಗಬೇಕು.”

“ಒಂದು ಕೆಂಪು ಗುಲಾಬಿಗಾಗಿ ಜೀವವನ್ನೇ ತೆರುವುದೆಂದರೆ ಬಹು ದುಬಾರಿಯ ಬೆಲೆಯಾಯಿತು,” ಕೋಗಿಲೆ ಯೋಚಿಸತೊಡಗಿತು, “ಜೀವವು ಎಲ್ಲರಿಗೂ ಪ್ರಿಯವಾದುದು. ಜೀವನವು ಎಂತಹ ಮಧುರ ಕ್ಷಣಗಳನ್ನೊಳಗೊಂಡಿದೆ! ಹಸಿರು ಮರದಲ್ಲಿ ಕುಳಿತು ಹೊನ್ನ ರಥವೇರಿದ ಸೂರ್ಯನನ್ನೂ, ಬೆಳ್ಳಿ ರಥವೇರಿದ ಚಂದ್ರನನ್ನೂ ನೋಡುವುದು ಅದ್ಭುತ! ಕಣಿವೆಯಲ್ಲಿ ಅರಳುವ ಸುಂದರ ಪುಷ್ಪಗಳ ಪರಿಮಳ ಎಷ್ಟು ಚೈತನ್ಯದಾಯಕ! ಜೀವನ ಇಷ್ಟು ಅಮೂಲ್ಯವಾದರೂ ಪ್ರೇಮವು ಒಂದು ಜೀವನಕ್ಕಿಂತ ಹೆಚ್ಚು ಅಮೂಲ್ಯವಾದುದು. ಒಂದು ಹಕ್ಕಿಯ ಹೃದಯಕ್ಕಿಂತ ಪ್ರೇಮಭರಿತವಾದ ಮಾನವ ಹೃದಯದ ಬೆಲೆ ಹೆಚ್ಚಲ್ಲವೇ?”

ಒಂದು ದೃಢ ನಿರ್ಧಾರಕ್ಕೆ ಬಂದಂತೆ ಕೋಗಿಲೆ ಅಲ್ಲಿಂದ ಹಾರಿತು. ನೆರಳಿನಂತೆ ತೋಟವನ್ನೆಲ್ಲ ಬಳಸಿಕೊಂಡು ತಾನು ಯುವಕನನ್ನು ಬಿಟ್ಟು ಹೊರಟ ಸ್ಥಳಕ್ಕೇ ಬಂದಿತು. ಆ ಯುವಕ ಅಲ್ಲೇ ಚಿಂತಾಕ್ರಾಂತನಾಗಿ ಮಲಗಿದ್ದ. ಅವನ ಸುಂದರ ಕಂಗಳ ಕಂಬನಿ ಇನ್ನೂ ಆರಿರಲಿಲ್ಲ.

“ಸಂತಸ ಪಡು, ಓ ಯುವಕ!” ಕೋಗಿಲೆ ಕೂಗಿತು, “ನಿನಗೆ ಕೆಂಪು ಗುಲಾಬಿ ಸಿಕ್ಕೇ ಸಿಗುತ್ತದೆ. ಇಂದು ರಾತ್ರಿ ನನ್ನ ಸಂಗೀತದಿಂದ ಅದನ್ನು ನಿನ್ನ ಪ್ರೇಮಕ್ಕಾಗಿಯೇ ಸೃಷ್ಟಿಸುವೆ. ನನ್ನ ಹೃದಯದ ರಕ್ತ ಬಸಿದು ಅದನ್ನು ಕೆಂಪಾಗಿಸುವೆ. ನೀನು ನಿಜವಾದ ಪ್ರೇಮಿಯಾಗಿಯೇ ಉಳಿದು ಪ್ರೇಮವನ್ನು ಅಮರಗೊಳಿಸಬೇಕೆಂಬುದೇ ನಾನು ನಿನ್ನಿಂದ ಬಯಸುವ ಪ್ರತಿಫಲ. ಪ್ರೇಮವು ತತ್ತ್ವ ಶಾಸ್ತ್ರಕ್ಕಿಂತ ಉತ್ತಮವಾದುದು. ಶಕ್ತಿಗಿಂತ ಅದು ಶಕ್ತಿಶಾಲಿಯಾದುದು. ಜ್ವಾಲೆಗಿಂತ ಉಜ್ವಲವಾದುದು. ಪ್ರೇಮದ ಭಾಷೆ ಜೇನಿಗಿಂತ ಸಿಹಿ. ಅದರ ಉಚ್ಛ್ವಾಸ-ನಿಃಶ್ವಾಸಗಳು ಪರಿಮಳಭರಿತವಾದುವು ಅಂತಹ ಪ್ರೇಮವನ್ನು ಅಮರಗೊಳಿಸು.”

ಹುಲ್ಲಿನ ಮೇಲೆ ಮಲಗಿದ್ದ ಯುವಕ ಕತ್ತೆತ್ತಿ ನೋಡಿದ. ಕೋಗಿಲೆಯ ಉಲಿತವನ್ನು ಕೇಳಿದ. ಆದರೆ ಅವನಿಗೇನೂ ಅರ್ಥವಾಗಲಿಲ್ಲ. ಅವನಿಗೆ ಅರ್ಥವಾಗುತ್ತಿದ್ದುದು ಪುಸ್ತಕದಲ್ಲಿ ಬರೆದ-ಮುದ್ರಿತ ವಿಷಯಗಳು ಮಾತ್ರ.

ಕೋಗಿಲೆಯ ಮಾತು ಓಕ್ ಮರಕ್ಕೆ ಅರ್ಥವಾಯಿತು. ಓಕ್ ಮರಕ್ಕೆ ಕೋಗಿಲೆಯನ್ನು ಕಂಡರೆ ತುಂಬ ಪ್ರೀತಿ ಇತ್ತು. ಆ ಪುಟ್ಟ ಕೋಗಿಲೆ ಓಕ್ ಮರದಲ್ಲಿ ಗೂಡು ಕಟ್ಟಿಕೊಂಡು ಅದರ ಅವಿಭಾಜ್ಯ ಅಂಗವೇ ಆಗಿತ್ತು.

ಓಕ್ ಮರ ವಿಷಾದದಿಂದ ಹೇಳಿತು: “ನನಗಾಗಿ ಒಂದು ಕೊನೆಯ ಹಾಡನ್ನು ಹಾಡಿ ಬಿಡು. ನೀನು ಹೋಗಿಬಿಟ್ಟರೆ ನಾನು ಏಕಾಂಗಿಯಾಗುತ್ತೇನೆ.” ಅಂತೆಯೇ ಕೋಗಿಲೆ ಹಾಡಿತು. ಅದರ ಧ್ವನಿ ಬೆಳ್ಳಿಯ ಪಾತ್ರೆಯಲ್ಲಿ ಸುರಿದ ನೀರಿನಿಂದೇಳುವ ಗುಳ್ಳೆಗಳ ಶಬ್ದದಂತೆ ಮಧುರವಾಗಿತ್ತು.

ಕೋಗಿಲೆ ಹಾಡಿ ಮುಗಿಸಿದಾಗ ಯುವಕ ಮೇಲೆದ್ದ. ತನ್ನ ಜೇಬಿನಿಂದ ಪುಟ್ಟ ನೋಟ್ ಪುಸ್ತಕವನ್ನು ಹೊರತೆಗೆದು ಪೆನ್ಸಿಲ್ಲಿನಿಂದ ಅದರಲ್ಲಿ ಏನನ್ನೋ ಬರೆದು ಎದ್ದು ಹೊರಡುತ್ತ ಹೇಳಿಕೊಂಡ “ಅವಳಿಗೂ ಒಂದು ವ್ಯಕ್ತಿತ್ವವಿದೆ. ಅದನ್ನು ಯಾರೂ ನಿರಾಕರಿಸಲಾರರು. ಆದರೆ ಅವಳಲ್ಲಿ ಭಾವನೆಗಳಿವೆಯೆ? ಅವಳಿಗೆ ಭಾವನೆಗಳೇ ಇಲ್ಲವೆಂಬ ಭಯ ನನಗಿದೆ. ಬೇರೆಯವರ ಭಾವನೆಗಳ ಬಗ್ಗೆಯೂ ಅವಳಿಗೆ ಬೆಲೆಯಿಲ್ಲ. ಎಲ್ಲ ಕಲಾವಿದರಂತೆ ಅವಳೂ ತನ್ನದೇ ಆದ ಭಾವನೆಗಳಲ್ಲಿ ಮುಳುಗಿಬಿಟ್ಟಿರುತ್ತಾಳೆ. ಬೇರೆಯವರಿಗಾಗಿ ಯಾವ ತ್ಯಾಗಕ್ಕೂ ಅವಳು ತಯಾರಿಲ್ಲ. ಅವಳ ಹಾಡುಗಾರಿಕೆಯಲ್ಲಿ ಅವಳ ಧ್ವನಿಯಲ್ಲಿ ವಿಶಿಷ್ಟ ಮಾಧುರ್ಯವಿರಬಹುದಾದರೂ, ಅದರಿಂದ ವಸ್ತುತಃ ಯಾವ ಒಳ್ಳೆಯ ಕೆಲಸವೂ ಸಾಧ್ಯವಿಲ್ಲ.” ಯೋಚಿಸುತ್ತಾ ತನ್ನ

ಕೊಠಡಿಯನ್ನು ಪ್ರವೇಶಿಸಿ ತನ್ನ ಚಿಕ್ಕ ಕಾಟಿನ ಮೇಲೆ ಉರುಳಿಕೊಂಡ. ತನ್ನ ಪ್ರೇಮವನ್ನು ಕುರಿತು ಯೋಚಿಸುತ್ತಾ ಹಾಗೆಯೇ ನಿದ್ರೆ ಹೋದ.

■

ರಾತ್ರಿಯಾಗಿ ಆಕಾಶದಲ್ಲಿ ಚಂದ್ರನು ಬೆಳಗ ತೊಡಗಿದಾಗ, ಕೋಗಿಲೆಯು ಉತ್ಸಾಹದಿಂದ ಕೆಂಪು ಗುಲಾಬಿಯ ಬಳಿ ಹಾರಿ ಬಂದಿತು. ತನ್ನ ಎದೆಗೆ ಗುಲಾಬಿ ಗಿಡದ ಮುಳ್ಳನ್ನು ಅಪ್ಪಿ ಹಿಡಿದು ಹಾಡತೊಡಗಿತು. ಅಮೃತ ಕಿರಣನಾದ ಚಂದ್ರನೂ ಬಾಗಿ ಅದರ ಹಾಡನ್ನು ಕೇಳತೊಡಗಿದ. ಹಾಡುತ್ತ ಹಾಡುತ್ತ ಗಿಡದ ಮುಳ್ಳು ಕೋಗಿಲೆಯ ಎದೆಯ ಆಳ–ಆಳಕ್ಕೆ ಇಳಿಯತೊಡಗಿತು. ಅದರ ಎದೆಯ ರಕ್ತ ಒಸರತೊಡಗಿತು.

ಕೋಗಿಲೆಯು ಮೊದಲು ಯುವಕ–ಯುವತಿಯರ ಎದೆಯಲ್ಲಿ ಪ್ರೇಮದ ಹುಟ್ಟಿನ ಬಗ್ಗೆ ಹಾಡಿತು. ಗುಲಾಬಿ ಗಿಡದ ತುತ್ತ ತುದಿಯಲ್ಲಿ ಒಂದು ಅದ್ಭುತವಾದ ಹೂವಿನ ಸೃಷ್ಟಿಯಾಗ ತೊಡಗಿತು. ಒಂದೊಂದೇ ದಳಗಳು ಹುಟ್ಟತೊಡಗಿದವು. ಆ ಪಕಳೆಗಳು ನದಿಯ ಮೇಲೆ ಕವಿದ ಮಂಜಿನಂತೆ ಹಗಲಿನ ರೆಕ್ಕೆಯಂತೆ ಬೆಳ್ಳಗಿದ್ದವು. ಅದು ಕೆಂಪು ಗುಲಾಬಿಯಾಗಿರದೆ ಹೊಳೆಯುವ ಬೆಳ್ಳಿಯಲ್ಲಿ–ಹರಿವ ತಿಳಿನೀರಿನಲ್ಲಿ ಕಾಣುವ ಗುಲಾಬಿಯ ಪ್ರತಿ ಬಿಂಬದಂತಿತ್ತು.

ಗಿಡವು ಕೋಗಿಲೆಗೆ ಹೇಳಿತು: “ಮುಳ್ಳನ್ನು ಇನ್ನೂ ಬಿಗಿಯಾಗಿ ಅಪ್ಪಿಕೋ, ಸೂರ್ಯೋದಯವಾದ ಮೇಲೆ ಗುಲಾಬಿ ಕೆಂಪಾಗುವುದಿಲ್ಲ. ದಯವಿಟ್ಟು ಇನ್ನೂ ಬಿಗಿಯಾಗಿ… ಇನ್ನೂ…ಇನ್ನೂ ಬಿಗಿಯಾಗಿ.”

ಕೋಗಿಲೆಯು ಮುಳ್ಳನ್ನು ಇನ್ನೂ ಆಳಕ್ಕೆ ಒತ್ತಿಕೊಂಡಿತು. ಅದರ ಹಾಡು ಜೋರಾಯಿತು. ಈಗ ಅದು ಯುವಕ–ಯುವತಿಯರ ಆತ್ಮದಲ್ಲಿ



"ಹುಡುಗನಿಗೆ ಹುಡುಗಿ ಒಪ್ಪಿಗೆ ಇಲ್ಲಾಂತ ಕಾಣುತ್ತೆ! ಹುಡುಗೀಗೇ ಒಪ್ಪಿಗೆ ಇಲ್ಲಾಂತ ಹೇಳಬಿಡಿ!!"

ಹುಟ್ಟಿದ ಉತ್ಕಟ ಪ್ರೇಮವನ್ನು ಕುರಿತು ಹಾಡು ತ್ತಿತ್ತು. ರಕ್ತ ಚಿಮ್ಮಿ ಹರಿಯಿತು.

ಗುಲಾಬಿಯ ದಳಗಳಲ್ಲಿ ಈಗ ನಸುಗೆಂಪು ಛಾಯೆ ಮೂಡತೊಡಗಿತು. ಮೊದಲ ಬಾರಿಗೆ ತನ್ನ ಪತಿಯನ್ನು ಚುಂಬಿಸಿದ ನವವಧುವಿನ ಕೆನ್ನೆ ಯಂತೆ ಕೆಂಪಾಗಿತ್ತು. ಆದರೆ ಮುಳ್ಳು ಇನ್ನೂ ಕೋಗಿಲೆಯ ಪುಟ್ಟ ಹೃದಯದಾಳವನ್ನು ಪೂರ್ಣ ಹೊಕ್ಕಿರಲಿಲ್ಲ. ಆದ್ದರಿಂದ ಗುಲಾಬಿಯ ಒಡಲು ಇನ್ನೂ ಕೆಂಪಾಗಿರಲಿಲ್ಲ. ಕೋಗಿಲೆಯ ಹೃದಯದಾಳದ ರಕ್ತ ಮಾತ್ರ ಗುಲಾಬಿಯ ಒಡಲನ್ನು ಕೆಂಪುಗೊಳಿಸಬಲ್ಲದಾಗಿತ್ತು. ವೇಳೆ ಕಳೆಯುತ್ತಿತ್ತು.

ಗಿಡವು ಕಾತರದಿಂದ ಕೂಗಿತು: "ಇನ್ನೂ ಆಳಕ್ಕೆ –ದಯವಿಟ್ಟು ಮುಳ್ಳನ್ನು ಒತ್ತಿಕೋ··· ಸೂರ್ಯೋದಯ ಸಮೀಪಿಸುತ್ತಿದೆ."

ಕೋಗಿಲೆ ತನ್ನೆಲ್ಲಾ ಇಚ್ಛಾ ಶಕ್ತಿಯನ್ನು ಒಗ್ಗೂಡಿಸಿಕೊಂಡು ಮುಳ್ಳನ್ನು ಒತ್ತಿಕೊಂಡು ಗಿಡವನ್ನು ಗಟ್ಟಿಯಾಗಿ ಅಪ್ಪಿ ಹಿಡಿಯಿತು. ಈಗ ಮುಳ್ಳು ಅದರ ಹೃದಯಾಂತರಾಳವನ್ನು ಭೇದಿಸಿತು. ಅಸಹನೀಯ ನೋವು ಅದರ ಹೃದಯದಲ್ಲಿ ಹುಟ್ಟಿತು. ಅದರ ಸ್ವರ ಆ ನೋವನ್ನು ಮರೆಸುವಂತೆ ತಾರಕಕ್ಕೇರಿತು. ಈಗ ಅದು ಪ್ರೇಮಕ್ಕೆ ಸಾವಿಲ್ಲ, ಅದು ಅಮರ ಎಂದು ಸಾರುವ ಹಾಡನ್ನು ಹಾಡುತ್ತಿತ್ತು.

ಗುಲಾಬಿಯ ಹೂವು ಈಗ ಅದ್ಭುತ ರಕ್ತ ವರ್ಣವನ್ನು ಪಡೆಯಿತು. ಅದು ಸೂರ್ಯೋದಯದ ಆಕಾಶದಷ್ಟು ಕೆಂಪಾಗಿ ಬೆಳಗುತ್ತಿತ್ತು. ಆದರೆ ಕೋಗಿಲೆಯ ದನಿ ಕ್ಷೀಣವಾಗುತ್ತಿತ್ತು. ಅದರ ರೆಕ್ಕೆಗಳು ಕ್ಷೀಣವಾಗಿ ಬಡಿದುಕೊಳ್ಳು ತ್ತಿದ್ದವು. ಅದರ ಕಣ್ಣು ಮಸುಕಾಗುತ್ತಿತ್ತು. ಗಂಟಲು ಒಣಗುತ್ತಿತ್ತು.

ಅದು ಪುನಃ ತನ್ನ ಇಚ್ಛಾ ಶಕ್ತಿಯನ್ನು ಜಾಗೃತಗೊಳಿಸಿ, ತನ್ನ ಹಾಡಿನ ಕೊನೆಯ ಮಾಜ–ಲನ್ನು ಮುಟ್ಟಿತು. ಮುಳುಗುತ್ತಿದ್ದ ಚಂದ್ರ ಆ ಹಾಡನ್ನು ಕೇಳಿ, ಬೆಳಗಾಗುತ್ತಿರುವುದನ್ನೂ ಮರೆತು ಆಕಾಶದಲ್ಲಿ ನಿಂತುಬಿಟ್ಟ. ಕೆಂಪು ಗುಲಾಬಿಯೂ ಆ ಹಾಡನ್ನು ಕೇಳಿತು. ಭಾವೋದ್ವೇಗದಿಂದ ನಡುಗುವಂತೆ ಒಮ್ಮೆ ಅಲುಗಾಡಿ, ತನ್ನ ಪಕಳೆಗಳನ್ನು ಪೂರ್ಣ ಅರಳಿಸಿ ಮುಂಜಾವಿನ ಗಾಳಿಯೊಡ್ಡಿತು. ಆ ಕಣಿವೆಯಲ್ಲಿ ಕೋಗಿಲೆಯ ಹಾಡು ಪ್ರತಿಧ್ವನಿಗೊಂಡಿತು. ಬೆಳಗು ಮುಂಜಾನೆಯ ಸುಖ ನಿದ್ರೆಯನ್ನನುಭವಿಸುತ್ತಿದ್ದ ಕುರು ಬರು ತಮ್ಮ ಕನಸುಗಳನ್ನು ಮರೆದಿದ್ದರು. ನದಿಯು ತನ್ನ ಕಲಕಲನಿನಾದದಲ್ಲಿ ಕೋಗಿಲೆಯ ಹಾಡನ್ನು ಬೆರೆಸಿಕೊಂಡು, ಆ ಹಾಡಿನ ಸಂದೇಶ ವನ್ನು ಸಮುದ್ರದ ವರೆಗೂ ಕೊಂಡೊಯ್ದಿತು.

"ನೋಡು, ನೋಡು," ಗುಲಾಬಿಯ ಗಿಡ ಉತ್ಸಾಹದಿಂದ ಕೂಗಿತು, "ನನ್ನ ಕೆಂಗುಲಾಬಿ ಈಗ ಪೂರ್ಣಗೊಂಡಿದೆ." ಆದರೆ ಕೋಗಿಲೆ ಉತ್ತರಿಸ ಲಿಲ್ಲ. ಅದು ಆ ವೇಳೆಗೆ ಶಕ್ತಿಹೀನವಾಗಿ ಬಿದ್ದು, ಅಸು ನೀಗಿತ್ತು.

*

ಮಧ್ಯಾಹ್ನವಾಯಿತು. ಆ ಯುವಕ ವಿದ್ಯಾರ್ಥಿ ತನ್ನ ಕೊಠಡಿಯ ಕಿಟಕಿಯನ್ನು ತೆರೆದು ಹೊರಗೆ ನೋಡಿದ. "ಅಬ್ಬಾ, ನನ್ನ ಅದೃಷ್ಟವೆ!" ಎಂದು ಕಿರುಚಿಕುಪ್ಪಳಿಸಿದ, "ಇಲ್ಲೇ ಒಂದು ಕೆಂಪುಗುಲಾಬಿ ಇದೆ! ಇಂತಹ ಅದ್ಭುತ–ಭವ್ಯ ಗುಲಾಬಿಯನ್ನು ನನ್ನ ಜೀವಮಾನವಿಡೀ ನಾನು ಎಲ್ಲಿಯೂ ನೋಡಿರಲಿಲ್ಲ. ಇದು ಎಷ್ಟು ಸುಂದರವಾಗಿದೆ ಎಂದರೆ, ಬಹುಶಃ ಲ್ಯಾಟಿನ್ ಭಾಷೆಯಲ್ಲಿ ಇದಕೆ ಬಹು ಉದ್ದವಾದ ಹೆಸರಿರಬೇಕು," ಎನ್ನುತಾ ಬಗ್ಗಿ ಆ ಗುಲಾಬಿ ಹೂವನ್ನು ಕಿತ್ತುಕೊಂಡ್ತ್ತೆ ತನ್ನ ಹ್ಯಾಟನ್ನು ಧರಿಸಿ, ತನ್ನ ಪ್ರೇಯಸಿಯ ತಂದೆ ಪ್ರೊಫೆಸರರ ಮನೆಯ ಕಡೆಗೆ ಧಾವಿಸಿದ. ಆ ಕೆಂಪು ಗುಲಾಬಿ ಅವನ ಕೈಯಲ್ಲೆ ಇತ್ತು.

ಪ್ರೊಫೆಸರರ ಮಗಳು, ಅವನ ಪ್ರೇಯಸಿ ತನ್ನ ಮನೆಯ ಬಾಗಿಲಲ್ಲೇ ಕುರ್ಚಿಯೊಂದರಲ್ಲಿ ಕುಳಿತು, ತನ್ನ ರೇಶ್ಮೆ ಉಡುಗೆಗೆ ಕಸೂತಿ ಹಾಕುತ್ತಿದ್ದಳು. ಪುಟ್ಟ ನಾಯಿಯೊಂದು ಅವಳ ಪಾದದ ಬಳಿ ಬಿದ್ದುಕೊಂಡಿತ್ತು.

"ನಾನೊಂದು ಕೆಂಪು ಗುಲಾಬಿಯನ್ನು ತಂದರೆ ನನ್ನೊಂದಿಗೆ ನರ್ತಿಸುವೆನೆಂದು ಹೇಳಿದೆಯಲ್ಲವೆ?" ಹೂವನ್ನು ಮುಂದೆ ಚಾಚುತ್ತ ಯುವಕ ಉತ್ಸಾಹ ದಿಂದ ಮುಂದುವರಿಸಿದ, "ಇದೋ, ಇಲ್ಲಿದೆ.

ಅತ್ಯಂತ ಸುಂದರವಾದ ಕೆಂಪು ಗುಲಾಬಿ. ನಿನ್ನ ಹೃದಯದ ಪಕ್ಕದಲ್ಲಿಯೇ ನೀನು ಈ ರಾತ್ರಿ ಇದನ್ನು ಧರಿಸು. ನಾವು ನರ್ತಿಸುವಾಗ ಈ ಹೂವು ನಾನು ನಿನ್ನನ್ನೆಷ್ಟು ಪ್ರೀತಿಸುವೆನೆಂಬು-ದನ್ನು ಹೇಳುತ್ತದೆ."

ಯುವತಿ ಮೌನವಾಗಿದ್ದಳು. ತುಸು ತಡೆದು ನೀರಸದ ದನಿಯಲ್ಲಿ ಹೇಳಿದಳು, "ಅದು ನನ್ನ ಉಡುಪುಗಳಿಗೆ ಮ್ಯಾಚ್ ಆಗಲಾರದು ಅದೂ ಅಲ್ಲದೆ ಸರ್ ಚೇಂಬರ್ಲಿನ್ನರ ಕಸಿನ್ ಒಬ್ಬನು ನನಗೆ ಕೆಲವು ನೈಜ ಒಡವೆಗಳನ್ನು ಕಳಿಸಿ ಕೊಟ್ಟಿದ್ದಾನೆ. ನಾನು ಈ ದಿನದ ಔತಣ ಕೂಟದಲ್ಲಿ ಅವುಗಳನ್ನು ಧರಿಸಲೇಬೇಕೆಂದು ಅಪೇಕ್ಷಿಸಿದ್ದಾನೆ. ಒಂದು ಕೆಂಪು ಗುಲಾಬಿಗಿಂತ ನೈಜ ಒಡವೆಗಳು ಹೆಚ್ಚು ಬೆಲೆ ಬಾಳುವುದೆಂದು ಎಲ್ಲರಿಗೂ ಗೊತ್ತು."

ಯುವಕ ಕ್ರೋಧಗೊಂಡು ನುಡಿದ, "ನೀನು ಇಷ್ಟು ಕೃತಘ್ನಳೆಂದು ನಾನು ಭಾವಿಸಿರಲಿಲ್ಲ." ಕ್ರೋಧದಲ್ಲಿ ಅವನು ತನ್ನ ಕೈಯಲ್ಲಿದ್ದ ಕೆಂಪು ಗುಲಾಬಿಯನ್ನು ರಸ್ತೆಗೆಸೆದ. ಗಾಡಿಯ ಚಕ್ರ ಹೋಗಿ ಅದರ ಮೇಲೆ ಹರಿದು ಆ ಗುಲಾಬಿ ಹೂವನ್ನು ಹೊಸೆದು ಹಾಕಿತು.

"ಕೃತಘ್ನಳು?" ಯುವತಿ ಪ್ರಶ್ನಿಸಿದಳು, "ನೀನು ತುಂಬ ಒರಟ. ನಿನ್ನಿಂದ ನನಗೇನಾಗಬೇಕು? ನೀನು ಕೇವಲ ಒಬ್ಬ ವಿದ್ಯಾರ್ಥಿ. ಸರ್ ಚೇಂಬರ್ಲಿ-ನ್ನರ ಕಸಿನ್ನಿನಂತೆ ನಿನ್ನ ಶೂಗಳಿಗೆ ಬೆಳ್ಳಿಯ ಲೇಸ್ ಇದೆಯೇ?" ಎನ್ನುತ್ತಾ ಅವಳು ಎದ್ದು ಒಳಗೆ ಹೊರಟುಹೋದಳು.

"ಪ್ರೇಮ, ಪ್ರೀತಿ… ಎಷ್ಟು ಪೊಳ್ಳು," ತನ್ನಲ್ಲೇ ಹೇಳಿಕೊಳ್ಳುತ್ತ ಯುವಕ ಹೊರಟ, "ಪ್ರೀತಿ ಏನನ್ನೂ ಸಾಧಿಸುವುದಿಲ್ಲ. ಆದ್ದರಿಂದ ಅದು ತರ್ಕಶಾಸ್ತ್ರದ ಅರ್ಧದಷ್ಟು ಉಪಯುಕ್ತವಲ್ಲ. ತರ್ಕಶಾಸ್ತ್ರವು ಸಂಭವಿಸಲಾರದ್ದನ್ನು ಹೇಳುತ್ತದೆ: ಸತ್ಯವಲ್ಲದ್ದನ್ನು ನಂಬುವಂತೆ ಮಾಡುತ್ತದೆ. ನಿಜ ಹೇಳಬೇಕೆಂದರೆ ಅದನ್ನು ಆಚರಣೆಗೆ ತರಲು ಸಾಧ್ಯವಿಲ್ಲ. ಆದರೆ ಇದು ಅಸ್ತಿತ್ವವಾದದ ಯುಗ. ಪ್ರತಿಯೊಂದೂ ತನ್ನ ಅಸ್ತಿತ್ವವನ್ನು ಸಾಧಿಸಲೇಬೇಕು. ನಾನು ಪುನಃ ತತ್ತ್ವಶಾಸ್ತ್ರ ಮತ್ತು ಪಾರಮಾರ್ಥಿಕಗಳ ಅಭ್ಯಾಸಕ್ಕೇ ಹಿಂದಿರುಗುತ್ತೇನೆ."

ಅವನು ತನ್ನ ಕೊಠಡಿಗೆ ಹಿಂದಿರುಗಿದ. ಧೂಳು ಕವಿದ ದಪ್ಪ ದಪ್ಪ ಗ್ರಂಥಗಳ ಧೂಳನ್ನು ಕೊಡವಿ ಉದ್ಗ್ರಂಥವೊಂದನ್ನು ಬಿಡಿಸಿ ಓದುತ್ತ ಕುಳಿತ. ★



ಸುಖ ನಾವು ಸೇರಲಿಚ್ಛಿಸುವ ಯಾವುದೇ ತಾಣವಲ್ಲ, ಅದನ್ನು ಸೇರಲು ಮಾಡುವ ಪ್ರಯಾಣ. —ಮಾರ್ಗರೇಟ್ ಲೀ ರನ್‌ಬೆಕ್

ಸಂತೋಷವಾಗಿರುವಾಗ ಎಲ್ಲರೂ ಸಮತಾವಾದಿಗಳಾಗಿರುತ್ತಾರೆ.

—ಜಿ. ಕೆ. ಚೆಸ್ಟರ್‌ಟನ್

ಈ ಪ್ರಪಂಚದಲ್ಲಿ ಯಾವುದೇ ಒಬ್ಬ ಮನುಷ್ಯ ಅಡಿಗಲ್ಲಾಗಿರಬೇಕು, ಇಲ್ಲವೇ ಸುತ್ತಿಗೆಯಾಗಿರಬೇಕು. —ಲಾಂಗ್‌ಫೆಲೊ

ಸಂಗ್ರಹ: ಸಿ. ಎಸ್. ಸುನಂದನ

ಇದುವೇ ಜೀವ ಇದು ಜೀವನ

ಅದೊಂದು ರವಿವಾರ. ನಾನು ಸ್ಥಳೀಯ ಪತ್ರಿಕೆಯೊಂದನ್ನು ಮುಗುಚಿ ಹಾಕುತ್ತಾ ಕುಳಿತಿದ್ದೆ. "ಸಾರ್" ಎಂಬ ಧ್ವನಿಯನ್ನು ಕೇಳಿ ಕತ್ತೆತ್ತಿ ನೋಡಿದೆ. ಚಿಗುರು ಮೀಸೆಯ ನವಯುವಕನೊಬ್ಬ ನಿಂತಿದ್ದ. ನನ್ನ ಪ್ರಶ್ನಾರ್ಥಕ ದೃಷ್ಟಿಯನ್ನು ಗಮನಿಸಿ, ಅವನೇ ಮೊದಲು ಮಾತನಾಡಿದ. "ಸಾರ್, ನನ್ನ ತಾಯಿಯು ನಿಮ್ಮ ಹತ್ತಿರ ಆಪರೇಶನ್ ಮಾಡಿಸಿಕೊಂಡಿದ್ದಾರೆ. ಅದಕ್ಕೆ ನಾನು ನಿಮಗೆ ಎಷ್ಟು ಫೀ ಕೊಡಬೇಕು?" ಎಂದ. ನನ್ನ ಮೌನವನ್ನು ಗಮನಿಸಿ ಮತ್ತೆ ಮುಂದುವರೆಸಿದ. ತಾನೊಬ್ಬ ಕೊನೆಯ ವರ್ಷದ ವೈದ್ಯಕೀಯ ವಿದ್ಯಾರ್ಥಿಯೆಂದೂ, ತನ್ನ ತಾಯಿಯ ಆಪರೇಶನ್ನನ್ನು ನಾನು ಮಧ್ಯರಾತ್ರಿಯಲ್ಲಿ ಬೇರೆಡೆ ನರ್ಸಿಂಗ್ ಹೋಮಿನಲ್ಲಿ ಮಾಡಿದ್ದಕ್ಕಾಗಿ ತಮ್ಮ ಮನೆಯವರೆಲ್ಲರೂ ಉಪಕೃತರಾಗಿದ್ದೇವೆಂದೂ ಅಲ್ಲದೆ ಇನ್ನೂ ಏನೇನೋ ಹೇಳುತ್ತಲಿದ್ದ. ನನಗೆ ಇದಾವುದರ ಮೇಲೂ ಧ್ಯಾನವಿರಲಿಲ್ಲ. ನನ್ನ ಮನಸ್ಸು ೩೫ ವರ್ಷಗಳ ಹಿಂದಿನ ಘಟನೆಯೊಂದನ್ನು ನೆನೆಯುತ್ತಲಿತ್ತು. ಆಗ ನಾನೂ ವೈದ್ಯಕೀಯ ವಿದ್ಯಾರ್ಥಿಯಾಗಿದ್ದೆ.

ನನ್ನ ತಾಯಿಗೆ ಆಗ ಎಲುಬಿನ ಕ್ಷಯ. ಅವಳನ್ನು ಜನರಲ್ ಆಸ್ಪತ್ರೆಯಲ್ಲಿ ದಾಖಲು ಮಾಡಿದ್ದೆ. ನನ್ನ ಗುರುಗಳಾದ ಡಾ. ಮೋಟವಾನಿಯವರು ನಮ್ಮ ತಾಯಿಗೆ ಆಪರೇಶನ್ ಮಾಡಿದ್ದರು. ದಿನಾಲು ಅವಳಿಗೆ ಡ್ರೆಸಿಂಗ್ ಮಾಡುವುದೂ ಔಷಧ, ಗುಳಿಗೆಗಳನ್ನು ನಿಯಮಿತವಾಗಿ ಕೊಡುವುದೂ ನನ್ನದೇ ಕೆಲಸವಾಗಿತ್ತು. ಮೋಟವಾನಿಯವರು ಅದೇ ಆಸ್ಪತ್ರೆಗೆ ದಿನ ನಿತ್ಯವೂ ಬಂದು ನಮ್ಮ ತಾಯಿಯನ್ನು ಆತ್ಮೀಯವಾಗಿ ಮಾತನಾಡಿಸಿಕೊಂಡು ಹೋಗುತ್ತಿದ್ದರು. ಅವರ ಆತ್ಮೀಯ ಭಾವ. ಸಿಹಿಯಾದ ಮಾತು ಹಾಗೂ ವೈದ್ಯಕೀಯ ಕೌಶಲದಿಂದ ನನ್ನ ತಾಯಿಯ ರೋಗ ಅರ್ಧ ವಾಸಿಯಾಗಿತ್ತು. ಇಂಥದರಲ್ಲಿ ಮೋಟವಾನಿಯವರು ಜನರಲ್ ಆಸ್ಪತ್ರೆಯನ್ನು ಅದಾವುದೋ ಕಾರಣದಿಂದ ಬಿಟ್ಟುಹೋಗುವರೆಂದೂ ಮುಂದೆ ತಮ್ಮದೇ ನರ್ಸಿಂಗ್ ಹೋಮಿನಲ್ಲಿ ಕೆಲಸ ಮಾಡುವರೆಂದೂ ಸುದ್ದಿ ಹರಡಿತು. ಇದನ್ನು ಕೇಳಿ ಮನಸ್ಸಿಗೆ ಖೇದವೂ ಆಯಿತು.

ಈ ಸುದ್ದಿಯನ್ನು ಕೇಳಿದ ಮರುದಿನವೇ ಸ್ವಲ್ಪ ಧೈರ್ಯದಿಂದ ಹೋಗಿ ಡಾ. ಮೋಟವಾನಿಯವರನ್ನು ಭೇಟಿಯಾಗಿ ನನ್ನ ಕಷ್ಟವನ್ನು ತೋಡಿಕೊಂಡೆ. ಆದರೆ ಅವರು ನಸು ನಗುತ್ತ ನನ್ನ ತಾಯಿಯನ್ನು ಅಲ್ಲಿಯೇ ಕರೆದುಕೊಂಡು ಬರಲು ಹೇಳಿದರು. ಹೀಗಾಗಿ ಮುಂದಿನ ಚಿಕಿತ್ಸೆ ಅವರ ಹೊಸ ನರ್ಸಿಂಗ್ ಹೋಮಿನಲ್ಲಿಯೇ ನಡೆದು ನಮ್ಮ ತಾಯಿಗೆ ಸಂಪೂರ್ಣ ಗುಣವಾಯಿತು. ನನ್ನ ಹೃದಯ ಸಂತೋಷದಿಂದ ಕುಣಿದಾಡಿತು. ಆ ಕಾಲದ ಸುಪ್ರಸಿದ್ಧ ವೈದ್ಯರಾದ ಮೋಟವಾನಿಯವರಿಗೆ ಅವರು ಎಷ್ಟು ಫೀಸು ಕೇಳಿದರೂ ಕೊಟ್ಟೇಬಿಡಬೇಕೆಂದು ನಿರ್ಧರಿಸಿದೆ. ಈ ಬಾಲಕನ ಪ್ರಶ್ನೆಯನ್ನು ನಾನಾಗ ಕೇಳಿದಾಗ ಅವರು, "ನೀನು ನಾನು ಕೇಳಿದಷ್ಟು ಫೀಸು ಕೊಡುವೆಯಾ?" ಎಂದರು. ನಾನು ಅದಕ್ಕೆ ಸಮ್ಮತಿಸಿದೆ. "ನನ್ನ ತಾಯಿಯಂತೆಯೇ ನಿನ್ನ ತಾಯಿ. ನನ್ನ ತಾಯಿಯಿಂದ ನಾನು ಫೀಸು ತೆಗೆದುಕೊಳ್ಳಲೆ? ನಿನಗೆ ಕೊಡಲೇಬೇಕೆಂಬ ಹಟವಿದ್ದರೆ, ನೀನೂ ಯಾರ ಹತ್ತಿರವೂ ದುಡ್ಡನ್ನು ಒತ್ತಾಯವಾಗಿ ಕೇಳಬೇಡ," ಎಂದರು.

ಇಂದು ನನ್ನ ತಾಯಿಯೂ ಇಲ್ಲ; ಮೋಟವಾನಿಯವರೂ ಇಲ್ಲ. ಅವರ ಸವಿ ನೆನಪು ಮಾತ್ರ ಹೃದಯಲ್ಲಿ ತುಂಬಿದೆ. ಅದನ್ನು ಪುನಃ ಹಸಿರು ಮಾಡಿದ್ದಕ್ಕಾಗಿ ಕೃತಜ್ಞತೆ

314-13

ಯಿಂದ ಆ ಕಿರಿಯ ವೈದ್ಯನನ್ನು ನೋಡಿ ಏನೂ ಕೊಡಬೇಕಾಗಿಲ್ಲವೆಂಬಂತೆ ಗೋಣು ಅಲ್ಲಾಡಿಸಿ ಮತ್ತೆ ಪತ್ರಿಕೆಯನ್ನು ಓದ ತೊಡಗಿದೆ.

—'ಶ್ರೀನಿವಾಸ'

ನನ್ನ ಆಫೀಸಿನಿಂದ ರೂಮಿಗೆ ಬರಲು ಕೊನೆಯ ಬಸ್ಸು ಆರೂವರೆಗೆ. ಒಂದು ಸಲ ಆಫೀಸಿನಲ್ಲಿ ಏಳೂವರೆಯ ವರೆಗೆ ಕುಳಿತುಕೊಳ್ಳಬೇಕಾದ ಪ್ರಸಂಗ ಬಂದಿತ್ತು. ಇನ್ನೇನು, ಬಸ್ಸಿಲ್ಲ ನಡೆಯುತ್ತಲೇ ಹೋಗಬೇಕು ಎನ್ನುವಾಗಲೇ ದಾರಿಯಲ್ಲಿ ಶ್ರೀನಿವಾಸ ಕಂಡ. ನನ್ನ ಬದಿಗೆ ಸೈಕಲ್ ನಿಲ್ಲಿಸಿ, "ಯಾಕೆ ತಡಮಾಡಿದೆ?" ಎಂದ. "ಲೇಟಾಯ್ತು," ಎಂದೆ. ಆತ ನಕ್ಕ. "ನೀನು ಈ ಕಡೆ?" ಎಂದು ಅವನು ಬಂದ ಕಾರಣ ಕೇಳಿದೆ. "ಸ್ನೇಹಿತನ ಮನೆಗೆ ಹೋಗಿದ್ದೆ," ಎಂದು ಹೇಳಿ, "ಬಾ, ಹತ್ತು, ಡಬ್ಬಲ್ ಹೋಗೋಣ," ಎಂದು ಸೈಕಲ್ ಮೇಲೆ ಕುಳಿತುಕೊಳ್ಳಲು ಹೇಳಿದ. ನನಗೆ ಪೋಲೀಸರದೇ ಹೆದರಿಕೆ. ಆದರೂ ನಡೆಯುತ್ತ ಹೋಗಲು ಬೇಜಾರು. "ಸರ್ರಂತ ಹೋದ್ರಾಯ್ತು ಬಾ," ಎಂದ; ಹತ್ತಿದೆ.

ಸರ್ಕಲ್ಲಿಗೆ ನಿಂತೇ ಇದ್ದ ಪೋಲೀಸ. "ನೀನೇನೂ ಮಾತಾಡಬೇಡ, ಸುಮ್ಮಿರು," ಎಂದು ಶ್ರೀನಿವಾಸ ನನಗೆ ಉಪದೇಶಿಸಿದ. "ನಾನು ಇಳಿಯುತ್ತೇನೆ" ಎಂದೆ. "ಬೇಡ ಸುಮ್ಮಿರು," ಎಂದು ಹೇಳಿ ಹಾಗೆಯೇ ಸೈಕಲ್ ಜೋರಾಗಿ ಹೊಡೆದ. ಪೋಲೀಸ್ ನಿಲ್ಲಿಸುವಂತೆ ಆಜ್ಞೆ ಮಾಡಿದ. ಶ್ರೀನಿವಾಸ ಸೈಕಲ್ ನಿಲ್ಲಿಸಿದ.

"ಯಾಕ್ರೀ, ಪ್ರತಿ ದಿನ ಡಬ್ಬಲ್ ಹೋಗೋದಾ? ಒಂದು ದಿನ ಹೇಳಿದರೆ ತಿಳಿಯೋದಿಲ್ಲೇನು?" ಎಂದು ಜಬರದಸ್ತಿಯಿಂದಲೇ ಕೇಳಿದ. ಶ್ರೀನಿವಾಸ ಏನೂ ಮಾತಾಡದೆ ಅವನ ಕಿಸೆಯಲ್ಲಿ ನಾಣ್ಯ ಒಗೆದ. ಡೈರಿಯನ್ನಿಟ್ಟುಕೊಂಡಿದ್ದ ಕಿಸೆ ಉಬ್ಬಿ ಆ ನಾಣ್ಯವನ್ನು ಬೇಗನೆ ಒಳಸೇರಿಸಿ ಕೊಂಡಿತು!

"ಏನ್ರಿ, ಡಬಲ್ ಹತ್ತಿದೀರಿ, ಲೈಟ್ ಬೇರೆ ಇಲ್ಲ. ಕೇಳಿದ್ರೆ ಚಿಲ್ಲರೆ ಹಾಕ್ತಿದೀರಿ. ತೆಗೀರಿ ನೋಟು," ಎಂದು ಠೀವಿಯಿಂದ ಹೇಳುತ್ತ ನಾಣ್ಯವನ್ನು ಶ್ರೀನಿವಾಸನಿಗೆ ಕೊಟ್ಟು ನೋಟಿಗಾಗಿ ಆಸೆಪಟ್ಟ.

"ಈವತ್ತು ನೋಟಿಲ್ಲ. ನಾಳೆ ಕೊಡುತ್ತೇವೆ," ಎಂದ ಶ್ರೀನಿವಾಸ.

"ನಾಳೆ ನೆನಪಿಟ್ಟು ಕೊಡಿ. ನಾಳೆ ಮರೆತರೆ ಕೇಸ್ ಹಾಕ್ತೇನೆ ನೋಡಿ," ಎಂದ. ಪೋಲೀಸ್ ಪೆದ್ದ ಇದ್ದಾನೆಂದು ನನಗನ್ನಿಸಿತು.

ಸೈಕಲ್ ಹತ್ತಿ ಹೊರಟೆವು. "ನೀನು ಪ್ರತಿ ದಿವಸ ಡಬ್ಬಲ್ ಬರ್ತೀಯಾ? ಯಾರನ್ನು ಕರೆದುಕೊಂಡು?" ಎಂದು ಶ್ರೀನಿವಾಸನನ್ನು ಕೇಳಿದೆ. "ನಾನೂ ಅದನ್ನೇ ನಿನ್ನನ್ನು ಕೇಳಬೇಕೆಂದಿದ್ದೆ," ಎಂದುಬಿಟ್ಟ!

"ಸರಿಯಾಯ್ತಲ್ಲ," ಎಂದೆ.

ಬೀಡಿ ಅಂಗಡಿ ಬಂತು. ಶ್ರೀನಿವಾಸ ನನಗೆ ಕೆಳಗಿಳಿಯಲು ಹೇಳಿದ, ಇಳಿದೆ. ತಾನೂ ಇಳಿದ. "ನಡೆ, ಸಿಗರೇಟು ಸೇದಿ ಬರುವಾ," ಎಂದ. "ಈಗೇಕೆ? ಬೇಡವೋ. ರೂಮಿಗೆ ಹೋಗಿ ಸೇದೋಣ," ಎಂದೆ.

"ಪಾಪದ ದುಡ್ಡು ಬಹಳ ಹೊತ್ತು ಇರಬಾರದು, ಬಾ," ಎನ್ನುತ್ತ ಬೀಡಿ ಅಂಗಡಿಗೆ ಹೋಗಿ ನಾಲ್ಕಾಣೆ ಕೊಟ್ಟು ಎರಡು ಸಿಗರೇಟು ಪಡೆದು ನನಗೊಂದು ಕೊಟ್ಟ.

"ಪಾಪದ ದುಡ್ಡು ಹೇಗೆ?" ಎಂದು ಹುಬ್ಬೇರಿಸಿ ಕೇಳಿದೆ.

"ನಾಲ್ಕಾಣೆ ಒಗೆದಿದ್ದೆ, ಎಂಟಾಣೆ ಕೊಟ್ಟಿದ್ದಾನೆ," ಎಂದ!

—ಶ(ಕು)ನಿ

ಮೂರು ದಾರಿಗಳು



ಲೇಖಕರು : ಯಶವಂತ ಚಿತ್ತಾಲ

ಸಂಗ್ರಹ : ರಾಮದಾಸ

ಮೂರು ದಾರಿಗಳು

ದೃಷ್ಟಿಯಂತೆ ಸೃಷ್ಟಿ. ಆದರೆ ದೃಷ್ಟಿಕೋನ ಸೃಷ್ಟಿಯನ್ನು ವಾಸ್ತವಿಕ ಸ್ಥಿತಿಯಲ್ಲಿ ಬೇರ್ಪಡಿಸದೆ ಸೃಷ್ಟಿಗೆ ನೋಡುವವರ ವ್ಯಕ್ತಿತ್ವವನ್ನೇ ಆರೋಪಿಸುತ್ತದೆ. ಆಗ ವಾಸ್ತವವೇ ಭ್ರಮೆಯಾಗುತ್ತದೆ; ಭ್ರಮೆಯೇ ವಾಸ್ತವವಾಗುತ್ತದೆ. ಈ 'ದೃಷ್ಟಿದೋಷ' ಎಂತೆಂತಹ ಅನಾಹುತಕ್ಕೆಡೆಮಾಡಿಕೊಡುತ್ತದೆ; ಅದರಿಂದ ನಿಷ್ಪಾಪಿ ಜೀವವೊಂದು ಹೇಗೆ ಬಲಿಯಾಗುತ್ತದೆ ಎನ್ನುವುದರ ದುರಂತ ಚಿತ್ರಣ ಇದು.

ಹೆಜ್ಜೆ ಮೂಡದ ಹಾದಿಯಲ್ಲಿ…

ಶ್ರಾವಣ. ಪಾಣೇಶಕಟ್ಟೆಯ ಧಕ್ಕೆಯಲ್ಲಿ ಆಗ ರಾತ್ರಿಯಾಗಿತ್ತು. ಕುಮಟೆಗೆ ಹೋಗುವ ಜನರನ್ನು ಒಯ್ಯುವ 'ಬೋಟ' ಸಿದ್ಧವಾಗಿ ನಿಂತಿತ್ತು. ಬೋಟಿಯಲ್ಲಿ ಅದಾಗಲೇ ಜಾಗ ಹಿಡಿದು ಕುಳಿತವರ ಗುಜು ಗುಜು ಮಾತು ನಡೆದಿತ್ತು.

ತುಸು ಹೊತ್ತಿನಲ್ಲೇ ಇಳಿವಯಸ್ಸಿನ ಗೃಹಸ್ಥರೊಬ್ಬರು ಕಂದೀಲು ಹಿಡಿದ ಗೌಡನೊಂದಿಗೆ ಓಡೋಡುತ್ತ ಬಂದು ಧಕ್ಕೆಯನ್ನು ತಲುಪಿದರು. ಸಮಾಧಾನದ ನಿಟ್ಟುಸಿರು ಬಿಟ್ಟು. ಬೇಡಬೇಡ-ವೆಂದರೂ ಐದಾಣೆ ಚವಲಿಯೊಂದನ್ನು ಗೌಡನ ಕೈಯಲ್ಲಿ ತುರುಕಿ ಅವನನ್ನು ಬೀಳ್ಕೊಟ್ಟು ನಾವೆಯಲ್ಲಿ ಕಾಲಿರಿಸಿದರು.

ನಾವೆಯಲ್ಲಿ ಅಷ್ಟೇನೂ ಸಂದಣಿ ಇರಲಿಲ್ಲ. ಕಾಲಕೆಳಗಿನ ಜಮಖಾನೆ ಬಹಳ ಕೊಳಕಾಗಿತ್ತು. ತಳದ ಹರಕು ಚಾಪೆಯೂ ಹೊರಗೆ ಕಾಣಿಸುತ್ತಿತ್ತು. ಬೇರೆಡೆಗೆ ಜಾಗವಿರಲಿಲ್ಲ. ನಿರುಪಾಯರಾಗಿ ಹಾಸಲೆಂದು ಕೈಚೀಲದಲ್ಲಿ ತಂದ ಚಾದರವನ್ನು ಹೊರತೆಗೆಯಹತ್ತಿದರು.

ಕಾಲಬದಿಯಲ್ಲೇ ಬಿಟ್ಟಿ ಗೌಡ ಕಂಬಳಿ ಹಾಸಿ
ಮಲಗುವ ತಯಾರಿಯಲ್ಲಿದ್ದ. ಅವನ ಮ…
ಸರಿಯಾಗಿ ಕಾಣುತ್ತಿರಲಿಲ್ಲ, ಆದರೂ ಕೇಳಿದ…
"ಏನೋ ಗೌಡಾ, ಬೋಟ ಬಿಡಲಿಕ್ಕೆ ಇ…
ತಡವಿದೆಯಂತೋ ?" ಗೌಡ ಜಿಗಿದು ಬ…
ಒಮ್ಮೆಲೆ ಎದ್ದು ಕುಳಿತು, "ಇದೆ ವಿಶ್ವನ…
ಒಡೆದೇರು, ನೋಡಲೇ ಇಲ್ಲಾ. ಇದ್ ಹಿಡಿ…
ಕಂಬಳಿ ಹಾಸಿಕೊಳ್ಳಿ," ಎಂದು ಆಗ್ರಹ…
ತನ್ನ ಕಂಬಳಿ ಹಾಸಿಕೊಟ್ಟು, ಅವರ ಕಾಲ…
ಯಲ್ಲಿಯೇ ಕುಳಿತ.

ಜಮಖಾನಿನ ಇನ್ನೊಂದು ಕೊನೆಯಲ್ಲಿ ಐದಾ…
ಮಂದಿ ರಸಿಕರ ಇಸ್ಪೀಟು ಕೂಟ ನಡೆದಿತ…
ಆಟ ಒಳ್ಳೆ ರಂಗಕ್ಕೆ ಬಂದಿತ್ತು. ಅವರಲ್ಲನೇಕ…
ಶಾನುಭೋಗರ ಪರಿಚಯದವರು. ಬೋಟಿ…
ಆ ತುದಿಯಲ್ಲಿ ಅಂಬಿಗರ ಹೆಂಗಸರು ಕೆಲ…
ತಮ್ಮ ಮನೆಮಾತುಗಳಲ್ಲಿ ತೊಡಗಿದ್ದರು.

ಶಾನಭಾಗರು ಕವಳದ ಚೀಲವನ್ನು ಹೊ…
ತೆಗೆದು ಗೌಡನಿಗೆ ಎಲೆ ಅಡಿಕೆ ಕೊಟ್ಟು ತಾ…
ಒಂದು ಕವಳವನ್ನು ಹಾಕಿಕೊಂಡರು.

"ಎಲ್ಲಿ ಕುಮಟೆಗೋ?" ಎಂದು ಗೌಡನೊಂ…

ಮಾತಿಗೆ ಆರಂಭಿಸಿದರು. ಗೌಡ ಮಾತಿನ ಮಧ್ಯ ನಕ್ಕು, ಮತ್ತೆ ತುಸು ತಡೆದು," "ಒಡೆಯಾ, ಸಣ್ಣ ಅಮ್ಮನವರ ಮದ್ವಿ ಎಂದ್ ಮಾಡ್ತಿ?" ಎಂದು ಕೇಳಿದ.

ಪ್ರಶ್ನೆ ಸಹಜವಾಗಿತ್ತು. ಶಾನಭಾಗರು ಮಾತ್ರ ಅದರಲ್ಲಿ ಭಯಂಕರ ಅರ್ಥವನ್ನೇ ಕಂಡವರಂತೆ ಒಮ್ಮೆಲೆ ಬೆಚ್ಚಿಬಿದ್ದರು. "ಉಸ್" ಎಂದು ನಿಶ್ವಾಸಬಿಟ್ಟರು. "ಹುಂ, ನೋಡಬೇಕು, ದೇವರ ಇಚ್ಛೆ ಹೇಗಿದೆಯೋ ಎಂದು," ಎಂದು ದಣಿದವರಂತೆ ನುಡಿದರು.

ಗೌಡನ ಪ್ರಶ್ನೆಯಿಂದ, ಸಂಜೆಯಿಂದಲೂ ಮರೆಯುತ್ತಲಿದ್ದ ಸಂಗತಿಯೊಂದು ಮನಸ್ಸನ್ನು ಆವರಿಸಿ ಕಾಡಹತ್ತಿತು. ನಿದ್ದೆ ಮಾಡಲು ಯತ್ನಿಸಿದರೂ ಮನದ ಬೇಗುದಿ ಹೆಚ್ಚುತ್ತಲೇ ಉಳಿಯಿತು. ಎರಡು ಮೂರು ಸಲ ಪಕ್ಕ ಬದಲಿಸಿದರು; ಮತ್ತೆ ಎದ್ದು ಕುಳಿತರು.

ಕವಳದ ಎಂಜಲನ್ನು ಉಗುಳಲು ಎದ್ದ ಸದಸ್ಯನೊಬ್ಬ ಇವರನ್ನು ಗುರುತಿಸಿದ. ಹತ್ತಿರ ಬಂದು, "ಅರೆ ! ವಿಶ್ವನಾಥ ಶಾನಭಾಗರೋ ನೋಡ್ತೆ. ಒಬ್ಬರೇ ಕುಳಿತುಬಿಟ್ಟಿರಲ್ಲ? ನಾವೂ ನೋಡಲೇ ಇಲ್ಲ. ಬನ್ನಿ ಬನ್ನಿ ಎಲ್ಲಾ ಆಟಾ ಶುರುವಾಯ್ತು ನೋಡಿ," ಎಂದು ಬಲವಂತಗೊಳಿಸಿದ. ಅವರನ್ನು ತಮ್ಮ ಕೂಟಕ್ಕೆ ಸೇರಿಸಿಕೊಂಡ ವೆಂಕಟರಮಣ.

ಮಾತಿನ ಮಧ್ಯದಲ್ಲಿ ವೆಂಕಟರಮಣ ಅತಿ ಸಲುಗೆಯಲ್ಲಿ ಕೇಳಿದ:

"ಅಲ್ಲಾರಾ ಶಾನುಭಾಗರೇ, ತಮ್ಮ ತಂಗಿಯಂದಿರ ಮದ್ವಿ, ಅಣ್ಣನ ಮಕ್ಕಳ ಮುಂಜಿ ಮಾಡುವುದರಲ್ಲೇ ಮುಂದುಕಲಾದಿರಿ. ನಿಮ್ಮ ಮಗಳ ಮದುವೆ ಎಂದು ಮಾಡ್ತೀ?" ತಿರುಗಿ ಅದೇ ಪ್ರಶ್ನೆ.

"ನೀವು ಯಾರಾದರೂ ಕೂಡಿರೋ, ನನಗೆ ದಣಿವಾಗಿದೆ. ಹೋಗಿ ಮಲಗಿಕೊಳ್ಳುತ್ತೇನೆ," ಎಂದು ಎದ್ದೇಬಿಟ್ಟರು.

ಶಾನುಭಾಗರು ತಮ್ಮ ಆಗಿನ ಮನಸ್ಥಿತಿಯಲ್ಲಿ ಮಲಗುವುದು ಅಸಾಧ್ಯವಾಗಿತ್ತು. ಅವರು ಮಾಡಿನ ಹೊರಗೆ ಹೋಗಿ ಕುಳಿತರು.

ಇಡಿಯ ಊರಿಗೆ ಊರೇ ತಮ್ಮ ಮಗಳ ಮದುವೆಯ ಬಗ್ಗೆ ಮಾತನಾಡುತ್ತಿದೆಯೆಂಬ ಭಯಂಕರ ಭಾಸವಾಯಿತು. ಅಯ್ಯೋ! ಇವರೆಲ್ಲರಿಗೆ ಆ ಪ್ರಕರಣ ಇದಾಗಲೇ ತಿಳಿದು ಬಿಟ್ಟಿದೆಯೇ? ಎಂದು ಅವರ ಜೀವ ಹಲುಬಿತು.

೨

ಅಂಗಡಿಯ ಬಾಗಿಲು ಮುಚ್ಚಿ ಮನೆಯ ಹಾದಿ ಹಿಡಿದ ಶಾನುಭಾಗರನ್ನು ಕಿರಿಕಿರಿ ಆವರಿಸಿತ್ತು. ನೆತ್ತಿಯ ಮೇಲೆ ಉರಿದ ಸೂರ್ಯ, ಕಾಲಡಿಯ ಮಳಲು ಕಾದು ಕೆಂಡವಾಗಿತ್ತು.

ಮನೆಯ ದಣಪೆಯನ್ನು ಸಮೀಪಿಸುವಾಗ ಹೋನಪ್ಪನಾಯ್ಕರು ಭೆಟ್ಟಿಯಾದರು. "ಯಾರು ವಿಶ್ವನಾಥನೊ? ಅಂಗಡಿ ಮುಚ್ಚಲು ಹೊತ್ತಾಯ್ತೇ ನೋಡ್ತೆ."

"ಹೌದು ಹೋನಪ್ಪ, ಅಗರದಿಂದ ಉಪ್ಪು ಬರುವುದಿತ್ತು. ಏನು ಮೀನು ಪೇಟೆಯಿಂದ ಬಂದೆಯೋ?"

"ಹೂಂ. ನಿಮ್ಮಲ್ಲಾರೋ ನೆಂಟರು ಬಂಧಾಂಗೆ ಇದೆಯಲ್ಲ?"

"ನಮ್ಮ ಮನೆಯಲ್ಲಿ? ಯಾರಿರಬಹುದು ?"

"ಬಂದವನ ಸಂಗಡ ನಿಮ್ಮ ಮಗಳನ್ನು ನೋಡಿದ ಹಾಂಗಿತ್ತು." ಎಂದು, "ನನಗೂ ಸಾಕಷ್ಟು ಹೊತ್ತಾಗಿದೆ. ಸಂಜೀಗೆ ಅಂಗಡೀ ಕಡೆಗೆ ಬರ್ತೆ," ಎಂದವರೇ ಹೋನಪ್ಪ ನಾಯ್ಕರು ಮನೆಯ ಹಾದಿ ಹಿಡಿದರು.

ಮನೆಯ ಮೆಟ್ಟಿಲೊಂದರಲ್ಲಿ ಚಪ್ಪಲಿಗಳನ್ನು ತೆಗೆದಿಡುತ್ತ ಕೆಮ್ಮಿದರು. ಆ ಕೆಮ್ಮಿನಿಂದ ಎಚ್ಚೆತ್ತ ವ್ಯಕ್ತಿ, "ಓ ಮಾವಾ! ಈಗೀಗ ಬಂದೆಯಾ? ತಡವಾಯಿತಲ್ಲ ? ಎನ್ನುತ್ತ ಎದ್ದು ಕುಳಿತಿತು.

"ಅರೆ ರಾಮನಾಥಾ. ಯಾವಾಗ ಬಂದೆ?"

"ನಿರ್ಮಲೆಯೂ ಬಂದಿದ್ದಾಳೆ."

"ನಿರ್ಮಲೆ? ಜೀವನದಲ್ಲಿ ಸೌಖ್ಯ ತಾನೆ?"

ಅಷ್ಟರಲ್ಲಿ ಶಾನುಭಾಗರ ಪತ್ನಿಗೆ ರಾಧಮ್ಮನವರು, ರಾಮನಾಥನಿಗೆ ಸನ್ನೆ ಮಾಡಿ, ಹೇಳಿದರು: "ವಿಶ್ವನಾಥ, ರಾಮನಾಥನದಿನ್ನೂ ಊಟ

ವಾಗಿಲ್ಲ. ಬೇಗ ಸ್ನಾನ ಮಾಡಿ ದೇವರ ಪೂಜೆ ಮುಗಿಸು..." ಎಂದರು.

ಊಟ ಮುಗಿಸಿ ಶಾನಭಾಗರು ತಮ್ಮ ಕೋಣೆಗೆ ನಡೆದರು. ರಾಮನಾಥ ಅವರನ್ನೇ ಹಿಂಬಾಲಿಸಿದ. ರಾಧಮ್ಮನವರು ಬಾಗಿಲಲ್ಲೇ ನಿಂತರು.

"ಅಂದರೆ ನಿರ್ಮಲೆ ರಜೆಗೆ ಮೊದಲೇ ಶಾಲೆ ಬಿಟ್ಟು ಬಂದದ್ದು, ಬರಿಯ ಹೊಟ್ಟೆ ನೋವಿನಿಂದಲ್ಲ—ಅಲ್ಲವೇ?"

ಶಾನಭಾಗರು ಗಂಭೀರವಾಗಿ ಕೇಳಿದರು.

ಉತ್ತರ ರೂಪವಾಗಿ ರಾಧಮ್ಮನವರೇ ಮಾತನಾಡಿದರು.

"ನಿನಗೆ ಒಮ್ಮೆಲೆ ಸಿಟ್ಟು ಬರುತ್ತದೆ ವಿಶ್ವನಾಥಾ. ಇಂತಹ ವಿಷಯದಲ್ಲಿ ಸಿಟ್ಟಿನ ಕೈಯಲ್ಲಿ ಬುದ್ಧಿಕೊಟ್ಟು ಉಪಯೋಗವಿಲ್ಲ."

"ನೀವು ಹೀಗೆ ಸುತ್ತುಸುತ್ತಾಗಿ ಹೇಳಿದರೆ ಹ್ಯಾಗೆ?"

"ವನ್ಮಯ್ಯ ವಿಶ್ವನಾಥ, ತುಸು ಸಾವಕಾಶ ಮಾತನಾಡಬಾರದೆ? ಇಲ್ಲಿ ಆಗದವರ ಕಿವಿಗಳು ಸದಾ ಕೇಳುತ್ತಿರುತ್ತವೆ."

"ಅಂದರೆ, ವಿಷಯ ಅಷ್ಟು ದೂರಕ್ಕೆ...?"

ಅವಕಾಶವನ್ನು ಕಾಯುತ್ತ ಕುಳಿತಿದ್ದ ರಾಮನಾಥ ಹೇಳಿದ. "ಮಾವ, ಇನ್ನು ಮುಂದೆ ನಿರ್ಮಲೆಯ ಶಾಲೆಯ ಜವಾಬುದಾರಿ ನಮಗೆ ಬೇಡ. ಅವಳು ಶಾಲೆ ಕಲಿಯುವದೇ ಇದ್ದರೆ, ಬೇರೆ ಏನಾದರೂ ವ್ಯವಸ್ಥೆ ಮಾಡಿ. ಆದರೆ ನಮ್ಮಲ್ಲಿ ಬೇಡ. ನಾಳೆ ಊರಲ್ಲಿ ತಲೆ ಎತ್ತಿ ತಿರುಗುವುದು ಕಠಿಣವಾದೀತು."

"ಓ ಬಿಡೋ! ನಿರ್ಮಲೆ ಅಂಥಿಂಥಹ ಮನೆತನದ ಹುಡುಗಿಯಲ್ಲ. ಖಬರದಾರ್! ಏನು ಹೇಳಬೇಕಾಗಿದೆಯೋ ಅದನ್ನು ಸರಳವಾಗಿ ಹೇಳು."

ನಿರ್ಮಲೆಯನ್ನು ನಮ್ಮ ಮನೆಯಲ್ಲಿ ನಿಲ್ಲಿಸಿದ್ದು ಶಾಲೆ ಕಲಿಯಲೆಂದೋ? ಅಥವಾ, ಫೋಟೋ ಸ್ಟುಡಿಯೋದ ರಂಗಪ್ಪನ ಗೆಳೆತನ ಬೆಳೆಸಲೋ?"

"ರಾಮನಾಥಾ...?"

"ಕಳೆದ ೧ ವರ್ಷದಿಂದಲೂ ನಿರ್ಮಲೆಯ ಲಕ್ಷ್ಯ ಕಲಿಯುವದರಲ್ಲಿಲ್ಲ. ಶಾಲೆಯಲ್ಲಿ ಇಲ್ಲದ ಹುಡುಗರ ಸಂಗಡ ಗೆಳೆತನ ಬೆಳೆಸಿದ್ದಾಳೆಂದು ಗಾಳಿಮಾತು ಅಷ್ಟರವರೆಗೂ ಬಂದಿತ್ತು. ಆದರೆ ಹುಡುಗಿ ಚಿಕ್ಕವಳೆಂದು ಸುಮ್ಮನಿದ್ದರು. ಆದರೆ ರಂಗಪ್ಪನ ಗೆಳೆತನಕ್ಕೂ ಇಳಿದಿದ್ದಾಳೆಂಬ ಸುದ್ದಿ ಅವಳ ವರ್ಗದ ಮಾಸ್ತರರಿಂದಲೇ ತಿಳಿದಷ್ಟರದ ತುಸು ಕಾಳಜಿಯಾಯಿತು."

"ರಂಗಪ್ಪನ ಸಂಗಡ?" ಶಾನಭಾಗರ ದೇಹ ಸಿಟ್ಟಿನಿಂದ ನಡಗುತ್ತಿತ್ತು.

"ಅಂದಿವಳು, ರಾತ್ರಿ ಗೆದಂಗಿಗೆ ಹೋಗುತ್ತೇನೆಂದು ಊಟ ಮಾಡಿ ಹೋದವಳು ಶಾಲೆಗೆ ಹೋಗಿರಲಿಲ್ಲವಂತೆ. ರಂಗಪ್ಪನ ಸ್ಟುಡಿಯೋದಲ್ಲೇ..."

"ಏನು?" ಒದರಿದರು ಶಾನಭಾಗರು.

"ಅವಳನ್ನೇ ಕೇಳಿರಲ್ಲ ಬೇಕಾದರೆ...... ಗದಲಿಂಗನ ಕಾರ್ಯದರ್ಶಿಗೆ ಅವಳು ಅಲ್ಲಿದ್ದುದರ ಸಂಶಯ ಬಂದು ಅವಳ ವರ್ಗದ ಮಾಸ್ತರರಿಗೆ ಹೇಳಿದ. ಅವರು ಕೂಡಲೇ..."

ಶಾನಭಾಗರ ರುದ್ರ ರೂಪವನ್ನು ನೋಡಿ ರಾಧಮ್ಮನವರಿಗೆ ಅವರು ಎಲ್ಲಿಗೆ ಹೊರಟರು ಎನ್ನುವದು ತಿಳಿಯಿತು. ಕೂಡಲೇ ಬಾಗಿಲನ್ನು ಅಡ್ಡಗಟ್ಟಿ ನಿಂತು ಹೇಳಿದರು:

"ವಿಶ್ವನಾಥ, ಸುಳ್ಳೇ ಸಿಟ್ಟಿನ ಭರದಲ್ಲಿ ಹುಡುಗಿಗೆ ಏನಾದರೂ ಮಾಡಿದ್ದೀಯಾ. ನನ್ನಾಣೆ. ಇದರಲ್ಲಿ ಸತ್ಯವೆಷ್ಟೋ! ಅವಳಿಗೂ ತನ್ನ ಮಾನ-ಮರ್ಯಾದೆಯ ಅರಿವು ಇಲ್ಲವೇ? ಲಗ್ನಕ್ಕೆ ಬೆಳೆದ ಹುಡುಗಿ. ಹೀಗೆಲ್ಲ ಒದರಾಡಿ ಅವಳ ಭವಿಷ್ಯದ ಮೇಲೆ ನೀನೇ ಕಲ್ಲು ಹಾಕುತ್ತೀಯಾ?"

ಮತ್ತೆ ರಾಮನಾಥನತ್ತ ತಿರುಗಿ, "ರಾಮನಾಥ, ನೀನಿನ್ನೂ ಚಿಕ್ಕವ. ನಿರ್ಮಲೆ ನಿನ್ನ ತಂಗಿ ತಾನೆ? ಅವಳು ಒಳ್ಳೆಯವನನ್ನು ಮದುವೆಯಾಗಬೇಕು; ಸುಖವಾಗಿರಬೇಕು ಎಂದು ಅನಿಸುವದಿಲ್ಲವೇ? ತಿಳಿಯದ ಹುಡುಗಿ ಮಾಡಿದ ಸಣ್ಣ ತಪ್ಪನ್ನು ಹೀಗೆ ಬೆಳೆಸುವುದರಲ್ಲಿ ಅರ್ಥವಿದೆಯೊ? ನಿನ್ನ ಅಮ್ಮ ಅಪ್ಪರಿಗೂ ಹೇಳು, ಈ ಮಾತು ನಮ್ಮ ನಮ್ಮಲ್ಲೇ ಇರಲಿ ಎಂದು. ಅವಳ ಶಾಲೆಯ ವ್ಯವಸ್ಥೆಯನ್ನು ನಾವು ನೋಡಿಕೊಳ್ಳುತ್ತೇವೆ." ಎಂದರು.

ರೆಕ್ಸೋನಾ ನಿಮ್ಮ ಚರ್ಮದ ಆರೈಕೆ ಮಾಡುತ್ತದೆ...





ಅದನ್ನು ನಯವಾಗಿ, ಕಾಂತಿಯುಕ್ತವಾಗಿ ಇಡುತ್ತದೆ.

ರೆಕ್ಸೋನಾದಲ್ಲಿ ನಾಲ್ಕು ನೈಸರ್ಗಿಕ ತೈಲಗಳ
ಮಿಶ್ರಣವಿದೆ—

ಪಪ್ರಸ್ (ದೇವದಾರು ಜಾತಿ), ಲವಂಗದ ತೊಗಟೆ, ಲವಂಗ
ಮತ್ತು ಸರಳಮ್ (ಇನ್ನೊಂದು ದೇವದಾರು ಜಾತಿ).
ರೆಕ್ಸೋನಾದಿಂದ ಸ್ನಾನ ಮಾಡಿರಿ—ಅದು ನಿಮ್ಮ ಚರ್ಮವನ್ನು
ಕೋಮಲ ಹಾಗೂ
ಕಾಂತಿಯುಕ್ತವಾಗಿಡುತ್ತದೆ.
ನಿಮ್ಮ ಪ್ರೀತಿ ಪಾತ್ರವಾದ,
ಹೆಚ್ಚು ಸಮಯ ಉಳಿಯುವ
ಪರಿಮಳವಿರುವ ರೆಕ್ಸೋನಾ
ನಿಮ್ಮ ಚರ್ಮಕ್ಕೆ ಅತ್ಯಂತ
ಸ್ವಾಭಾವಿಕವಾದ ರಕ್ಷಣೆಯ
ಸಾಧನವಾಗಿದೆ.



ರೆಕ್ಸೋನಾ ನಿಮ್ಮ ಚರ್ಮಕ್ಕೆ ಹಿತಕರ

ಹಿಂದುಸ್ತಾನ್ ಲೀವರ್ ಅವರ ಉತ್ಕೃಷ್ಟ ತಯಾರಿಕೆ.

ಲಿಂಟಾಸ್-R.X.73-181 ಕನ

"ರಾಮನಾಥ, ಅತ್ತಿಗೆ ಹೇಳಿದ ಮಾತು ತಿಳಿಯಿತಲ್ಲ? ಅಪ್ಪನಿಗೆ ಹೇಳು, ನಾನು ಹೇಳಿದ್ದೇನೆಂದು ಹೇಳು. ಆ ರಂಗಪ್ಪ ಎಂದೆಯಲ್ಲ? ಯಾವ ರಂಗಪ್ಪ? ಯಾರ ಮನೆಯವ?"

ಶಾನಭಾಗರು ಪ್ರಶ್ನಿಸಿದರು.

"ವಲ್ಲಿಗದ್ದೆಯ ಸುಬ್ಬನ ಮಗ."

"ಅಯ್ಯೋ ದೇವರೇ!"

ಶಾನಭಾಗರ ಭಯ ತುಂಬಿದ ಉದ್ಗಾರ ಕೋಣೆಯಲ್ಲಿ ಆಗ ನೆಲೆಸಿದ್ದ ಮೌನದಲ್ಲಿ ಹೇಗೋ ಕೇಳಿಸಿತು.

೩

ಏನೋ ಕೈತಪ್ಪಿರಬಹುದು. ಇಲ್ಲ ಎನ್ನಲಾಗದು. ಆದರೆ ಅಷ್ಟಕ್ಕೇ ಹೀಗೆಲ್ಲ ನೀತಿಯ ಅವಿಭಾವ ನಟಿಸಿ, 'ರಾಮಕೃಷ್ಣ ಶಾನಭಾಗರ ಮನೆತನಕ್ಕೆ ಕಲಂಕ ಹಚ್ಚುವ ಕೆಲಸಕ್ಕೆ ಕೈ ಹಾಕಿದಳು ಎನ್ನಬೇಕೆಂದರೆ! ಹುಡುಗಿ ಇಷ್ಟು ದೂರ ಹೋಗುವ ತನಕ ಚಂದ್ರಭಾಗಿಯೂ (ವಿಶ್ವನಾಥರ ತಂಗಿ–ರಾಮನಾಥನ ತಾಯಿ) ಏನು ಕಣ್ಣು ಮುಚ್ಚಿ ಕುಳಿತಳೆ? ಅವಳೇ ಅಲ್ಲವೇ ನಿರ್ಮಲೆಯನ್ನು ಕಾರವಾರಕ್ಕೆ ಕಳಿಸುವಂತೆ ನನ್ನ ಮನ ಒಲಿಸಿದ್ದು? ಅವಳೇನು ತನ್ನ ಜವಾಬ್ದಾರಿಯನ್ನು ಅರಿಯಳೆ?... ಶಾನಭಾಗರು ತಮ್ಮ ಕದಡಿದ ಮನಸನ್ನು ಸಮಾಧಾನಗೊಳಿಸಲು ಯತ್ನಿಸಿದರು; ಆದರೆ ಸಫಲರಾಗಲಿಲ್ಲ. ಅವರ ಕದಡಿದ ಮನಸ್ಸಿನಲ್ಲಿ ಅವಳ ಭಾವೀ ಪತಿಯ ಚಿತ್ರ ಮಸುಕಾಗಿ ಮೂಡಿತ್ತು. ವಾಸುದೇವ! ಒಳ್ಳೆಯ ಮನೆತನದ ಹುಡುಗ; ಕುಮಟೆಯ ಇಂಗ್ಲಿಷ್ ಶಾಲೆಯೊಂದರಲ್ಲಿ ಮಾಸ್ತರ. ಕಾಲೇಜು–ಬಿಎಸ್ಸಿಯೋ ಬಿಎನ್ನೋ... ಬಾಲ್ಯದಿಂದಲೂ ಕಲಿತವ. ಸ್ನೇಹಿತನಾದ ಉಪೇಂದ್ರನ ಮಗ. ಜಾತಕ ನೋಡಿ ಕೂಡಿ ಬಂದರೆ... ಹುಡುಗ ಒಪ್ಪಿದರೆ... ಬೇಕಾದಷ್ಟು ವರದಕ್ಷಿಣೆ ಕೊಡಬಹುದು.

ಅಂಗಡಿಯನ್ನು ದಿನಕ್ಕಿಂತ ಮೊದಲೇ ಮುಚ್ಚಿ ಶಾನಭಾಗರು ಮನೆಗೆ ಬಂದರು. ರಾಧಮ್ಮನವರು "ನಾನು ಆಗಲೇ ನಿರ್ಮಲೆಯನ್ನು ಕಂಡು ಮಾತನಾಡಿಸಿದ್ದೇನೆ. ರಾಮನಾಥ ಹೇಳಿದುದರಲ್ಲಿ ಸುಳ್ಳು ಎಷ್ಟೋ ಇದೆ," ಎಂದಾಗ, ಶಾನಭಾಗರ ಮನಸ್ಸಿಗೆ ಇಷ್ಟಷ್ಟು ಸಮಾಧಾನವಾಯಿತು.

ಎರಡು

೧

"ಜೋಶಿಯವರೆ, ಸ್ವಲ್ಪ ಸಮಾಧಾನ ತಂದುಕೊಳ್ಳಿ... ಹೀಗೆ ಸುಳ್ಳೇ ಸಿಟ್ಟಿಗೆದ್ದು..." ಮಾಸ್ತರರು ಹೇಳಿದರು.

"ಇನ್ನೂ ಸಮಾಧಾನವೇ?"

ಆವಾಗ ಚಂದ್ರಭಾಗಕ್ಕ ಗಾಬರಿಗೊಂಡು ಹಿತ್ತಲಿಗೆ ಬಂದಳು. ಗಂಡನ ಆವೇಶವನ್ನು ಕಂಡು, "ಇದೇನೆಂದರೆ? ಚಂದ್ರಭಾಗೀ ಎಂದು ಕರೆದರೆ ತಂಗಕ್ಕ ಬಂದಾಳೆ... ಕೇಳಿದವರು ಏನಂದಾರು...?"

ಆದರೆ ಜೋಶಿಯವರು ಅಂದರು. "ಅಂದರೆ ಅನ್ನಲೀ, ಈಗ ಕೇಳು ಮಾಸ್ತರರು ತಂದ ಸುದ್ದಿಯನ್ನು. ನಿನ್ನೆ ರಾತ್ರಿ ಗೆಳತಿಯರಿಗೆ ಹೋಗ್ತೇನೆಂದು ಹೇಳಿ ಹೋಗಿದ್ದಳಲ್ಲ ಆ ಪೈಯಾರಿ. ಅವಳು ಶಾಲೆಗೆ ಹೋಗದೆ ರಂಗಪ್ಪನ ಜೊತೆ..." ಮಾಸ್ತರರಿಗೆ ಮುಂದೆ ಕೇಳುವದಾಗಲಿಲ್ಲ.

"ಜೋಶಿಯವರೇ, ಏನೂ ಅರಿಯದ ಏಳೆಯ ಮಗುವಿನ ಬಗ್ಗೆ ಇಂತಹ ಹಲ್ಕಟ್ ಮಾತುಗಳನ್ನು ಆಡುವವರು ನೀವು ಎಷ್ಟು ಅಸ್ಪಷ್ಟರೆಂದು ಗೊತ್ತಿದೆ. ಆದರೆ ಇಷ್ಟೊಂದು ಹೇಳುತ್ತೇನೆ, ನೀವು ನಿರ್ಮಲೆಯ ಬಗ್ಗೆ ಆಡಿದ ಮಾತಿನಲ್ಲಿ ಎಳ್ಳಷ್ಟು ಸತ್ಯವಿಲ್ಲ." ಎಂದವರೇ ಸಿಟ್ಟಿನಿಂದ ಅಲ್ಲಿಂದ ಹೊರಟುಹೋದರು.

ಅಷ್ಟರಲ್ಲಿ ತಂಗಕ್ಕ ಅಲ್ಲಿಗೆ ಬಂದು, "ಏನಾಯಿತು ಚಂದ್ರಭಾಗಿ?" ಎಂದು ಸಹಜ ದನಿಯಲ್ಲಿ ಕೇಳಿದಳು.

ಜೋಶಿಯವರೇ ಉತ್ತರಿಸಿದರು, "ಅದೇ ಅಣ್ಣನ ಮಗಳೆಂದು ಇವಳು ಅವಳನ್ನು ಎತ್ತಿಕೊಂಡು ಬಂದು ಇಟ್ಟುಕೊಂಡಿದ್ದಾಳಲ್ಲ. ನಾಳೆ ಆ

ರಂಗಪ್ಪನೊಡನೆ, ಏನಾದರೂ ಪ್ರಕರ್ಣಮಾಡಿದರೆ ಊರಲ್ಲಿ ತಲೆಯೆತ್ತಿ…"

"ಯಾಕೆ ಚಂದ್ರಭಾಗಿ, ಹಾಗೆ ನೋಡುತ್ತಿಯಲ್ಲ? ನನಗೆ ಇದಾವುದರಲ್ಲಿ ಆಸ್ಥೆಯೇ ಇಲ್ಲ. ಬಂದವಳ ಮುಂದೆ ನಿನ್ನ ಗಂಡನೇ ಮಾತು ತೆಗೆದದ್ದರಿಂದ, ಒಂದು ಮಾತನ್ನು ಹೇಳಿ ಇಡುತ್ತೇನೆ, ಆ ಹುಡುಗಿ ನೀನು ತಿಳಿದುಕೊಂಡಷ್ಟು ಅಪ್ಪಂತೆ ಅಲ್ಲ ಬಿಡು, ಅವಳ ವಿಷಯ ನಾನು ಬಹಳಷ್ಟು ಕೇಳಿದ್ದೇನೆ. ತುಸು ಕಾಳಜಿಯಿಂದ ಇರುವದು ಒಳ್ಳೆಯದು ತಾಯೀ…" ಎಂದವಳೇ ತನ್ನ ಮನೆಯ ಹಾದಿ ಹಿಡಿದಳು.

ಶಾರದೆ ಚಂದ್ರಭಾಗಕ್ಕನ ಹಿರೇ ಮಗಳು. ಇದೇ ವರುಷ ಮದುವೆಯಾಗಿದೆ. ಕೊಡೀಬಾಗದಲ್ಲಿ ಗಂಡನ ಮನೆ; ಒಂದು ಮೈಲು ದೂರಾಗಬಹುದು. ಶಾರದೆ ಮುಟ್ಟಾದಾಗ ಇಲ್ಲಿಗೆ ಬರುವುದು ಇದು ಮೊದಲ ಸಾರೆಯಲ್ಲ…

"ಇದೇನು ಹೊಸ ಪ್ರಕರಣವಮ್ಮಾ?"

ಶಾರದೆ ತುಸು ದೂರದಲ್ಲಿ ಕುಳಿತು ಕೇಳಿದಳು.

"ಕಾಮಾಕ್ಷಿ ಹೇಳಿದಳೆ? ನೋಡಲ್ಲಿ ನಮ್ಮ ನಶೀಬ, ಇವನೆಲ್ಲಿಂದ ಬಂದನೆ, ನಮ್ಮನ್ನು ಶನಿಯಂತೆ ಕಾಡಲಿಕ್ಕೆ?"

"ಅವನ ಸ್ಟುಡಿಯೋಕ್ಕೇ ಹೋಗಿದ್ದಳಂತೆ?"

"ಈ ಹುಡುಗಿಗೆ ಇಂತಹ ಬುದ್ಧಿ ಯಾಕಮ್ಮಾ?"

"ನೋಡಲ್ಲ. ಇದೆಲ್ಲ ನಡೆದಾಗ, ಆ ತುಂಗಕ್ಕ ಬೇರೆ ಬಂದಿರಬೇಕೆ? ಅವಳ ಮುಂದೆಯೇ ಇವರು ಏನೆಲ್ಲ ಹೇಳಿ ಕುಣಿದಾಡಿದರಂತೀ…"

"ಛಿ, ಅಪ್ಪನದೂ ಒಂದು ನಮೂನೆಯೇ!"

"ನನಗೆ ಹೆದರಿಕೆ ಅತ್ತಿಗೆಯದು, ಶಾರದಾ. ಹುಡುಗಿಯನ್ನು ನಿಲ್ಲಿಸಿಕೊಳ್ಳುವ ಮನಸ್ಸಿಲ್ಲದೆ ಇಲ್ಲದ ಅಪವಾದ ಹೊರಿಸಿ…"

"ನಿನ್ನದೂ ಒಂದು ಮಾತೇ. ನಿನ್ನ ಅಣ್ಣನ ಮಗಳ ಬಗ್ಗೆ ನಿನಗೆ ಅಭಿಮಾನ ಇಲ್ಲವೆ?"

"ಈಗ ಹೇಳುವದಾದರೂ ಏನೆಂದು? ಹೋದ ವರುಷ ಪಿಕ್‌ನಿಕ್ಕಿನದೇ ಮಾತು, ಹುಡುಗರು ನೋಡಿದ್ದಾದರೂ ಏನು? ಮುಳ್ಳು ಹಣ್ಣುಗಳ ಪೊದೆಯೊಳಗಿಂದ ಹಣ್ಣುಗಳನ್ನು ಕಿತ್ತು ರಂಗಪ್ಪ ನಿರ್ಮಲೆಯ ಕೈಗೆ ಕೊಟ್ಟದ್ದೇ ತಾನೆ ? ಅದರಲ್ಲೇನು ತಪ್ಪಿದೆ? ಏನೇನನ್ನೋ ಕಲ್ಪಿಸಿಕೊಂಡು ಮಾತನಾಡಿದರೆ ಅಣ್ಣನ ಕಿವಿಯ ಮೇಲೆ ಏನೆಂದು ಹಾಕಲಿ? ಈಗಲೂ ಅಷ್ಟೇ, ಸಂಜೆಯ ಹೊತ್ತಿಗೆ ಇವಳನ್ನು ಆ ರಂಗಪ್ಪನ ಸ್ಟುಡಿಯೋದಲ್ಲಿ ನೋಡಿದ್ದಕ್ಕೇ…"

ಎನ್ನುವ ಹೊತ್ತಿಗೆ ರಾಮನಾಥ ಬಂದ. ಆಗ ಚಂದ್ರಭಾಗಕ್ಕ ಕೆಳದನಿಯಲ್ಲಿ, "ಈಗ ಸಾಕು, ಏಳಿ… ಊಟ ಮಾಡ ಬನ್ನಿ," ಎಂದು ಎದ್ದಳು.

ರಾತ್ರಿ ಗೆದರಿಂಗಿನಿಂದ ಹಿಂದಿರುಗಿ ಬಂದ ನಿರ್ಮಲೆ ಹೊಟ್ಟೆಯಲ್ಲಿ ತೀವ್ರವಾದ ನೋವು ಎಂದು ಮನೆಯ ಮೆಟ್ಟಲು ಏರಿದಳು. ಚಂದ್ರಭಾಗಕ್ಕನತ್ತ ತಿರುಗಿ, "ಅತ್ತೇ, ಏಕೋ ಹೊಟ್ಟೆಯಲ್ಲಿ ಅತಿಯಾದ ನೋವು, ನಾನು ಊಟ ಮಾಡಲಾರೆ," ಎಂದಳು.

"ಅರೆ, ಮಧ್ಯಾಹ್ನ ಗಪಗಪನೆ ಉಂಡುಹೋಗಿದ್ದೆ. ಅಜೀರ್ಣವಾಯಿತೇನೋ. ಮೇಲೆ ಹೋಗಿ ಸೀರೆ ಬದಲಿಸಿ ಬಾ, ಹಿಂಗು ಹಾಕಿ ಇಷ್ಟು ಮಜ್ಜಿಗೆ ಕೊಡಿಸುತ್ತೇನೆ. ಬೆಳಗಾಗುವ ಹೊತ್ತಿಗೆ ಎಲ್ಲ ಸರಿಯಾದೀತು" ಎಂದು, ಶಾರದಳಿಗೆ "ಶಾರದಾ, ಇಷ್ಟು ಹಿಂಗನ್ನು ಹುರಿದು ಮಜ್ಜಿಗೆಯಲ್ಲಿ ಬೆರೆಸಿ ಇಲ್ಲೇ ತಂದು ಕೊಡು ಮಗು," ಎಂದಳು.

ಮಜ್ಜಿಗೆ ಕುಡಿಯುವಾಗ ನಿರ್ಮಲೆಗೆ ಅತ್ತೆಯ ಕಣ್ಣುಗಳೇಕೋ ತನ್ನ ಮೋರೆಯನ್ನೇ ಅರಸುತ್ತಿವೆ ಎಂದೆನಿಸಿ ಹೇಗೋ ಆಯಿತು.


"ನಿಮ್ಮ ರಜೆ ಸುರುವಾಗಲು ಇನ್ನೂ ೫–೬ ದಿನ ಇವೆಯೆಂದು ಅಂದಿದ್ದೆಯಲ್ಲವೇ?"

"ಹೌದು ಅತ್ತೆ. ಯಾಕೆ ಕೇಳಿದೆ?"

"ಸಹಜ."

"ಅತ್ತೇ, ನನಗೇಕೋ ಈ ಹೊಟ್ಟೆನೋವೆಂದ ಕೂಡಲೆ ಹೆದರಿಕೆಯಾಗುತ್ತದೆ. ಹೋದ ವರುಷ ಮೇ ತಿಂಗಳಲ್ಲಿ ಒಮ್ಮೆ ಹೀಗೆಯೇ ಆಗಿತ್ತು. ದೊಡ್ಡಮ್ಮ ಮಾಡಿಕೊಟ್ಟ ಕಷಾಯ ಕುಡಿದ ಮೇಲೆಯೇ ನಿಂತಿತ್ತು. ನಾನು ಊರಿಗೆ ಹೋಗಲೇ?"

"ಛೀ ಹುಚ್ಚಿ, ಇಷ್ಟಕ್ಕೆ ಹೆದರಬೇಕೆ? ಮಜ್ಜಿಗೆ ಕುಡಿದದ್ದರಿಂದ ಕಡಿಮೆಯಾದೀತು," ಎಂದು ನಿರ್ಮಲೆಯನ್ನು ಮಲಗಲು ಕಳುಹಿಸಿದಳು ಚಂದ್ರಭಾಗಕ್ಕ.



ಅನುದಿನ ಭಾವ
ನಲಿವು,
ಗೆಲವು...
ಅಭಿವ್ಯಕ್ತಿಗೆ
ಉಡುಪು
ದಿನದ
ಹೆಚ್ಚಿಸಲು
ಮೈ-ಮನಗಳನ್ನು
ಮೃದುವಾದ ಬಟ್ಟೆ,
ಪೊಲಿಯೆಸ್ಟರ್-ಬ್ಲೆಂಡ್ ಹಾಗೂ
ಬಟ್ಟೆಗಳಲ್ಲಿ ನವೀನ
ಬಣ್ಣದ ಬೆಡಗು, ನೆಯ್ಗೆಯ
ಮತ್ತು ವಿನ್ಯಾಸದ ಅಂದ
ನಿಮ್ಮ ಚಲುವನ್ನು
ಬೆಳಗಿನಿಂದ ಬೈಗಿನವರೆಗೆ.
ಮಫತ್‌ಲಾಲ್
ಫ್ಯಾಬ್ರಿಕ್ಸ್
MF-127 KAN

ಅವರೆ ಬೆಳಿಗ್ಗೆ ಹಾಸಿಗೆಯಿಂದ ಏಳುವಾಗಲೇ ನಿರ್ಮಲೆ ತಿರುಗಿ ಊರಿಗೆ ಹೋಗುವ ಹಟ ಹಿಡಿದಳು.

"ಹಾದ? ಇವರೂ ಊರಲ್ಲಿಲ್ಲ. ಒಬ್ಬಳೇ ಹೇಗೆ ಹೋಗುತ್ತಿ? ಬಾಳನನ್ನು ಕರೆದು ಕೊಂಡು ಹೋಗು," ಎಂದು ರಾಮನಾಥನನ್ನು ಜಗಲಿಯ ಒಂದು ಬದಿಗೆ ಕರೆದು, "ನೋಡು ಬಾಳಾ," ಎಂಬಷ್ಟೇ ಅಂದಳು. ರಾಮನಾಥ "ನನಗೆಲ್ಲ ಗೊತ್ತಿದೆಯಮ್ಮ, ನಾನು ಇನ್ನೂ ಕುಕ್ಕು ಬಾಳನಲ್ಲ," ಎಂದವನೇ ಒಳ ನಡೆದ.

ಮೂರು

೧

ಸಾಹುಕಾರರ ಹೆಂಡತಿ ಮಾಸ್ತರರನ್ನು ನೋಡಿ "ಮಧ್ಯಾಹ್ನ ನನ್ನನ್ನೇಕೋ ಹುಡುಕುತ್ತಿದ್ದರಂತಲ್ಲ? ಎಂದು ಕೇಳಿದಳು.

"ಹೌದು ನೋಡಿ. ಆ ಹುಡುಗ ಎಂತಹ ಅಧಿಕ ಪ್ರಸಂಗ ಕೆಲಸ ಮಾಡಿ ಕೂತಿದ್ದಾನೆ?"

"ಯಾರು, ಮಾಧವನ ಬಗ್ಗೆ ಹೇಳುತ್ತಿದ್ದೀರಾ?"

"ಅವನೇ. ಸಾಲೆಯಲ್ಲಿ ಸೆಕ್ರೆಟರಿನೋ ಪಿಕ್ರೆಟರಿನೋ ಆಗಿ, ಮೆಟ್ರಿಕ್ಕಿನಲ್ಲಿ ೨ ಸರತಿ ಲಗಾಮು ಹಾಕಿದರೂ ಇಂತಹ ಕೆತ್ತೇಬಾಜಿಯಲ್ಲಿ ಒಂದೆ ಬಿದ್ದಾನೆ?"

"ಅರೆ, ಇದು ನಿಮಗೆ ಹ್ಯಾಗೆ...?"

"ನೀವು ಗಾಬರಿಯಾಗಬೇಡಿ. ಇವತ್ತು ಇವರು ಸರಿಯಾಗಿ ಪಿತ್ಥ ಇಳಿಸಿದ್ದಾರೆ."

*

ಸಾವುಕಾರರು, ದೇವಪ್ಪ ಮಾಸ್ತರರು ಅಟ್ಟದ ಮೇಲೆ ಹೋದಾಗ, ಮೌನ ಆವರಿಸಿತ್ತು. ಕೊನೆಗೆ ಸಾವುಕಾರರೇ, ಬಾಯಿಬಿಟ್ಟರು;

"ಇದಕ್ಕೆಲ್ಲ ನಾನೇ ಕಾರಣ ನೋಡು. ಆ ಅವಿವೇಕಿ ಮಾಧವನಿಗೆ ಫೋಟೋ ತೆಗೆಸುವ ಹುಚ್ಚಿತ್ತು. 'ಸರ್, ಒಂದು ಉಪಕಾರ ಮಾಡ್ತೀರಾ? ಆ ರಂಗಪ್ಪನಿಗೆ ಸ್ವಲ್ಪ ನೆನಪು ಮಾಡ್ತೀರಾ? ರಾತ್ರೆ ಬರಲಿಕ್ಕೆ?' ಎಂದದ್ದಕ್ಕೆ ಒಪ್ಪಿ, ಮನೆಗೆ ಬಂದೆ. ಆಲಸ್ಯದಿಂದಾಗಿ ಮನೆಯಲ್ಲೇ ಕುಳಿತೆ. ದೀಪ ಹಚ್ಚುವ ಹೊತ್ತಿಗೆ ಗಾಳಿಗೆಂದು ಅಂಗಳಕ್ಕೆ ಬಂದಾಗ, ರಂಗಪ್ಪನ ತಂಗಿ ಮತ್ತು ನಿರ್ಮಲೆ ಹೋಗುವದನ್ನು ಕಂಡು, ಕರೆದು, 'ನಿನ್ನ ಅಣ್ಣನಿಗೆ ರಾತ್ರಿ ಸಾಲೆಗೆ ಬರಲು ನೆನಪು ಮಾಡುತ್ತೀಯಾ?' ಎಂದದ್ದಕ್ಕೆ, 'ನಾವು ಹೇಳಿ ಹೋಗುತ್ತೀವೆ,' ಎಂದರು. ಇವರು ಅಲ್ಲಿ ಇದ್ದ ಹೊತ್ತಿಗೇ ಮಾಧವ ಅಲ್ಲಿಗೆ ಬಂದಿದ್ದ. ತಲೆಯಲ್ಲಿ ಏನೇನೋ ತುಂಬಿಕೊಂಡಿದ್ದ ಲುಚ್ಚೆ ನಿರ್ಮಲೆಯನ್ನು ಸ್ಟುಡಿಯೋದಲ್ಲಿ ನೋಡಿ, ಅಪಾರ್ಥ ಮಾಡಿಕೊಂಡು ಬಂದು ನಿಮಗೆ ಹೇಳಿದ್ದಾನೆ."

"ಮೊದಲು ನನಗೂ ನಿನಗೆ ಹೇಳಿದ ಹಾಗೇ ಹೇಳಿದ್ದ. ಕೊನೆಗೆ ನಾನೇ, 'ಇಬ್ಬರೇ ಇದ್ದರೆ? ಸುಳ್ಳು ಹೇಳಿದರೆ ಹಲ್ಲು ಉದುರಿಸುತ್ತೇನೆ. ರಂಗಪ್ಪನ ತಂಗಿಯೂ ಇರಲಿಲ್ಲವೆ? ನಾನೇ ಅವರನ್ನು ಆ ಕೆಲಸಕ್ಕೆ ಕಳುಹಿಸಿದ್ದು' ಎಂದು ಗದರಿಸಿದಾಗ, ತಪ್ಪು ಮಾಡಿದವನಂತೆ 'ಹೌದು ಸರ್, ರಂಗಪ್ಪನ ತಂಗಿ ಇದ್ದುದು ನಿಜ' ಎಂದು ಒಪ್ಪಿಕೊಂಡ."

ದೇವಪ್ಪ ಮಾಸ್ತರರಿಗೆ ಈಗ ತಮ್ಮ ಅಪರಾಧದ ಕಲ್ಪನೆ ಬಂದಿತ್ತು. "ಛೆ, ಛೆ, ಅನ್ಯಾಯ... ಎಲ್ಲ ನನ್ನದೇ ತಪ್ಪು. ಈಗಿಂದೀಗಲೇ ಹೋಗಿ ಜೋಶಿಯವರ ಕಾಲಬುಡಕ್ಕೆ ಮೂಗು ತಿಕ್ಕಿಯಾದರೂ, ಹುಡುಗಿಯನ್ನು ಕ್ಷಮಿಸೆಂದು ಕೇಳಿಕೊಳ್ಳುತ್ತೇನೆ," ಎನ್ನುತ್ತ ಎದ್ದರು.

*

ಮನೆ ತಲಪಿದವನೇ ರಾಮನಾಥ ತಂದೆಯ ಮುಂದೆ ನಿಂತು, "ಅಪ್ಪಾ, ವಿಶ್ವನಾಥ ಮಾವನ ಮುಂದೆ ಎಲ್ಲ ಹೇಳಿದೆ..." ಹೇಳುತ್ತಿದ್ದ. ಅಷ್ಟರಲ್ಲಿ ಅಪ್ಪ ಅವನನ್ನು ಬಡೆಯಹತ್ತಿದ.

ನಾಲ್ಕು

೧

ಕುಮಟೆಯಿಂದ ಹಿಂದಿರುಗಿ ಬಂದ ವಿಶ್ವನಾಥರು ಗೆಲುವಿನ ಮನಃಸ್ಥಿತಿಯಲ್ಲಿದ್ದು ಕುಮಟೆಯಲ್ಲಿ, ವಾಸುದೇವನನ್ನೂ ಅವನ ತಾಯಿಯನ್ನೂ ನೋಡಿದ್ದಾಯಿತು. ಎರಡೂ ಜಾತಕ

ಗಳು ಕೂಡಿಬರುವುದೂ ತಿಳಿಯಿತು. ಹುಡುಗನ ತಾಯಿ ಖುಷಿಯಿಂದ ತನ್ನ ಒಪ್ಪಿಗೆಯನ್ನು ಸೂಚಿಸಿದ್ದೂ ಆಯಿತು...

"ಅಲ್ಲಾ...?"

"ಏನು ?"

"ಹುಡುಗ, 'ಹಿಂದುಗಡೆಯಿಂದ ತಿಳಿಸುತ್ತೇನೆ,' ಎಂದ. 'ಹುಡುಗಿ ಇನ್ನೂ ಕಲಿಯುತ್ತಿರುವಾಗಲೇ ಈ ಲಗ್ನದ ಮಾತೇಕೆ?' ಎಂದ. ಕೊನೆಗೆ, 'ತುಸು ಸಮಯ ಕೊಡಿ. ವಿಚಾರ ಮಾಡಿ ತಿಳಿಸುತ್ತೇನೆ,' ಎಂದ. ಆದರೆ ಹುಡುಗನ ತಾಯಿ, 'ನೀವು ಏನೂ ಕಾಳಜಿ ಮಾಡಬೇಡಿ' ಎಂದರು."

"ಸರಿಯಾದ ಮಾತನ್ನೇ ಹೇಳಿದ್ದಾಳೆ."

■

ನಡುರಾತ್ರಿಯಲ್ಲಿ ಶಾನಭಾಗರು ಭಡಕ್ಕನೆ ಎದ್ದು ಕುಳಿತು ವಿಚಿತ್ರವಾದ ಸ್ವರದಲ್ಲಿ ಹೆಂಡತಿಯನ್ನು ಕೂಗಿಕೊಂಡರು. ಹೆಂಡತಿಯೂ ಗಾಬರಿಯಾಗಿ ರಾಧಮ್ಮನನ್ನು ಕರೆತಂದಳು.

"ಅಬ್ಬಾ, ಎಂತಹ ಬೆವರು ಅತ್ತಿಗೆ..."

"ಕೆಟ್ಟ ಕನಸು ಬಿದ್ದಿತ್ತೆ ?"

"ಹಾಗೇನೂ ನೆನಪಿಲ್ಲ. ಇವಳೆಲ್ಲಿ?"

"ಕಾಫಿ ಮಾಡಿ ತರಲು ಹೋಗಿದ್ದಾಳೆ. ಕರೆಯಬೇಕೆ?"

"ಬೇಡ ಬೇಡ, ಅತ್ತಿಗೆ, ನಾನು ಮಾಡಿದ್ದು ಸರಿಯಲ್ಲವೇ? ಎಲ್ಲರನ್ನೂ ಬಿಟ್ಟು ನಮ್ಮ ನಿರ್ಮಲೆ, ನನ್ನ ಮಂಗಳು... ಹೀಗೆ... ಅಲ್ಲ, ಈಗ ಏಷ್ಟೆಲ್ಲ ಮದುವೆ ಮುಂಜಿ ಮಾಡಲಿಲ್ಲ?"

"ಈಗ ಏನಾಗಿದೆಯೆಂದು ಹೀಗೆ ಬಡಬಡಿಸುತ್ತೀ ?"

"ಏನಿಲ್ಲ ಅತ್ತಿಗೆ, ನಮ್ಮ ಮನೆತನದ ಹೆಸರು ಕೆಡಬಾರದು ನೋಡು."

"ಮತ್ತೆ ಆ ಮಾತು ತೆಗೆಯಬೇಡ. ಎಂದೆನಲ್ಲ?" ಎಂದು ಗದರಿಸಿ, ರಾಧಮ್ಮನವರು ಹೊರಗೆ ಹೋದರು.

ದೀಪ ಸಣ್ಣ ಮಾಡಿ, ಮಲಗಿದಾಗ, ಹೆಂಡತಿ ಹೇಳಿದ ವಿಷಯವೊಂದು ತಟ್ಟನೆ ನೆನಪಾಯಿತು. ನಿರ್ಮಲೆ ಮುಟ್ಟಾಗಿದ್ದಾಳೆ ಎನ್ನುವುದು. ತಮಗಾದ ಹರುಷದ ಅರ್ಥಕ್ಕೆ ತಾವೇ ನಾಚಿದರು. ಮರುದಿನ ಮಧ್ಯಾಹ್ನ ಅಂಗಡಿಯಿಂದ ಹಿಂತಿರುಗಿದಾಗ, ಅತ್ಯಂತ ಹರ್ಷಚಿತ್ತರಾಗಿದ್ದರು. ಶಾನಭಾಗರು ಹೆಂಡತಿ, ಅತ್ತಿಗೆಯನ್ನು ಕರೆದು ದೇವಪ್ಪ ಮಾಸ್ತರರು ಹಾಗೂ ನಾರಾಯಣ ಜೋಶಿಯವರು ಕೂಡಿ ಬರೆದ ಪತ್ರವನ್ನು ಓದಿ ಹೇಳಿದರು. ಮತ್ತೆ ಹೇಳಿದರು, "ಈಗ ಯಾರಾದರೂ ಏನಾದರೂ ಹೇಳಿದರೆ, ಅವರ ಮುಸುಡಿಗೆ ಹೊಡೆಯುತ್ತೇನೆ."

ತಥಾಸ್ತು ಎಂದಿತ್ತು ಪ್ರೀತಿ

ಒಂದು

ವಾಸುದೇವನಿಗೆ ನಿರ್ಮಲೆಯ ಬಗೆಗೆ ತನ್ನಲ್ಲಿನ್ನೂ ಯಾವ ಭಾವನೆಯೂ ಹೊಳೆತಿರದುದಕ್ಕೆ ತನಗೇ ಆಶ್ಚರ್ಯವಾಗಿದೆ. ಮೂರು ವರುಷಗಳ ಹಿಂದೆ ನೋಡಿದ್ದು. ಈಗ ಅವಳನ್ನು ಇನ್ನೊಮ್ಮೆ ನೋಡಿದರೆ...

ಅಕ್ಕನೊಡನೆ ಮನಬಿಚ್ಚಿ ಮಾತನಾಡಬೇಕೆಂದುಕೊಂಡ ವಾಸುದೇವನಿಗೆ ಏಕೋ ಮಾತು ಹೊರಡದಾಗಿದೆ. ತಾನು ವ್ಯಕ್ತಪಡಿಸಿದ್ದ ವಿಚಾರಗಳು ಇನ್ನೊಬ್ಬರಿಗೆ ಅರ್ಥವಾಗಬಹುದಾದ ಭಾಷೆಯ, ಶಬ್ದಗಳ ಸ್ಪರ್ಶಕ್ಕೇ ಮುದುಡಿಕೊಳ್ಳುತ್ತಿವೆ; ಒಳ ಮನಸ್ಸಿನ ಮಬ್ಬುಗತ್ತಲೆಗೆ ಹೊಂದಿಕೊಂಡ ಭಾವನೆಗಳು ಹೊರಬೆಳಕಿಗೆ ಕಣ್ಣು ಮುಚ್ಚಿಕೊಳ್ಳುತ್ತಿವೆ...


ನಿರ್ಮಲೆಯು ಬೇಡವೆನ್ನಲು ನನ್ನ ಹತ್ತಿರ ಯಾವ ಕಾರಣವೂ ಇಲ್ಲ. ಆದರೆ, ಒಳಗೆಲ್ಲೋ... ಅವಳಿಗೆ ನನಗಿಂತ ಒಳ್ಳೆ ಗಂಡ ಸಿಗಲಾರನೆ? ಅನ್ನಿಸುವದು, ಈ ಭಾವನೆಯನ್ನು ಮೆಟ್ಟಿ ನಿಲ್ಲುವಷ್ಟು ಬಲವಾದ ಬೇರೊಂದು ಭಾವನೆ ನನ್ನಲ್ಲಿದ್ದಿದ್ದರೆ...

"ಏಕೆ ವಾಸುದೇವ, ಸುಮ್ಮನೆ ಕುಳಿತುಬಿಟ್ಟೆ?"

ಅಕ್ಕನ ಪ್ರಶ್ನೆಯಿಂದ ಎಚ್ಚರಗೊಂಡ ವಾಸುದೇವ ಕೇಳಿದ.

"ನಿರ್ಮಲೆ ಸುಂದರ ಹುಡುಗಿ ಅಲ್ಲವೇ?"

"ಯಾಕೆ, ಸಂಶಯವೆ ? ಬಹಳ ಮುದ್ದಾದ ಹುಡುಗಿ."



ಅಮೃತಾಂಜನ್ ಅರಿತಿದೆ ತಲೆನೋವಿನ ಯಾತನೆ

ತಲೆನೋವೆಂದರೆ, ಸಹಿಸಲಾಗದ ವೇದನೆ. ಅದನ್ನು ಹೋಗಲಾಡಿಸಿಕೊಳ್ಳುವ ಸುಲಭ ವಿಧಾನ, ಅಮೃತಾಂಜನ್. ಸ್ವಲ್ಪ ಅಮೃತಾಂಜನ್ ತೆಗೆದುಕೊಂಡು ಬಲವಾಗಿ ತಿಕ್ಕಿರಿ. ತಲೆನೋವಿನಿಂದ ತಕ್ಷಣ ಉಪಶಮನ ಪಡೆಯುವಿರಿ.

ಅಮೃತಾಂಜನ್ ಇತರ ತೀಕ್ಷ್ಣ ಔಷಧಿಗಳಂತಲ್ಲ. ಅಮೃತಾಂಜನ್‌ನಲ್ಲಿರುವ 10 ಶಕ್ತಿಯುತ ಔಷಧಾಂಶಗಳು ತತ್‌ಕ್ಷಣದಲ್ಲಿ ಕ್ರಿಯೆ ನಡೆಸಿ, ನೋವಿನಿಂದ ನಿಮಗೆ ತ್ವರಿತವಾಗಿ ನಿವಾರಣೆ ನೀಡುವುದು. ಯಾವ ತರಹದ ಪ್ರತಿಕೂಲ ಪರಿಣಾಮವೂ ಇರುವುದಿಲ್ಲ.

85 ಕ್ಕೂ ಹೆಚ್ಚು ವರ್ಷಗಳಿಂದ ವಿಶ್ವಾಸ ಪಾತ್ರವಾಗಿರುವ ಅಮೃತಾಂಜನ್ ಉಳುಕು, ಮೈಕೈ ನೋವು, ಶೀತ, ನೆಗಡಿ ಗಂಟಲು ಹುಣ್ಣು, ಮುಂತಾದ ನೋವುಗಳನ್ನು ಶೀಘ್ರದಲ್ಲಿ ಗುಣಪಡಿಸುವುದು.

ಯಾವಾಗಲೂ ಅಮೃತಾಂಜನ್ ನಿಮ್ಮ ಕೈವಶದಲ್ಲಿರಲಿ. ಏಕೆಂದರೆ, ಅದು ಯಾವಾಗ ಬೇಕಾಗುತ್ತದೆಂಬುದನ್ನು ಹೇಳಲಾಗುವುದಿಲ್ಲ.



ಅಮೃತಾಂಜನ್

ತ್ವರಿತ ನೋವು ನಿವಾರಣೆ ನಿಶ್ಚಿತ. ಪ್ರತಿಕೂಲ ಪರಿಣಾಮವೇನಿರುವುದಿಲ್ಲ.

OBM 7652 KN

"ಶ್ರೀಮಂತರ ಹುಡುಗಿಯಲ್ಲವೇ?"

"ಓ! ನಾವು ಬಡವರೆಂದೇ? ಗುಣಕ್ಕೆ ಬೆಲೆಯಿಲ್ಲವೇ?... ಒಳ್ಳೆಯ ಲೇಖಕನೆಂದೂ ಹೆಸರುಗಳಿಸಿದ್ದೀ. ಮಾಸ್ತರನಾದರೇನಂತೆ?... ವೃಥಾ ದೀನನೇಕಾಗುತ್ತಿ? ಏಳು ಜನ್ಮದ ಪುಣ್ಯಬೇಕು ನಿರ್ಮಲೆ ಸಿಗಬೇಕಾದರೆ......"

*

ತುಳಸಿಯ ಮುಂದೆ ನೀಲಾಂಜನ ಹೊತ್ತಿಸಿಟ್ಟು, ತಾಯಿಗೆ ನಮಸ್ಕರಿಸಲು ಬಂದಾಗ, ಮಗಳನ್ನು ತಾಯಿ, "ಏನಾದರೂ ಅಂದನೇನೇ?" ಎಂದರು.

"ಇಲ್ಲದ್ದೊಂದನ್ನು ತಲೆಯಲ್ಲಿ ಹಾಕಿಕೊಂಡು ಕುಳಿತಿದ್ದಾನೆ."

"ಏನಂತೆ?"

"ಇನ್ನೇನು? ಎಂದಿನದೇ ಹುಚ್ಚು—ಹುಡುಗಿಗೆ ತನ್ನಿಂದ ಸುಖ ದೊರಕಬಹುದೇ ಎಂದು."

"ಇವನಲ್ಲಿ ಏನು ಕಡಿಮೆಯಾಗಿದೆ?"

"ನಮ್ಮ ವಾಸುದೇವ ಬಹಳ ನಾಜೂಕು ಮನಸ್ಸಿನವ. ಅವನ ಕತೆಗಳನ್ನು ಓದಬೇಕು. ಎಲ್ಲ ನಾಜೂಕು ಮನಸ್ಸಿನ ವ್ಯಕ್ತಿಗಳೇ. ಪುಸ್ತಕವನ್ನು ಓದಿ ಓದಿ ತಲೆಯಲ್ಲಿ ಏನೇನೋ ಹಾಕಿಕೊಂಡಿದ್ದಾನೆ. ತನ್ನ ಹೆಂಡತಿಯಾಗುವವಳಿಗೆ ಯಾವ ರೀತಿಯಿಂದಲೂ ಅನ್ಯಾಯವಾಗಬಾರದು, ಕಷ್ಟವಾಗಬಾರದು."

ಮಾಳಿಗೆಯ ಮೆಟ್ಟಲುಗಳ ಮೇಲೆ ವಾಸುದೇವನ ಹೆಜ್ಜೆ ಕೇಳಿದ್ದರಿಂದ ತಾಯಿ ಮಗಳು ಸುಮ್ಮನಾದರು.

"ಅಂತೂ, ನಾನೆಂದರೆ ನಿಮಗೆ ಬಿಡಿಸಲಾಗದ ಒಗಟಾಗಿರಬೇಕು. ಅಲ್ಲವೆ?" ಎಂದು ದೊಡ್ಡದಾಗಿ ನಕ್ಕ ವಾಸುದೇವ.

"ನಿನ್ನ ಮನಸ್ಸು ಗಂಡಸಿನದಲ್ಲ, ಹೆಣ್ಣಿನದು—ಬಹಳ ನಾಜೂಕು,"

"ಓಹೋ ದೊಡ್ಡ ಸೈಕಾಲಾಜಿಸ್ಟ್ ಆಗಿಬಿಟ್ಟೆಯಲ್ಲ?"

"ಇವಕ್ಕೆಲ್ಲ ಅಮ್ಮನೇ ಕಾರಣ. ಅಮ್ಮನಿಗೆ ನಾನು ಹೊಟ್ಟೆಯಲ್ಲಿದ್ದಾಗ, ಹುಡುಗಿ ಹುಟ್ಟಬೇಕೆಂದು ಬಹಳ ಆಸೆಯಾಗಿತ್ತಂತೆ..."

"ಆಹುದೇನಮ್ಮಾ?"

"ಅಲ್ಲವೇನು? ಮನೆಗೆ ಬಂದ ಹೊಸಬರು 'ಹುಡುಗನೋ, ಹುಡುಗಿಯೋ?' ಎಂದು ಸಂಶಯ ನಿವಾರಣೆಗೆ ತೊಡಿಸಿದ ಕಿರಗಣೆಯನ್ನು ಎತ್ತಿ ನೋಡುತ್ತಿದ್ದರು.

೨

ಕೆಲವು ದಿನಗಳ ಮೇಲೆ ಮಾತ್ರ ವಾಸುದೇವನ ತಲೆಯ ಮೇಲೆ ಅದೆಂತಹ ತೊಲೆ ಬಂದು ಕುಳಿತಿತೋ ಮನೆಯವರಿಗೇ ತಿಳಿಯಲಿಲ್ಲ. ಯಾರ ಹತ್ತಿರವೂ ಹೆಚ್ಚು ಮಾತಿಲ್ಲ; ನಗುವುದಂತೂ ಇಲ್ಲವೇ ಇಲ್ಲ.

"ಶಿನ್ನೆ ಬಂದನೆ?" ಅಕ್ಕ ಕೇಳಿದ್ದಕ್ಕೆ "ಹುಂ ನಿನ್ನೆ ಬಂದ," ಎನ್ನುವಾಗ ಅವನ ಮೋರೆಯ ಮೇಲಾದ ಬದಲು ಅಕ್ಕನ ಸೂಕ್ಷ್ಮ ದೃಷ್ಟಿಯಿಂದ ಮರೆಯಾಗಲಿಲ್ಲ.

"ನಾಳೆಯಿಂದ ಸಾಲೆಗೆ ಸೂಟಿಯಲ್ಲವೇ? ಎಲ್ಲಿಯಾದರೂ ಹೋಗುವಿಯಾ?"

"ಇಲ್ಲಕ್ಕ. ಶಕ್ಯವಾದಲ್ಲಿ ಕಾದಂಬರಿಯ ಕೆಲವು ಪ್ರಕರಣಗಳನ್ನಾದರೂ ಬರೆದು ಮುಗಿಸಬೇಕೆನ್ನುತ್ತೇನೆ."

"ಹೊಸ ಕಾದಂಬರಿಯೆ? ವಿಷಯವೆಂತಹುದೊ?"

"ಭಾಷೆ ಕಲಿತ ಮಾನವ ವ್ಯಕ್ತಿ ಬರಿಯ ಮಾತಿನ ದುರುಪಯೋಗದಿಂದಲೇ ಇನ್ನೊಬ್ಬರ ಮನಸ್ಸನ್ನು ಎಷ್ಟೊಂದು ಕೆಡಿಸಬಲ್ಲದು? ವ್ಯಕ್ತಿ ವ್ಯಕ್ತಿಗೆ ಎಷ್ಟೊಂದು ಅನ್ಯಾಯ ಮಾಡಬಲ್ಲದು? ಎನ್ನುವುದೇ ಪಾತ್ರಗಳನ್ನು ಹುಡುಕಲು ದೂರ ಹೋಗಬೇಕಾಗಿಲ್ಲ. ಇಲ್ಲಿಯ, ನಮ್ಮ ಸುತ್ತಲಿನ ಜನರ ನಾನಾ ಸ್ವಭಾವವನ್ನು ಚಿತ್ರಿಸಿದರೆ ಸಾಕು. ಅಷ್ಟು, ಅವರ ನಾಲಿಗೆಯೇ?"

ತಮ್ಮನ ಮಾತಿನಲ್ಲಿಯ ಆವೇಶ ಕಂಡು 'ಏನೋ ಆಗಿದೆ' ಎಂದು ತಿಳಿಯಲು ತಡವು ಹಿಡಿಯಲಿಲ್ಲ.

*

ತನ್ನ ಕೋಣೆ ಸೇರಿ ವಿರಾಮ ಖುರ್ಚಿಯಲ್ಲಿ ಒರಗಿದ ವಾಸುದೇವನ ಮನಸ್ಸಿಗೆ ವಿಚಿತ್ರ

ಹಳಹಳಿ ಆವರಿಸಿದೆ. ಕಣ್ಣು ಮುಚ್ಚಿದ್ದಾನೆ.

ಶಿನ್ಯಾ ತಂದ ಸುದ್ದಿ ನಿಜವಾಗಿದ್ದರೂ ಒಪ್ಪಿದೇನಮ್ಮಾ – ನಿಮ್ಮ ಆಶೀರ್ವಾದವಿರಲಿ. ಛೆ! ಸ್ಟೇಜಿನ ಮೇಲೆ ಶೋಭಿಸುವ ಶಬ್ದಗಳು... ಅವಳನ್ನು ನಾನು ಬಲ್ಲೆ. ಅವಳು ನನಗೆ ಬೇಕು ಎಂಬ ಈ ತೀವ್ರ ಅನಿಸಿಕೆಗೆ ಕಾರಣವೇನು?... ಅವಳನ್ನು ಕಾಣಬೇಕು, ಅವಳನ್ನು ಹತ್ತಿರ ಕೂಡ್ರಿಸಿ ಮಾತನಾಡಿಸಬೇಕು... ಪಾಪ, ತನ್ನ ಬಗ್ಗೆ ಹುಟ್ಟಿಸಿದ ಈ ದುಷ್ಟ ಸುದ್ದಿಯಿಂದ ಎಷ್ಟೊಂದು ಹೆದರಿಕೊಂಡಾಳೋ ಚಿಕ್ಕ ಹುಡುಗಿ... ತನಗೆ ಇವರಲ್ಲಿ ಎಳ್ಳಷ್ಟೂ ನಂಬಿಕೆ ಇಲ್ಲ ಎನ್ನುವದನ್ನು ಮನಗಾಣಿಸಬೇಕು... ತುಂಬ ಭಾವನಾಪ್ರಧಾನ ನಮ್ಮ ಶಿನ್ನ, ಪ್ರಿಯಾಣೆಯಿಂದ ತಿಳಿದ ಸುದ್ದಿಯಿಂದ ಅವನು ನಿಜಕ್ಕೂ ಹೆದರಿದ್ದಾನೆ. ಅದೆಲ್ಲ ನನ್ನ ಮೇಲಿನ ಪ್ರೀತಿಯಿಂದಲೇ ಎನ್ನುವದನ್ನೂ ಬಲ್ಲೆ. ಅವನು ಕೊಟ್ಟ ಕಾರಣ ಸರಿಯಾದದ್ದೇ? ವಿಶ್ವನಾಥರ ಕೃತಿ ಧೂರ್ತತನದ್ದೇ?... ಊಹೂಂ. ನಾನು ಇದಕ್ಕೆಲ್ಲ ಮಹತ್ವ ಕೊಡಲಾರೆ. ಈಗಿನ ನನ್ನ ನಿಶ್ಚಯದಲ್ಲಿ ಬೇಕಾದಷ್ಟು ಹುಂಬಗುತ್ತಿಗೆ ಇರಲಿ. ಅದು ನನಗೆ ಸುಖ ಕೊಟ್ಟಿದೆ. ನಿರ್ಮಲೆಯನ್ನು ನಾನು ಮನಃಪೂರ್ವಕವಾಗಿ ಒಪ್ಪಿದ್ದೇನೆ...

ಎರಡು

ಕಳೆದ ಮೂರು ನಾಲ್ಕು ದಿನಗಳಿಂದ ಶಿನ್ನನ ಮನಸ್ಸಿಗೂ ಎಳ್ಳಷ್ಟೂ ನೆಮ್ಮದಿ ಇರಲಿಲ್ಲ: 'ಛತ್ ಇವನ ಬಾಳೇ ಹೀಗಾಯಿತಲ್ಲ– ಬರಿಯೆ ಬಿಸಿಲ್ಗುದುರೆಯ ಹಿಂದೆ ಓಟ. ಯಾಕಾದರೂ ಇವನಿಗೆ ಇಂತಹ ಹಟವೋ...?'

ಯಾವಾಗಲೂ ಹೀಗೆಯೇ! ಕೊನೆಗೆ ಆಡಿದವರಿಗೇ ಕೆಡುಕೆನಿಸಬೇಕು. ತಾನು ಮಾತ್ರ ತನ್ನ ಹಟದಿಂದ ಕದಲಲಾರ. ಇನ್ನೊಬ್ಬರ ಸುಖಕ್ಕಾಗಿ ದುಃಖ ಸಹಿಸುವದರಲ್ಲಿಯೇ ಇವನ ಜನ್ಮ ಹೋಯಿತಲ್ಲ...

"ಇಲ್ಲ ಶಿನ್ನಾ, ನಿನಗೆ ಇಲ್ಲಿ ಆ ತಾಯಿ–ಜೀವ ಕಂಡ ಕಷ್ಟಗಳ ಅರಿವು. ಈಗ ಅಪ್ಪನೂ ಇಲ್ಲ..."

"ಇಲ್ಲಿಯ ಜನರೆಲ್ಲ ನನ್ನನ್ನು ಅರಿಯಬೇಕು: ಇಲ್ಲ, ಅವರನ್ನೆಲ್ಲ ನಾನು ಅರಿಯಬೇಕು ಎನ್ನುವಷ್ಟು ಮಹಾತ್ವಾಕಾಂಕ್ಷೆ ನನ್ನಲ್ಲಿಲ್ಲ. ನನ್ನ ಇತಿ ಮಿತಿ ಬಲ್ಲೆ. ನನಗೆ ಈ ಬದುಕಿನಲ್ಲಿ ಅತ್ಯಂತ ಪ್ರಿಯವಾದವುಗಳು ಇಷ್ಟೇ: ನನ್ನ ತಾಯಿಯ ಪ್ರೀತಿ, ನಿನ್ನ ಶಾಂತಾಳ ಪ್ರೀತಿ, ಅಕ್ಕನ–ಭಾವನ ಪ್ರೀತಿ; ಮೊದಲಿನಿಂದಲೂ ಮಮತೆ ತೋರಿಸುವ ದತ್ತಿ ಮಾಸ್ತರರ ಪ್ರೀತಿ, ಇವರಷ್ಟು ನನ್ನನ್ನು ಅರ್ಥಮಾಡಿಕೊಂಡರೆ ಸಾಕು: ನಾ ಧನ್ಯ–ನಾನು ಬರೆವ ಕತೆ– ಕಾದಂಬರಿಗಳು: ನೀವು ಐದು ಜನ ಮೆಚ್ಚಿಕೊಂಡರೆ ಸಾಕು; ನನಗೆ ಸಂಪೂರ್ಣ ತೃಪ್ತಿ.........I am sentimental. ಅದರ ಬಗ್ಗೆ ಸಂಶಯವೇ ಇಲ್ಲ." ಎನ್ನುತ್ತ ಕಣ್ಣು ಒರೆಸಿಕೊಂಡ.

"ನನ್ನೊಡನೆ ಲಗ್ನವಾಗಿ ಸುಖವಾಗಿ ಬಾಳುವ ಇಚ್ಛೆ ಅವಳಿಗಿದ್ದುದಾದರೆ ಬರಿಯೆ ಕ್ಷಣಿಕ ಉನ್ಮಾದದ ಭರದಲ್ಲಿ ಕೈ ತಪ್ಪಿ ಆಗಿರಬಹುದಾದ ತಪ್ಪನ್ನು ನಾನು ಕ್ಷಮಿಸಲು ಸಿದ್ಧನಿರುವೆ."

...ನಿಜಕ್ಕೂ ವಾಸುದೇವ ಅಂದಂತೆ ಇಷ್ಟು ವರ್ಷಗಳ ಸಹವಾಸದ ಮೇಲೂ ನಾನು ಅವನನ್ನು ಸರಿಯಾಗಿ ಅರಿತಿಲ್ಲ. ಹಾಗೆ ಇಲ್ಲದ್ದನ್ನು ಆಡಿ ಅವನ ಮನಸ್ಸನ್ನು ನೋಯಿಸಬಾರದಾಗಿತ್ತು. ನಿರ್ಮಲೆಯ ವಿಷಯದ ನಿಶ್ಚಯವನ್ನು ಹಾರ್ದಿಕವಾಗಿ ಸ್ವೀಕರಿಸುವೆ: ಅವನ ಮುಂದಿನ ಜೀವನ ಸುಖದ್ದಾಗಲಿ...

ಮೂರು

"ಯಾರು ಸೀತಕ್ಕ? ಸೊಸೆ ಬರ್ತಾಳಂತಲ್ಲ? ಶ್ರೀಮಂತರ ಹುಡುಗಿಯಂತೆ. ನಮ್ಮ ಹುಡುಗಿ. ಅವನ ಸಾಲೆಗೇ ಹೋಗ್ತಾಳಲ್ಲ?...... ತನ್ನ ಮಾಸ್ತರರಿಗೆ ಮದುವೆಯೆಂದು ಬಹಳ ಖುಷಿಯಲ್ಲಿದ್ದಾಳೆ..."

ಜನ್ನಶೆಟ್ಟಿಯ ತಾಯಿ ಖುಶಿಯಿಂದ ಆಡಿದ ಮಾತುಗಳು ಸೀತಮ್ಮನಿಗೆ ಬಹಳ ಸುಖ ಕೊಟ್ಟವು.

"ಓ ಕಲ್ಯಾಣಿ? ಹೌದು..."

"ಹುಡುಗಿಯನ್ನು ಯಾವಾಗ ನೋಡಿ ಬಂದಿರಿ?..."

"ಹುಡುಗಿ ಏನು ನಮಗೆ ಗುತ್ತಿಲ್ಲದವಳಲ್ಲ ವಲ್ಲ? ಹುಡುಗ ಪಾಸು ಮಾಡಿದ್ದಾನೆ."

ಥಟ್ಟನೆ ಸೀತಮ್ಮನಿಗೆ ದತ್ತ ಮಾಸ್ತರರ ಮಾತು ನೆನಪಿಗೆ ಬಂತು:

"ಸಂದರ್ಭ ಬಂದದ್ದರಿಂದ ಹೇಳುತ್ತೇನೆ. ವಾಸುದೇವನ ತಂದೆ ಹೇಳಿದ ಮಾತು, ತನ್ನ ಒಬ್ಬನೇ ಒಬ್ಬ ತಮ್ಮ ಎಲ್ಲರನ್ನೂ ಬಿಟ್ಟು ಕಲಾವಂತರ ಹುಡುಗಿಯನ್ನು ಲಗ್ನವಾಗಲು ಹೊರಟಾಗ ಅವನ ಮನಸ್ಸಿಗಾದ ನೋವಿನ ಕಲ್ಪನೆ ನನಗಿದೆ. ಜಾತಿ ಜನರೆಲ್ಲ ಕಾಡಿದರೂ ಹೆದರಿದನೆ? ರಾಘವೇಂದ್ರು, ನಾನು ಇದರ ಬಗ್ಗೆ ಬಹಳ ವಿಚಾರ ಮಾಡಿದ್ದೇನೆ. ತಮ್ಮ. ನನಗೀಗ ಎಳ್ಳಷ್ಟೂ ಸಿಟ್ಟಿಲ್ಲ. ನಾವು ಒಬ್ಬ ರೊಬ್ಬರ ಜೀವನದಲ್ಲಿ ಹೇಗೆ ಬರುತ್ತೇವೋ! ಯಾಕೆ ಬರುತ್ತೇವೋ? ನೀನು ತಮ್ಮನಾಗಿ ಬಂದೆ... ಇನ್ಯಾರೋ ಏನೇನೋ ಆಗಿ ಹೀಗೆ ಬಂದ ನಂತರ ಮಾತ್ರ ಪರಸ್ಪರರಿಂದ ಬಯಸು ವುದು ಪ್ರೀತಿ ಆದರಗಳನ್ನಲ್ಲದೇ ಸಿಟ್ಟು ಸೆಡವುಗಳನ್ನೇ? ನಾವು ಇದ್ದ ಸಮಾಜದ ಕಲ್ಪನೆ ನಿನಗೆ ಇದೆಯಲ್ಲ? ಅವರಾಡುವ ಮಾತುಗಳಿಗೆ, ಹೆದರದೆ ಅವರನ್ನೆಲ್ಲ ಎದುರಿಸುವ ಧೈರ್ಯ ನಿನಗೆ ಇದೆಯಲ್ಲ?..."

ಇಪ್ಪತ್ತು ವರ್ಷಗಳ ಹಿಂದಿನ ಮಾತುಗಳಿಂದ ಕಣ್ಣು ತುಂಬಿ ಬಂದವು. ಇವರದೇ ಸ್ವಭಾವ ಹುಡುಗನದು. ಜನರ ಮಾತಿಗೆ ಹೆದರುವವನಲ್ಲ. ಆದರೆ ಕೆಟ್ಟದ್ದನ್ನು ಎಂದೂ ಮಾಡುವವನಲ್ಲ. ಅವನ ಸುಖಕ್ಕೆ ಏಕೆ ಅಡ್ಡಿ ಬರಲಿ...?

ನಾಲ್ಕು

ರಾತ್ರಿಯಊಟ ಮುಗಿಸಿ ಮಾಳಿಗೆಯ ಮೇಲಿನ ತನ್ನ ಕೋಣೆಗೆ ಬಂದ ವಾಸುದೇವ, ಹೊಸಪುಟ ವೊಂದರ ಮೇಲೆ ಚುಟುಕಾದ ಟಿಪ್ಪಣಿ ಬರೆದ: ಕಾಸಿಟ್ಟ ಹಾಲು ಬಟ್ಟಲಲ್ಲಿ ಹುಳಿಯ ಹನಿ ಸಿಡಿದು ಹಾಲು ಒಡೆದಿದೆ. ಈಗ, ಹೆಪ್ಪಿನ ತನಕವೂ ಕಾಯಬೇಕು. ಆ ಮೇಲೆ ಕಡೆದರೆ ಮೂಡಬಹುದು—ಈ ಹುಳಿಯಲ್ಲೂ ಬೆಣ್ಣೆ.

*

"I hate them all··· I hate their ugliness· ಅವರೊಂದಿಗೆ ನನ್ನಿಂದ ಊಟ ಸಾಧ್ಯವಿಲ್ಲ ಶಿನ್ನಾ, ನಾ ಬರಲಾರೆ. ಬೇಕಾದರೆ ಅಮ್ಮ-ಅಕ್ಕರನ್ನು ಕರಕೊಂಡು ಹೋಗು..."

ವಾಸುದೇವನಿಂದ ಮುಂದೆ ಮಾತನಾಡಲಾಗ ಲಿಲ್ಲ. ನೇರವಾಗಿ ತನ್ನ ಕೋಣೆಗೆ ಬಂದ. ಶಿನ್ನ ಹಿಂಬಾಲಿಸಿದ್ದ.

"ನೋಡು ಶಿನ್ನಾ, ನಿರ್ಮಲೆಯ ಬಗ್ಗೆ ಇವರು ಆಡಿಕೊಂಡಾಗಲೂ ನನಗೆ ಇಷ್ಟು ಸಿಟ್ಟು ಬಂದಿರ ಲಿಲ್ಲ. ಬರಿಯ ಸಣ್ಣ ಮನಸಸ್ಸು, ಸಣ್ಣ ದೃಷ್ಟಿ ಎಂದು ಬಗೆದು ಸಮಾಧಾನತಾಳಿದ್ದೆ. ಆದರೆ, ರೋಗದಿಂದ ಬಳಲುವ ಆ ಸುಬ್ಬನ ಬಗ್ಯೂ? ಆಡಿಕೊಂಡದ್ದು ಮುಖ್ಯವಲ್ಲ ಶಿನ್ನಾ, ಆಡಿಕೊಂಡ ರೀತಿ··· ನಮ್ಮ ಜನರ ಮನಸ್ಸಿನಲ್ಲಿ ಇಷ್ಟೊಂದು ಕುರೂಪತೆ ಮನೆ ಮಾಡಿಕೊಂಡಿರಬಹುದೆಂದು ಗೊತ್ತಿರಲಿಲ್ಲ..."

ಶಿನ್ನ ಮಾತನಾಡಲಿಲ್ಲ.

"ಇದೆಲ್ಲ ಏನು ಗೊತ್ತೆ? ಅತಿ ಕಾಮುಕತೆಯ ಕುರೂಪದರ್ಶನ. ಸ್ವತಃ ತಾವೇ ಕಾಮುಕರು; ಸುಬ್ಬನ ಕಾಮುಕತೆಯನ್ನು ತೆಗಳುವುದರಲ್ಲಿ ಸುಖ ಪಡೆಯುತ್ತಾರೆ..."

"ವೆಂಕಟರಮಣನೊಬ್ಬನೇ ಅಲ್ಲವಲ್ಲ?"

"ಸುಬ್ಬ ಅಂಥವನೋ ಅಲ್ಲವೋ ಎನ್ನು ವದು ಮುಖ್ಯವಲ್ಲ ಶಿನ್ನಾ, ಆದರೆ ಅವನ ಬಗ್ಗೆ ಇಷ್ಟೆಲ್ಲ ರುಚಿಯಿಂದ ಆಡಿಕೊಂಡ ಜನ ಯಾವ ಬಗೆಯ ಅಭಿರುಚಿಯನ್ನು ವ್ಯಕ್ತಪಡಿಸಿದರು ಎನ್ನುವದು. ತಮ್ಮನ್ನು ದ್ವೇಷಿಸುವಂತೆ ಮಾಡಿ ದ್ದಕ್ಕೆ ನಾನು ಇನ್ನಷ್ಟು ದ್ವೇಷಿಸುತ್ತೇನೆ..."

"ನೀನು ದ್ವೇಷಿಸುವುದು ಅವರನ್ನಲ್ಲ; ಅವರ ಬಗೆಗೆ ನೀನು ಮಾಡಿಕೊಂಡಿರುವ ಕಲ್ಪನೆಯನ್ನು. ನಾ ನಿನ್ನನ್ನು ಪೂರ ಬಲ್ಲೆ. ಪ್ರತ್ಯಕ್ಷ ಜೀವಂತ ವ್ಯಕ್ತಿಯನ್ನು ನೀನೆಂದೂ ದ್ವೇಷಿಸಲಾರೆ."

ವಾಸುದೇವ ಚಕಿತನಾದ; ಮಾತನಾಡಲಿಲ್ಲ.

"ಇವರು ನಮ್ಮ ಜನ ವಾಸೂ. ಬೇಕಾಗಲಿ,

ಬೇಡವಾಗಲಿ; ಇವರೊಡನೆ ನಾವು ಬದುಕಬೇಕಾಗಿದೆ. ಇವರಿರುವ ರೀತಿ ನಮ್ಮ ಬದುಕಿನ ಅವಿಭಾಜ್ಯ ಸತ್ಯ. ಅಪ್ರಿಯವಾದುದೆಂದ ಮಾತ್ರಕ್ಕೆ ಅದಕ್ಕೆ ಕಣ್ಣು ಮುಚ್ಚಬಹುದೇ? ಪಲಾಯನ ಹೇಳಬಹುದೆ – ಎಂದು ನೀನೇ ನನಗೆ ಹಿಂದೊಮ್ಮೆ ಸಮಾಧಾನ ಹೇಳಿದ್ದು ನೆನಪಿದೆಯೇ ?"

ವಾಸುದೇವ ಮರೆತಿರಲಿಲ್ಲ. ಗೆಳೆಯನ ಮಾತನ್ನು ಮನಸ್ಸಿನಲ್ಲಿ ಮೆಲುಕು ಹಾಕುತ್ತ ಖರ್ಚಿಯಲ್ಲಿ ಬಿದ್ದಲ್ಲೇ ಕಣ್ಣು ಮುಚ್ಚಿದ.

ತನ್ನನ್ನು ಆ ಸ್ಥಿತಿಯಲ್ಲೇ ಬಿಟ್ಟು ಹೊರಟು ಹೋದ ಶಿಷ್ಯನ ಕೃತಿಯನ್ನು ನೆನೆದು ವಾಸುದೇವನಿಗೆ ನಗು ಬಂತು. ಗಾಳಿಯಲ್ಲಿ ತೇಲುತ್ತ ಕೆಳಗಿಳಿಯುತ್ತಿದ್ದಂತೆ ಸ್ವಚ್ಛ ಬೆಳದಿಂಗಳಲ್ಲಿ ನಲಿಯುತ್ತಿದ್ದ ಹೊರಗಿನ ಸೃಷ್ಟಿಯನ್ನು ನೋಡುತ್ತ ಮೈಮರೆತ.

ಅಂಗಳದಲ್ಲಿ ಕಪ್ಪಾಗಿ ಬೆಳೆದ ಹಲಸಿನ ಮರ ಇದಿರಿನ ಹಿತ್ತಿಲಿಗೂ ಹೆಗ್ಗೆ ಚಾಚಿ ರಸ್ತೆಗೆ ತೋರಣ ಕಟ್ಟಿದೆ. ಇವೆಲ್ಲವುಗಳ ಆಚೆ ವಿಠೋಬ ಮಂದಿರದ ಕಲಶ ಹೊತ್ತ ತುದಿ. ಅದರ ಹಿನ್ನೆಲೆಯಲ್ಲಿ ಸ್ವಚ್ಛಂದವಾದ ರೆಂಬೆ ಬೀಸುತ್ತ ನಿಂತ ಎತ್ತರದ ಅಶ್ವತ್ಥ ಆಲದ ಮರಗಳು. ಅವುಗಳಿಗೂ ಆಚೆ… ಎಲ್ಲ ಮಸುಕು ಮಸುಕು. ವಿಠೋಬ ಮಂದಿರದಲ್ಲಿ ಘಣ್ ಎಂದು ಮೊಳೆತ ಗಂಭೀರ ಘಂಟಾನಾದಕ್ಕೆ ಮೈಮೇಲೆ ಮುಳ್ಳು ಮಿಂಚಿತು. ಸರಕ್ಕನೆ ತಾನು ಬರೆಯುವ ಮೇಜಿಗೆ ಬಂದ. ವಿಶ್ವನಾಥರಿಂದ ಬಂದ ಪತ್ರ: "ಈ ಸಂಬಂಧ ನಿನಗ ಒಪ್ಪಿಗೆಯಾದದ್ದನ್ನು ಕೇಳಿ ನಿರ್ಮಲೆ ಬಹಳ ಖುಶಿಯಾದಳು. ಅವಳಿಗೇ ಪತ್ರ ಬರೆಯಲು ನೀನು ಬಯಸಿದ್ದೀ. ನಮ್ಮದೇನೂ ಆತಂಕವಿಲ್ಲ…"

ವಾಸುದೇವ ಪೆನ್ನು ಹೊರತೆಗೆದ. ಹುಚ್ಚಪ್ಪ! ...ಜೋರು, ಅನುಭವ ಕಡಿಮೆ… ರಸಾನುಭವದ ಅಭಿವ್ಯಕ್ತಿಯಿಲ್ಲ; ಅಜೀರ್ಣದ ಓಕರಿಕೆ. ಅಂತೆಯೇ ಜಿಗುಪ್ಸೆ ಹುಟ್ಟಿದ್ದು. ನಮ್ಮ ಮನೆಯ ಹಿಂದೆ ಬಚ್ಚಲ ಮನೆಯ ಕೊಳೆಯಲ್ಲಿ ಬೆಳೆದ ಮಲ್ಲಿಗೆ ಬಳ್ಳಿಯ ಸತ್ವ ಪಡೆಯಬೇಕು. ನನ್ನ ವ್ಯಕ್ತಿತ್ವ… ವ್ಯಕ್ತಿತ್ವದ ವಿಕಾಸವೇ ಇಲ್ಲಿ ಗೈಯಬೇಕಾದ ಪುರುಷಾರ್ಥ…ಪ್ರೀತಿ: ಜೀವ ಜೀವದ ಬಂಧಿಸಿದ ಹೊಕ್ಕುಳ ಬಳ್ಳಿಯಯ್ಯಾ ಇದು. ಪಡೆದು ಬಂದಿತ್ತು ಹುಟ್ಟಿನಲ್ಲೇ ವಿಯೋಗ ಹೊಂದುವ ಶಾಪ. ಅಂದಿನಿಂದಲೂ ನಡೆದಿದೆ. ಸಂಯೋಗಕ್ಕಾಗಿ ನಿರಂತರ ತಪ; ವಾತ್ಸಲ್ಯದ ಬಯಕೆಯಾಗಿ, ಸಖ್ಯದ ಬಯಕೆಯಾಗಿ, ಸಹವಾಸದ ಬಯಕೆಯಾಗಿ…

"ವಾಸು ಏನು ಮಾಡುತ್ತಿದ್ದೀಯೋ?" ಕೆಳಗಿನಿಂದ ಗೋದಾವರಿ ಕರೆದಳು.

"ಯಾರಕ್ಕ?"

"ಬೆಳದಿಂಗಳು ಬಿದ್ದಿದೆ, ಹೀಗೆಯೇ ಘಾಟಿಯ ನೆತ್ತಿಯವರೆಗೆ ಹೋಗಿ ಬರೋಣವೇ? ಅಮ್ಮನೂ ಬರುತ್ತಾಳಂತೆ…"

"ಬಂದೇ…"

•

ವಾಸುದೇವ ಎಚ್ಚರವಾದಾಗ ಹೊತ್ತು ಚೆಲೋ ಮೇಲೇರಿ ಬಂದಿತ್ತು. ಹಾಸಿಗೆಯಲ್ಲಿ ಎದ್ದು ಕುಳಿತವನಿಗೆ ಬೆಳಗಿನ ಜಾವದಲ್ಲಿ ಕಂಡ ಕನಸೊಂದರ ನೆನಪು ಬರಹತ್ತಿತು: ಯಾವದೋ ಅಡವಿಯಲ್ಲಿ ಒಂದು ರಾತ್ರಿ; ಬೆಳದಿಂಗಳು. ತಾನು ಗಿಡದ ಕೆಳಗೆ ಅಂಗಾತ ಮಲಗಿದ್ದಂತೆ… ಮೋಡ ಕರಗಿ, ಅದರೊಳಗಿಂದ ಸುಂದರ ಹುಡುಗಿ ಇಳಿದಂತೆ.

"ನೀನು ಯಾರು?"

"ಪ್ರೀತಿ."

"ನಿನ್ನನ್ನು ಏನೆಂದು ಕರೆಯಲಿ?"

"ನಿನ್ನ ಮನಸ್ಸಿನಲ್ಲಿದ್ದಂತೆ."

"…… ಕರೆಯಲೇ?"

ಯಾವ ಹೆಸರದು? ನಿಮಗತಿ ಇರಬಹುದೇ?

ಹಿಡಿಮುದ್ದಿನ ವಾಸನೆ

ಒಂದು

ವಾತಾವರಣದಲ್ಲೆಲ್ಲ ಉಲ್ಲಾಸ ತುಂಬಿದ ರಾತ್ರಿ: ಕಿವಿಗಳನ್ನು ಗಡಚಿಕ್ಕುವಂತೆ ಅರ್ಭಟಿಸಿ ಹೊಟ್ಟೆಯೊಳಗಿನ ಸಿಟ್ಟನ್ನು ತಡೆಯಲಾರದೆ ಒಡೆದು ಹೋಗುವ ಗರ್ನಾಲು, ಬಣ್ಣ ಬಣ್ಣದ ಕೊಂಬು.

ಆಕಾಶಕ್ಕೇ ಬೆಂಕಿಯ ಬರೆಯೆಳೆದು ಕಣ್ಮರೆಯಾಗುವ ಸುರ್‌ಸುರ್ ಬಾಣ... ಸುದರ್ಶನ ಚಕ್ರ... ನೆಲಕ್ಕೆ ಅಪ್ಪಳಿಸಿ ಗರ್ಜಿಸುವ ನೆಲಗುಮ್ಮ... ಧಡಲ್ಬಾಜೀ...

ಸುಟ್ಟ ಮದ್ದಿನ ವಾಸನೆ ಹೀರುತ್ತಿದ್ದಂತೆ, ಮುಟ್ಟಾದ, ಅಸ್ವಸ್ಥಗೊಂಡ ನಿರ್ಮಲೆ, ತನ್ನ ಹಾಸಿಗೆಯಲ್ಲಿ ಹೊರಳಾಡುತ್ತಿರುವಂತೆಯೇ, ಗುಂಗು ಬರಹತ್ತಿತ್ತು...

ಥತ್! ಈ ಕೇರಿಯವರ ಮಾತುಗಳೋ. ನಾಯಿ ಜನ್ಮದವು... ಇಷ್ಟಕ್ಕೆಲ್ಲ ಹೆದರಬೇಕೆ? ಸಾವುಕಾರ ಮಾಸ್ತರರು ಕಳಿಸದಿದ್ದರೆ... ಇದೆಲ್ಲ ಮಾಧವನದೇ ಕಾರಸ್ಥಾನ... ಆದದ್ದು ಸರಿಯಾಗಿ ಗೊತ್ತಿಲ್ಲದಿದ್ದರೂ ಗಾಳಿ ಮಾತಿಗೆ ಬೆದರಿ, ಅವಸರದಲ್ಲಿ ಮದುವೆಯನ್ನು ನಿಶ್ಚಯಿಸಲು ಹೊರಟವರ ವಿರುದ್ಧ ಬಂಡೇಳಬೇಕು... ಏನೋ ಉಸಿರುಗಟ್ಟಿದಂತಾಯಿತು.

ಕೋಣೆಯ ಕದ ಮುಟ್ಟಿದ್ದೇ ಅಪ್ಪ ತಡೆಯಲಾಗದ ಆತುರದಿಂದ, "ಅತ್ತಿಗೇ, ಅದೆಲ್ಲ ಸುಳ್ಳಂತೆ!..." ಹೇಳಿದ್ದನ್ನು, ನಿರ್ಮಲೆ ನಂಬದಾದಳು. ಸುದ್ದಿ ಕೇಳಿ ನಗಬೇಕು... ಅಜೋಲಿನ್‌ಳ ನೆನಪು... ಮಾನವೇಲ ನಂಬಿಸಿದ್ದು, ಹೆದರಿಸಿದ್ದು, ಆ ಮುಗ್ಧ ಅಜ್ಞಾನದಿಂದ ಹುಟ್ಟಿದ ಭೀತಿಯೇ ಮುಂದಿನ ದುರಂತಕ್ಕೆ ಕಾರಣವಾಗಿತ್ತು.

ನಿರ್ಮಲೆ ಚಾದರವನ್ನು ಗಟ್ಟಿಯಾಗಿ ಎದೆಗವಚಿ ತುಟಿ ಕಚ್ಚಿದಳು. ಅಪ್ಪ ಮುಕ್ತನಿದ್ದಷ್ಟೇ ಭೋಳೇ ಸ್ವಭಾವದವ. ಇಡಿಯ ಊರಿಗೆ ಊರೇ ವಾಸುದೇವ ತನ್ನನ್ನು ನಿರಾಕರಿಸಿದುದರ ಬಗ್ಗೆ ಮಾತನಾಡುತ್ತಿದ್ದುದರ ಚಿತ್ರ ಕಣ್ಮುಂದೆ ನಿಂತು, ಕ್ಷಣಕಾಲ ಕಳವಳಿಸಿದಳು.

೨

ಕೊನೆಗೊಮ್ಮೆ ಅವರೆಲ್ಲ ಕಾದು ಕುಳಿತ ಪತ್ರ ಬಂದಿತ್ತು. ವಾಸುದೇವ ನಿರ್ಮಲೆಯನ್ನು ಒಪ್ಪಿದ್ದ.

ಅಪ್ಪನ ನಡತೆಯನ್ನು ನೆನೆಯುತ್ತಿದ್ದಂತೆ ತಡಪಡಿಸುತ್ತ, ನಿರ್ಮಲೆ ಏರಿಕೂತ ಜೋಕಾಲಿಗೆ ಜೋಲಿ ಕೊಟ್ಟಳು. ಹಗ್ಗ ಇಳಿಬಿಟ್ಟ ಅಬ್ಬಲಕಾಯಿ ಮರದ ಟೊಂಗೆ ಕೊಂಯ್‌ಗುಟ್ಟಿತು. ಈ ಜನರಿಗೆ ಅಪ್ಪ ಇಷ್ಟೊಂದು ಯಾಕೆ ಹೆದರುತ್ತಾನೋ... ನನಗೆ ಗೊತ್ತಿದೆ. ತನ್ನಲ್ಲಿ ವಿಶ್ವಾಸವಿಲ್ಲ. ಆದರೂ ಉಳಿದವರನ್ನು ನಂಬಿಸಲೇಬೇಕೆಂದು ಇಷ್ಟೆಲ್ಲ ಛಡಪಡಿ...

ನಿರ್ಮಲೆ ಪಕ್ಕ ಬದಲಿಸಿ, ಮುಸುಕನ್ನೆಳೆದುಕೊಂಡಳು. ತನ್ನ ಗುಟ್ಟೆಲ್ಲ ಈ ಮುಸುಕಿನ ಒಳಗೇ ಇದೆ; ಹೊರಗಿನ ಯಾರಿಗೂ ಗೊತ್ತಿಲ್ಲ. ಎನ್ನುವ ಭಾವನೆಯಿಂದ ಸುಖಪಟ್ಟಳು...

ಕೆಳಗೆ ಹೋದ ದೊಡ್ಡಮ್ಮ ಬಹಳ ಹೊತ್ತಿನವರೆಗೆ ಮೇಲೆ ಬರದಿದ್ದುದನ್ನು ಕಂಡು ಅಚ್ಚರಿಪಟ್ಟಳು. ತಾನೂ ಕೆಳಗಡೆ ಹೋದಾಗ, ಅಪ್ಪ, ಅಮ್ಮ, ದೊಡ್ಡಮ್ಮ ಏನೋ ಮಾತನಾಡುತ್ತಿದ್ದಾರೆ.

"ಈ ಸುದ್ದಿಯನ್ನು ಕೇಳಿದ ಮೇಲೂ ಹುಡುಗಿಯನ್ನು ಒಪ್ಪಿದ್ದಾರೆಂದ ಮೇಲೆ, ಅವರಿಗೂ ಈ ಸುದ್ದಿಯಲ್ಲಿ ನಂಬಿಕೆ ಇಲ್ಲವೆಂದಾಯಿತಲ್ಲ ?"

"ಹಾಗಲ್ಲಾ. ಹುಡುಗಿನೂ ಬೇಕು. ಹುಟ್ಟಿದ ಸುದ್ದಿ ಸುಳ್ಳೋ ನಿಜವೋ ಎನ್ನುವದು ಖಾತ್ರಿಯಾದ ಮೇಲೆ ಮದುವೆಯಾಗುವ ವಿಚಾರದಿಂದ, ಪರೀಕ್ಷೆ ಮುಗಿದ ಮೇಲೆ ಮುಹೂರ್ತ ಹಿಡಿಯುವ ಸೂಚನೆ ಮಾಡಿರಬಹುದು."

"ಯಾರು, ಮಾಮನ ಹೇಳಿದನೇ ?"

"ಹಾದು ಅತ್ತಿಗೆ. ತಮ್ಮ ಮೇಲಿನ ಪ್ರೀತಿಯಿಂದಲೇ ಹೇಳಿದ್ದ."

"ನೀ ಇಲ್ಲದ ಸಂಶಯವನ್ನು ತಲೆಯಲ್ಲಿ ಹಾಕಿಕೊಳ್ಳಬೇಡ, ವಿಶ್ವನಾಥ. ನಮ್ಮ ನಿರ್ಮಲೆ ಕೆಟ್ಟ ಕೆಲಸ ಮಾಡುವವಳಲ್ಲ. ಸತ್ಯ ಸಂಗತಿ ತಿಳಿಯಲೆಂದೇ ಮದುವೆ ಮುಂದೆ ಹಾಕಿದ್ದಾದರೆ, ಅದು ಒಳ್ಳೆಯದೇ, ನಾಳೆ ಹುಡುಗಿಯ ಜೀವನ ಹಾಳಾಗದಿರಲಿ."

"ಅಂದರೆ, ನಿರ್ಮಲೆ ತಿರುಗಿ ಸಾಲೆಗೆ ಹೋಗಲಿ ಅಂತೀಯಾ ?"

"ಹೋಗಲಿ, ಹೋಗದಿದ್ದರೆ...... ಇಲ್ಲದ ಸಂಶಯ ಹೆಚ್ಚುತ್ತದೆ. ಈಗ ಹೋಗಿ ಮಲಗು."

*

ಇಡಿಯ ದಿನ ಕೇರಿಯ ಜನರಲ್ಲಿ ಕೋಲಾಹಲ. ಯಾರಿಗೂ ಏನು ಆಯಿತೋ ತಿಳಿಯದು. ತೀರ

ಅನಪೇಕ್ಷಿತವಾಗಿ ನಡೆದ ಘಟನೆಯಿಂದ ಹೆದರಿ ಕೊಂಡ ತುಳಸಿಯೂ ಬಾಯಿ ಬಿಡಲಿಲ್ಲ. ಪಾರ್ವತಕ್ಕ ಮಾತ್ರ ನಾಲ್ಕು ಕೇರಿ ಒಂದು ಮಾಡುವವಳಂತೆ ಒದರಾಡುತ್ತಿದ್ದಳು.

"ಮೈಯೊಳಗಿನ ಸೊಕ್ಕು... ನಮಗೆ ಗೊತ್ತಿಲ್ಲಾಂತ ತಿಳಿದಳೇನಿಕಿ......? ಕಾರವಾರದಲ್ಲಿಯ ಇವಳ ಕರಾಮತಿಗಳು?... ನೀವು ಬಚ್ಚಿಟ್ಟರೇನು? ಕುಮಟೆಯ ಜನ ಅದು, ಪತ್ತೆ ಹಚ್ಚದೆ ಬಿಟ್ಟಾರೆಯೇ? ಆ ಮಾಸ್ತರ... ಗೊತ್ತಿದ್ದೊ ಗೊತ್ತಿದ್ದೊ ಯಾಕೆ ಒಪ್ಪಿದ ಎನ್ನುವದೂ ಗೊತ್ತಿದೆ. ಸೊಕ್ಕಿನವಳು ಹೋಗಬೇಕು... ಅಲ್ಲಿ ಯಾರೋ ಇದ್ದಾನಂತಲ್ಲ... ಸುಟ್ಟು ಮೋರೆಯವನು... ರಂಗಪ್ಪನೋ ಬಿಂಗಪ್ಪನೋ..."

ವಿಶ್ವನಾಥರು ಹುಚ್ಚು ಹಿಡಿದವರಂತೆ ಓಡಿ ಬಂದು, "ದಮ್ಮಯ್ಯಾ" ಎಂದು ಅವಳ ಕಾಲು ಹಿಡಿಯುದಿದ್ದರೆ, ಅವಳ ಮಾತು ಇನ್ನೆಲ್ಲಿಗೆ ಹೋಗುತ್ತಿತ್ತೋ. ಪಾರ್ವತಕ್ಕನ ಗಂಡ ಪದ್ಮನಾಭನು ಓಡೋಡಿ ಬಂದು ವಿಶ್ವನಾಥರ ಕೈಹಿಡಿದು ಎಬ್ಬಿಸುತ್ತ, "ಛಿ ಛಿ ವಿಶ್ವನಾಥಣ್ಣಾ, ನೀನು ಹೀಗೆ ಮಾಡಬಾರದು," ಎನ್ನುತ್ತ ಅವರನ್ನು ಒಳಗೆ ಕಳಿಸಿ ಹೆಂಡತಿಗೆ ಬೈಯತೊಡಗಿದ.

ಮಾಳಿಗೆಯ ಮೇಲಿನ ತನ್ನ ಕೋಣೆಯನ್ನು ಹೊಕ್ಕ ನಿರ್ಮಲೆ ಹಿತ್ತಲ ಬದಿಯ ಕಿಟಕಿಯ ಸರಳುಗಳನ್ನು ಗಟ್ಟಿಯಾಗಿ ಹಿಡಿದು ಉನ್ಮಾದ ಬಂದವಳಂತೆ ನಡುಗುತ್ತ, ಕಟಕಟ ಹಲ್ಲು ಕಡಿಯುತ್ತ, "ಹೋಗ್ತೇನೆ, ಹೋಗ್ತೇನೆ...... ಆ ರಂಗಪ್ಪನ ಜೊತೆಗೇ ಓಡಿ ಹೋಗ್ತೇನೆ. ನನಗೆ ನಿನ್ನ ಹೆದರಿಕೆ ಇಲ್ಲವೇ ರಂಡೇ... ಕಳಿಸಿಕೊಡು ಬೇಕಾದರೆ ನಿನ್ನ ತುಳಸಿಯನ್ನು ಜೊತೆಗೆ..."

ಎರಡು

೧

ವಾಸುದೇವನಿಂದ ನಿರ್ಮಲೆಗೆ ಬಂದ ಪತ್ರದಿಂದ ವಿಶ್ವನಾಥರಿಗೆ ಸಂತೋಷವೇನೋ ಆಯಿತು. ಆದರೂ ಮನಸ್ಸು ಮಾತ್ರ... ಥತ್. ಎಲ್ಲರೂ ಹೆದರಿಸುವವರೇ. ಈ ಸುದ್ದಿ ಊರೆಲ್ಲ ಹಬ್ಬುವದು. ಹಬ್ಬಲಿ... ಹಬ್ಬಲಿ...

೨

೩-೪ ದಿನಗಳ ನಂತರ ನಿರ್ಮಲೆಗೆ ಅದೇನಾಯಿತೋ ಯಾರಿಗೂ ತಿಳಿಯದು. ಯಾರ ಹತ್ತಿರವೂ ಮಾತಿಲ್ಲ. ಬಿಸಿಲಿನ ಹೊತ್ತೆಂಬುದನ್ನೂ ಲಕ್ಷಿಸದೆ ಹಿತ್ತಲಲ್ಲಿ ಹೋಗಿ ಜೋಕಾಲಿ ಏರಿದ್ದಳು. ಹುಚ್ಚು ಹಿಡಿದವಳಂತೆ ಜೀಕುತ್ತಿದ್ದಳು.

...ಇದಕ್ಕೆಲ್ಲ ಆ ಹಾಳು ಮಾಸ್ತರನೇ ಕಾರಣ. ೧೪ ಪುಟಗಳ ಪತ್ರದಲ್ಲಿ ನನ್ನ ಬಗ್ಗೆ ಮಾತೇ ಇಲ್ಲ. ನನ್ನನ್ನು ನೋಡುವ ಬಯಕೆಯನ್ನೂ ಪ್ರಕಟಿಸಿಲ್ಲ.

"ನೀನೂ... ಇಡಿಯ ದಿನ ಹೀಗೆ ಜೀಕಿದರೆ ಹ್ಯಾಗೆ ಮಗೂ. ಇಳಿ ಮಗೂ ನಾಳೆ ಕಾರವಾರಕ್ಕೆ ಹೋಗುವದಲ್ಲವೇ...... ನಿನ್ನ ಪುಸ್ತಕ...... ಅರಿವೆಗಳನ್ನು ಟ್ರಂಕಿನಲ್ಲಿ ತುಂಬಿದೆಯೋ...?" ರಾಧಮ್ಮ ಹೇಳುತ್ತ, ನಿರ್ಮಲೆಯನ್ನು ಮನೆಯೊಳಗೆ ಕರೆದೊಯ್ದರು.

*

ನಿರ್ಮಲೆ ಕಾರವಾರಕ್ಕೆ ಹೋಗಿ ೧೫ ದಿನಗಳಾಗಿವೆ. ಅವಳು ಸುಖವಾಗಿರುವದರ ಬಗ್ಗೆ, ಕುಮಟೆಯಿಂದ ವಾಸುದೇವ ಇದಾಗಲೇ ನಿರ್ಮಲೆಗೆ ೨ ಪತ್ರಗಳನ್ನು ಬರೆದುದರ ಬಗ್ಗೆ, ಚಂದ್ರಭಾಗಕ್ಕನೇ ಪತ್ರ ಬರೆದಿದ್ದರು.

*

ಒಂದು ದಿನ ಚಂದ್ರಭಾಗಕ್ಕ ನಿರ್ಮಲೆಗೆ ಇಬ್ಬರನ್ನೂ ನೋಡಿ ರಾಧಮ್ಮ ಗಾಬರಿಯಾದರು. ಏನೋ ಅನಾಹುತವಾಗಿದೆಯೆಂದು ತಿಳಿಯಲು ತಡವಾಗಲಿಲ್ಲ.

೩

ನಿರ್ಮಲೆಯ ಜ್ವರ ನಿಂತು ಇಂದಿಗೆ ೧ ವಾರ ಕಳೆದಿದೆ. ಬಹಳ ಇಳಿದಿದ್ದಾಳೆ. ಮೋರೆ ಬಿಳಿಚಿ ಕೊಂಡಿದೆ. ಕಣ್ಣು ಗುಣಿ ಹೊಕ್ಕಿವೆ.

ಚಂದ್ರಭಾಗಕ್ಕ ನಿರ್ಮಲೆ ಸೂರೀಪಾರ್ಕಿನಿಂದ ಹಿಂತಿರುಗಿದ ರಾತ್ರಿ ಜತೆಯಲ್ಲಿಲ್ಲ ಹೋಯಿಗ ಸಿಕ್ಕಿ ಕೊಂಡಿದ್ದುದರ ವಿಷಯ ಹೇಳಲೇ ಇಲ್ಲ.

ಅಂಗಡಿಯಿಂದ ಹಿಂದಿರುಗಿದ ವಿಶ್ವನಾಥರು ಆತುರಾತುರವಾಗಿ ಬಂದು, "ಅತ್ತಿಗೆ, ವಾಸು

ಸುವಾಸಿತ ಹಾಗೂ ಸ್ವಾದಿಷ್ಟ ಮುಖಶುದ್ಧಿಗಾಗಿ



ಚಮನ್ ಇದು ಅತ್ಯಂತ ಸ್ವಾದಿಷ್ಟ ಹಾಗೂ ರುಚಿಕರವಾದ ಚೂರ್ಣವಾಗಿದೆ. ಇದನ್ನು ಸೇವಿಸುವದರಿಂದ ಬಾಯಿಯು ಸುವಾಸಿತವಾಗುತ್ತದೆ.

ಚಮನದಲ್ಲಿ ಏನೆಲ್ಲ ಇದೆ?



ಈ ಚಮನದಲ್ಲಿ ಜೇಷ್ಠಮಧು, ಕೇಸರ, ಏಲಕ್ಕಿ. ಲವಂಗ, ಪತ್ರಿ, ಜಾಜಿಕಾಯಿ, ಬಡೆಸೋಪ್, ಮೆಂಥಾಲ್‌ಗಳಂಥ ಅನೇಕ ಬಗೆಯ ಸುಗಂಧಿತ ಹಾಗೂ ರುಚಿಕರ ವಸ್ತುಗಳು ಒಳಗೊಂಡಿರುವವು. ಅದಕ್ಕೆಂದೇ ಇದು ಚಿಕ್ಕಮಕ್ಕಳಿಂದ ವೃದ್ಧರವರೆಗೆ ಎಲ್ಲರಿಗೂ ಅಚ್ಚುಮೆಚ್ಚು.

ಸ್ಟಾರ್ ಕಂಪನಿ, ಬೆಳಗಾಂವ್

M. K. Publicity

ದೇವ ಬರುವ ರವಿವಾರ ಬರುತ್ತಾನಂತೆ," ಎಂದರು. ನಿರ್ಮಲೆ ಹಾಸಿಗೆಯಲ್ಲಿ ಎದ್ದು ಕುಳಿತು, ಹೆದರಿದವರಂತೆ ಕೇಳಿದಳು.

"ಯಾರು ಬರುತ್ತಾರಂತೆ ?"

"ನಿನ್ನ ಕೈ ಹಿಡಿಯುವವನೇ ಕಳ್ಳೀ."

"ಯಾಕೆ ಬರುತ್ತಾರಂತೆ?"

"ನಿನ್ನ ನೋಡಲಿಕ್ಕೆ."

"ಈಗ ಬೇಡ ಅತ್ತಿಗೆ. ಅವರು ನನ್ನನ್ನು ನೋಡುವದು ಬೇಡ." ವಿಮಲೆಯ ಅಸಂಬದ್ಧ ಮಾತಿಗೆ, ವಿಶ್ವನಾಥರ ಸಿಟ್ಟು ಸರ್ ಎಂದು ಏರಿತು. "ಬೇಡ ಅಂತಿಯೇನೇ ? ತಿರುಗಿ ಏಸ್ ಮಾಡಿ ಬಂದಿಯೇ?..."

...ನಿರ್ಮಲೆ ಕಿಟಕಿಯೊಳಗಿಂದ ಹೊರಗೆ ನೋಡಿದಳು, ...ಇಲ್ಲ, ಈಗ ಹೆದರುವದಿಲ್ಲ. ನೀವೆಲ್ಲ ಊಹಿಸಿಕೊಂಡ ಆ 'ಪ್ರಕರಣ' ಇನ್ನೂ ಮಾಡಿಲ್ಲವೇ ರಂಡೆಯರಿರಾ... ನಿಮಗೆ ಹೆದರಿ ಅಲ್ಲ, ನನಗೇ ಹೇಸಿಗೆ ಅನ್ನಿಸಿತು, ಆ ರಂಗಪ್ಪನ ಬಗ್ಗೆ. ನನಗೆ ಬೇಕು ಅನಿಸಿದ್ದರೆ ಅಂದೇ ಆಗಿ ಬಿಡುತ್ತಿತ್ತು. ನಾನೇ ಬೇಡವೆಂದೆ. ರಂಗಪ್ಪನ ಸೊಂಟಕ್ಕೆ ಇದೇ ಕಾಲುಗಳಿಂದ ಒದ್ದು ಬಂದೆ...

ಈ ಹೊಲಸು ಜನ... ಹೆದರುವ ನನ್ನಪ್ಪ, ಆ ತಲೆಯಿಲ್ಲದ ಮಾಸ್ತರ... ಎಲ್ಲರೂ ಕೂಡಿ ಆ ರಂಗಪ್ಪನ ಹತ್ತಿರ ಹೋಗುವಂತೆ ಮಾಡಿದರಲ್ಲ...

...ಸೂರೀ ಪಾರ್ಕಿನಲ್ಲಿ ನಾನು ಯಾವಾಗ ರಂಗಪ್ಪನ ಅಪ್ಪುಗೆ ಸೇರಿದ್ದೆ? ತುಟಿಗಳ ಮೇಲೆ ತುಟಿ ಇಟ್ಟಿದ್ದನಲ್ಲ...ತನ್ನನ್ನು ಬಿಗಿದು ಅಪ್ಪಿದವನು ರಂಗಪ್ಪನೇ ತಾನೆ? ನೀಚ, ನಿರ್ಲಜ್ಜ... ನನಗರಿವಾಗುವ ಮೊದಲೇ ನನ್ನ ಎದೆಯನ್ನು ಬೆತ್ತಲೆಗೊಳಿಸಿದ್ದನಲ್ಲ! 'ಹೆದರ ಬೇಡ ಚಿನ್ನಾ, ನಾ ನಿನ್ನನ್ನು ಪ್ರೀತಿಸುತ್ತೇನೆ; ನೀ ಒಪ್ಪಿದರೆ, ಲಗ್ನಾನೂ ಆಗ್ತೇನೆ,' ಎಂದನಲ್ಲ!...

ಇನ್ನೆರಡು ದಿನಗಳಲ್ಲಿ ಆ ಮಾಸ್ತರ ಬರುವ–ಬರಲಿ ಬರಲಿ...

ಮೂರು

೧

ಕಪಿಲತೀರ್ಥದ ಹಿಂದಿನ ಎತ್ತರವಾದ ಹೊಯಿಗೆಯ ಗುಂಡೆಯ ನೆತ್ತಿಯಿಂದ ಕಾಣುವ ಸಂಜೆಯ ರಮ್ಯ ದೃಶ್ಯ ನೋಡುತ್ತ ವಾಸುದೇವ ಮೈಮರೆತ. ಬಳಿಯಲ್ಲಿ ನಿರ್ಮಲೆ ಕುಳಿತಿದ್ದಳು.

ನಿರ್ಮಲೆ ವಾಸುದೇವನನ್ನು ನೋಡಿದಳು. ಇವನೇನೇ ನೆನೆಸಿದಾಗ ತಿರಸ್ಕಾರ ಹುಟ್ಟಿಸಿದವನು? ನೋಡುವ ಮೊದಲೇ ನನ್ನನ್ನು ಒಪ್ಪಿದವನು?...

"ನಿರ್ಮಲಾ."

ವಾಸುದೇವನ ಕರೆಯಲ್ಲಿ ಮೈದಡವಿ ಸಂತೈಸುವ ಮಾರ್ದವತೆ ಇತ್ತು.

"ನಿರ್ಮಲಾ."

ನಿರ್ಮಲೆಯ ಸಿಟ್ಟು ಆಗಲೇ ತಲೆಗೇರಿ ಮೂಗಿನ ಹೊರಗೆಳೆಗಳು ಇಷ್ಟಗಲ ಅರಳಿದ್ದವು.

"ಹೆದರ ಬೇಡ ನಿರ್ಮಲಾ."

"ನನಗೆ ಹೆದರಿಕೆಯಿಲ್ಲ."

ನಿರ್ಮಲೆಯ ಸಿಟ್ಟಿಗೆ ವಾಸುದೇವ ಬೆಚ್ಚಿಬಿದ್ದ.

"ಅದು ಬರಿಯ ಸುದ್ದಿಯಾಗಿರದೆ ನಿಜವಾಗಿಯೂ ನಡೆದದ್ದಾದರೆ?"

ನಿರ್ಮಲೆಯ ಅನಪೇಕ್ಷಿತ ಮಾತಿನಿಂದ ವಾಸುದೇವನಿಂದ ಮಾತೇ ಹೊರಡಲಿಲ್ಲ. ನಂತರ ಮೆಲ್ಲನೆ, "ನಿಜವಿದ್ದರೂ ನನಗದರ ಪರಿವೆಯಿಲ್ಲ. ಅದಕ್ಕೆ ನನ್ನ ಪೂರ್ಣ ಕ್ಷಮೆಯಿದೆ."

"ಪರಿವೆ ಇರಬೇಕಾದದ್ದು ನನಗೆ; ನಿಮಗಲ್ಲ. ಆದದ್ದರ ಕುರಿತು ನನಗೇನೂ ಕೆಡುಕೆನಿಸಿಲ್ಲ. ಅದಕ್ಕೆ ಯಾರ ಕ್ಷಮೆಯೂ ಬೇಕಿಲ್ಲ. ನಾನು ಮೆಚ್ಚಿಕೊಂಡವನು ನನಗೆ ಮುತ್ತು ಕೊಟ್ಟರೆ..."

"ನೀವೂ..."

"ಆ ಹೆಸರಿನಿಂದ ಕರೆಯುವ ಅಧಿಕಾರ ನಿಮಗೆ ಬಂದಿಲ್ಲ. ರಂಗಪ್ಪನ, ನನ್ನ ಬಗ್ಗೆ ಕೇಳಿದ ಸುದ್ದಿಯೆಲ್ಲ ನಿಜವಾದದ್ದು, ನಾವಿಬ್ಬರೂ ಒಬ್ಬರನ್ನೊಬ್ಬರು ಪ್ರೀತಿಸುತ್ತೇವೆ. ನಮ್ಮ ಅಪ್ಪ ಅಂಜುಬುರುಕ. ಓಡಿ ಹೋಗಿ ನಿಮಗೆ ಜಾತಕ ಕೊಟ್ಟ, ನೀವೂ ಒಮ್ಮೆಲೆ ಹೂಂ ಎಂದಿರಿ, ನನ್ನ ಮೇಲೆ ಉಪಕಾರ ಮಾಡುವವರ ಹಾಗೆ..."

"ನಿರ್ಮಲಾ ಪ್ಲೀಜ್..."

"ಹಾಗೇಕೆ ಕಿವಿ ಮುಚ್ಚಿಕೊಳ್ಳುವಿರಿ. ಅಪ್ಪಗೆ ಹೇಳುವಿರಿ. ನನಗೆಲ್ಲ ಗೊತ್ತಿದೆ. ನನಗಾರ ಹೆದರಿಕೆಯೂ ಇಲ್ಲ... ಯಾರ ಕ್ಷಮೆಯ ಗರಜೂ ಇಲ್ಲ. ನಾ ಹೋಗ್ತೇನೆ," ಎನ್ನುತ್ತ ಅಲ್ಲಿಂದ ಓಟಕಿತ್ತಳು.

ಮನೆಯ ಹಿತ್ತಲು ಮುಟ್ಟಿದ್ದೇ ಓಡಿಹೋಗಿ

ಜೋಕಾಲಿ ಏರಿದಳು. ಜೀಕಿಯೇ ಜೀಕಿದಳು...

"ನೀವೂ... ಇಳಿ ಮಗೂ... ಹಗ್ಗ ಮುರಿ ದೀತು."

ರಾಧಮ್ಮ ಹೇಳುವಷ್ಟರಲ್ಲಿ ಜೋಕಾಲಿಯ ಹಗ್ಗ ಹರಿದಿತ್ತು.

"ಅಯ್ಯೋ ನಾ ಸತ್ತೆ," ಎಂದು ಬೊಬ್ಬೆಯಿ-ಡುತ್ತ ನಿರ್ಮಲೆ ಕೆಳಗುರುಳಿ ಬಿದ್ದಿದ್ದಳು.

*

ಇನ್ನೂ ಅಂಗಾತ ಮಲಗಿದ್ದ ವಾಸುದೇವ.

"...ನಿರ್ಮಲೆ–ರಂಗಪ್ಪ!

ನಾನೇ ನನ್ನಿಂದ ಅವಳನ್ನು ರಕ್ಷಿಸಬೇಕು. ರಂಗಪ್ಪನ ಪ್ರೇಯಸಿ ಯಾಕಾಗಬಾರದು? ನನ್ನಿಂದ ಅವಳಿಗಾದ ಅನ್ಯಾಯಕ್ಕೆ ಪ್ರಾಯಶ್ಚಿತ್ತ ವೆಂದಾದರೂ ಈ ಸಂಬಂಧ ಮುರಿದುದರ ತಪ್ಪನ್ನು ನನ್ನ ಮೇಲೆ ತೆಗೆದುಕೊಳ್ಳಬೇಕು...

...ಅಂಗಳ ತಲುಪಿದಾಗ ನಿರ್ಮಲೆ ಜೋಕಾಲಿ ಯಿಂದ ಬಿದ್ದಿದ್ದು ತಿಳಿಯಿತು. ಹೋಗಿ ನೋಡ ಬೇಕೆಂದೆ. ಮರುಕ್ಷಣ, "ಈಗ ಬೇಡ..." ಎಂದು ತನ್ನ ಮಂಚಕ್ಕೆ ಬಂದು, ಅಡ್ಡವಾಗಿ, ಎರಡೂ ಕೈಗಳಿಂದ ಮುಖ ಮುಚ್ಚಿಕೊಂಡ.

೨

ಹೊರಡುವ ಸಿದ್ಧತೆಯಾಗಿ ಮನೆಯವರೆಲ್ಲ ರಿಂದ ಬೀಳ್ಕೊಡುವ ಹೊತ್ತು ಬಂದಾಗ, ಅನು ಮಾನಿಸುತ್ತ, "ನಿರ್ಮಲೆ ಎಲ್ಲಿ?" ಎಂದು ವಾಸು ದೇವ ಕೇಳಿದ.

"ಇಲ್ಲೇ ಮೇಲೆ ಕೋಣೆಯಲ್ಲಿದ್ದಾಳೆ. ನಾಚು ತ್ತಾಳೆ. ಹುಡುಗಿ," ಎಂದಳು ಚಂದ್ರಭಾಗಕ್ಕ.

ಮೆಲ್ಲನೆ ಮಾಳಿಗೆಯ ಮೆಟ್ಟಲುಗಳನ್ನು ಏರಿ, "ನಿರ್ಮಲಾ" ಎಂದು ಕರೆಯಬೇಕೆಂದು ನಿಶ್ಚ ಯಿಸಿ, "ಬೇಡ, ಸುಳ್ಳೆ ಈಗೇಕೆ ಈ ನಾಟಕ? ಪತ್ರ ಬರೆದು ತಿಳಿಸಿದರಾಯಿತು" ಎಂದುಕೊಂಡು, ಕೆಳಗಿಳಿದ ಹಾಗೆಯೇ.

*

"ನಾನು ಮೆಚ್ಚಿಕೊಂಡವನು ನನಗೆ ಮುತ್ತು ಕೊಟ್ಟರೆ ತಪ್ಪೇನು!

ನಾನು–ರಂಗಪ್ಪ ಒಬ್ಬರನ್ನೊಬ್ಬರು ಪ್ರೀತಿ ಸುತ್ತೇವೆ."

ಯಾವುದೋ ನಾಟಕೀಯ ಕ್ಷಣದಲ್ಲಿ ಆಡಿದ ಮಾತುಗಳೇ ಈಗ ಇನ್ನೊಂದು ನಾಟಕೀಯತೆಗೆ ಅನುವು ಮಾಡಿಕೊಡುತ್ತ, ಕತ್ತಲೆಯಲ್ಲಿ ತೇಲಿ ಬಂದವು. ಹೊದಿಕೆಯ ಮುಸುಕಿನಲ್ಲಿ ರಂಗಪ್ಪ... ಆಲಿಂಗನ ಕೊಡುವ ರಂಗಪ್ಪ...

...ಈ ಸಲ ರಂಗಪ್ಪನ ಬಗ್ಗೆ ನನಗೆ ನಿಜಕ್ಕೂ ಪ್ರೀತಿಯಿದೆ. ಇಲ್ಲವಾದರೆ ವಾಸುದೇವನಿಗೆ ಹೀಗೆ ಎದುರಾಡುತ್ತಿದ್ದೇನೆ...? ಈಗ ಯಾರ ಹೆದರಿ ಕೆಯೂ ಇಲ್ಲ. ಯಾರು ಕೇಳಿದರೂ ಸ್ಪಷ್ಟ ಹೇಳು ತ್ತೇನೆ ನಾನು ರಂಗಪ್ಪನನ್ನು ಪ್ರೀತಿಸಿದ್ದು ಹೌದೆಂದು.

ನಿದ್ದೆಗಣ್ಣಿನಲ್ಲೂ ನಿರ್ಮಲೆಗೆ ನಗು ಬಂತು.

ಹೊರಡುವ ಹೊತ್ತು ಬಂದಾಗ ನಿರ್ಮಲೆ ಮನೆಯ ಹಿರಿಯರಿಗೆಲ್ಲ ಪಾದ ಮುಟ್ಟಿ ನಮ ಸ್ಕರಿಸಿ, "ಹೋಗಿ ಬರುತ್ತೇನೆ" ಎಂದಳು.

ಚಂದ್ರಭಾಗಕ್ಕ "ಬಾ" ಎನ್ನುತ್ತ ನಡೆದರು.

"ಏ ಏ ಏ, ಪರಿಸ್ಥಿತಿಯ ಜ್ಞಾನ ಇಲ್ಲದೇ ಬಡಬಡಿಸಬೇಡಾ. ಏನೇನೂ ಉಳಿದಿಲ್ಲ. ಇಡೀ ಊರಿಗೇ ಊರೇ ಮಾತನಾಡಹತ್ತಿದೆ. ಸಾಲೆಯ ಮಕ್ಕಳೆಲ್ಲ ಸಾಲೆಯ ಗೋಡೆಯ ಮೇಲೆ, ಸೂರೀ ಪಾರ್ಕಿನಲ್ಲಿ ನಿರ್ಮಲೆ ರಂಗಪ್ಪನ ಸಂಗಡ ಏನೂ ಮಾಡಿದಳು, ಎನ್ನುವದರ ಚಿತ್ರ ತೆಗೆದಿದ್ದಾರೆ."

"ಥೂ, ನಿಮಗೆ ನಾಚಿಕೆ ಎನಿಸುವುದಿಲ್ಲವೇ, ಆ ಮಗೂನ ಬಗ್ಗೆ ಹೀಗೆ ಮಾತನಾಡಲಿಕ್ಕೆ?"

"ಥಡಥಡೀ ಸೂರಿಪಾರ್ಕಿನಲ್ಲಿ ಆ ಹಾಳಾದವನ ಜೊತೆ ಹಾದರಾ ಮಾಡ್..."

"ಬಾಯಿ ಮುಚ್ಚಿತೀರೋ..."

"ಇಲ್ಲದಿದ್ದರೆ ಏನ್ ಮಾಡ್ತಿಯೋ?"

ಮಾಳಿಗೆಯ ಮೆಟ್ಟಲುಗಳ ಮೇಲೆ ಥಡಬಡೆ ಸದ್ದು ಕೇಳಿತು. ನೋಡಿದರೆ ನಿರ್ಮಲೆ. ಜೋಶಿ ಯವರ ಎದುರು ನಿಂತು,"ನಿಮ್ಮ ಮಾತಿನ ಬಿಸಾತು ಇಲ್ಲ ಎಂದೆ. ಸುಳ್ಳೇ ಏಕೆ ಒದರಾಡುತ್ತೀರಿ? ನಾನು ಸೂರಾ ಪಾರ್ಕಿನಲ್ಲಿ ರಂಗಪ್ಪನೊಡನೆ ಹಾದರ ಮಾಡಿದ್ದೂ ಹೌದು... ಹೌದೂ ಎಂದೆ. ಪುರಾವೆ ಬೇಕೆ? ರಂಗಪ್ಪ ಹೇಳಿದ ಆ ಕರಿಯ ಮಚ್ಚೆ, ಖಾತ್ರಿಯಾಯಿತೆ?"

ಅಷ್ಟರಲ್ಲಿ ನಿರ್ಮಲೆ ಮೂರ್ಛೆ ಹೋದಳು! ಕೈಕಾಲು ಸೆಟೆದು ಕಟ್ಟಿಗೆಯಾದಳು.

೩

ಡಾಕ್ಟರರು ನಿರ್ಮಲೆಯನ್ನು ಚೆನ್ನಾಗಿ ಪರೀಕ್ಷಿಸಿ, "ಆದದ್ದೆಲ್ಲ ಪೂರ್ತಿ ಮರೆಯಬೇಕು. ಯಾರ ಮೇಲಿನದೋ ಸಿಟ್ಟನ್ನು ತನ್ನ ಮೇಲೇ ತೆಗೆದುಕೊಂಡಿದ್ದಾಳೆ ಹುಡುಗಿ..." ಎನ್ನುತ್ತ ಮಾಸ್ತರರ ಕಡೆ ನೋಡಿದರು. "ಒಂದು ಎಂಟು ದಿನ ಅವಳ ಮನಸ್ಸಿನ ವಿರುದ್ಧ ಏನನ್ನೂ ಮಾಡಲು ಹೋಗಬೇಡಿ," ಎಂದು ಡಾಕ್ಟರರು ಹೊರಟು ಹೋದರು.

*

"ಅಮ್ಮಾ, ಘಾತವಾಯಿತು. ನಿರ್ಮಲೆ ಹಾಸಿಗೆಯಲ್ಲಿಲ್ಲ," ಕಾಮಾಕ್ಷಿ ಗಾಬರಿಯಲ್ಲಿ ಹೇಳಿದಳು.

"ಅಮ್ಮಾ... ಅಮ್ಮಾ... ಅರೆರೆ... ಓಹೊ ಓಹೊಹೋ... ಘಾತವಾಯ್ತು. ದೇವಪ್... ನಿರ್ಮಲೆ ಅಲ್ಲಿ ಆ ಸಾಲೆಯ ಬಾವಿಯಲ್ಲಿ..." ಓಡೋಡುತ್ತ ಬಂದ ಪುರುಷೋತ್ತಮ ಹೇಳಿ ಕುಸಿದ.

ನಾಲ್ಕು

ಏಗುತ್ತ ತೇಗುತ್ತ ಬಂದ ವಿಶ್ವನಾಥರು, "ಅತ್ತಿಗೆ, ನನ್ನ ಕೊರಳಿಗೆ ಉರುಲು ಹಾಕಿದನೇ ಆ ನೀಚ. ವಿಶ್ವಾಸಘಾತ ಮಾಡಿದ. ಈಗ ಮದುವೆಯ ಸಂಬಂಧ ಮುರಿಯಬೇಕಂತೆ, ಇದರಲ್ಲಿಯೇ ನಿರ್ಮಲೆಯ ಕಲ್ಯಾಣವಿದೆಯಂತೆ..."

ಭ್ರಮಿಷ್ಟಗೊಂಡವರಂತೆ ಸುತ್ತಲೂ ನೋಡಿದರು.

ಇತ್ತ–

ವಾಮನರಾಯರೊಡನೆ ಕಾರವಾರಕ್ಕೆ ಹೊರಟ ವಿಶ್ವನಾಥರು ಚಂದ್ರಭಾಗಕ್ಕನ ಮನೆ ತಲಪುವುದರೊಳಗೆ, ನಿರ್ಮಲೆಯ ಪ್ರೇತದ ದಹನ ಕ್ರಿಯೆ ಮುಗಿದಿತ್ತು.

"ಅಯ್ಯೋ, ನನ್ನ ಮಗೂನ ಏನು ಮಾಡಿದಿರೊ? ಇದು ಹೇಗಾಯಿತೊ?" ಎಂದು ಬೊಬ್ಬೆಯಿಡುತ್ತ ವಿಶ್ವನಾಥರು ನೆಲಕ್ಕೆ ಕುಸಿದರು

ನಾರಾಯಣ ಜೋಶಿಯವರು ವಿಶ್ವನಾಥ ಕಾಲ ಮೇಲೆ ಹೊರಳಾಡುತ್ತ, "ಭಾವ ಇದಕ್ಕೆ ನಾನು ಕಾರಣ. ನಿರ್ಮಲೆಯನ್ನು ಕೊಂದ ಪಾ ನಾನು..."

"ಬಾಯಿ ಮುಚ್ಚೋ ನನಗೆ ಗೊತ್ತಿದೆಯೋ.. ಇದೋ ಈ ವಾಸುದೇವನ ಕಾಗದ ಅವಳನ ಕೊಂದದ್ದು.. ಅವನ ಮಾತುಗಳನ್ನೇ ಮನಸ್ಸಿ ಹಚ್ಚಿಕೊಂಡಿರಬೇಕು ಹುಡುಗೀ. ಇಲ್ಲಿ ಬಂದ ಹೀಗೆ ಮಾಡಿದಳು.

"ಆ ರಂಗಪ್ಪನ ಸಲುವಾಗಿ ಅಲ್ಲವೋ ಅವಳ ಸತ್ತಿದ್ದು," ಎನ್ನುತ್ತ ವಿಶ್ವನಾಥರು ಮೂರ್ಛೆ ಹೋದರು.

*

ವಾಸುದೇವ ಊರ ಬಿಟ್ಟು ಮೊದಲ ಕೆಲ ತಿಂಗಳು ತದಡಿಯಲ್ಲಿ ಅಕ್ಕನ ಮನೆಯ ಹೋಗಿ ಉಳಿದ. ಜನರ ಮಾತು ಹೇಗೂ ಇರಲಿ ನಡೆದುದರ ಪ್ರಚಂಡತೆಯೇ ತಾನೇ ನಿರ್ಮ ಲೆಯ ಸಾವಿಗೆ ಕಾರಣನಾಗಿರಬಹುದೇ ಎಂ ಭಾವನೆ ಮೆಲ್ಲನೆ ಕುದುರಿಸಿದಂತಿತ್ತು. ಆ ಭಾವ ಯಿಂದ ಕೊರಗಿ ದಣಿದಿದ್ದ ಶಿನ್ನ ಹೇಳಿದಂ ಕೊನೆಗೂ ನಾನು ವ್ಯವಹಾರ ಎಂಬುದನ ಕಲಿಯಲಿಲ್ಲ.

ಮುಂದೊಂದು ದಿನ ಸಿರ್ಸಿಗೆ ಹೋಗಿ ಅಲ್ಲಿಯ ಸಾಲೆಯಲ್ಲಿ ಮಾಸ್ತರನಾದ: ಮನೆ ಮಾಡಿ ಇಷ್ಟು ವರ್ಷಗಳವರೆಗೆ ಮರೆತೇಬಿಟ್ಟಂತಿ ಸಾಹಿತ್ಯದಲ್ಲಿ ತಿರುಗಿ ಆಸ್ಥೆವಹಿಸಹತ್ತಿದ. ಕಾದಂ ರಿಯೊಂದನ್ನು ಬರೆಯಬೇಕೆಂದು ಯೋಚಿಸಿ ಅದಕ್ಕೆ ಹೆಸರು ಹೊಳೆದಂತಾಗಿ, ಅವಸರದ ವಹಿ ತೆರೆದು ಬರೆದಿಟ್ಟ:


"ಕತೆಯಾದಳು ಹುಡುಗಿ."

Printed & published by M. N. Mahishi on behalf of the Administrator, Loka Shikshna Trust, at Samykuta Karnataka Press, Koppikar Road, Hubli-580 020. Editor: B.S.Gopala Krishna. Rept: Bombay; V.Satyamurthy Phone: 522412 Calcutta: H. Majumdar Phone: 46-4233 Madras: K. A. Subramanian Phone: 842201; New Delhi; P. R. Chopra Phone: 714130.

ಕರ್ನಾಟಕ ರಾಜ್ಯ ಲಾಟರಿ

ಬಂಪರ್ ಬಹುಮಾನ

ರೂ.12 ಲಕ್ಷ



5 ಮೊದಲನೆಯ ಬಹುಮಾನಗಳು

ರೂ.1,00,000

ರೂ. 30,40,000 ಮೊತ್ತದ
1,77,381 ನಗದು ಬಹುಮಾನಗಳು

ಹಬ್ಬದ ಬಂಪರ್ ಡ್ರಾ

10-10-82

ಪ್ರತಿ ಟಿಕೆಟ್ಟಿಗೆ
ರೂ.2

ಮೈಸೂರ್ ಸೇಲ್ಸ್ ಇಂಟರ್‌ನ್ಯಾಶನಲ್ ಲಿ.

KSL-220-KAN

KASTURI PRICE: 2-50 Regd. No. KRNG 4
Registered with the Registrar of Newspapers for India under No. 3533/5

